
కిశోర

డిసెంబర్,



ನೀವು ಅತಿಶಯ-ರಕ್ಷಣೆಕೊಡುವ ತಾಯಿ ತಂದೆಯರಾಗಿರಿ !



ನಿಮ್ಮ ಕುಟುಂಬವನ್ನು
ಪೋಷಿಸಿಕೊಳ್ಳಿರಿ. ಇಂದು ಅವರಿಗೆ
ಸುಭದ್ರವಾದ ಭವಿಷ್ಯತ್ತನ್ನು
ರೂಪಿಸುವ ದಿವ ಆರಂಭವಾಗಲಿ.
ಜೀವ ವಿಮೆಯ ವಿಶಯವಾಗಿ
ನಿರ್ಧಾರ ಕೈಕೊಳ್ಳಿರಿ.
ಈಗಿಂದೀಗಲೇ ನಿಮ್ಮ ಮಗುವಿನ
ಅವಶ್ಯಕತೆಗಳ ಬಗ್ಗೆ—ವಿದ್ಯಾ
ಭ್ಯಾಸ, ಜೀವನಾರಂಭ, ಮದುವೆ
—ಜೀವ ವಿಮಾ ನಿಗಮದ
ಪಾಲಿಸಿಯ ಮೂಲಕ ಕಾಳಜಿ
ತೆಗೆದು ಕೊಳ್ಳಿರಿ. ಅಲ್ಲದೆ ನಿಮ್ಮ
ಬೆಳೆಯುತ್ತಿರುವ ಸಂಸಾರಕ್ಕೆ
ಸಾಕಷ್ಟು ರಕ್ಷಣೆ ನಿಮ್ಮ ಸ್ವಂತ
ಜೀವ ವಿಮೆಯ ಮೂಲಕ ಇದೆ
ಎಂಬುದನ್ನು ಖಾತ್ರಿ
ಪಡಿಸಿಕೊಳ್ಳಿರಿ.


ನಿಮ್ಮ ಜೀವ ವಿಮಾ ನಿಗಮದ
ಪ್ರತಿನಿಧಿಯೊಂದಿಗೋ ಅಥವ
ಹತ್ತಿರದಲ್ಲಿರುವ ಜೀವ ವಿಮಾ
ನಿಗಮದ ಶಾಖಾ ಕಛೇರಿ
ಯೊಂದಿಗೋ ಸಂಪರ್ಕ
ಏರ್ಪಡಿಸಿಕೊಳ್ಳಿರಿ.

ಲೈಫ್ ಇನ್‌ಷೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
ಜೀವ ವಿಮೆಗಿಂತ ಬೇರೆ ಇನ್ನೊಂದಿಲ್ಲ

LIC-102

ಕಸ್ತೂರಿ

ಕನ್ನಡ ಡೈಜೆಸ್ಟ್



ಸಂಪಾದಕ :

ಜಿ. ವಾಸುದೇವ

ಕಲೆ:

ಕೆ. ಬಿ. ಕುಲಕರ್ಣಿ

ಮುಖಪುಟ :

ನಿರೀಕ್ಷೆ

ಚಿತ್ರ :

ಎಂ. ವಿಶ್ವನಾಥ

ಚಂದಾದರ :

ಅರ್ಧವರ್ಷ ಅಂಚೆ ಸೇರಿ ರೂ. ೧೦-೦೦
೧ ವರ್ಷ ,, ರೂ. ೧೮-೦೦
(ವಿಶೇಷ ಸಂಚಿಕೆ ಸೇರಿ)

KASTURI December 1980

ಬೆಳಕಿಂಡಿ

ಭೂಮಿ ಹಸಿರುಟ್ಟು ಹಸನ್ಮುಖಿಯಾದಾಗೆಲ್ಲ ವಾಯು ಸುತ್ತ ಸುಳಿದು ಸಿಳ್ಳೆ ಹೊಡೆದು ಆಕೆಯ ಲಕ್ಷ್ಯ ಸೆಳೆಯಲೆತ್ನಿಸುತ್ತಾನೆ. —ಡಬ್ಲ್ಯು. ಲಾರೆನ್ಸ್

*

ಮೂರ್ಖನಾದವ ಕಟ್ಟಕಡೆಗೆ ಆಡುವ ಮಾತನ್ನು ಬುದ್ಧಿವಂತ ಮೊಟ್ಟಮೊದಲೇ ಆಡಿಬಿಟ್ಟಿರುತ್ತಾನೆ.

—ಸ್ಪಾನಿಶ್ ಗಾದೆ

*

ಸ್ವರ್ಗದ ಸುಖವನ್ನು ತಿಳಿಯಬೇಕಾದರೆ ಕೆಲ ಕ್ಷಣವಾದರೂ ನರಕದಲ್ಲಿರಲೇಬೇಕು. —ವಿಲ್ ಕಾರ್ಲಟನ್

*

ಈ ಸಲದ ದೀಪಾವಳಿಗೆ ನಾನು ಪಟಾಕಿಗಾಗಿ ಖರ್ಚು ಮಾಡಲೇಯಿಲ್ಲ. ನನ್ನ ಹೆಂಡತಿಯೇ ಪಟಾಕಿಯ ಕೆಲಸ ಮಾಡಿಬಿಟ್ಟಳು. —ಅನುಭವಿ

*

"ಲಕ್ಷ್ಮಿ ತುಂಬ ಚಂಚಲೆ."
"ಅರೆ, ನನ್ನಾಕೆ ಒಂದೆಡೆ ನಿಲ್ಲುವುದಿಲ್ಲ ಎಂಬುದು ನಿನಗ್ಹೇಗೆ ಗೊತ್ತಾಯ್ತು?"
—ಕೊರವ

☆

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನೆ

ಸಾಲಿ

ಸಪ್ಟಂಬರ್ 'ಕಸ್ತೂರಿ'ಯ ಪದಾರ್ಥ–'ಚಿಂತಾಮಣಿ'ಯಲ್ಲಿ ನಿಂತ ನೆಲೆಗಟ್ಟನ್ನೇ ಕಡೆಗಣಿಸಿ ಸೀರೆ ಎಂಬ ಪದಕ್ಕೆ ನಾನಾ ವ್ಯುತ್ಪತ್ತಿಗಳನ್ನು ಕೊಡಲಾಗಿದೆ. "ಸಾಲಿ" ಎಂಬ ಧಾರವಾಡದ ಕಡೆಯ ಬಳಕೆಯ ಕನ್ನಡ ಪದದಿಂದಲೋ ಅಥವಾ ಚಾಲಿ (ಚಾಲ್ಯ ನೆಯ್ಗೆಯುವ) ತುಳು ಪದದಿಂದಲೋ ಏಕೆ ಇದು ಉಂಟಾಗಿರಬಾರದು ? 'ನೂಲಿನಂತೆ ಸಾಲಿ; ತಾಯಿಯಂತೆ ಮಗಳು' ಎಂಬ ಗಾದೆಯೂ ಇದೆ. ಆ ಕಡೆ ಸಾಲಿ ಎಂಬುದು ವೃತ್ತಿಸೂಚಕ–ಮನೆತನದ ಹೆಸರೂ ಆಗಿರುವುದಿದೆ: ಸಾಲಿ ರಾಮಚಂದ್ರರಾಯರು ಇತ್ಯಾದಿ. ಸಂಸ್ಕೃತದಲ್ಲೂ ಪರದೆಗೆ ಪ್ರತಿಸೀರಾ (ಪ್ರತಿಸೀರಾ ಜವನಿಕಾ ಸ್ಯಾತ್ ತಿರಸ್ಕರಣೀಚಸಾ– ಅಮರಕೋಶ) ಎಂಬ ಪರ್ಯಾಯ ಪದವಿದೆ. ಇಲ್ಲಿ ಸೀರಾ ಎಂಬುದು ಉದ್ದನೆಯ ಇಳಿ ವಸ್ತ್ರಕ್ಕೆ ಇರುವ ಹೆಸರು. ಈ ವಿಚಾರಗಳನ್ನು ಆಚಾರ್ಯರು ಮರೆತಂತಿದೆ.

ವಿರಾಜಪೇಟೆ —ಅ. ನಾ. ಶರ್ಮಾ

'ಪ್ರತಿಸೀರಾ' ಪದವನ್ನು ಎತ್ತಿ ತೋರಿಸಿದ್ದಕ್ಕೆ ಶ್ರೀ ಶರ್ಮರಿಗೆ ಋಣಿ, ಈ ಸೀರಾ ಶಬ್ದ ಸಂಸ್ಕೃತದ ಇನ್ನೊಂದು ಪದವಾದ ಚೀರದ ಒಂದು ರೂಪವೇ ಇರಬಹುದು. ಕೇಶಿರಾಜ ಕೂಡ ಸೀರೆಗೆ 'ಚೀರ'ವನ್ನೇ ಮೂಲವಾಗಿ ಹೇಳುತ್ತಾನೆ. ಸಾಲಿ ರಾಮಚಂದ್ರರಾಯರು ಖಂಡಿತ ಸಾಲಿಗ (ಜಾಡ) ಕುಲವೃತ್ತಿಯವರಲ್ಲ. ಆದರೆ, ಸಾಲಿಗ, ಸಾಲ್ಯ (ತುಳು), ಚಾಲಿ, ಚಾಲ್ಯ, ಇತ್ಯಾದಿಗಳು 'ಜಾಲ'ಕ್ಕೆ ಸಂಬಂಧಿಸಿರಬಹುದು, 'ಜಾಲ' ಶಬ್ದಕ್ಕೆ ಬಟ್ಟೆ ಎಂಬರ್ಥವೂ ಇದೆ. ಸ್ವಲ್ಪ ದೂರಾನ್ವಯದಿಂದ ಇದಕ್ಕೆ ಶಾಟಿ, ಹಿಂದುಸ್ತಾನಿಯ 'ಸಾಡಿ', ಇಂಗ್ಲೀಷಿನ 'ಸಾರಿ'ಯ ಸಂಬಂಧ ಹಚ್ಚಬಹುದೋ ಏನೋ. ಆದರೆ ಸುವುದು ಧ್ವನಿನಿಯಮಗಳಿಗೆ ಸರಿಹೊಂದುವಂತಿಲ್ಲ. ಮತ್ತೆ ಸಾಲಿ ರಾಮಚಂದ್ರರಾಯರು ಸಾಲಿ ಅಥವಾ ನೆಯ್ಗೆ ಕಸುಬಿನ ಕುಲದವರಲ್ಲವೆಂದು ಖಂಡಿತವಾಗಿ ಹೇಳಬೇಕಾಗಿದೆ.

—ಪಾವೆಂ ಆಚಾರ್ಯ

ಜಯಂತಿ

ಶ್ರೀ ಅಶ್ವತ್ಥ ಅವರಿಗೆ ವಂದನೆಗಳು:

ನವೆಂಬರ್ ಕಸ್ತೂರಿಯಲ್ಲಿ ಬಂದ ಕತೆ 'ಜಯಂತಿ' ಓದಿದೆ. ಒಳ್ಳೊಳ್ಳೆ ಕತೆಗಳನ್ನು ತರುತ್ತಿದ್ದ, ತಿಂಗಳು ತಿಂಗಳೂ ಬರುತ್ತಿದ್ದ ಆನಂದಕಂದ ಬೆಟಗೇರಿ ಕೃಷ್ಣಶರ್ಮ ಅವರ ಕುರಿತು ಹೇಳುತ್ತಿದ್ದ ಕನ್ನಡ ಸಾರಸ್ವತ ಹುಡುಗಿ 'ಜಯಂತಿ'ಯ ನೆನಪಾಯ್ತು. ಅವಳು ನಿಮಗೆ ಸಂಬಂಧವೇ? ಮತ್ತೆ ನೆನಪಿಸಿದ್ದಕ್ಕೆ ವಂದನೆಗಳು.

ಪಾಣಾಜೆ —ಕೊಂದಲಕಾನ ಕೃಷ್ಣ ಭಟ್ಟ.

ಕೂಡ್ಲಿ ಕೃಷ್ಣ

ಶ್ರೀ ಶಶಿಧರ ಭಟ್ಟ, ಬಳಗುಳಿ ಅವರು "ಕೂಡ್ಲಿ ಕೃಷ್ಣ"ನ ಸ್ವಾಗತಾರ್ಹ ಪರಿಚಯ ಮಾಡಿದುದಕ್ಕಾಗಿ ಅಭಿನಂದನೆಗಳು. ಆದರೆ ಲೇಖಕರು ಅಂದಂತೆ ಆತ "ಕೂಡ್ಲಿ ಕೃಷ್ಣ" ಅಲ್ಲ. "ಕೂಡಲ ಕೃಷ್ಣ". ಕೂಡಲ ಊರು ಭಟಕಳ ತಾಲೂಕಿನಲ್ಲಿಲ್ಲ. ಅದು ಹೊನ್ನಾವರದ ಪೂರ್ವಕ್ಕೆ ಶರಾವತಿ ನದಿಯ ಉಪನದಿ ಬಾಸ್ಗೇರಿ ಹಳ್ಳದ ದಂಡೆಗಿದೆ. ಅಲ್ಲಿ ಇನ್ನೂ ಕೂಡಲ ಕೃಷ್ಣನ ಮನೆಯವರು ಇದ್ದಾರೆ, ಅವರ ಬಾಯಿಂದ ಅವರ ಸಮಾಜದ (ಗೌಡ–ಗೊಂಡ–ಪಟಗಾರ) ಹಿರಿಯರಿಂದ ಅವನ ಕುರಿತಾಗಿ ಬರುವ ಮಾಹಿತಿಗಳು ತುಂಬ ಮನೋರಂಜಕ. (ಲೇಖಕರು ಸಂಗ್ರಹಿಸಿದ್ದು ಆ ದೃಷ್ಟಿಯಿಂದ ತೀರ ಸ್ವಲ್ಪ).

ಹುಬ್ಬಣಗೇರಿ (ಕುಮಟಾ) —ನಾರಾಯಣ ಕಾಗಾಲ

ನವಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ ಶ್ರೀ ಶಶಿಧರ ಭಟ್ಟರ 'ಕೂಡ್ಲಿ ಕೃಷ್ಣ' ಆತನ ಬಗ್ಗೆ ಯಾವ ವಿವರವನ್ನೂ ನೀಡಲು ಅಸಮರ್ಥವಾಗಿದೆ. ಇದರಿಂದ ಇಂತಹ ಒಬ್ಬ ಕಳ್ಳನಿದ್ದನೆಂದು ಓದುಗನಿಗೆ ತಿಳಿಯುತ್ತದೆ. ಹೆಗ್ಗೋಡ್ಮನೆ ಎಂಬ ಊರಿನ

ಪ್ರಸ್ತಾಪ ಲೇಖನದಲ್ಲಿ ಬಂದಿದ್ದು, ಅಲ್ಲಿ ವಿವರಿಸಲಾದ ಘಟನೆ ಭ್ರಾಮುಕವಾಗಿದ್ದು ಕಪೋಲಕಲ್ಪಿತವಾಗಿದೆ. ಲೇಖಕರಿಗೆ ಯಾರೋ ಕಟ್ಟುಕತೆ ಹೇಳಿದ್ದಾರೆ. ದೊಡ್ಡ ಗೌಡರೆಂದು ಕರೆಯಲ್ಪಡುತ್ತಿದ್ದ, ರಾವ್‌ಸಾಹೇಬ್ ಚೆನ್ನಬಸಪ್ಪಗೌಡರು ಮೃತರಾದಾಗ (ಸ್ವಾತಂತ್ರ್ಯಾನಂತರ) ನಾವು ಚಿಕ್ಕವರಾಗಿದ್ದರೂ ಅವರ ಶವ ನಾಪತ್ತೆಯಾದ ಘಟನೆ ನಡೆಯಲಿಲ್ಲವೆಂಬುದನ್ನು ಚೆನ್ನಾಗಿ ಬಲ್ಲೆವು.

ಸನ್ ೧೯೪೯–೫೦ರ ಸುಮಾರಿಗೆ ಒಂದು ಕಳವಿನ ಪ್ರಕರಣದಲ್ಲಿ ಹೆಗ್ಗೋಡ್ಮನೆಯವರಾದ ಪಟೇಲ್ ಮಂಜಪ್ಪಗೌಡರು, 'ಕೂಡ್ಲಿ ಕೃಷ್ಣ'ನ ವಿರುದ್ಧ ಸಾಕ್ಷ್ಯ ಹೇಳುವ ಪ್ರಸಂಗ ನಡೆಯಿತು. ತನ್ನ ಪರವಾಗಿ ತಾನೇ ವಾದಿಸುವ ವಿಲಕ್ಷಣ ವ್ಯಕ್ತಿಯಾದ ಕೂಡ್ಲಿ ಕೃಷ್ಣ, ಮಂಜಪ್ಪಗೌಡರನ್ನು ಹಣ್ಣುಗಾಯಿ ನೀರುಗಾಯಿ ಮಾಡಿ, ಸಾಕ್ಷಿಯನ್ನೇ ವಿಫಲಗೊಳಿಸಿದ್ದುಂಟು!

ಜುಂಜ, ಆಲೂರು ಮುಸ್ಯ, ಕನ್ನೇಶ್ವರರಾಮ, ಸಿಂಧೂರ ಲಕ್ಷ್ಮಣ ಮುಂತಾದವರ ಸಾಲಿಗೆ ಸೇರಿದ ಕೂಡ್ಲಿ ಕೃಷ್ಣ ತನ್ನ ವಾದ ತಾನೇ ಮಾಡಿ, ಬಹುಸಲ ನಿರ್ದೋಷಿಯಾಗಿ ಹೊರಬಂದಿದ್ದ, ಶಿಕ್ಷೆಯಾದರೆ ಅಲ್ಪಾವಧಿಯಲ್ಲಿ ಪರಾರಿಯಾಗಿ 'ಪರಾರಿ ಕೇಡಿ' ಎಂದು ಪೋಲೀಸ್ ದಾಖಲೆಯಲ್ಲಿ ಉಳಿಯುತ್ತಿದ್ದ. ದರೋಡೆ ಮಾಡಿದವನಲ್ಲ. ಕೈಚಳಕದಿಂದ ಹಾರಿಸುವುದು ಮತ್ತು ಒಡವೆ ಬಂಗಾರಗಳಿರುವ ಕೊಠಡಿಗೇ ನೇರ ಕನ್ನ ಹಾಕುವುದು ಅವನ ಕಾಯಕ. ಮೋಡಿ ವಿದ್ಯೆಯಲ್ಲೂ ಆತ ಪರಿಣತನಾಗಿದ್ದನೆಂದು ಹೇಳುತ್ತಾರೆ. ಶ್ರೀಮಂತರ ಮನೆಗೆ ಕನ್ನವಿಟ್ಟು ನೂರಾರು ಬಡ ಕುಟುಂಬಗಳನ್ನು ಆತ ಉದ್ಧಾರಮಾಡಿದ್ದರಿಂದ ಮಲೆನಾಡಿನಲ್ಲೆಲ್ಲ ಅವನ ಹೆಸರು ಚಿರಪರಿಚಿತ. ಪೂರ್ತಿ ಉತ್ತರ ಕನ್ನಡ ಜಿಲ್ಲೆ ಹಾಗೂ ಸಾಗರ ತಾಲ್ಲೂಕು ಸಹ ಕೂಡ್ಲಿ ಕೃಷ್ಣನ ಕಾರ್ಯಕ್ಷೇತ್ರವಾಗಿತ್ತು. ಕೋರ್ಟ್ ಕಲಾಪಗಳು, ಪೋಲೀಸು ದಾಖಲೆಗಳು, ಅನುಭವಿಕ ಹಿರಿಯರಿಂದರೂ ವಿಷಯ ಸಂಗ್ರಹಿಸಿದರೆ ಈತನ ಸಾಹಸಗಳ ಕತೆ ಐನೂರು ಪುಟಗಳ ಹೊತ್ತಿಗೆಯಾದೀತು.

ಸಿದ್ದಾಪುರ (ಉ.ಕ.) —ಆರ್.ಜಿ. ಹೆಗಡೆ

ಕವನ

ನವೆಂಬರ್ ೧೯೮೦ರ ಸಂಚಿಕೆಯಲ್ಲಿ ಪ್ರಕಟವಾದ ಡಾ. ಆನಂದ ದೇಶಪಾಂಡೆಯವರ ಕವನ 'ಹುಟ್ಬೇಕು ಇಂಗ್ಲಂಡಿನಾಗ' ಭಾರತ–ಇಂಗ್ಲಂಡ್ ದೇಶಗಳಲ್ಲಿಯ ನಿತ್ಯ ಜೀವನವನ್ನು ವಿಡಂಬನಾತ್ಮಕವಾಗಿ ಚಿತ್ರಿಸುತ್ತದೆ. ಕವನದ ಆಡು ಭಾಷೆ ಕವನಕ್ಕೆ ಇನ್ನೂ ಹೆಚ್ಚಿನ ಸೊಬಗು. ತಂದಿದೆ.

ರಾಯಚೂರು —ರಾಜಶೇಖರ ಬಡಿಗಣ್ಣವರ

ಇಂದಿರಾಬಾಯಿ

ಕನ್ನಡದ ಪ್ರಪ್ರಥಮ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ' ಅಥವಾ 'ಸದ್ಧರ್ಮ ವಿಜಯ'ದಿಂದ ಸಂಗ್ರಹಿಸಿದ "ಇಂದಿರಾಬಾಯಿ" ಪುಸ್ತಕ ವಿಭಾಗದಲ್ಲಿ ಪ್ರಕಟಿಸಿದ್ದುದು ತುಂಬಾ ಮೆಚ್ಚುವಂತಹ ವಿಷಯ.

ಬೆಳಗಾಂವಿ —ಕೃಷ್ಣಮೂರ್ತಿ ಅಂಬೇಕರ

ಏಲಕ್ಕಿ

ಇದು ನವಂಬರ್ ೮೦ ರ ಕಸ್ತೂರಿಯಲ್ಲಿ ಬಂದ ಏಲಕ್ಕಿ ಲೇಖನದ ಕುರಿತು:

ನಾವು ಕನ್ನಡದಲ್ಲಿ 'ಏಲಕ್ಕಿ' ಎನ್ನುವುದು ಸಂಸ್ಕೃತದ 'ಏಲಾ' ಪದಕ್ಕೆ 'ಅಕ್ಕಿ' ಪದವನ್ನು ಸೇರಿಸಿಯೇ ಹೊರತು ಏಲಕ್ಕಿ ಕನ್ನಡ ಮೂಲದ ಪದವಲ್ಲ. ಸಂಸ್ಕೃತದಲ್ಲಿ ಇದಕ್ಕೆ ದ್ರಾವಿಡೀ, ಗಂಧಕುಟಿ ಎಂಬ ಹೆಸರುಗಳೂ ಇವೆ. ಇದಕ್ಕೆ ತಮಿಳಿನಲ್ಲಿ ಏಲಮ್, ಚಿತ್ತೇಲಮ್, ಏಲರಿಶಿ, ಇರಾವಡಿ, ಇಲಾವಡಿ, ಇತ್ಯಾದಿ ಹೆಸರುಗಳಿವೆ. ತೆಲುಗಿನಲ್ಲಿ ಏಲ, ಏಲಕಿ, ಇಲಂಞ್ಚಿ ಮಲೆಯಾಳಿಯಲ್ಲಿ ಏಲಮ್, ಏಲತ್ತರಿ ಎಂಬ ಹೆಸರುಗಳಿಂದ ಕರೆಯುತ್ತಾರೆ.

ಏಲಕ್ಕಿ (Elettaria Cardamomum)ಯ ಸಿಲೋನು ಮತ್ತು ಮಲಬಾರು ಜಾತಿಯಲ್ಲದೇ Amomum aromaticum (ಬಂಗಾಳ ಏಲಕ್ಕಿ) ಮತ್ತು Amomum subulatum (ನೇಪಾಳ ಏಲಕ್ಕಿ) ಎಂಬ ಜಾತಿಯವೂ ಇವೆ. ಇವು ಕೂಡಾ Zinzibreaceae ಕುಟುಂಬಕ್ಕೆ ಸೇರಿದವುಗಳೇ.

ಸಸ್ಯಗಳ ವೈಜ್ಞಾನಿಕ ವರ್ಗೀಕರಣದಲ್ಲಿ Zinziberaceae ಎಂಬುದು ಕುಟುಂಬವೇ ಹೊರತು ವರ್ಗವಲ್ಲ.

ಮಂಗಳೂರು —ಬೀನಾ

ಕಸ್ತೂರಿ

ವರ್ಷ : ೨೫ ಸಂಚಿಕೆ : ೪

ಡಿಸೆಂಬರ್ ೧೯೮೦



ಬನ್ನಿ, ಒಪ್ಪಿಸಿಕೊಳ್ಳಿ..

ಸು. ಪ್ರಿಯಾ

ರಾಜನ ಮುಖವನ್ನೇ ನೋಡುತ್ತಿದ್ದರು ಜನ. ತನ್ನ ಎದುರು ನಿಂತ ಪ್ರಜೆಗಳಿಗೊಮ್ಮೆ ವಂದಿಸಿದ ಆತ, "ನನ್ನ ತಂದೆಯ ಕೃಪಾಪಾತ್ರರಾದ ಮಹಾಜನಗಳೆ, ಬನ್ನಿ, ನನಗೊದಗಿ ಬಂದಿರುವ ಈ ರಾಜಾಧಿಕಾರದ ಸೂತ್ರ ವಹಿಸಿಕೊಳ್ಳಿ....

"ಯಾಕಂದರೆ ಹಸಿವಿನಿಂದ ಕಂಗೆಟ್ಟ ನನಗೆ ನೀವು ಹೊಟ್ಟೆ ತುಂಬಿಸಿದಿರಿ.

"ನೀರಡಿಸಿದ್ದೆ–ದಾಹವಡಗಿಸಿದಿರಿ.

"ಅಪರಿಚಿತನಾಗಿದ್ದೆ, ಪರಿಚಿತನಂತೆ ನೋಡಿಕೊಂಡಿರಿ.

"ಬತ್ತಲೆಯಾಗಿದ್ದ ನನ್ನ ಮೈಗೆ ಬಟ್ಟೆ ಹೊದಿಸಿದಿರಿ.

"ಕತ್ತಲಲ್ಲಿ ಎಡವುತ್ತಿದ್ದೆ–ಕರುಣೆಯಿಂದ ಕೈ ಹಿಡಿದು ನಡೆಸಿದಿರಿ.

"ರೋಗಗ್ರಸ್ತನಾಗಿದ್ದ ನನ್ನನ್ನು ಋಗ್ಣಾಲಯ ಕ್ಕೊಯ್ದು ರೋಗಪೀಡನೆಯಿಂದ ಪಾರು ಮಾಡಿದಿರಿ.

"ಆದ್ದರಿಂದ ಬನ್ನಿ–ಬದುಕು ಕಲಿಸಿದ ನಿಮಗೆ ನನ್ನ ರಾಜ್ಯ ಬಿಟ್ಟುಕೊಡುತ್ತಿದ್ದೇನೆ, ಬೇಡವೆನ್ನ ಬೇಡಿ..."

ಪ್ರಜೆಗಳಿಗೆ ಅಚ್ಚರಿಯುಂಟಾಯಿತು.

"ಪ್ರಭು, ನೀವೆಂದು ಹಸಿವಿನಿಂದ ಕಂಗೆಟ್ಟಿದ್ದಿರಿ? ನಾವೆಂದು ಹೊಟ್ಟೆ ತುಂಬಿಸಿದೆವು?

"ಅಥವಾ ನೀವೆಂದು ನೀರಡಿಸಿದ್ದನ್ನು ಕಂಡು ದಾಹವಡಗಿಸಿದೆವು?

"ನೀವೆಲ್ಲಿ ಅಪರಿಚಿತರಾಗಿದ್ದೀರಿ?

"ನೀವು ಬತ್ತಲಾಗಿದ್ದಂತೂ ಕಂಡೇ ಇಲ್ಲ ನಾವು.

"ಕತ್ತಲಲ್ಲಿ ಎಡವಿದ್ದೆಂದು? ನಾವೆಂದು ನಿಮ್ಮ ಕೈ ಹಿಡಿದು ನಡೆಸಿದೆವು?

"ಸದಾ ಸದೃಢರಾಗಿರುವ ನಿಮಗೆಂದು ರೋಗ ಪೀಡೆಯಿತ್ತು? ನಾವು ಋಗ್ಣಾಲಯಕ್ಕೊಯ್ದುದೆಂದು?"

ರಾಜ ಸುತ್ತ ದೃಷ್ಟಿ ಹಾಯಿಸಿದ.

"ನಾನು ಸುಳ್ಳು ಹೇಳುತ್ತಿಲ್ಲ. ನೀವು ನನ್ನ ಈ ಅಭಾಗ–ಅಭಾಗಿನಿಯರ ಸಲುವಾಗಿ ಮಾಡಿದ್ದೀರಲ್ಲ, ಮಾನವೀಯ ಗುಣ ಮೆರೆದಿದ್ದೀರಲ್ಲ, ಅದೆಲ್ಲ, ನನಗೆಂದೇ ಮಾಡಿದ್ದು... ನಾನು ಬೇರೆಯಲ್ಲ ವಲ್ಲ" ಎಂದ. ✡

ಯಾವುದು ಸರಿ?

ಒಬ್ಬ ಹಿರಿಯ. ನಿತ್ಯ ಜಪ–ತಪ–ಅನುಷ್ಠಾನಗಳಿಂದು ದಿನದ ಬಹುಕಾಲವನ್ನು ದೇವರ ಕೋಣೆಯಲ್ಲಿಯೇ ಕಳೆಯುವಾತ.

ಇನ್ನೊಬ್ಬ ಕಿರಿಯ ನಿಷ್ಠೆ ನಂಬಿಕೆಗಳಲ್ಲಿ ಹಿರಿಯನಿಗೆ ತದ್ವಿರುದ್ಧ. ಆತನಿಗೆ ಮಾನವೀಯತೆಯಲ್ಲೇ ಹೆಚ್ಚು ನಂಬಿಕೆ. ಇಬ್ಬರಲ್ಲೂ ವಾದ ನಡೆದಿತ್ತು.

"ದಾರಿಯಲ್ಲಿ ಯಾರೋ ಕಳೆದುಕೊಂಡ ನೂರು ರೂಪಾಯಿ ನಮಗೆ ಸಿಕ್ಕರೆ ಏನು ಮಾಡಬೇಕು? ಹೇಗೆ ವಿನಿಯೋಗಿಸಬೇಕು?"

ಹಿರಿಯ ಹೇಳಿದ: "ಸಿಕ್ಕ ನೂರು ರೂಪಾಯಿಯಲ್ಲಿ ಎರಡು ರೂಪಾಯಿ ಖರ್ಚು ಮಾಡಿ ತೆಂಗಿನಕಾಯಿ, ಬಾಳೆಹಣ್ಣು, ಕರ್ಪೂರ ಖರೀದಿಸಿ ಇಷ್ಟ ದೈವಕ್ಕೆ ಅರ್ಪಿಸಿ, 'ಸ್ವಾಮಿ, ದಯವಿಟ್ಟು ಕ್ಷಮಿಸು. ಸಿಕ್ಕ ಲಕ್ಷ್ಮಿಯನ್ನು ಅಲಕ್ಷಿಸಬಾರದಂತೆ. ಆದರೆ ಕಳೆದುಕೊಂಡವನ ಹೃದಯವೆಷ್ಟು ಪರಿತಪಿಸುತ್ತದೊ ಏನೋ. ದಯವಿಟ್ಟು ಆತನ ಮನಸ್ಸಿಗಾದ ನೋವನ್ನು ಪರಿಹರಿಸು. ಎಂದು ಈ ಮೂಲಕ ಬೇಡಿಕೊಳ್ಳುತ್ತಿದ್ದೇನೆ,' ಎಂದುಬಿಟ್ಟರೆ ಸ್ವಾಮಿ ಸಂತೃಪ್ತನಾಗುತ್ತಾನೆ. ಹಣವನ್ನು ತೆಗೆದುಕೊಂಡುದರ ಪಾಪ ಪರಿಹಾರವಾಗುತ್ತದೆ. ನೊಂದವನ ಮನದ ಶಾಪ ನಮಗೆ ತಟ್ಟುವುದಿಲ್ಲ..."

"ಲಂಚ, ದೇವರಿಗೆ ಲಂಚ. ಕಾಯಿ ಹಣ್ಣುಗಳ ಲಂಚ. ಸಲ್ಲದ ವಿಚಾರ." ಕಿರಿಯ ನುಡಿದ. "ಸಿಕ್ಕ ಹಣ ಯಾರದೆಂದು ಪತ್ತೆ ಹಚ್ಚಿ ಮುಟ್ಟಿಸುವುದು ಮೊದಲು ಮಾಡಬೇಕಾದ ಯತ್ನ. ಯಾರದೆಂದು ಪತ್ತೆ ಹತ್ತದೆ ಹೋದರೆ ಹತ್ತಾರು ಜನ ನಿರ್ಗತಿಕರಿಗೆ, ಅನ್ನಾನ್ನಗತಿಯಾಗಿ ಅಡ್ಡಾಡುವವರಿಗೆ ಹಂಚಿಬಿಡುವುದು ಯೋಗ್ಯ ವಿಚಾರ."


ಆಗ ಹಿರಿಯ, "ಆದರೆ ಕಳೆದುಕೊಂಡವನ ಶಾಪ ತಟ್ಟದೆ ಬಿಟ್ಟೀತೆ?" ಎಂದು ಕೇಳಿದ.

"ಶಾಪವೆಲ್ಲಿಯದು? ಹತ್ತಾರು ಜನರು 'ಅನ್ನವಿಲ್ಲದೆ ಇರುವ ನಮಗೆ ಒಂದಿನವಾದರೂ ಊಟ ಮಾಡುವಂತಾಯಿತಲ್ಲ. ಕೊಟ್ಟಾತ ಸುಖವಾಗಿರಲಿ ಎಂಬ ಅವರ ಸದಿಚ್ಛೆ ಕಳೆದುಕೊಂಡವನ ಶಾಪದಿಂದ ನಮ್ಮನ್ನು ಕಾಯುತ್ತದೆ. ಅಲ್ಲವೆ?" ಎಂದ ಕಿರಿಯ.

–ಗೋವಾ

ಕಸ್ತೂರಿಯ ೧೯೬೧ ರ ಜೂನ್ ಸಂಚಿಕೆಯಿಂದ

**ಅದಕ್ಕೆ ಪ್ರಕಾಶಕರೇ ಸಿಗಲಿಲ್ಲ —
ಈಗ ಪ್ರತಿ ತಿಂಗಳು ೨ ಕೋಟಿ
ಪ್ರತಿ ಮಾರುತ್ತದೆ.**



ರೀಡರ್ಸ್ ಡೈಜೆಸ್ಟಿನ ಕಥೆ

ಸಾ. ವೆಂ.

ರೀಡರ್ಸ್ ಡೈಜೆಸ್ಟ್" ಎಂಬ ಹೆಸರು ಇಂದು ಪತ್ರಿಕಾ ಪ್ರಪಂಚದಲ್ಲೊಂದು ಹೆಗ್ಗುರುತಾಗಿದೆ. ಪ್ರತಿ ತಿಂಗಳು ೨೬ ದೇಶಗಳಲ್ಲಿ ೧೩ ಭಾಷೆಗಳಲ್ಲಿ ಹೊರಡುವ ಅದರ ೩೦ ಆವೃತ್ತಿಗಳ ಎರಡು ಕೋಟಿ ಮೇಲ್ಪಟ್ಟು ಪ್ರತಿಗಳು ಮಾರಾಟವಾಗುತ್ತಿವೆ. ಇಷ್ಟು ಪ್ರಚಂಡ ಪ್ರಸಾರ ಯಾವ ದೇಶದ ಯಾವ ಪತ್ರಿಕೆಗೂ ಇಲ್ಲ. ಅಮೇರಿಕದಲ್ಲಿ ನ್ಯೂಯಾರ್ಕಿನ ಉತ್ತರದಲ್ಲಿರುವ ಪ್ಲೆಸೆಂಟ್‌ವಿಲೆಯ ಅದರ ೮೦ ಎಕರೆ ವಿಸ್ತಾರವಾದ ಸಂಪಾದಕೀಯ ಕಾರ್ಯಾಲಯಗಳಲ್ಲಿ ಒಂದು ನೂರು ಜನ ಸಂಪಾದಕ ಉಪಸಂಪಾದಕರು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದ ಲೇಖನಗಳನ್ನು ಓದುವ, ಕತ್ತರಿಸುವ, ಸಂಕ್ಷೇಪಿಸುವ, ಪುನರ್ಲೇಖಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಅದರ ಸಂಚಾರಿ ಸಂಪಾದಕರು ಡೈಜೆಸ್ಟಿಗೆ ಬೇಕಾದ ವಿಶೇಷ ಲೇಖನಗಳಿಗಾಗಿ ವಿಷಯಗಳನ್ನು ಕಂಡು ಹಿಡಿಯಲು ಪಂಚಖಂಡಗಳನ್ನು ಸುತ್ತುತ್ತಾರೆ.

ಅದರ ವ್ಯವಹಾರ ಮತ್ತು ಪ್ರಚಾರ ಕಚೇರಿಗಳು ಬೇರೆಯೇ ಇವೆ. ಡೇಟನ್ ಎಂಬಲ್ಲಿ ಮೆಕ್ ಕಾಲ್ ಮುದ್ರಣಾಲಯದಲ್ಲಿ ಅದರ ಅಮೇರಿಕನ್ ಸಂಸ್ಕರಣದ ಐದು ಲಕ್ಷ ಪ್ರತಿಗಳು ನಿತ್ಯ ಮುದ್ರಣ ಹೊಂದುತ್ತವೆ. ಇದೊಂದೇ ಆವೃತ್ತಿಗೇ ವರ್ಷಕ್ಕೆ ೫೦ ಸಾವಿರ ಟನ್ ಕಾಗದ ಬೇಕಾಗುತ್ತದೆ. ಇತರ ಆವೃತ್ತಿಗಳು ೩೪ ಸಾವಿರ ಟನ್ ಕಾಗದವನ್ನು ವೆಚ್ಚ ಮಾಡುತ್ತವೆ.

ಈ ಅಪೂರ್ವ ಪತ್ರಿಕೆಯ ಕಲ್ಪನೆ ೪೩ ವರ್ಷಗಳ ಹಿಂದೆ ಯುರೋಪಿನ ರಣರಂಗದ ಒಂದು ಆಸ್ಪತ್ರೆಯಲ್ಲಿ ಜನ್ಮ ತಾಳಿತು. ಡಿ ವಿಟ್ ವಾಲೇಸ್

ನೆಂಬ ೨೯ ವರ್ಷದ ಅಮೇರಿಕನ್ ತರುಣ ವರ್ಡನ್ ರಣರಂಗದಲ್ಲಿ ವಿಪರೀತ ಗಾಯಗೊಂಡು ಶುಶ್ರೂಷೆ ಹೊಂದುತ್ತಿದ್ದ. ಆತ ಭಾರಿ ಒದುಗುಳಿ. ಆಸ್ಪತ್ರೆಗೆ ಬರುತ್ತಿದ್ದ ನೂರಾರು ಅಮೆರಿಕನ್ ಮಾಸಿಕ ಮತ್ತು ವಾರಪತ್ರಿಕೆಗಳನ್ನು ಆತ ಓದುತ್ತಿದ್ದ. ಅವನ ಜ್ಞಾನತೃಷ್ಣೆ ಅಗಾಧವಾಗಿತ್ತು. ಹಲವು ವಿಷಯಗಳನ್ನು ತಿಳಿದುಕೊಳ್ಳಲು ಆತ ಹಾತೊರೆಯುತ್ತಿದ್ದ. ಆದರೆ ಪತ್ರಿಕಾಲೇಖನಗಳನ್ನೋದುತ್ತ ಹೋದಂತೆ ಅವನಿಗೆ ಇಷ್ಟು ಉದ್ದುದ್ದ ಲೇಖನಗಳು ಸಾಮಾನ್ಯ ಓದುಗನಿಗೆ ಅಗತ್ಯವೆ? ಅವನ್ನೋದಲು ಅವನಿಗೆ ಸಮಯವುಂಟೇ? ಎಂಬ ಯೋಚನೆ ಹುಟ್ಟಿತು. ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದ ಮಹತ್ವದ ಲೇಖನಗಳನ್ನು ಸಂಕ್ಷೇಪಿಸಿ ವಿವಿಧ ವಿಷಯಗಳನ್ನೊಳಗೊಂಡ ಹೊಸ ತರದ ಪತ್ರಿಕೆಯನ್ನೇ ಪ್ರಕಟಿಸಿದರೆ ತನ್ನಂತೆ ಬಹು ವಿಷಯಗಳನ್ನು ತಿಳಿಯುವ ಆಸೆಯುಳ್ಳವರಿಗೆ ಉಪಯೋಗವಾಗಲಿಕ್ಕಿಲ್ಲವೆ?

ಯುದ್ಧ ಮುಗಿದು ಸೈನ್ಯದಿಂದ ಬಿಡುಗಡೆ ಹೊಂದಿ ಮರಳಿದೊಡನೆ ವಾಲೇಸ್ ತನ್ನ ಕಲ್ಪನೆಗೆ ವಾಸ್ತವಿಕ ರೂಪ ಕೊಡಲು ಅನುವಾದನು. ಆತನ ಸೋದರತ್ತೆ, ಲೈಬ್ರೆರಿಯನ್ ಆಗಿದ್ದ ಮಿನಿಯಾಪಾಲಿಸ್‌ನ ಸಾರ್ವಜನಿಕ ಪುಸ್ತಕಾಲಯದಲ್ಲಿ ಕುಳಿತು ಪತ್ರಿಕೆಗಳ ಹಳೇ ಹೊಸ ಸಂಚಿಕೆಗಳನ್ನು ತಿರುವಿ ಹಾಕಿ ಉತ್ತಮ ಉಪಯುಕ್ತ ಲೇಖನಗಳನ್ನು ಗುರುತುಹಾಕಿಕೊಂಡನು. ಅವುಗಳನ್ನು ಸಂಕ್ಷೇಪಿಸುವ ಅಭ್ಯಾಸವನ್ನು ಪ್ರಾರಂಭಿಸಿದನು. ಲೇಖಕರ ಶೈಲಿ ಕೆಡಿಸದೆ, ಆಶಯವನ್ನು ಮೊಟಕಿಸದೆ ಅವರ ಮಾತುಗಳಲ್ಲೇ ತಾನು ಮಾಡಿದ ಸಂಗ್ರಹಗಳು ಮೂಲಕ್ಕಿಂತಲೂ ಸುವಾಚ್ಯವಾಗಿವೆಯೆಂದು ಅವನಿಗೆ ಅನಿಸಿತು.

ಸಂಗ್ರಹ, ಸಂಕ್ಷೇಪಕಾರ್ಯ ವಾಲೇಸನಿಗೆ ತೀರ ಹೊಸದೇನೂ ಆಗಿರಲಿಲ್ಲ. ಕಾಲೇಜಿನಲ್ಲಿದ್ದಾಗಿನಿಂದಲೇ ವೈವಿಧ್ಯಪೂರ್ಣ ಓದಿನ ಚಟವುಳ್ಳ ಆತ ಎಷ್ಟೋ ಲೇಖನಗಳ ಕಟಿಂಗುಗಳನ್ನು ಕಲೆ ಹಾಕಿದ್ದ. ಕೆಲಕಾಲ ಒಂದು ಬ್ಯಾಂಕಿನಲ್ಲಿ, ಅನಂತರ ಒಂದು ಪ್ರಕಾಶನ ಸಂಸ್ಥೆಯಲ್ಲಿ ದುಡಿದ ಆತ ರೈತರಿಗೆ ಬೇಕಾಗುವ ವಿಷಯಗಳನ್ನು ವಿವಿಧ ಮೂಲಗಳಿಂದ ಶೋಧಿಸಿ, ಸಂಕ್ಷೇಪಿಸಿ ೧೯೧೬ರಲ್ಲಿ ಪ್ರಕಟಿಸಿದ ೧೨೦ ಪುಟದ ಕೈಪಿಡಿಯ ಒಂದು ಲಕ್ಷ ಪ್ರತಿಗಳು ಮಾರಾಟವಾಗಿದ್ದವು.

೧೯೨೦ರ ಪ್ರಾರಂಭದಲ್ಲಿ ಡಿ ವಿಟ್ ವಾಲೇಸ ತನ್ನ ನಿಯೋಜಿತ "ರೀಡರ್ಸ್ ಡೈಜೆಸ್ಟಿ"ನ ಪ್ರಥಮ ಸಂಚಿಕೆಯ ಕೆಲ ನೂರು ಮಾದರಿ ಪ್ರತಿಗಳನ್ನು ಮುದ್ರಿಸಿಕೊಂಡನು. ಈ ಸಂಚಿಕೆಯಲ್ಲೇ ಆತ "ರೀಡರ್ಸ್ ಡೈಜೆಸ್ಟಿ"ನ ನೀತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದ: ಪ್ರತಿ ಸಂಚಿಕೆಯಲ್ಲಿ ೩೧ ಲೇಖನಗಳು, ಪ್ರತಿಯೊಂದೂ ಉಪಯುಕ್ತ ಮತ್ತು ವಾಚನೀಯ ಲೇಖ, ಚುಟುಕಾದ ಚುರುಕಾದ ಲೇಖ.

ಅಂದಿನ ಪ್ರಮುಖ ಪತ್ರಿಕೆಗಳಿಂದ ಆರಿಸಿದ ಈ ೩೧ ಲೇಖಗಳಲ್ಲಿ ಜೀವನಕಲೆ, ಕೌಟುಂಬಿಕ ಜೀವನ, ವ್ಯವಹಾರೋಪಯೋಗಿ ಜ್ಞಾನ, ವಿಜ್ಞಾನ, ವಿನೋದ, ಚುಟುಕ, ವ್ಯಕ್ತಿ ಪರಿಚಯ ಎಲ್ಲ ಬಗೆಯ ವೈಶಿಷ್ಟ್ಯಗಳೂ ತುಂಬಿದ್ದವು.

ಡಿ ವಿಟ್ ವಾಲೇಸ್ ಪ್ರಚಾರ ತಂತ್ರದಲ್ಲಿ ಪ್ರವೀಣನಾಗಿದ್ದ. ಸಾಮಾನ್ಯ ಜನರಿಗೆ ಸಂದೇಶಗಳನ್ನು ಹೃದಯಸ್ಪರ್ಶಿಯಾಗುವಂತೆ ಹೇಗೆ ಮುಟ್ಟಿಸಬೇಕೆಂದು ಅವನಿಗೆ ಗೊತ್ತಿತ್ತು. "ಜ್ಞಾನ ಸಂಪಾದನೆ ಸುಲಭವಲ್ಲ. ನಿಮ್ಮಲ್ಲನೇಕರಿಗೆ ಅದಕ್ಕೆ ಬೇಕಾದ ವೇಳೆ ಇಲ್ಲ. ಆಡಾಡುತ್ತ ಜ್ಞಾನ

ಸಂಪಾದನೆ ಮಾಡಬೇಕಾದರೆ ರೀಡರ್ಸ್ ಡೈಜೆಸ್ಟ್ ಓದಿರಿ." ಇದು ಆತ ಪ್ರಥಮ ಸಂಚಿಕೆಯಲ್ಲಿ ಮುದ್ರಿಸಿದ ಜಾಹಿರಾತು. "ನಿಮಗೆ ಕಾಲೇಜಿಗೆ ಹೋಗಲು ಸಾಧ್ಯವಿಲ್ಲವೆ ? ಹಾಗಾದರೆ ಕಾಲೇಜೇ ನಿಮ್ಮ ಬಾಗಿಲಿಗ ಬರುವಂತೆ ಮಾಡುವಾ."

ತನ್ನ ಡೈಜೆಸ್ಟಿನ ಯೋಗ್ಯತೆಯ ಬಗ್ಗೆ ವಾಲೇಸನಿಗೆ ಸಂಶಯವೇ ಇರಲಿಲ್ಲ. ಆದರೆ ಈ ಕಲ್ಪನೆಯನ್ನನುಸರಿಸಿದ ಹೊಸ ತರಹದ ಪತ್ರಿಕೆ ಹೊರಡಿಸಲು ಸಿದ್ಧರಾದ ಪ್ರಕಾಶಕರು ಮಾತ್ರ ಅವನಿಗೆ ಸಿಗಲಿಲ್ಲ. ಯಾರೂ ಅವನ ಯೋಜನೆಯನ್ನು ಮೂಸಿ ನೋಡಲೂ ಸಿದ್ಧರಿರಲಿಲ್ಲ. ಬೇರೆ ಪತ್ರಿಕೆಗಳಲ್ಲಿ ಬಂದ ಹಳಸಿದ ಲೇಖನಗಳನ್ನು ಓದಲು ಯಾರು ಪತ್ರಿಕೆ ಕೊಂಡಾರು ? ಮೇಲಾಗಿ ಜನರಿಗೆ ಬೇಕಾದದ್ದು ಕಥೆ ಕಾದಂಬರಿ. ಇಡೀ ಸಂಚಿಕೆ ಲೇಖನಗಳಿಂದ ತುಂಬಿದ್ದರೆ ಯಾರೂ ಓದರು. ತುಂಬ ಕಲ್ಪಕ ಪ್ರಕಾಶಕನೆನಿಸಿದ ಅನೇಕ ಜನಪ್ರಿಯ ಪತ್ರಿಕೆಗಳ ಮಾಲಿಕ ರುಡಾಲ್ಫ್ ಹರ್ಸ್ಟ್ ಕೂಡ ಈ ಪತ್ರಿಕೆಗೆ ಬಹಳವಾದರೆ ಮೂರು ಲಕ್ಷ ಚಂದಾದಾ–ರರು ಸಿಕ್ಕಬಹುದೆಂದು ತೀರ್ಪಿತ್ತು ಬದಿಗೆ ಸರಿಸಿಬಿಟ್ಟನು. ವಾಲೇಸ್ ಯೋಜನೆಯಿಂದ ಮನದಟ್ಟಾದ ಒಪ್ಪಿಗೆ ಒಬ್ಬಳೇ ಎಂದರೆ ಲೀಲಾ ಬೆಲ್ ಆಚೆಸನ್ ಎಂಬ ತರುಣ ಸಾಮಾಜಿಕ ಕಾರ್ಯಕರ್ತೆ ಮಾತ್ರ.

ಈ ನಿರಾಶೆ ಸಾಲದ್ದಕ್ಕೆ ೧೯೨೧ ರಲ್ಲಿ ಉಂಟಾದ ಯುದ್ಧೋತ್ತರ ಮಂದಿಯ ಗಡಿಬಿಡಿಯಲ್ಲಿ ವೆಸ್ಟಿಂಗ್‌ಹೌಸ ಇಲೆಕ್ಟ್ರಿಕ್ ಕಂಪನಿಯ ಪ್ರಚಾರ ಶಾಖೆಯಲ್ಲಿ ವಾಲೇಸನಿಗಿದ್ದ ನೌಕರಿ ಹೋಗಿಬಿಟ್ಟಿತು. ಈ ದುರ್ದೈವವು ಅವನನ್ನು ನಿರ್ಧಾರಕ್ಕೆ ಬರುವಂತೆ ಮಾಡಿತು: ಸ್ವಂತವಾಗಿಯೆ ತಾನು ತನ್ನ ರೀಡರ್ಸ್ ಡೈಜೆಸ್ಟನ್ನು ಪ್ರಕಾಶಿಸುತ್ತೇನೆ ಎಂದು. ಇದಕ್ಕೆ ಬೇಕಾದ ಪರಿಪತ್ರವೊಂದನ್ನು ಸಿದ್ಧಪಡಿಸಿ ಪ್ರೊಫೆಸರ್, ಶಿಕ್ಷಕರು, ದಾಯಿಯರು ಮೊದಲಾದ ಸುಶಿಕ್ಷಿತ ಜನರ ವಿಳಾಸ ಪಡೆದು, ಸಾವಿರಗಟ್ಟಳೆಯಲ್ಲಿ ಟಪಾಲಿನಲ್ಲಿ ಕಳಿಸಿದ. ಆಗಲೇ ಲೀಲಾ ಆಚೆಸನ್ನಳೊಡನೆ ಅವನ ಮೈತ್ರಿ ದೃಢವಾಗಿತ್ತು. ಅವಳನ್ನಾತ ಮದುವೆಯಾದ. ಪ್ರಣಯವಿಹಾರದಿಂದ ಮರಳಿದೊಡನೆ ತನ್ನಲ್ಲಿದ್ದ ಕೆಲ ಸಾವಿರ ಡಾಲರುಗಳ ಸಂಗಡ ಸಾಲ ಮಾಡಿದ ೧,೩೦೦ ಡಾಲರಗಳನ್ನು ಸೇರಿಸಿ ಆತ ತನ್ನ ಪತ್ರಿಕೆಯನ್ನು ಮುದ್ರಣಕ್ಕೆ ಕೊಟ್ಟ.

ನ್ಯೂಯಾರ್ಕಿನ ಗ್ರೀನ್‌ವಿಚ್ ಗ್ರಾಮದ ಒಂದು ಚಾಳಿನಿಂದ ೧೯೨೨ರ ಫೆಬ್ರುವರಿಯಲ್ಲಿ ಹಳಿಗಿದ ಪ್ರಕಾಶಕರೆಲ್ಲರೂ ಏಕಕಂಠದಿಂದ ಇದು ಖಂಡಿತ ದಿವಾಳಿ ಏಳುತ್ತದೆಂದು ಭವಿಷ್ಯ ನುಡಿಯುತ್ತಿದ್ದಾಗ "ರೀಡಸ್ ಡೈಜೆಸ್ಟಿ"ನ ಪ್ರಥಮ ಸಂಚಿಕೆ ಪ್ರಕಟವಾಯಿತು. ಸಂಪಾದಕ ಪ್ರಕಾಶಕರೆಂದು ಡಿ ವಿಟ್ ವಾಲೇಸ್ ಮತ್ತು ಅವನ ನವೋಢಾ ಪತ್ನಿ ಲೀಲಾ ಆಚೆಸನ್ ವಾಲೇಸರ ಹೆಸರುಗಳು ಮುದ್ರಿತವಾಗಿದ್ದವು (ಇಂದಿಗೂ ಅವು ಹಾಗೆಯೆ ಇವೆ). ೫,೦೦೦ ಪ್ರತಿಗಳನ್ನು ಮಾತ್ರ ಮುದ್ರಿಸಲಾಗಿತ್ತು. ೫,೦೦೦ ಡಾಲರ್ ಬೆಲೆಯ ವರ್ಗಣಿಗಳು ದೊರೆತವು.

"ರೀಡರ್ಸ್ ಡೈಜೆಸ್ಟ್" ಮೊದಲು ಸಾವಕಾಶವಾಗಿ, ಆಮೇಲೆ ಯಾರೂ ಕಂಡು ಕೇಳಿರದ ವೇಗದಿಂದ ಪ್ರಗತಿ ಹೊಂದಿತು. ೧೯೨೩ರಷ್ಟು ಹೊತ್ತಿಗೆ ೭,೦೦೦ ಪ್ರತಿಗಳು ಖರ್ಚಾಗುತ್ತಿದ್ದವು. ೧೯೨೯ರಲ್ಲಿ ಅದರ ೪೦ ಪಟ್ಟಿಗಿಂತಲೂ ಹೆಚ್ಚು ೨,೯೦,೦೦೦ ಪ್ರತಿಗಳು ಪ್ರತಿ ತಿಂಗಳೂ ಮುದ್ರಿಸಲ್ಪಡುತ್ತಿದ್ದವು. ೧೯೪೦ರಲ್ಲಿ ಪ್ರಸಾರ ೨೪,೬೯,೦೦೦ಕ್ಕೆ ಏರಿತು. ೧೯೩೮ ರಲ್ಲಿ ಬ್ರಿಟಿಶ್ ಆವೃತ್ತಿಯೊಂದನ್ನು ತೆಗೆದು "ರೀಡರ್ಸ್ ಡೈಜೆಸ್ಟ್" ವಿದೇಶಿ ಪತ್ರಿಕಾ ರಂಗದಲ್ಲಿ ಕಾಲಿಟ್ಟಿತು. ಒಡನೆ

ಮತ್ತಾವ ಬ್ರಿಟಿಶ್ ಮಾಸಿಕಕ್ಕೆ ಮೀರಿದ ಪ್ರಸಾರ ಅದಕ್ಕೆ ಲಭ್ಯವಾಯಿತು. ಅನಂತರ ದಕ್ಷಿಣ ಅಮೇರಿಕದ ರಾಜ್ಯಗಳಿಗಾಗಿ ಸ್ಪ್ಯಾನಿಶ್ ಮತ್ತು ಅದರ ಬೆನ್ನಿಗೆ ಪೊರ್ತುಗೀಜ್ ಆವೃತ್ತಿಗಳು ಹೊರಟವು. ಇಂದು ಡಚ್, ಅರಬ್ಬಿ, ಡೇನಿಶ್, ಫಿನ್ನಿಶ್, ಇಟಾಲಿಯನ್, ನಾರ್ವೇಜಿಯನ್, ಫ್ರೆಂಚ್, ಬ್ರೇಜಿಲಿಯನ್, ಸ್ವೀಡಿಶ್, ಜರ್ಮನ್, ಜಪಾನಿ ಭಾಷೆಗಳಲ್ಲಿಯೂ ಅದರ ಆವೃತ್ತಿಗಳು ಹೊರಡುತ್ತಿವೆ. ಕುರುಡರಿಗಾಗಿ ಬ್ರೇಲ್ ಲಿಪಿಯಲ್ಲಿ ಬೇರೆ ಮೂರು ಆವೃತ್ತಿಗಳು ಪ್ರಕಟವಾಗುತ್ತಿವೆ.

"ರೀಡರ್ಸ್ ಡೈಜೆಸ್ಟ್"ನ ಪ್ರಭಾವ ಪ್ರತಿ ತಿಂಗಳು ಮಾರುವ ಅದರ ೨ ಕೋಟಿ ೧೦ ಲಕ್ಷ ಪ್ರತಿಗಳಿಗಷ್ಟೇ ಮಿತವಾಗಿಲ್ಲ, ಅದು ಅಮೇರಿಕದ ಮತ್ತು ಕೆಲ ಮಟ್ಟಿಗೆ ವಿದೇಶಗಳ- ಪತ್ರಿಕೋದ್ಯಮದ ರೂಪವನ್ನೇ ಬದಲಿಸಿದೆ. ಕಥೆಗಳನ್ನಷ್ಟೇ ಓದುಗರು ಮೆಚ್ಚುತ್ತಾರೆಂದು ನಂಬಿದ್ದ ಅಮೇರಿಕನ್ ಪತ್ರಿಕೆಗಳು "ರೀಡರ್ಸ್ ಡೈಜೆಸ್ಟ್"ನ ಯಶಸ್ಸನ್ನು ನೋಡಿ ಕಥೇತರ ಲೇಖನಗಳನ್ನು ಹೆಚ್ಚಾಗಿ ಪ್ರಕಟಿಸಲು ಈಗ ಧೈರ್ಯ ಮಾಡಿವೆ. ಗಂಭೀರ ಲೇಖನಗಳಿಗೆ ಪತ್ರಿಕೆಗಳಲ್ಲಿ ಹೆಚ್ಚು ಸ್ಥಳ ದೊರೆಯುತ್ತಿದೆ.

ಯಶಸ್ಸಿನೊಡನೆ "ರೀಡರ್ಸ್ ಡೈಜೆಸ್ಟ್" ಕೊಡುಗೈಯಿಂದಲೇ ಲೇಖಕರಿಗೆ ಹಣ ಕೊಡಲಾರಂಭಿಸಿತು. ಮೂಲ ಪತ್ರಿಕೆಯವರು ಕೊಡುವುದಕ್ಕಿಂತ ಹೆಚ್ಚು ಗೌರವ ಧನವನ್ನು ಅದು ಪುನರ್ಮುದ್ರಣಕ್ಕಾಗಿ ಲೇಖಕರಿಗೆ ಕೊಡುತ್ತಿದೆಯೆಂದು ಹೇಳಲಾಗಿದೆ. ಹೀಗಾಗಿ ಅಮೇರಿಕದ ಲೇಖಕರು "ರೀಡರ್ಸ್ ಡೈಜೆಸ್ಟ್"ಗೆ ಸ್ವೀಕಾರಾರ್ಹವಾಗಬಹುದಾದಂತೆ ಲೇಖನಗಳನ್ನು ಬರೆಯಲು ಯತ್ನಿಸುತ್ತಾರೆ. ಮೊದಲು ಕೇವಲ ಇತರ ಪತ್ರಿಕೆಗಳಿಂದ ಲೇಖನಗಳನ್ನೆತ್ತುತ್ತಿದ್ದ ಅದು ಅನಂತರ ಸ್ವತಂತ್ರ ಲೇಖನಗಳನ್ನೂ ಪ್ರಕಟಿಸಲಾರಂಭಿಸಿತು. ಕೆಲ ವೇಳೆ ತಾನೇ ಹೇಳಿ ಹಣ ಕೊಟ್ಟು ಯಾವುದಾದರೂ ಲೇಖ ಬರೆಸಿ ಮೊದಲು ಅದರ ದೀರ್ಘ ರೂಪವನ್ನು ಬೇರಾವುದಾದರೂ ಪತ್ರಿಕೆಯಲ್ಲಿ ಪ್ರಕಟಿಸಿ, ಬಳಿಕ ಅದರ ಸಂಕ್ಷಿಪ್ತ ರೂಪವನ್ನು ತನ್ನಲ್ಲಿ ಅದು ಪ್ರಕಟಿಸುವುದೂ ಉಂಟು.

ಇಂದು "ರೀಡರ್ಸ್ ಡೈಜೆಸ್ಟ್"ನವರು ಕೇವಲ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿಲ್ಲ. ಪ್ರತಿಸಂಚಿಕೆಯಲ್ಲಿ ಪ್ರಕಟವಾಗುವ ಪುಸ್ತಕ ಸಂಗ್ರಹವಲ್ಲದೆ ವರ್ಷಕ್ಕೆ ನಾಲ್ಕು ಮಹತ್ವದ ಇತರ ಗ್ರಂಥಗಳನ್ನು ಸಂಗ್ರಹರೂಪದಲ್ಲಿ ಅವರು ಪ್ರಕಟಿಸುತ್ತಾರೆ. ಅವುಗಳ ಒಂದು ಕೋಟಿ ಪ್ರತಿಗಳು ಮಾರುತ್ತವೆ.

೧೯೫೦ರಲ್ಲಾಗಲೇ "ರೀಡರ್ಸ್ ಡೈಜೆಸ್ಟ್"ನ ಒಂದು ಕೋಟಿ ಪ್ರತಿಗಳು ಹೊರಡುತ್ತಿದ್ದವು. ಆದರೂ ಅಗಾಧ ವೆಚ್ಚವನ್ನು ತೂಗಿಸುವುದು ಕಷ್ಟವಾದುದರಿಂದ ಆ ವರ್ಷ ಜಾಹಿರಾತುಗಳನ್ನು ಸ್ವೀಕರಿಸಲು ಆರಂಭವಾಯಿತು. ಜಾಹಿರಾತಿನ ದರ, ಆಗಿನ ಅಮೇರಿಕನ್ ಆವೃತ್ತಿಗೆ ಮಾತ್ರ ಪ್ರತಿ ಪುಟಕ್ಕೆ ಒಂದು ಸಲಕ್ಕೆ ೨೬,೦೦೦ ಡಾಲರ್ (ಸುಮಾರು ರೂ. ೧,೨೫೦೦೦). ಈ ದರದಲ್ಲಿಯೂ ಅದು ಔಷಧ, ಸಿಗರೇಟು ಮದ್ಯ ಮೊದಲಾದವುಗಳ ಜಾಹಿರಾತನ್ನು ಸ್ವೀಕರಿಸಲಿಲ್ಲ.

"ರೀಡರ್ಸ್ ಡೈಜೆಸ್ಟ್"ನ ಯಶಸ್ಸಿನ ಗುಟ್ಟೇನು? ವಾಲೇಸನಿಂದ ತರಬೇತು ಹೊಂದಿದ ಅದರ ಸಂಪಾದಕ ಮಂಡಲಿಯವರು ಜನರು ಏನನ್ನು ಓದಬಯಸುತ್ತಾರೆ ಎಂಬುದನ್ನು ತಪ್ಪದೆ ಗುರುತಿಸಲು ಸಮರ್ಥರಾಗಿದ್ದಾರೆ. ಆದರೆ ಜನರಿಗೆ ಬೇಕಾಗಿದೆಯೆಂದು ಅದೆಂದೂ ಅಶ್ಲೀಲ ಅಥವಾ ಉದ್ವೇಗಪೂರ್ಣ ವಿಷಯಗಳನ್ನು ಕೊಡುವುದಿಲ್ಲ. ಶಾಶ್ವತ ಮಹತ್ವದ ಉಪಯುಕ್ತ ವಿಷಯಗಳ

ನ್ನಷ್ಟೇ ಅರಿಸಲಾಗುತ್ತದೆ. ಅದರ ಸಂಕ್ಷೇಪ ಕಾರ್ಯ ಅದ್ವಿತೀಯ ಕೌಶಲದಿಂದ ಪೂರೈಸಲ್ಪಡುತ್ತದೆ. ಒಬ್ಬಾನೊಬ್ಬ ಪ್ರಸಿದ್ಧ ಲೇಖಕ ತನ್ನ ಪುಸ್ತಕವನ್ನು ಇಷ್ಟು ಚೆನ್ನಾಗಿ ಸಂಕ್ಷೇಪಿಸಲು ಸಾಧ್ಯವಿದೆಯೆಂದು ತಾನು ಕಲ್ಪಿಸಿರಲೇ ಇಲ್ಲವೆಂದು ಹೇಳಿದ್ದಾನೆ.

ಡಿ ವಿಟ್ ವಾಲೇಸನಿಗೆ ಧರ್ಮಗುರುಗಳ ಸಂಗಡ ಘನಿಷ್ಟ ಸಂಬಂಧವಿರುವುದು ಅವನ ಯಶಸ್ಸಿಗೆ ಒಂದು ಕಾರಣವೆಂದು ಭಾವಿಸಲಾಗಿದೆ. ಅವನು ಪ್ರಬಲ ಧರ್ಮಗುರುಗಳ ಕುಟುಂಬದವನು ಮತ್ತು ಅವನ ಪತ್ನಿ ಒಬ್ಬ ಧರ್ಮಗುರುವಿನ ಮಗಳು. ಧಾರ್ಮಿಕ ಭಾವನೆಗಳಿಗೆ ವಿರುದ್ಧವಾದ ವಿಚಾರಗಳನ್ನು ಅವರು ಪ್ರಕಟಿಸುವದಿಲ್ಲ; ದೇವರಲ್ಲಿ ಶ್ರದ್ಧಾಭಕ್ತಿಗಳನ್ನು ಪ್ರೋತ್ಸಾಹಿಸುವ ಲೇಖನಗಳು ಅದರಲ್ಲಿ ತಪ್ಪದೆ ಬರುತ್ತವೆ. ಪ್ರತಿಯಾಗಿ ಧರ್ಮಗುರುಗಳು ತಮ್ಮ ಉಪದೇಶಗಳಲ್ಲಿ ಈ ಪತ್ರಿಕೆಯನ್ನುಲ್ಲೇಖಿಸುವುದರಿಂದ ಅದರ ಪ್ರಚಾರ ಹೆಚ್ಚಾಗುತ್ತಿದೆಯೆಂದು ಆರೋಪಿಸುವವರುಂಟು.

"ರೀಡರ್ಸ್ ಡೈಜೆಸ್ಟ್"ನ ವಿರೋಧಿಗಳ ಮುಖ್ಯ ಆಕ್ಷೇಪವೆಂದರೆ ಅದು ಜಟಿಲವಾದ ಸಮಸ್ಯೆಗಳನ್ನು ಓದುಗರ ಮುಂದಿಡುವುದಿಲ್ಲ. ಜೀವನ ಬಲು ಸರಳ, ಕೀಲಿಕೈ ಇದ್ದರೆ ಬೀಗ ತೆರೆಯಬಹುದಾದಂತೆ ಯಶಸ್ವಿನ ಉಪಾಯವೊಂದು ಗೊತ್ತಿದ್ದರೆ ಬೇಕಾದ ಸಮಸ್ಯೆಯನ್ನೂ ಬಿಡಿಸಬಹುದೆಂಬ ಭ್ರಾಮಕ ಕಲ್ಪನೆಯನ್ನದು ಹುಟ್ಟಿಸುತ್ತದೆ.

ಈ ಆರೋಪದಲ್ಲಿ ನಿಜಾಂಶವಿರಬಹುದಾದರೂ "ರೀಡರ್ಸ್ ಡೈಜೆಸ್ಟ್"ನ ಪ್ರಚಂಡ ಪ್ರಭಾವವನ್ನು ಯಾರೂ ಅಲ್ಲಗಳೆಯಲಾರರು. ಓದುಗರ ಮನಸ್ಸಿನ ಮೇಲೆ ಅದರ ಹಿಡಿತ ಅಂಥದು. ಇದಕ್ಕೆ ಕೆಲವೇ ಉದಾಹರಣೆಗಳು ಸಾಕು. ೧೯೪೮ರಲ್ಲಿ ಇಟಲಿಯ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಸೋಲು "ರೀಡರ್ಸ್ ಡೈಜೆಸ್ಟ್"ನ ಇಟಾಲಿಯನ್ ಆವೃತ್ತಿಯಲ್ಲಿ ಪ್ರಕಟವಾದ ಲೇಖನಗಳೇ ಕಾರಣವೆಂದು ಅಮೇರಿಕದ ವಿದೇಶ ಶಾಖೆ ಒಪ್ಪಿದೆ. ಸೋಯಾ ಬೀಜ ಕೃಷಿಯ ಬಗ್ಗೆ ಅದರ ಸ್ಪಾನಿಶ್ ಆವೃತ್ತಿಯಲ್ಲಿ ಬಂದ ಒಂದು ಲೇಖ ದಕ್ಷಿಣ ಅಮೇರಿಕದಲ್ಲಿ ಆ ಬೀಜದ ವಿಸ್ತಾರ ಕೃಷಿಗೆ ಪ್ರಚೋದನೆಯಿತ್ತಿತು. ರಸ್ತೆ ಅಪಘಾತಗಳನ್ನು ಕುರಿತು ಅದು ಪ್ರಕಟಿಸಿದ ಚಿತ್ರವತ್ತಾದ ಒಂದು ಲೇಖ ವಾಹನ ನಿಯಂತ್ರಣದ ಕ್ರಮಗಳ ಮೇಲೆ ಬಲವಾದ ಪರಿಣಾಮ ಮಾಡಿತು. ಜೀವನದಲ್ಲಿ ಹೀನವಾದುದಕ್ಕಿಂತ ಉದಾತ್ತವಾದುದನ್ನೇ ಒತ್ತಿ ಹೇಳುವ ಅದರ ನೀತಿ ಜನೋಪಕಾರಿಯಾಗಿಲ್ಲವೆಂದು ಯಾರು ಹೇಳುತ್ತಾರೆ? ✿

"ರೀಡರ್ಸ್ ಡೈಜೆಸ್ಟ್" ಇಂಗ್ಲಿಷಿನಲ್ಲಿ ಇದುವರೆಗೆ ಭಾರತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದು ಇತ್ತೀಚೆ "ಸರ್ವೋತ್ತಮ" ಎಂಬ ಹಿಂದಿ ಆವೃತ್ತಿಯನ್ನೂ ಆರಂಭಿಸಿದೆ. ಈ ಡೈಜೆಸ್ಟಿನ ಸದ್ಯದ ಒಟ್ಟು ಪ್ರಸಾರ ಮೂರು ಕೋಟಿ ಪ್ರತಿಗಳನ್ನೂ ಮೀರಿದೆ.

ದಾಖಲೆಗಳು

- ಜಗತ್ತಿನ ಅತಿ ದೊಡ್ಡ ಕಾಗದ ಕಾರಖಾನೆ ಅಮೇರಿಕದ ಜಾರ್ಜಿಯಾ ಪ್ರಾಂತ್ಯದ ಸವಾನಾದಲ್ಲಿದೆ. ಯೂನಿಯನ್ ಕ್ಯಾಂಪ್ ಕಾರ್ಪೊರೇಶನ್ನಿನವರು ೧೯೩೬ ರಲ್ಲಿ ಸ್ಥಾಪಿಸಿದ ಈ ಕಾರಖಾನೆಯ ಉತ್ಪಾದನೆ ೧೯೭೪ ರಲ್ಲಿ ೧,೦೦೨,೯೬೭ ಟನ್ನುಗಳಷ್ಟು.

- ಲಂಡನ್ನಿನ ಆಕ್ಸ್‌ಫರ್ಡ್ ಸ್ಟ್ರೀಟಿನ ಲಿಲಿ ಆ್ಯಂಡ್ ಸ್ಕಿನರ್ ಲಿ. ಜಗತ್ತಿನ ಅತಿ ದೊಡ್ಡ ಶೂ ಮಾರಾಟ ಮಳಿಗೆ. ನಾಲ್ಕು ಅಂತಸ್ತುಗಳ ಕಟ್ಟಡ ಇರುವ ಇದರ ಒಟ್ಟು ಕ್ಷೇತ್ರಫಲ ೭೬ ಸಾವಿರ ಚದರ ಅಡಿಗಳು.

- ೧೯೭೫ರಲ್ಲಿ ೮೩,೯೦೦,೦೦೦ ಮೆಟ್ರಿಕ್‌ಟನ್ ಉಕ್ಕನ್ನು ಉತ್ಪಾದಿಸಿದ ಟೋಕಿಯೋದ ನಿಪ್ಪೊನ್ ಸ್ಟೀಲ್ ಜಗತ್ತಿನ ಅತಿ ದೊಡ್ಡ ಉಕ್ಕಿನ ಕಾರಖಾನೆ.

- ಬ್ರಿಟಿಶ್-ಅಮೇರಿಕನ್ ಟೊಬೆಕೊ ಕಂಪನಿ ಲಿ. (೧೯೦೨) ಲಂಡನ್ ಎಂಬುದು ಜಗತ್ತಿನ ಅತಿ ದೊಡ್ಡ ತಂಬಾಕು ಸಂಸ್ಥೆ. ೫೧ ದೇಶಗಳಲ್ಲಿ ಒಟ್ಟು ೧೨೮ ತಂಬಾಕು ಕಾರಖಾನೆಗಳು ಇದಕ್ಕೆ ಹೊಂದಿಕೊಂಡಿವೆ. ೧೯೭೬ರಲ್ಲಿ ಈ ಕಂಪನಿಯಿಂದ ಮಾರಾಟವಾದ ಸಿಗರೇಟುಗಳು ೫೦೦,೦೦೦,೦೦೦,೦೦೦.

- ಆಟಿಗೆ ಸಾಮಾನುಗಳ ತಯಾರಿಕೆಯಲ್ಲಿ ಜಾಗತಿಕ ದಾಖಲೆ ಸ್ಥಾಪಿಸಿದ್ದು ೧೯೪೫ ರಲ್ಲಿ ಸ್ಥಾಪನೆಗೊಂಡ ಕ್ಯಾಲಿಫೋರ್ನಿಯಾದ ಮ್ಯಾಟೆಲ್ ಇನ್-ಕಾರ್ಪೊರೇಟೆಡ್ ಆಫ್ ಹಾಥೋರ್ನ್.

- ಜಗತ್ತಿನಲ್ಲೇ ಅತಿ ಹೆಚ್ಚು ಗಳಿಸುವ ಪ್ರಕಾಶನ ಸಂಸ್ಥೆಯೆಂದರೆ ನ್ಯೂಯಾರ್ಕಿನ ಟೈಮ್-ಲೈಫ್ ಸಂಸ್ಥೆ. ಅವರ ವಾರ್ಷಿಕ ಸರಾಸರಿ ಉತ್ಪನ್ನ ೧೦೩ ಕೋಟಿ ಡಾಲರುಗಳಷ್ಟು.

ಭಾರತದ ಕಾರ್ಮಿಕ ಆಂದೋಲನದಲ್ಲಿ
ಇವರೊಂದು ಮೈಲುಗಲ್ಲು

ಹರಬನ್ಸಲಾಲ ಪರ್ವಾನಾ

ಪಿ ಎಸ್. ಸುಂದರೇಶನ್*

"ನನ್ನ ಗೂಡು ಉರಿಯುತ್ತಿದೆ. ಆದರೆ ಬೆಳಕಿನ ಅಗತ್ಯವಿರುವವರಿಗೆ ಅದರಿಂದ ಹೆಚ್ಚಿನ ಬೆಳಕು ಸಿಕ್ಕುತ್ತಿದೆ; ಅದುವೇ ನನಗೆ ಆನಂದ"–ಹರಬನ್ಸಲಾಲ ಪರ್ವಾನಾ ಅವರ ಮಟ್ಟಿಗೆ ಇದೊಂದು ವೇದವಾಕ್ಯ. ತಮ್ಮ ಸುತ್ತ ಸದಾ ಮುಕರಿರುತ್ತಿದ್ದ ಯುವಕರಲ್ಲಿ ಸ್ಫೂರ್ತಿ ತುಂಬಲು ಅವರು ಬಳಸುತ್ತಿದ್ದ ಸುಂದರ ಉರ್ದು ಕಾವ್ಯಭಾಗವಿದು. ಒಂದು ದೃಷ್ಟಿಯಿಂದ ಇದು ಅವರ ಬಾಳಿನ ಗುರಿಯೂ ಆಗಿತ್ತು, ಅರ್ಥವೂ ಆಗಿತ್ತು. ೧೯೭೫ರ ಏಪ್ರಿಲ್ ೧೮ರಂದು ಅವರ ಪಾರ್ಥಿವ ಶರೀರವನ್ನು ಆಹುತಿಗೊಂಡ ಚಿತೆ ದೂರ ದಿಗಂತವನ್ನೂ ಬೆಳಗಿತು. ಆ ಬೆಳಕು ತೋರಿದ ದಾರಿಯಲ್ಲೇ ಭಾರತದ ಸಾವಿರ ಸಾವಿರ ಬ್ಯಾಂಕ್ ಕೆಲಸಗಾರರು ಧನ್ಯತೆಯಿಂದ ಅಡಿಯಿಡುತ್ತಿದ್ದಾರೆ. ಇಂದು ಆರ್ಥಿಕ ದೃಷ್ಟಿಯಿಂದ ಬ್ಯಾಂಕ್ ಕೆಲಸಗಾರರು ಹೇಳಿಕೊಳ್ಳಬಹುದಾದಂಥ ಒಂದು ಮಟ್ಟವನ್ನು ತಲಪಿದ್ದರೆ, ಸಂಘಟನೆಯ ದೃಷ್ಟಿಯಿಂದ ಒಂದು ಶಕ್ತಿಯೆಂದು ಪರಿಗಣಿತರಾಗುತ್ತಿದ್ದರೆ ಅದರಲ್ಲಿಯ ಸಿಂಹಪಾಲು ಶ್ರೇಯಸ್ಸು ಪರ್ವಾನಾರಂತಹ ಕೆಲವು ಮಹಾನುಭಾವರ ತ್ಯಾಗಕ್ಕೇ ಸಲ್ಲಬೇಕು.

ಯಾವುದೊಂದು ರಂಗದಲ್ಲಿ ಮೂಲಪುರುಷರಾಗುವುದು ಮಹಾನ್ ಗೌರವದ ಸಂಗತಿಯೇನೋ ನಿಜ. ಆದರೆ ಯಾವ ದೃಷ್ಟಿಯಿಂದಲೂ ಅದು ಸಾಮಾನ್ಯ ಕೆಲಸವಲ್ಲ. ಯಾಕೆಂದರೆ, ಅಂಥವರಿಗೆ ವ್ಯಕ್ತಿಗತ ಶ್ರದ್ಧೆ, ಆತ್ಮವಿಶ್ವಾಸಗಳನ್ನುಳಿದರೆ ಭದ್ರ ಅಡಿಪಾಯವೆಂದು ಅವರು ನೆಲೆಯೂರಿ ನಿಲ್ಲಲು ಮತ್ತೇನೂ ಆಧಾರವಿರುವುದಿಲ್ಲ. ಅವರ ಕಾರ್ಯದಲ್ಲಿ ಯಶಸ್ಸು ಸಿಕ್ಕರೆ ಆ ರಂಗದಲ್ಲಿ ಅವರು ಮೂಲಪುರುಷರೆಂದು ಸಮಾಜ ಗುರುತಿಸುತ್ತದೆ; ಆದರೆ ಅವರು ಸೋತರೆ ಯಾರ ಗಮನಕ್ಕೂ ಬಾರದೆ ಹೇಳ ಹೆಸರಿಲ್ಲದಂತೆ ಅವರು ಇದ್ದಲ್ಲೇ ಕರಗಿ ಹೋಗಿಬಿಡಬೇಕಾಗುತ್ತದೆ. ಅವರಿಗಾಗಿ ನಾಲ್ಕು ಹನಿ ಕಣ್ಣೀರು ಹಾಕುವವರೂ ಉಳಿಯುವುದಿಲ್ಲ. ಅವರ ಪುಣ್ಯಬಲವೇ ವಿಶೇಷವಾಗಿದ್ದರೆ, ಅವರ ಸೋಲುಗಳೇ ಮುಂದಿನವರ ಗೆಲುವಿಗೆ ಕಾರಣವೆಂಬುದನ್ನು ಆ ಮುಂದಿನವರು ಗುರುತಿಸಿ ನೆನೆಯಬಹುದಷ್ಟೆ. ಆದರೆ ಪರ್ವಾನಾ ಗೆಲುವಿನ ಹಟದಿಂದಲೇ ಕಣಕ್ಕಿಳಿದವರು. ಅವರ ಹರವಾದ ಹೆಗಲೇ ಇಂದು ಅಖಿಲ ಭಾರತ ಮಟ್ಟದಲ್ಲಿ ಬ್ಯಾಂಕ್ ನೌಕರರ ಸಂಘಕ್ಕೆ ಅಗೋಚರ ಅಡಿಪಾಯವಾಗಿದೆ.

*

* ಲೇಖಕರು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಉಪಾಧ್ಯಕ್ಷರೂ ಕರ್ನಾಟಕ ಪ್ರದೇಶ ಬ್ಯಾಂಕ್ ನೌಕರರ ಮಹಾಮಂಡಳದ ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಮಿಕ ಆಂದೋಲನದ ಸಂಘಟನೆಯಲ್ಲಿ ಇವರ ಪಾತ್ರವೂ ಗಣನೀಯ.


೧೯೨೩ರಲ್ಲಿ ನವಂಬರ್ ೩ ರಂದು ಪರ್ವಾನಾ ಹುಟ್ಟಿದ್ದು ಪಂಜಾಬದ ಹೋಶಿಯಾರ್ಪುರ ಜಿಲ್ಲೆಯಲ್ಲಿಯ ಒಂದು ಚಿಕ್ಕ ಹಳ್ಳಿಯಲ್ಲಿ. ತಂದೆಯದು ಬಡ ಕುಟುಂಬ. ಸೋದರ ಸೋದರಿಯರ ಮಧ್ಯದಲ್ಲಿ ಗ್ರಾಮೀಣ ವಾತಾವರಣದಲ್ಲೇ ಅವರು ಬೆಳೆಯಬೇಕಾಯಿತಾದರೂ ಪ್ರಾರಂಭದಿಂದಲೇ ಅವರ ದೃಷ್ಟಿಕೋನವೇ ತುಸು ಭಿನ್ನವಾದುದಾಗಿತ್ತು. ಬಡತನಕ್ಕೆ ಒಗ್ಗಿಕೊಂಡು ಬೆಳೆದವರಿಗೆ ಅನೇಕ ವೇಳೆ ಅದೇನೂ ವಿಶೇಷವೆನಿಸುವುದೇಯಿಲ್ಲ. ಆದರೆ ತಮ್ಮ ಸುತ್ತಲೂ ಹುಚ್ಚೆದ್ದು ಕುಣಿಯುತ್ತಿದ್ದ ಹಸಿವು, ದಾರಿದ್ರ್ಯ, ಸಂಕಷ್ಟಗಳು ಅವರನ್ನು ಅಂತರ್ಮುಖಿಯಾಗಿಸುತ್ತಿದ್ದುವು. ದಾರಿದ್ರ್ಯವೇ ಪಾಪಕ್ಕೆ ಮೂಲವೆಂಬ ಅಂಶ ಅವರ ಮನಸ್ಸಲ್ಲಿ ಎಳೆ ವಯಸ್ಸಿನಲ್ಲೇ ನೆಟ್ಟು ಅದರ ನಿವಾರಣೆಗೆ ಹೋರಾಡಬೇಕೆಂಬ ಛಲದ ಬೀಜ ಬಿತ್ತಿದುವು. ಆ ವಯಸ್ಸಿನಲ್ಲೂ ಸಾಮಾನ್ಯ ಜನರಲ್ಲಿ ವ್ಯಾಪಕವಾಗಿದ್ದ ಬಡತನಕ್ಕೆ ಕಾರಣಗಳೇನಿರಬಹುದೆಂದು ಸುತ್ತಲಿನವರನ್ನು ಕೇಳಿ ಅರ್ಥ ಮಾಡಿಕೊಳ್ಳಲು ಪರ್ವಾನಾ ಯತ್ನಿಸುತ್ತಿದ್ದರು. ಬುದ್ಧಿವಂತ ವಿದ್ಯಾರ್ಥಿಯೆಂದು ಶಾಲೆಯಲ್ಲಿ ಶಿಕ್ಷಕರೆಲ್ಲ ಅವರನ್ನು ಮೆಚ್ಚುತ್ತಿದ್ದರಾದರೂ ಬಡತನ ಮೆಟ್ರಿಕ್ಕಿಗಿಂತ ಮುಂದೆ ಓದಲು ಅವರನ್ನು ಬಿಡಲಿಲ್ಲ. ೧೭ನೆಯ ವಯಸ್ಸಿಗೆ ೧೯೪೦ರಲ್ಲಿ ಪಂಜಾಬ ನ್ಯಾಶನಲ್ ಬ್ಯಾಂಕಿನ ಲಾಹೋರ ಶಾಖೆಯಲ್ಲಿ ಅವರಿಗೆ ಮೊಟ್ಟ ಮೊದಲ ನೌಕರಿ, ಕಾರಕೂನನೆಂದು, ಸಿಕ್ಕಿತು. ಆದರೆ ಇಂದು ಒಂದು ಬ್ಯಾಂಕಿನಲ್ಲಿ ಕಾರಕೂನನೆಂದು ಪ್ರಾರಂಭಿಸುವ ವ್ಯಕ್ತಿ ಅಂದಿನ ಮಾನದಿಂದಂತೂ ಖಂಡಿತ ಸುದೈವಿ. ಜಗತ್ತು ಆರ್ಥಿಕ ಮುಗ್ಗಟ್ಟಿನಿಂದ ಅದೇ ಚೇತರಿಸಿಕೊಳ್ಳುತ್ತಿದ್ದ ಆ ಕಾಲದಲ್ಲಿ ತಮ್ಮ ನೌಕರಿಯ ಮೊದಲ ವರ್ಷವನ್ನು ವೇತನ ಅಥವಾ ಯಾವುದೇ ಭತ್ಯ ಕೂಡ ಇಲ್ಲದೆಯೇ ತರಬೇತಿದಾರನೆಂದು ಪರ್ವಾನಾ ಕಳೆಯಬೇಕಾಯಿತು. ಶೋಷಕ ಜಗತ್ತಿನ ಪ್ರಥಮ ಪರಿಚಯ ಅವರಿಗಾದದ್ದು ಈ ತೆರದಲ್ಲಿ. ಮರುವರ್ಷ ೧೯೪೧ರಲ್ಲಿ ಅವರಿಗೆ ತಿಂಗಳಿಗೆ ರೂ. ೩೦ ಸಂಬಳ ಗೊತ್ತುಪಡಿಸಲಾಯಿತು. ಸಂಬಳ ಕೊಟ್ಟುದೇ ಒಂದು ಉಪಕಾರವೆಂಬಂತೆ ಹಿಂದಿನಿಂದಲೇ ಶಾಖೆಯ ಮ್ಯಾನೇಜರರು ಪರ್ವಾನಾರನ್ನು ಕರೆದು ಕೆಲ ಸೂಚನೆಗಳನ್ನು ಕೊಟ್ಟರು. ಇದಷ್ಟನ್ನು ಗಮನಿಸಿದರೆ ಅಂದಿಗಿಂದಿನ ವ್ಯತ್ಯಾಸ ಮನದಟ್ಟಾಗುವುದು.

ಸಂಬಳ ಗೊತ್ತುಪಡಿಸಿದ ದಿನದಿಂದ ಪರ್ವಾನಾ ತಪ್ಪದೆ ಸರಿಯಾಗಿ ಬೆಳಿಗ್ಗೆ ಒಂಬತ್ತು ಗಂಟೆಗೆ ಬರಬೇಕಲ್ಲದೆ ಮ್ಯಾನೇಜರರ ಅನುಮತಿಯಿಲ್ಲದೆ ಸಂಜೆ ಕೂಡ ಹೊರಬೀಳಕೂಡದು. ಆ ಕಾಲದಲ್ಲಿ ಬ್ಯಾಂಕಿನಲ್ಲಿ ಕೆಲಸ ಮಾಡುವವರು ಕನಿಷ್ಠ ೧೨ ತಾಸು ದುಡಿಯಬೇಕಾಗುತ್ತಿತ್ತು. ಕೆಲವೊಮ್ಮೆ ರಾತ್ರಿ ಊಟಕ್ಕೆಂದು ಮನೆಗೆ ಹೋಗಿಬರಲು ಎಂಟು ಗಂಟೆಯ ಹೊತ್ತಿಗೆ, ಒಂಬತ್ತಕ್ಕೆ ಮರಳಿ ಬರಲೇಬೇಕೆಂಬ ಕರಾರಿನ ಮೇಲೆ, ಒಪ್ಪಿಗೆ ಸಿಗುತ್ತಿತ್ತು. ಆದರೆ ಆ ಕಾಲಕ್ಕೆ ಈ ನೌಕರರ ಕೆಲಸದ ಅವಧಿಯನ್ನು ಕಟ್ಟುನಿಟ್ಟಾಗಿ ವಿಧಿಸುವಂತಹ ಇಲ್ಲವೆ ಅವರಿಗೆ ಸೇವಾರಕ್ಷೆಯನ್ನು ನೀಡುವಂತಹ ಯಾವುದೇ ಕಾನೂನು ಬ್ಯಾಂಕಿಂಗ್ ಉದ್ಯಮಕ್ಕೆ ಅನ್ವಯಿಸುತ್ತಿರಲಿಲ್ಲ. ಅಂತೆಯೇ, ಸರ್ವಾಧಿಕಾರಿಯಂತಿರುತ್ತಿದ್ದ ಶಾಖಾ ಮ್ಯಾನೇಜರರ ಮರ್ಜಿ ಹಿಡಿಯುವಲ್ಲಿ ವಿಫಲನಾದ ಯಾರೊಬ್ಬನಿಗೂ ಆತ "ನಾಳೆಯಿಂದ ಕೆಲಸಕ್ಕೆ ಬರಬೇಡ"ವೆಂದು ಹೇಳಿದರೆ ಆ ಬಡ ಪ್ರಾಣಿಯ ನೌಕರಿಗೆ ಮಂಗಳ ಹಾಡಿದಂತಾಗಿಬಿಡುತ್ತಿತ್ತು.

ಬ್ಯಾಂಕಿಂಗ್ ಉದ್ಯಮದಲ್ಲಿ ಅನಿಯಂತ್ರಿತವಾಗಿ ನಡೆದಿದ್ದ ಈ ಬಗೆಯ ಅನ್ಯಾಯ ಸತ್ರ ಯುವಕ ಪರ್ವಾನಾರನ್ನು ಕಂಗೆಡಿಸಿತ್ತು. ಸದಾ ಕಾಲ ಕೂದಲೆಳೆಗೆ ಕಟ್ಟಿದಂತಿರುತ್ತಿದ್ದ ಕತ್ತಿ ನೆತ್ತಿಯ ಮೇಲೆ ತೂಗುತ್ತಿದ್ದಂಥ ಆ ಕರಾಳ ದಿನಗಳಲ್ಲಿ ಮುಕ್ತಿಯ ದಾರಿಯೇ ತೋರದೆ ಅವರು ತೊಳಲುತ್ತಿದ್ದರಾದರೂ ಅನ್ಯಾಯದ ನಿವಾರಣೆಗಾಗಿ ಏನಾದರೂ ಮಾಡಲೇಬೇಕೆಂಬ ಛಲ ಮಾತ್ರ ಅವರ ಅಂತರಂಗದಲ್ಲಿ ಬೆಳೆದು ದೃಢಗೊಳ್ಳುತ್ತಿತ್ತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಮಿಕ ಸಂಘಟನೆ ಪೂರ್ತಿ ಅಪರಿಚಿತವೇ ಆಗಿದ್ದ ಆ ಕಾಲದಲ್ಲಿ ಅವರ ಗಮನ ಸೆಳೆಯುವಂಥ ಘಟನೆಯೊಂದು ಸಂಭವಿಸಿದ್ದು ೧೯೪೨ರ ಸುಮಾರಿಗೆ. ಛೆಹರ್ತಾ ಎಂಬುದು ಪಂಜಾಬದಲ್ಲಿ ಕಾರ್ಮಿಕರ ಸಂಘಟಿತ ಶಕ್ತಿಯ ಬಲವನ್ನು ಮೊದಲು ಪ್ರದರ್ಶಿಸಿದ ಊರು. ಅಲ್ಲಿಯ ಕಾರಖಾನೆಯೊಂದರ ಕೆಲಸಗಾರರು ಒಡೆಯರಿಂದ ತಮಗಾಗುತ್ತಿದ್ದ ಅನ್ಯಾ

ಯದ ವಿರುದ್ಧ ಸಿಡಿದೆದ್ದರು. ಅವರೆಲ್ಲ ಸಂಘಟಿತರಾಗಿ ಸಂಪು ಹೂಡಿದರು. ಕೆಂಪು ಘೋಷಣಾ ಫಲಕಗಳನ್ನು ಎತ್ತಿ ಹಿಡಿದುಕೊಂಡು ಶಿಸ್ತಿನಿಂದ ನಡೆದ ಅವರ ಮೆರವಣಿಗೆ ಪರ್ವಾನಾರಲ್ಲಿ ಕುತೂಹಲವನ್ನು ಕೆರಳಿಸಿತು. ಅವರ ಸಭೆ ಮೆರವಣಿಗೆಗಳನ್ನು ಹತ್ತಿಕ್ಕಲು ಪೋಲೀಸರು ಎಂಥ ಕ್ರೂರ ಮಾರ್ಗವನ್ನನುಸರಿಸಲೂ ಹಿಂಜರಿಯಲಿಲ್ಲ. ಕಾರಖಾನೆಯ ಮಾಲಿಕರು ಬಾಡಿಗೆಯ ಗುಂಡಾ ಜನರನ್ನು ಹಿಡಿದು ಹಿಂಸಾಚಾರದಿಂದ ಕೆಲಸಗಾರರನ್ನು ಬಗ್ಗು ಬಡಿಯಲು ನೋಡಿದರು. ಇದನ್ನೆಲ್ಲ ಕಣ್ಣಾರೆ ಕಂಡ ಪರ್ವಾನಾರಿಗೆ ತಮ್ಮ ಸಮಸ್ಯೆಗೂ ಒಂದು ಬಗೆಯ ಅಸ್ಪಷ್ಟ ಉತ್ತರ ಗೋಚರಿಸತೊಡಗಿತು. ಸಂಪು ಹೂಡಿದ್ದ ಕಾರ್ಮಿಕರಲ್ಲಿ ಆಸ್ಥೆಯುಂಟಾಗಿ ಇವರು ಅವರೊಂದಿಗೆ ಬೆರೆತು ಅವರ ಸಂಕಷ್ಟಗಳನ್ನೂ ಸಮಸ್ಯೆಗಳನ್ನೂ ಅರಿಯ ಲೆತ್ನಿಸಿದರು, ಅವರ ಸಂಘಟನೆಯ ರೂಪರೇಷೆಗಳನ್ನೂ ಸ್ವರೂಪವನ್ನೂ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರು. ಈ ಸಂದರ್ಭದಲ್ಲೇ ಅವರು ಕಂಡುಕೊಂಡ ಬೆಳಕು ಮುಂದೆ ಜ್ಯೋತಿಯಾಗಿ ಬೆಳಗಿ ಜ್ವಾಲೆಯಾಗಿ ಉರಿಯಿತು. ೧೯೪೨–೪೩–೪೪ ರಲ್ಲಿ ಪಂಜಾಬನ್ನೆಲ್ಲ ದಳ್ಳುರಿಯೋಪಾದಿಯಲ್ಲಿ ವ್ಯಾಪಿಸಿದ ಕಾರ್ಮಿಕ ಆಂದೋಲನ ಪರ್ವಾನಾರ ಯೋಚನೆಗೆ ಮೂರ್ತ ಸ್ವರೂಪ ನೀಡಿದ್ದರಿಂದ ಲಾಹೋರಕ್ಕೆ ಮರಳಿದ ನಂತರ ಅವರು ಬ್ಯಾಂಕಿಂಗ್ ಉದ್ಯಮದಲ್ಲಿ ಭಾರತದಲ್ಲೇ ಮೊದಲ ಕಾರ್ಮಿಕ ಸಂಘಟನೆ ಕೈಕೊಳ್ಳಲು ದೃಢನಿರ್ಧಾರ ಕೈಕೊಂಡರು. ಆದರೆ ಆಗ ಬ್ಯಾಂಕ್ ಕೆಲಸಗಾರರು ತಮ್ಮ ಹಕ್ಕು ಭಾಧ್ಯತೆಗಳ ಬಗ್ಗೆ ವಿಚಾರವೆತ್ತುವುದು ಕೂಡ ಮಹಾಪರಾಧವಾಗಿತ್ತು. ಯಾವ ವಿಚಾರಣೆಯೂ ಇಲ್ಲದೆ ಇಂಥವರನ್ನು ಮನೆಗೆ ಕಳಿಸಬಹುದಿತ್ತು. ಕಾರ್ಮಿಕ ಸಂಘಟನೆಯ ವಿಚಾರ ಮಾಡುವುದಂತೂ ಕನಸಿನೊಳಗಿನ ಗಂಟೇ ಆಗಿತ್ತು.

ಪರ್ವಾನಾ ದೃಢವಾಗಿಯಾದರೂ ಎಚ್ಚರಿಕೆಯಿಂದ ತಮ್ಮ ಮೊದಲ ಹೆಜ್ಜೆಯಿಟ್ಟರು. ತಮ್ಮ ಬ್ಯಾಂಕಿನಲ್ಲಿಯ ಪ್ರತಿಯೊಬ್ಬ ನೌಕರನನ್ನು ಪ್ರತ್ಯೇಕವಾಗಿ ಕರೆದು ರಹಸ್ಯವಾಗಿ ಮಾತಾಡಿ ಅವರಲ್ಲಿ ಸಂಘಟನೆಯ ಆವಶ್ಯಕತೆಯ ಕುರಿತು ಮಾತಾಡತೊಡಗಿದರು. ಅದರ ಪರಿಣಾಮವೆಂದರೆ ೧೯೪೪ರಲ್ಲಿ ಭಾರತದ



ಹರಬನ್ಸಲಾಲ ಪರ್ವಾನಾ

ಬ್ಯಾಂಕಿಂಗ್ ಇತಿಹಾಸದಲ್ಲೇ ಮೊಟ್ಟಮೊದಲ ಕೆಲಸಗಾರರ ಸಂಘ ತಲೆಯೆತ್ತಿತು. ಬ್ಯಾಂಕಿಗೆ ಈ ಬಗ್ಗೆ ಸುಳಿವು ಸಿಕ್ಕಾಗ ನಿರೀಕ್ಷಿತ ಪ್ರತಿಕ್ರಿಯೆಯೇ ಉಂಟಾಯಿತು. ಪ್ರತಿಯೊಬ್ಬ ನೌಕರನನ್ನೂ ಕಟು ಪ್ರಶ್ನೆಗಳಿಗೆ ಗುರಿಮಾಡಿ ಹಿಂಡಿ ಹಿಂಡಿ ರಹಸ್ಯವನ್ನು ಬಯಲು ಮಾಡಲು ವರಿಷ್ಠರು ಯತ್ನಿಸಿದರು. ತಪ್ಪೊಪ್ಪಿಕೊಂಡು ಲಿಖಿತ ಕ್ಷಮಾಪಣೆ ಯಾಚಿಸಿದವರಿಗೆ ನೌಕರಿಯಲ್ಲಿ ಪೂರ್ಣ ರಕ್ಷೆ ನೀಡಿರುವುದಾಗಿ ಭರವಸೆ ನೀಡಲಾಯಿತು. ಆದರೆ ಇಂತು ಕ್ಷಮೆ ಯಾಚಿಸಿದ ಪ್ರತಿಯೊಬ್ಬನನ್ನೂ ಕೆಲ ಕಾಲಾನಂತರ ಕೆಲಸದಿಂದ ಕಿತ್ತಿ ಹಾಕಲಾಯಿತು. ಪರ್ವಾನಾರನ್ನಂತೂ ಎಳೆದೊಯ್ದು ಚಿಕ್ಕ ಕೋಣೆಯೊಂದರಲ್ಲಿ ಹಲವಾರು ತಾಸು ಗಟ್ಟಲೆ ಗೋಡೆಗೆ ಮುಖ ಮಾಡಿಕೊಂಡು ಏಕಾಂತದಲ್ಲಿ ಕುಳಿತುಕೊಳ್ಳುವಂತೆ ಬಂಧಿಸಿಡಲಾಯಿತು. ಅನಂತರ ದಯಾ ದಾಕ್ಷಿಣ್ಯದ ಸೋಂಕೂ ಇಲ್ಲದಂತೆ ಹತ್ತಾರು

ನೂರಾರು ಬಗೆಯಲ್ಲಿ ಪ್ರಶ್ನೆ ಹಾಕಿ ಅವರನ್ನು ಕಂಗೆಡಿಸಲು ಯತ್ನಿಸಿದರು. ಆದರೂ ಅವರು ಬಗ್ಗಲಿಲ್ಲ. ಮರುದಿನವೇ ಅವರಿಗೆ ಮನೆಗಪ್ಪಣೆ.

೧೯೪೪ರಲ್ಲಿನ್ನೂ ಮಾಲಿಕರು ಇಂಥ ಅನ್ಯಾಯದ ಕೃತಿಗಳನ್ನೆಸಗಿಯೂ ನಿರಂಕುಶ ಪ್ರಭುಗಳಾಗಿ ಮೆರೆಯಬಹುದಿತ್ತು. ಔದ್ಯಮಿಕ ತಂಟೆಗಳ ಕಾನೂನಿನ ಅಳವಿನಲ್ಲಿ ಬ್ಯಾಂಕಿಂಗ್ ಕ್ಷೇತ್ರ ಬರುತ್ತಿರಲಿಲ್ಲ. ಇಂತು ಕೆಲಸ ಕಳೆದುಕೊಂಡವರಿಗೆ ಕಾನೂನಿನ ರಕ್ಷಣೆಯೆಷ್ಟು ಮಾತ್ರವೂ ಇರಲಿಲ್ಲ. ತಾವು ಕಟ್ಟಿದ ಸಂಘ ಹುಟ್ಟುತ್ತಲೇ ಸತ್ತು ಹೋದುದನ್ನು ಕಂಡ ಪರ್ವಾನಾರವರಿಗೆ ಆಘಾತವಾಗಿತ್ತು. ಆದರೆ ಅವರ ಸುಪ್ತ ಚೇತನವೇ ಅವರ ಬೆನ್ನಿಗೆ ರಕ್ಷಣೆಯಾಗಿತ್ತು. ಎದೆಯಲ್ಲಿ ಧೈರ್ಯದ ಗಂಟನ್ನೇ ಕಟ್ಟಿಕೊಂಡು ಅವರು ದಿಲ್ಲಿಗೆ ಬಂದರು.

ದಾಲ್ಮಿಯಾ–ಜೈನ್ ಆ ಕಾಲಕ್ಕೂ ದೇಶದಲ್ಲಿ ಬಹು ಬಲಶಾಲಿಯಾದ ಉದ್ದಿಮೆದಾರರ ಗುಂಪಾಗಿತ್ತು. ಅವರ ಅಧೀನದಲ್ಲಿ ಭಾರತ ಬ್ಯಾಂಕಿನಂತಹ ಬಲಾಢ್ಯ ಹಣಕಾಸು ಸಂಸ್ಥೆಯೂ ಇತ್ತು. ಇಲ್ಲೊಂದು ನೌಕರಿ ದೊರಕಿಸಿಕೊಳ್ಳಲು ಪರ್ವಾನಾರಿಗೆ ಸಾಧ್ಯವಾಯಿತು. ಬಹುಶಃ ದಾಲ್ಮಿಯಾ–ಜೈನರಿಗೆ ಪರ್ವಾನಾ ಚರಿತ್ರೆಯಲ್ಲಿರುವ ಲಾಹೋರ್ ಅಧ್ಯಾಯ ತಿಳಿದಿರಲಿಕ್ಕಿಲ್ಲ. ಆದರೆ ಎಲ್ಲಿದ್ದರೂ ಸ್ವಭಾವತಃ ತೆಪ್ಪಗೆ ಕೂಡುವ ವ್ಯಕ್ತಿಯಲ್ಲ ಪರ್ವಾನಾ. ಇಲ್ಲೂ ಅವರು ಕೆಲಸಗಾರರ ಸಂಘಟನೆಯ ಯತ್ನವನ್ನಾರಂಭಿಸಿದರು. ಆದರೆ ಅವರ ಪ್ರಯತ್ನಕ್ಕೊಂದು ಮೂರ್ತ ರೂಪ ಬರಬೇಕಾದರೆ ಅವರು ೧೯೪೭ ರ ವರೆಗೆ ಕಾಯಬೇಕಾಯಿತು. ಆಗ ಕೆಳಗಿನ ಸ್ತರದಲ್ಲಿಯ ಕೆಲ ಬ್ಯಾಂಕ್ ನೌಕರರು ಉತ್ತೇಜನ ನೀಡಿದ್ದರಿಂದ ಪರ್ವಾನಾ ಭಾರತ ಬ್ಯಾಂಕಿನಲ್ಲಿ ಕೆಲಸಗಾರರ ಸಂಘ ಕಟ್ಟಿದರು. ಅದೇ ಸುಮಾರಿಗೆ ಸ್ವಾತಂತ್ರ್ಯದೊಂದಿಗೆಯೇ ದೇಶ ಇಬ್ಭಾಗವಾಗಿದ್ದರಿಂದ ಪಂಜಾಬ ನ್ಯಾಶನಲ್ ಬ್ಯಾಂಕು ತನ್ನ ಕೇಂದ್ರ ಕಚೇರಿಯನ್ನು ದಿಲ್ಲಿಗೆ ಸ್ಥಳಾಂತರಿಸಿತು. ಅದರೊಟ್ಟಿಗೆಯೇ ಬ್ಯಾಂಕು ತನ್ನ ಸೇವೆಯಲ್ಲಿದ್ದ ನೌಕರರಲ್ಲಿ ಅನೇಕರ ಸೇವೆ ಅನಗತ್ಯವೆಂದು ಸಾರಿ ಅವರನ್ನೆಲ್ಲ ಕೆಲಸದಿಂದ ವಜಾಮಾಡಿ ಬಿಡುವ ಎತ್ತುಗಡೆಯಲ್ಲಿತ್ತು. ಇದರ ಸುಳಿವು ದೊರೆತೊಡನೆಯೆ ಪರ್ವಾನಾ ತಟ್ಟನೆ ಅಲ್ಲಿಯ ಕೆಲಸಗಾರರನ್ನು ಸಂಘಟಿಸಿ ನೂರಾರು ಜನ ತಮ್ಮ ನೌಕರಿಗೆರವಾಗದಂತೆ ನೋಡಿಕೊಂಡರು.

ಆ ಕಾಲಕ್ಕಿನ್ನೂ ಬ್ಯಾಂಕಿಂಗ್ ಉದ್ಯಮದಲ್ಲಿ ಕಾರ್ಮಿಕ ಸಂಘಟನೆ ಬಹಿರಂಗವಾಗಿ ಕಾರ್ಯಚಟುವಟಿಕೆಗಳನ್ನು ನಡೆಸುವ ಮಟ್ಟವನ್ನು ತಲುಪಿರಲಿಲ್ಲ. ರಹಸ್ಯವಾಗಿ ಪರ್ವಾನಾ ನಡೆಸುತ್ತಿದ್ದ ಚಟುವಟಿಕೆಗಳು ಭಾರತ ಬ್ಯಾಂಕಿನ ಹಿರಿಯಾಧಿಕಾರಿಗಳ ಗಮನಕ್ಕೆ ಬರತೊಡಗಿತು. ಹೇಗಾದರೂ ಮಾಡಿ ಪರ್ವಾನಾರನ್ನು ಹೊರಗಟ್ಟಿಬಿಡಲು ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಆರ್. ಕೆ. ಜೈನ್ ನಿರ್ಧರಿಸಿದ್ದರು. ಯೂನಿಯನ್ನಿನೊಂದಿಗೆ ಸಂಬಂಧವಿಟ್ಟುಕೊಂಡವರನ್ನು ಗುರುತಿಸಲೆಂದು ವರಿಷ್ಠರು ಒಂದು ದಿನ ತಮ್ಮ ಎಲ್ಲ ಕೆಲಸಗಾರರ ಸಭೆ ಕರೆದರು. ಅವರ ಉದ್ದೇಶವನ್ನು ಮುಂಗಡ ಅರಿತ ಪರ್ವಾನಾ ಈ ಸಭೆಯನ್ನೇ ಕಾರ್ಮಿಕ ಸಂಘದ ಸಭೆಯನ್ನಾಗಿ ಪರಿವರ್ತಿಸಿಬಿಟ್ಟು, ವರಿಷ್ಠಾಧಿಕಾರಿಗಳನ್ನೆಲ್ಲಾ ಸುತ್ತುಗಟ್ಟಿ ಅವರು ಕೆಲಸಗಾರರ ಬೇಡಿಕೆಗಳನ್ನು ಕೇಳಿಕೊಳ್ಳುವಂತೆ ಮಾಡಿದರು. ಮರುದಿನವೇ ಪರ್ವಾನಾರನ್ನು ದಿಲ್ಲಿಯಿಂದ ನಾಗಪುರಕ್ಕೆ ವರ್ಗ ಮಾಡಿದ ಆಜ್ಞೆ ಹೊರಬಂತು. ಆದರೆ ತಮ್ಮ ಸಂಘಟನೆಯ ಬಲದ ರುಚಿಯನ್ನಾಗಲೇ ಕಂಡಿದ್ದ ಕೆಲಸಗಾರರು ಮ್ಯಾನೇಜಿಂಗ್ ಡೈರೆಕ್ಟರರನ್ನು ಘೇರಾವ್ ಮಾಡಿ ಈ ಆಜ್ಞೆಯನ್ನವರು ಹಿಂತೆಗೆದುಕೊಳ್ಳುವಂತೆ ಮಾಡಿದರು. ಆಗ ವರಿಷ್ಠರು ಮತ್ತೊಂದು ತಂತ್ರ ಹೂಡಿದರು. ಅವರೀಗ ಪರ್ವಾನಾರಿಗೆ ಮತ್ತೊಂದು ಲಿಖಿತ ಆಜ್ಞೆಯನ್ನು ಕೊಟ್ಟು ಅವರಿಗೆ ಒಂದು ಶಾಖೆಯ ಮ್ಯಾನೇಜರ್ ಎಂದು ಬಡತಿ ನೀಡಿದರಲ್ಲದೆ, ಅವರಿಗೆಂದೇ ಅತ್ಯಾಕರ್ಷಕ ವೇತನವನ್ನೂ ಇತರ ವಿಶೇಷ ಸೌಲಭ್ಯಗಳನ್ನೂ ಕೊಡಮಾಡಿದರು. ಅವರ ನಿಷ್ಠೆಯನ್ನು ಕೊಂಡುಕೊಳ್ಳುವ ಈ ಯತ್ನಕ್ಕೆ ಪರ್ವಾನಾ ಸೊಪ್ಪು ಹಾಕಲಿಲ್ಲ.

ತನ್ನ ಪ್ರಯತ್ನಗಳಿಗೆ ಫಲ ದೊರೆಯದಿದ್ದಾಗ ಭಾರತ ಬ್ಯಾಂಕು ತನ್ನ ನೌಕರರ ವಿರುದ್ಧ ಯುದ್ಧವನ್ನೇ ಸಾರಿತು. ೧೯೪೮ ಮತ್ತು ೧೯೪೯ರಲ್ಲಿ ಬ್ಯಾಂಕಿನ ಈ ಕಾರ್ಮಿಕ ವಿರೋಧಿ ಧೋರಣೆಯನ್ನು ಪ್ರತಿಭಟಿಸುವುದಕ್ಕಾಗಿಯೂ ತಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯ ತರುವುದಕ್ಕಾ

TELEGRAMS: BANKFLAG

All India Bank Employees Association

710, BALLIMARAN
CHANDNI CHOWK
DELHI-6

Ref No. 26(II)/66/~~8345~~ 3244

1st September,66

The Secretary,
Bank Employees Association,
Rex Lodge,Room No.18,
Lamington Road,
HUBLI
(Mysore State)

Dear Comrade,

We are in receipt of your letter dated 20.8.1966.

Every possible attempt is being made whereby the dismissed Comrades of Syndicate Bank be reinstated at the earliest. We are trying our best that the matter may come to conclusion and no comrade has to tender apology.

We quite sympathise with the victimised comrades and their plight and think these bad days would end soon.

With Greetings,

Yours comradely,

(H.L.Parvana)
Secretary

ಹುಬ್ಬಳ್ಳಿಯ ಬ್ಯಾಂಕ್ ನೌಕರರ ಸಂಘಕ್ಕೆ ೧೯೬೬ ರಲ್ಲಿ ಪರ್ವಾನಾ ಬರೆದ ಒಂದು ಪತ್ರ

ಗಿಯೂ ಸಂಘವು ಹಲವಾರು ಬಾರಿ ಸಂಪುಗಳನ್ನು ಆಚರಿಸಬೇಕಾಯಿತು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರನ್ನೆಲ್ಲ ಕೂಡಲೆ ಕೆಲಸದಿಂದ ತೆಗೆದುಹಾಕಲಾಯಿತು. ಆಗ ಪರ್ವಾನಾರ ನಾಯಕತ್ವದಲ್ಲಿ ಕೆಲಸಗಾರರು ಬ್ಯಾಂಕಿನೆದುರು ಪಿಕೆಟಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಬ್ಯಾಂಕು ಪೋಲೀಸರ ನೆರವು ಕೇಳಿದಾಗ ಅವರು ಬಂದು ತೀವ್ರ ಲಾಠಿ ಚಾರ್ಜ್ ಮಾಡಿ ಕೆಲಸಗಾರರನ್ನು ಚದುರಿಸಿದರು. ಆ ಕಾಲಕ್ಕೆ ಭಾರತ ಬ್ಯಾಂಕಿನ ಒಟ್ಟು ೫೪೦ ಕೆಲಸಗಾರರಲ್ಲಿ ೫೨೮ ಜನ ಪರ್ವಾನಾ ಕಟ್ಟಿದ್ದ ಸಂಘದ ಸದಸ್ಯರಾಗಿದ್ದರು. ಅವರಲ್ಲಿ ೪೨೦ ಜನರನ್ನು ಪೋಲೀಸರು ಬಂಧಿಸಿದರಾದರೂ ಪರ್ವಾನಾ ಭೂಗತರಾಗಿ ಆಂದೋಲನ ನಿರ್ದೇಶಿಸತೊಡಗಿದ್ದರಿಂದ ಅವರನ್ನು ಮಾತ್ರ ಬಂಧಿಸಲು ಸಾಧ್ಯವಾಗಲಿಲ್ಲ.

೧೯೪೯ರಲ್ಲಿ ಪರ್ವಾನಾ ಭೂಗತರಾಗಿದ್ದಾಗ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಮಿಕ ಸಂಘಟನೆಯ ಬಗ್ಗೆ ಆಳವಾಗಿ ಚಿಂತಿಸಿದರು. ೧೯೪೬ರಷ್ಟು ಹಿಂದೆಯೇ ಕಲ್ಕತ್ತದಲ್ಲಿ ಪ್ರಾರಂಭವಾಗಿದ್ದ ಅಖಿಲ ಭಾರತೀಯ ಸ್ವರೂಪವುಳ್ಳ ಬ್ಯಾಂಕ್ ನೌಕರರ ಸಂಘಕ್ಕೆ ಇನ್ನಷ್ಟು ಬಲ ತಂದುಕೊಟ್ಟು ಅದು ಪರಿಣಾಮಕಾರಿ ಸಂಘಟನೆಯಾಗುವಂತೆ ಮಾಡಬೇಕು; ಖಾಸಗಿ ಶಕ್ತಿಗಳ ಹಿಡಿತದಲ್ಲಿದ್ದ ಬ್ಯಾಂಕುಗಳಲ್ಲಿ ಅನಿಯಂತ್ರಿತ ರೀತಿಯಲ್ಲಿ ನಡೆಯುತ್ತಿದ್ದ ಅವ್ಯಾಪಾರಗಳನ್ನು ತಡೆಗಟ್ಟಿ ಅವು ನಿಜಕ್ಕೂ ಉಪಯುಕ್ತ ಸಂಸ್ಥೆಗಳಾಗಬೇಕಿದ್ದರೆ ಈ ಉದ್ಯಮಕ್ಕೆ ಸಾರ್ವಜನಿಕ ಸ್ವರೂಪ ಪ್ರಾಪ್ತವಾಗಬೇಕು; ಬ್ಯಾಂಕುಗಳ ಉಚ್ಚ ನಿಯಂತ್ರಣ ಮಂಡಳಿಗಳಾದ ಬೋರ್ಡ್ ಆಫ್ ಡೈರೆಕ್ಟರ್ಸ್‌ನಲ್ಲಿ ಕೆಲಸಗಾರರಿಗೆ ಪ್ರಾತಿನಿಧ್ಯ ದೊರೆಯಬೇಕು ಮುಂತಾದ ಅವರ ವಿಚಾರಗಳಿಗೆ ಆ ಕಾಲದಲ್ಲಿ ಒಂದು ಸ್ಪಷ್ಟ ರೂಪ ದೊರೆಯಿತು. ಇಂದು ಅವರ ಅಂದಿನ ವಿಚಾರಗಳಲ್ಲಿ ಅನೇಕವುಗಳು ಫಲಪ್ರದವಾಗಿವೆ. ಅಖಿಲ ಭಾರತೀಯ ಬ್ಯಾಂಕ್ ನೌಕರರ ಸಂಘ ಇಂದು ಆ ಉದ್ಯಮದಲ್ಲೇ ಅತಿ ದೊಡ್ಡ ಮತ್ತು ಪ್ರಭಾವಶಾಲಿ ಕಾರ್ಮಿಕ ಸಂಘಟನೆಯಾಗಿದೆ. ಈಗಾಗಲೇ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾಗಿದೆಯಲ್ಲದೆ ಬಿಟ್ಟಾರೆ ಇತರ ಬ್ಯಾಂಕುಗಳ ಮೇಲೂ ರಿಜರ್ವ್ ಬ್ಯಾಂಕಿನ ಮೂಲಕ ಸಾಕಷ್ಟು ನಿಯಂತ್ರಣಗಳನ್ನು ಹೇರಿದ್ದರಿಂದ ಖಾಸಗಿ ಶಕ್ತಿಗಳ ಸ್ವೈರಕ್ಕೆ ತಕ್ಕಮಟ್ಟಿಗಾದರೂ ತಡೆಯುಂಟಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಡೈರೆಕ್ಟರ್ ಮಂಡಳಿಗಳಲ್ಲಿ ಇಂದು ಕೆಲಸಗಾರರ ಪ್ರತಿನಿಧಿಗಳಿದ್ದಾರೆ.

ಆದರೆ ಪರ್ವಾನಾರ ಯಶಸ್ಸು ಬರಿ ಚಿಂತನೆಯ ಫಲವಲ್ಲ. ಅದರ ಹಿಂದೆ ಅವರ ತ್ಯಾಗದ ಮತ್ತು ಒಂದು ತತ್ತ್ವಕ್ಕಾಗಿ ನಿಷ್ಠೆಯಿಂದ ಹೋರಾಡಬಲ್ಲ ಛಲದ ಕಥೆಯೂ ಇದೆ. ಭಾರತ ಬ್ಯಾಂಕು ಪರ್ವಾನಾರನ್ನೊಳಗೊಂಡು ಅನೇಕರನ್ನು ಕೆಲಸದಿಂದ ಕಿತ್ತಿ ಹಾಕಿತಷ್ಟೆ. ಈಗ ಅವರ ಸಂಘವು ಇದನ್ನು ಔದ್ಯಮಿಕ ತಂಟೆಗಳ ಕಾನೂನಿನ ಕಕ್ಷೆಯಲ್ಲಿ ತರಲೇಬೇಕೆಂದು ಹೋರಾಡತೊಡಗಿತು. ಸಾಕಷ್ಟು ಸಮಯದ ನಂತರ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ಲಿಗೆ ಈ ಪ್ರಕರಣವನ್ನೊಪ್ಪಿಸಲಾಯಿತು. ಟ್ರಿಬ್ಯೂನಲ್ಲು ಎಲ್ಲರನ್ನೂ ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಆಜ್ಞೆ ಮಾಡಿತು. ಆದರೆ ಬ್ಯಾಂಕು ವರಿಷ್ಠ ನ್ಯಾಯಾಲಯದಲ್ಲಿ ಈ ನಿರ್ಣಯವನ್ನು ಪ್ರಶ್ನಿಸಿತು. ಆ ಕಾಲದ ಕಾನೂನು ಪಂಡಿತರಲ್ಲೇ ಅಗ್ರಗಣ್ಯರೆನಿಸಿದ್ದ ಎಂ. ಸಿ. ಸೆಟಲವಾಡರನ್ನು ಬ್ಯಾಂಕು ಅಲ್ಲಿ ತನ್ನ ವಕೀಲರನ್ನಾಗಿ ನೇಮಿಸಿತು. ಸಂಘವೊ ಹಣಕಾಸಿನ ದೃಷ್ಟಿಯಿಂದ ತೀರ ನಿಶ್ಶಕ್ತ. ಸಂಘವು ಪೂರ್ತಿ ವಿಶ್ವಾಸವಿಟ್ಟು ಕೈಗೊಪ್ಪಿಸಬಹುದಾಗಿದ್ದಂತಹ ಒಬ್ಬ ವಕೀಲನೂ ದಿಲ್ಲಿಯಲ್ಲಿ ಸಿಕ್ಕಲಿಲ್ಲ. ಪರ್ವಾನಾ ಇಲ್ಲಿ ಮೊಟ್ಟ ಮೊದಲ ಬಾರಿಗೆ ಭಾರಿ ಧೈರ್ಯದ ನಿರ್ಧಾರ ಕೈಕೊಳ್ಳಬೇಕಾಗಿ ಬಂತು. ವರಿಷ್ಠ ನ್ಯಾಯಾಲಯದಲ್ಲಿ ಸಂಘದ ನಿಲುವೆಯನ್ನು ತಾನೇ ಪ್ರತಿಪಾದಿಸಬೇಕೆಂದು ನಿರ್ಧರಿಸಿದರು. ಈ ನಿರ್ಧಾರದ ಹಿಂದೆ ಅದಮ್ಯ ಆತ್ಮವಿಶ್ವಾಸವೇನೋ ಇತ್ತು. ಆದರೆ ಪರ್ವಾನಾರ ಶಿಕ್ಷಣ ಮೆಟ್ರಿಕ್‌ವರೆಗೆ ಮಾತ್ರ. ನ್ಯಾಯಾಲಯದಲ್ಲಿ ಅನುಸರಿಸಬೇಕಾದ ವಿಧಿ ನಿಯಮಗಳಾವವುಗಳ ಪರಿಚಯವೂ ಅವರಿಗಿರಲಿಲ್ಲ.

ವಿಚಾರಣೆ ವರಿಷ್ಠ ನ್ಯಾಯಾಲಯದಲ್ಲಿ ಆರಂಭವಾದ ದಿನ ನ್ಯಾಯಾಲಯವೆಲ್ಲ ದಿಲ್ಲಿಯಲ್ಲಿಯ ಸಾವಿರಾರು ಬ್ಯಾಂಕ್ ನೌಕರರಿಂದ ತುಂಬಿ ತುಳುಕುತ್ತಿತ್ತು. ಅಂದಿನ ನ್ಯಾಯವಾದಿಗಳಲ್ಲೇ ಅಗ್ರಗಣ್ಯರೆನಿಸಿದ್ದ ಸೆಟಲವಾಡರಿಗೆದುರಾಗಿ ಪರ್ವಾನಾ ಕುಳಿ

ತಿದ್ದರು. ಮೊದಲು ಬ್ಯಾಂಕಿನ ಪರವಾಗಿ ಸೆಟಲವಾಡರು ಮೂರು ತಾಸುಗಳ ಕಾಲ ವಾದ ಮಂಡಿಸಿ ಮುಗಿಸಿದಾಗ ಅಲ್ಲಿ ನೆರೆದವರೆಲ್ಲ ಅವರ ಪಾಂಡಿತ್ಯದ ಪ್ರಗಲ್ಭತೆಗೆ, ಅವರ ಮಾತಿನ ತರ್ಕಶುದ್ಧತೆಗೆ ತಲೆದೂಗುವಂತಾಗಿಬಿಟ್ಟಿತ್ತು. ಬ್ಯಾಂಕ್ ಕೆಲಸಗಾರರಲ್ಲಿರುವ ಉತ್ಸಾಹ ಇದ್ದಲ್ಲೇ ಹೆಪ್ಪುಗಟ್ಟಿತ್ತು. ಇಂಥ ಶೀತಲ ವಾತಾವರಣದಲ್ಲೇ, ಬಿಳಿ ಶರ್ಟ್ ಪೈಜಾಮಾಗಳಲ್ಲಿ ದೇಹವನ್ನು ಮುಚ್ಚಿಕೊಂಡಿದ್ದ ಪರ್ವಾನಾ ಮೆಲ್ಲನೆ ಎದ್ದು ನಿಂತು ನ್ಯಾಯಪೀಠದತ್ತ ನೋಡಿದಗು. ವರಿಷ್ಠ ನ್ಯಾಯಮೂರ್ತಿ ಹೀರಾಲಾಲ ಕಾನಿಯಾ,"ನೀವು ವಕೀಲರೆ?" ಎಂದು ಕೇಳಿದರು.

"ಅಲ್ಲ, ಸ್ವಾಮಿ, ನಾನು ಪೂರ್ತಿ ಸುಶಿಕ್ಷಿತನೂ ಅಲ್ಲ. ನಾನು ಭಾರತ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ. ಬ್ಯಾಂಕು ಕೆಲಸದಿಂದ ಕಿತ್ತಿ ಹಾಕಿದ ನೌಕರರಲ್ಲಿ ನಾನೂ ಒಬ್ಬ"– ಉತ್ತರಿಸಿದರು ಪರ್ವಾನಾ. ಆಗ ಅವರಿಗೆ ಮಾತಾಡಲು ಅನುಮತಿ ದೊರೆಯಿತು.

ಪರ್ವಾನಾ ಯಾವ ಟಿಪ್ಪಣಿಗಳ ನೆರವೂ ಇಲ್ಲದೆ ಮಾತಿಗಾರಂಭಿಸಿದರು. ಉದ್ವೇಗಕ್ಕೆಷ್ಟೂ ಅವಕಾಶ ವೀಯದೆ ಬ್ಯಾಂಕ್ ನೌಕರರ ನಿಲುಮೆಯನ್ನು ಸ್ಪಷ್ಟವಾಗಿ ಮಂಡಿಸುತ್ತ ಸೆಟಲವಾಡರ ವಾದವನ್ನೂ ವಾದಸರಣಿಯನ್ನೂ ಖಂಡಿಸಿ ಅವುಗಳಲ್ಲಿಯ ಪೊಳ್ಳನ್ನು ಬಯಲಿಗಿಟ್ಟರು. ದೇಶದ ಈ ಸರ್ವೋಚ್ಚ ನ್ಯಾಯಾಲಯವು ಔದ್ಯಮಿಕ ಟ್ರಿಬ್ಯುನಲ್ಲುಗಳ ವಿವಿಧ ನಿರ್ಣಯಗಳಲ್ಲಿ ಕೈಹಾಕತೊಡಗಿದರೆ ಭಾರತದಲ್ಲೆಲ್ಲ ಗೊಂದಲಕ್ಕೂ ಅರಾಜಕತೆಗೂ ದಾರಿ ಮಾಡಿಕೊಟ್ಟಂತಾದೀತು. ಟ್ರಿಬ್ಯುನಲ್ಲುಗಳು ಬಹು ಮಟ್ಟಿಗೆ ನ್ಯಾಯಾಲಯಗಳೇ ಸರಿ. ಸಾಮಾನ್ಯ ನ್ಯಾಯಾಲಯಗಳಷ್ಟೇ ಅವೂ ಗೌರವಾರ್ಹ. ಕೆಲಸದಿಂದ ಕಿತ್ತಿ ಹಾಕುವಿಕೆ, ಸಂಬಳದಲ್ಲಿ ಹೆಚ್ಚಳ, ಬೋನಸ್ ಮುಂತಾದಂಥ ಕೆಲಸಗಾರರಿಗೆ ಸಂಬಂಧಿಸಿದ ವಿಷಯಗಳಲ್ಲಿ ಇವು, ಸಂಬಂಧಪಟ್ಟ ಎರಡೂ ಪಕ್ಷಗಳ ವಾದಗಳನ್ನು ಕೇಳಿಕೊಂಡ ನಂತರವೇ ನಿರ್ಣಯಕ್ಕೆ ಬರುತ್ತವೆ. ಭಾರತ ಬ್ಯಾಂಕು ತನ್ನ ನೌಕರರ ವಿಷಯದಲ್ಲಿ ಔದ್ಯಮಿಕ ಟ್ರಿಬ್ಯುನಲ್ಲು ನೀಡಿದ ಐತೀರ್ಪನ್ನು ಪುನರ್ವಿಮರ್ಶಿಸುವಂತೆ ಸಲ್ಲಿಸಿದ ಅರ್ಜಿಯನ್ನು ವಿಚಾರಿಸಲು ವರಿಷ್ಠ ನ್ಯಾಯಾಲಯಕ್ಕೆ ಖಂಡಿತವಾಗಿಯೂ ಅಧಿಕಾರವ್ಯಾಪ್ತಿಯಿಲ್ಲವೆಂದು ಹೇಳಿ ಪರ್ವಾನಾ ತಮ್ಮ ವಾದವನ್ನು ಮುಕ್ತಾಯಗೊಳಿಸಿದರು.

ಔದ್ಯಮಿಕ ಟ್ರಿಬ್ಯುನಲ್ಲಿನ ಐತೀರ್ಪಿನ ವಿರುದ್ಧ ಬಂದ ಮೇಲ್ಮನವಿಯನ್ನು ವಿಚಾರಿಸುವ ಅಧಿಕಾರ ತನಗಿದೆಯೇ ಎಂಬ ಮಹತ್ವದ ಅಂಶವನ್ನು ಪರಿಶೀಲಿಸಲು ವರಿಷ್ಠ ನ್ಯಾಯಾಲಯ ಒಪ್ಪಿತು. ಆದರೆ ಸೆಟಲವಾಡರು ಮಾತ್ರ ಪಟ್ಟು ಹಿಡಿದು, ಭಾರತ ಬ್ಯಾಂಕಿನ ನೌಕರರನ್ನು ಕೆಲಸದಿಂದ ತೆಗೆದು ಹಾಕಿದ ದಿನದಿಂದಲೇ ಪಗಾರ ತೆಗೆದುಕೊಳ್ಳಬೇಕೆಂಬ ಬಗ್ಗೆ ಟ್ರಿಬ್ಯುನಲ್ಲು ನೀಡಿದ ಐತೀರ್ಪಿಗೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಬೇಕೆಂದು ನ್ಯಾಯಪೀಠದ ಮನವೊಲಿಸಲು ಸತತವಾಗಿ ಪ್ರಯತ್ನಿಸತೊಡಗಿದರು. ಅವರ ವಾದ ನ್ಯಾಯಮೂರ್ತಿಗಳ ಮೇಲೆ ಪರಿಣಾಮ ಮಾಡಿದೆಯೆನಿಸಿದಾಗ ಪರ್ವಾನಾರಿಗೆ ಅದುವರೆಗೆ ತಾವು ಮಾಡಿದೆಲ್ಲ ಹೊಳೆಯಲ್ಲಿ ಹುಣಸೇ ಹಣ್ಣು ತೊಳೆದಂತಾದೀತೆಂಬ ಭಯವಾಯಿತು. ಮಧ್ಯಂತರ ತಡೆಯಾಜ್ಞೆ ಸಿಕ್ಕುದೇ ಆದರೆ ತಮ್ಮನ್ನೆಲ್ಲ ಕಿತ್ತಿ ಹಾಕಿದ ಆಜ್ಞೆಗಳನ್ನು ಬ್ಯಾಂಕು ಜಾರಿಗೊಳಿಸಬಲ್ಲದೆಂದಾಗುತ್ತಿತ್ತು. ತಮಗೆ ಮಾತಾಡಲು ಇನ್ನೊಮ್ಮೆ ಅವಕಾಶ ಕೊಡಬೇಕೆಂದು ಅವರು ಪ್ರಾರ್ಥಿಸಿದರು.

"ಮಧ್ಯಂತರ ತಡೆಯಾಜ್ಞೆಯನ್ನು ನೀವು ನೀಡಿದ್ದೇ ಆದರೆ ನಿಮ್ಮ ಅಂತಿಮ ನಿರ್ಣಯವನ್ನು ಕೇಳಲು ನಾವು – ಬ್ಯಾಂಕ್ ನೌಕರರು ಬದುಕಿ ಉಳಿದಿರುತ್ತೇವೋ ಎಂಬುದೇ ಅನುಮಾನ. ಟ್ರಿಬ್ಯುನಲ್ಲಿನ ಆಜ್ಞೆಯ ಪ್ರಕಾರ ನಾವೆಲ್ಲ ಕನಿಷ್ಠ ನಮ್ಮ ಸಂಬಳ ಪಡೆಯಲು ಅರ್ಹರಾಗುತ್ತೇವೆ. ನಾವು ಬಡವರು. ಬ್ಯಾಂಕಿಗಿರುವ ಹಣಕಾಸಿನ ಸೌಲಭ್ಯ ನಮಗಿಲ್ಲ. ಈ ನ್ಯಾಯಾಲಯವು ಒಂದು ನಿರ್ಣಯಕ್ಕೆ ಬರುವ ತನಕವಾದರೂ ಜೀವದಿಂದುಳಿದು ಹೋರಾಟ ಮುಂದುವರಿಸಲು ನಮಗೆ ಅವಕಾಶ ಕೊಡಿ. ದಯವಿಟ್ಟು, ಮಧ್ಯಂತರ ತಡೆಯಾಜ್ಞೆ ನೀಡಬೇಡಿ," ಎಂದು ಪ್ರಾರ್ಥಿಸಿದರು.

ನ್ಯಾಯಮೂರ್ತಿಗಳು ಪರ್ವಾನಾ ಎತ್ತಿದ ಅಂಶಗಳನ್ನು ಒಪ್ಪಿಕೊಂಡು, ನ್ಯಾಯಾಲಯ ತಡೆಯಾಜ್ಞೆ ನೀಡುವಲ್ಲಿ ಬ್ಯಾಂಕು ನೌಕರರನ್ನೆಲ್ಲ

ಮರಳಿ ಕೆಲಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರನ್ನೆಲ್ಲ ಕೆಲಸಕ್ಕೆ ಹಾಜರುಪಡಿಸಿಕೊಳ್ಳಿ ಇಲ್ಲವೆ ನ್ಯಾಯಾಲಯವು ತನ್ನ ಅಂತಿಮ ನಿರ್ಣಯ ಸಾರುವವರೆಗೆ ಅವರಿಗೆಲ್ಲ ಸಂಬಳ ಕೊಡುತ್ತ ಹೋಗಿ ಎಂದು ಸೆಟಲವಾಡರಿಗೆ ಹೇಳಿದರು. ಪರಿಣಾಮವಾಗಿ ತದೆಯಾಜ್ಞೆ ಸಿಕ್ಕಲಿಲ್ಲ. ಆದರೂ ಪರ್ವಾನಾರಿಗೆ ಸಮಾಧಾನವಾಗಲಿಲ್ಲ. ತಾವೆಲ್ಲ ೧೯೪೯ರಲ್ಲಿ ಕೆಲಸ ಕಳೆದುಕೊಂಡು ೧೯೫೧ರ ಮಧ್ಯದ ವರೆಗೂ ಸಂಬಳವಿಲ್ಲದೆ ಹೇಗೋ ಕಾಲ ತಳ್ಳುತ್ತ ತಮ್ಮ ಆಂದೋಲನ ಸಾಗಿಸಿಕೊಂಡು ಬರುತ್ತಿರುವುದನ್ನು ಪ್ರಸ್ತಾಪಿಸಿದರಲ್ಲದೆ ಬ್ಯಾಂಕಿನ ಹಸ್ತಕರಿಂದ ಕಷ್ಟಕ್ಕೀಡಾಗುತ್ತಿದ್ದುದನ್ನೂ ತಾವೆಲ್ಲ ತಂತಮ್ಮ ಬಾಡಿಗೆ ಮನೆಗಳಿಂದ ಹೊರದೂಡಲ್ಪಟ್ಟುದನ್ನೂ ನ್ಯಾಯಮೂರ್ತಿಗಳ ಗಮನಕ್ಕೆ ತಂದು ಇನ್ನು ಮುಂದೆ ಪ್ರತಿ ತಿಂಗಳ ಸಂಬಳವನ್ನು ಮುಂಗಡವಾಗಿಯೇ ಕೊಡಬೇಕೆಂದು ಕೇಳಿಕೊಂಡರು.

ನ್ಯಾಯಪೀಠ ಅದನ್ನೂ ಒಪ್ಪಿತು. ಮುಂದೆ ಮುಖ್ಯ ನ್ಯಾಯಮೂರ್ತಿಗಳು, ಈ ಪ್ರಕರಣವನ್ನು ಸರಿಯಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗಲನುವಾಗುವಂತೆ ಇನ್ನಾದರೂ ಒಬ್ಬ ವಕೀಲರನ್ನು ಕೊಡುತ್ತೀರಾ ಎಂದು ಪ್ರಶ್ನಿಸಿದರು. "ಸಾಧ್ಯವಾಗದು ಸ್ವಾಮಿ, ನನ್ನ ಬಳಿ ಹಣವಿಲ್ಲ"–ಉತ್ತರಿಸಿದರು ಪರ್ವಾನಾ.

ಕೂಡಲೇ, "ನನ್ನ ನ್ಯಾಯಾಲಯದಲ್ಲಿರುವ ವಕೀಲರಿಗೆಲ್ಲ ಒಂದು ಪ್ರಾರ್ಥನೆ. ನೀವು ಯಾರಾದರೂ ಸಂಘಕ್ಕೆ ನೆರವಾಗಲು ಮುಂದೆ ಬರುವಿರಾ?" ಎಂದು ಮುಖ್ಯ ನ್ಯಾಯಮೂರ್ತಿಗಳು ಕೇಳಿದರು.

ಒಡನೆಯೇ ಹತ್ತು ಜನ ವಕೀಲರು ಎದ್ದು ನಿಂತು ತಾವು ಸಿದ್ಧರಿರುವುದಾಗಿ ಘೋಷಿಸಿದರು. ಆದರೆ ಅವರನ್ನೊಪ್ಪಲು ಪರ್ವಾನಾ ಹಿಂಜರಿದರು. "ಇವರನ್ನೊಪ್ಪುವ ಮುಂಚೆ ಇವರ ಹಿನ್ನೆಲೆಯನ್ನು ನಾವು ಪರಿಶೀಲಿಸಬೇಕು. ಏಕೆಂದರೆ ಬ್ಯಾಂಕು ಇವರನ್ನು ಸಹಜವಾಗಿಯೇ ಕೊಂಡುಕೊಳ್ಳಬಹುದು. ನಮ್ಮ ವಕಾಲತ್ತು ಸ್ವೀಕರಿಸಿಯೂ ಇವರು ಬ್ಯಾಂಕಿಗೆ ಅನುಕೂಲವಾಗುವಂತೆ ವರ್ತಿಸಬಹುದಲ್ಲ?" ಎಂದವರು. ಅವರ ಮಾತು ಕೇಳಿ ನ್ಯಾಯಮೂರ್ತಿಗಳೆಲ್ಲ ನಕ್ಕರಾದರೂ ಪರ್ವಾನಾ ಎತ್ತಿದ್ದ ಕಾನೂನಿನ ಸೂಕ್ಷ್ಮ ಅಂಶವನ್ನು– ಔದ್ಯಮಿಕ ಟ್ರಿಬ್ಯೂನಲ್ಲಿನ ನಿರ್ಣಯವನ್ನು ಪುನರ್ವಿಮರ್ಶಿಸಲು ವರಿಷ್ಠ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿಯುಂಟೆ ಎಂಬುದು– ಅವರೆಲ್ಲ ಗಂಭೀರವಾಗಿ ಪರಿಗಣಿಸಿದ್ದರು. ಆದ್ದರಿಂದಲೇ ! ಈ ವಿಷಯದ ನಿರ್ಧಾರಕ್ಕೆ ಅನುಕೂಲವಾಗಲೆಂದು ಪರ್ವಾನಾ ಒಬ್ಬ ವಕೀಲರನ್ನು ಕೊಡಲೇಬೇಕಾದುದು ಅಗತ್ಯವೆಂದು ಮುಖ್ಯ ನ್ಯಾಯಮೂರ್ತಿಗಳು ಒತ್ತಾಯಿಸಿ ಹೇಳಿದರು.

ಪರ್ವಾನಾ ನ್ಯಾಯಾಲಯದಿಂದ ಹೊರಬಂದಾಗ ನೆರೆದಿದ್ದ ಬ್ಯಾಂಕ್ ನೌಕರರು ಅವರನ್ನು ಹೆಗಲ ಮೇಲೆತ್ತಿಕೊಂಡು ದಿಲ್ಲಿಯ ಪ್ರಮುಖ ಬೀದಿಗಳಲ್ಲೆಲ್ಲ ಜಯಘೋಷ ಮಾಡುತ್ತ ಮೆರೆಸಿದರು. ಇದು ಪರ್ವಾನಾರ ಮಟ್ಟಿಗೆ ವಿಜಯದ ದಾರಿಯಲ್ಲಿ ಮೊದಲ ಹೆಜ್ಜೆ ಮಾತ್ರವಾಗಿತ್ತು.

ವರಿಷ್ಠ ನ್ಯಾಯಾಲಯದೆದುರು ತಾವು ಎತ್ತಿದ್ದ ಅಂಶದ ಮಹತ್ವ ಪರ್ವಾನಾರಿಗೆ ಅನಂತರವೇ ಅರಿವಾದದ್ದು. ಈ ಪ್ರಕರಣದಲ್ಲಿ ಭಾರತ ಸರಕಾರವೂ ಪಾಲುಗೊಂಡು ತನ್ನ ನಿಲುವೆಯನ್ನು ನ್ಯಾಯಾಲಯಕ್ಕೆ ವಿದಿತಪಡಿಸಲೇಬೇಕೆಂದು ಅವರಿಗೆ ಮನವರಿಕೆಯಾಯಿತು. ಒಡನೆಯೆ ಪರ್ವಾನಾರ ನೇತೃತ್ವದಲ್ಲಿ ಆಗ ಕೇಂದ್ರ ಕಾರ್ಮಿಕ ಮಂತ್ರಿಯಾಗಿದ್ದ ಜಗಜೀವನರಾಮರ ಮನೆಯೆದುರಿನ ಧರಣಿ ಮತ್ತು ಮತಪ್ರದರ್ಶನಗಳಿಗೆ ಮೊದಲಾಯಿತು. ಕೊನೆಗೆ ಸರಕಾರಕ್ಕೆ ಬ್ಯಾಂಕ್ ನೌಕರರ ಬೇಡಿಕೆ ನ್ಯಾಯವೆಂದು ಮನವರಿಕೆಯಾಗಿ ವರಿಷ್ಠ ನ್ಯಾಯಾಲಯದಲ್ಲಿ ನಡೆದ ಈ ಪ್ರಕರಣದಲ್ಲಿ ಪ್ರವೇಶಿಸಲು ನಿರ್ಧರಿಸಿ ಆ ಕಾಲದ ಸುಪ್ರಸಿದ್ಧ ವಕೀಲ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಐಯ್ಯರ್ ಅವರನ್ನು ತನ್ನನ್ನು ಪ್ರತಿನಿಧಿಸಲು ಕೇಳಿಕೊಂಡಿತು.

ಮುಂದೆ ವರಿಷ್ಠ ನ್ಯಾಯಾಲಯವು ಔದ್ಯಮಿಕ ಟ್ರಿಬ್ಯೂನಲ್ಲುಗಳ ತೀರ್ಪುಗಳನ್ನು ಪುನರ್ವಿಮರ್ಶಿಸುವುದಕ್ಕೆ ತನಗೆ ಅಧಿಕಾರವಿದೆಯೆಂದು ಬಹುಮತದ ನಿರ್ಣಯವಿತ್ತಿತು (ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ಮೂರು– ಎರಡು ಮತಗಳಿಂದ). ಇದರಿಂದ ಬ್ಯಾಂಕಿನ ವಾದದಲ್ಲಿ ಒಂದಂಶವನ್ನು ಒಪ್ಪಿದಂತಾಯಿತಾದರೂ ಕೆಲಸದಿಂದ ತೆಗೆದು ಹಾಕಲಾಗಿದ್ದ ಎಲ್ಲ ನೌಕರರನ್ನೂ ಮರಳಿ

ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಪು ನೀಡಿತು.

ಇದು ಪರ್ವಾನಾರ ವೈಯಕ್ತಿಕ ವಿಜಯವಾಗಿ ಹಾಗೆಯೆ ಭಾರತದ ಬ್ಯಾಂಕಿಂಗ್ ಉದ್ಯಮದಲ್ಲಿ ಕಾರ್ಮಿಕ ಆಂದೋಲನದ ದೃಷ್ಟಿಯಿಂದ ಬರಲಿದ್ದ ಸುದೀರ್ಘ ಹೋರಾಟಕ್ಕೆ ನಾಂದಿಯಾಯಿತು.

೧೯೫೧ ರಲ್ಲಿಯೇ ಭಾರತ ಬ್ಯಾಂಕು ಪಂಜಾಬ ನ್ಯಾಶನಲ್ ಬ್ಯಾಂಕಿನಲ್ಲಿ ವಿಲೀನ ಹೊಂದಿತು. ಈ ಅವಕಾಶವನ್ನುಪಯೋಗಿಸಿಕೊಂಡು ಪಂಜಾಬ ನ್ಯಾಶನಲ್ ಬ್ಯಾಂಕು ಭಾರತ ಬ್ಯಾಂಕಿನ ನೂರಾರು ನೌಕರರಿಗೆ ಮನೆಗಪ್ಪಣೆ ನೀಡಿತು. ಸ್ವಾಭಾವಿಕವಾಗಿಯೇ ಕೆಲಸ ಕಳೆದುಕೊಂಡವರಲ್ಲಿ ಪರ್ವಾನಾ ಕೂಡಾ ಸೇರಿದ್ದರು. ಗೆಲುವಿನ ಬೆನ್ನ ಹಿಂದೆಯೇ ಬಂದ ಈ ಆಘಾತದಿಂದ ಪರ್ವಾನಾ ಕಂಗೆಡಲಿಲ್ಲ. ಅವರು ಮತ್ತೆ ಹೋರಾಟಕ್ಕಣಿಯಾಗಿ ಹಂತ ಹಂತವಾಗಿ ಬಲಾಢ್ಯ ಬ್ಯಾಂಕನ್ನು ಎದುರಿಸತೊಡಗಿದರು. ಇದೊಂದು ಸುದೀರ್ಘ ಹೋರಾಟ. ೧೨ ವರ್ಷಗಳ ಸೆಣಸಾಟದ ನಂತರ ಕೊನೆಗೊಮ್ಮೆ ಟ್ರಿಬ್ಯುನಲ್ಲು ನೌಕರರ ಕೋರಿಕೆಯನ್ನು ಮನ್ನಿಸಿದಲ್ಲದೆ ವ್ಯಾಕರಣವನ್ನೂ ಅವರನ್ನು ಕೆಲಸದಿಂದ ಕಡಿಮೆ ಮಾಡಿದ ದಿನದಿಂದ ಮರಳಿ ತೆಗೆದುಕೊಳ್ಳಬೇಕಲ್ಲದೆ ಅಷ್ಟೂ ವರ್ಷಗಳ ಸಂಬಳವನ್ನಲ್ಲದೆ ಪರಿಹಾರವೆಂದು ಇನ್ನೊಂದು ವರ್ಷದ ಸಂಬಳವನ್ನೂ ಕೊಡಬೇಕೆಂದು ನಿರ್ಣಯಿಸಿತ್ತು. ಆದರೆ ಬ್ಯಾಂಕು ವರಿಷ್ಠ ನ್ಯಾಯಾಲಯಕ್ಕೆ ಮೇಲ್ಮನವಿ ಮಾಡಿಕೊಂಡಾಗ ಪರಿಹಾರ ಧನವೆಂದು ಟ್ರಿಬ್ಯುನಲ್ಲು ಕೊಡಮಾಡಿದ್ದ ಒಂದು ವರ್ಷದ ಸಂಬಳವನ್ನು ರದ್ದುಪಡಿಸಿತಾದರೂ ನೌಕರರನ್ನೆಲ್ಲ ಮರಳಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ಅಂಶವನ್ನು ಮಾತ್ರ ದೃಢಪಡಿಸಿತು.

೧೯೫೧ ರಿಂದ ೧೯೬೩ ರವರೆಗಿನ ಹೋರಾಟದ ಅಧ್ಯಾಯವನ್ನು ಪಾಂಡವರ ವನವಾಸಕ್ಕೆ ಹೋಲಿಸಬಹುದು. ಈ ಅವಧಿಯಲ್ಲಿ ಪರ್ವಾನಾ ಮತ್ತು ಅವರ ಸಂಗಡಿಗರು ಸಹಿಸಬೇಕಾಗಿ ಬಂದ ಕಷ್ಟ, ಮಾಡಬೇಕಾಗಿ ಬಂದ ತ್ಯಾಗಗಳು ಖಂಡಿತ ಕಲ್ಪನೆಗೂ ನಿಲುಕಲಾರದಂಥವು. ಇಂಥ ಎದೆಗಾರರಿಂದಲೇ ಭಾರತೀಯ ಬ್ಯಾಂಕಿಂಗ್ ಉದ್ಯಮದಲ್ಲಿ ಕಾರ್ಮಿಕ ಆಂದೋಲನದ ಪ್ರಾರಂಭದ ಅಧ್ಯಾಯಗಳು ಬರೆಯಲ್ಪಟ್ಟವು. ಪರ್ವಾನಾ ಮತ್ತು ಸಂಗಡಿಗರ ಧ್ಯೇಯ ಸ್ಪಷ್ಟವಾಗಿತ್ತು,



ಗುರಿ ಉನ್ನತವಾಗಿತ್ತು, ಆದರೆ ದಾರಿ ಸುಲಭವೂ ಆಗಿರಲಿಲ್ಲ, ನಿಚ್ಚಳವೂ ಇರಲಿಲ್ಲ. ಹೆಜ್ಜೆ ಹೆಜ್ಜೆಗೂ ಆತಂಕಗಳನ್ನೆದುರಿಸಬೇಕಾಗುತ್ತಿತ್ತು. ಒಂದನ್ನು ನಿವಾರಿಸಿಕೊಂಡು ಮುನ್ನಡೆಯುವಷ್ಟರಲ್ಲಿ ಹೊಸ ಅಡೆತಡೆಗಳನ್ನು ಪ್ರತಿಪಕ್ಷ ನಿರ್ಮಿಸಿರುತ್ತಿತ್ತು. ಈ ಅವಧಿಯಲ್ಲೇ ಪರ್ವಾನಾ ತಮ್ಮ ಸಂಘಟನಾ ನೈಪುಣ್ಯವನ್ನು ಮೆರೆದರು. ಹೋರಾಟದಲ್ಲಿ ಒಂದೊಂದು ಪರೀಕ್ಷಾ ಕ್ಷಣದಿಂದ ಹೊರಬರುವಾಗ ಪುಟಕ್ಕಿಟ್ಟ ಚಿನ್ನದಂತೆಯೇ ಬೆಳಗಿದರು. ದೇಶದ ಉತ್ತರಭಾಗದಲ್ಲೆಲ್ಲ ಅಡ್ಡಾಡಿ ಬೇರೆ ಬೇರೆ ಕಡೆಗಳಲ್ಲಿ ವಿವಿಧ ಬ್ಯಾಂಕ್ ಕೆಲಸಗಾರರ ಸಂಘಗಳು ಸಂಘಟಿತವಾಗುವಂತೆ ನೋಡಿಕೊಂಡರು. ಹತ್ತಾರು ಬಗೆಯಲ್ಲಿ ಬ್ಯಾಂಕುಗಳ ಆಡಳಿತಗಾರರು ತಮ್ಮ ಕೆಲಸಗಾರರ ಮೇಲೆ ಬಗೆಯುತ್ತಿದ್ದ ಅನ್ಯಾಯಗಳ ವಿರುದ್ಧ ಬ್ಯಾಂಕುಗಳೆದುರು, ಟ್ರಿಬ್ಯೂನಲ್ಲುಗಳೆದುರು ನೂರಾರು ಕಾಳಗಗಳನ್ನೇ ಅವರು ಸಂಘಟಿಸಿ ನಡೆಸಬೇಕಾಗಿ ಬಂತು.

ಈ ಸುಮಾರಿಗೆಯೇ ಭಾರತ ಬ್ಯಾಂಕು ಮತ್ತು ಅದರ ಕರ್ಣಧಾರರಾಗಿದ್ದ ದಾಲ್ಮಿಯಾ–ಜೈನರ ಹಲವಾರು ಅವ್ಯಾಪಾರಗಳು, ಮೋಸಗಳು, ಪರ್ವಾನಾರ ಗಮನಕ್ಕೆ ಬಂದು ಅವರು ಅದರ ವಿರುದ್ಧ ಮತ್ತೊಂದು ರಣರಂಗವನ್ನೇ ನಿರ್ಮಿಸಬೇಕಾಯಿತು. ದಾಲ್ಮಿಯಾ–ಜೈನರ ವಿರುದ್ಧ ಅವರು ಒಂದು ವಿಭಿನ್ನ ರಂಗವನ್ನೇ ನಿರ್ಮಿಸಿದರು. ದಿಲ್ಲಿಯಲ್ಲಿ ಭಿನ್ನಪತ್ರಗಳ ಮೂಲಕ ದಾಲ್ಮಿಯಾ–ಜೈನರ ಅವ್ಯಾಪಾರಗಳು ಒಂದೊಂದಾಗಿ ಬಯಲಾಗತೊಡಗಿದಾಗ ಉದ್ಯಮವಲಯವು ಹೌಹಾರಿತು. ಪರ್ವಾನಾರ, ಅಪ್ರತಿಮ ಧೈರ್ಯ ಸಾಹಸಗಳಿಂದ ಸೇಠ ರಾಮಕೃಷ್ಣ ದಾಲ್ಮಿಯಾ ತಾಳ್ಮೆಗೆಟ್ಟು ಅವರ ವಿರುದ್ಧ ಮಾನಹಾನಿ ಮೊಕದ್ದಮೆ ಹೂಡಿದ್ದಲ್ಲದೆ ಆಗ ಲಭ್ಯರಿದ್ದ ಅತ್ಯುತ್ತಮ ವಕೀಲರನ್ನೇ ನೇಮಿಸಿಕೊಂಡರು. ಪರ್ವಾನಾ ಪಂಜಾಬ ಹೈಕೋರ್ಟಿನಲ್ಲಿ ತಮ್ಮ ಪರವಾಗಿ ತಾವೇ ವಾದಿಸಿದರು. ಕೋರ್ಟು ಪ್ರಕರಣವನ್ನು ಕಿತ್ತಿ ಹಾಕಿಬಿಟ್ಟಿತು.

ಆ ಕಾಲಕ್ಕೆ ಬೇರೆ ಬೇರೆ ಬ್ಯಾಂಕುಗಳಲ್ಲಿ ನೌಕರರು ವೇತನ ಶ್ರೇಣಿಯ ಪುನರ್ವಿಮರ್ಶೆಗೆಂದು ನಡೆಸಿದ್ದ ಆಂದೋಲನದಿಂದ ಕೇಂದ್ರ ಸರಕಾರವು ಈ ಕಾರ್ಯ ನಿರ್ವಹಣೆಗೆಂದು ನ್ಯಾಯಮೂರ್ತಿ ಸೇನ್ ಆಯೋಗವನ್ನು ನೇಮಿಸಿತ್ತು. ಈ ಆಯೋಗದ ಐತೀರ್ಪನ್ನು ವರಿಷ್ಠ ನ್ಯಾಯಾಲಯ ಏಪ್ರಿಲ್ ೯,೧೯೫೧ ರಂದು ತಳ್ಳಿಹಾಕಿತು. ಆಗ ಉದ್ಭೂತವಾದ ವಾತಾವರಣದ ಲಾಭ ಪಡೆಯಲೆಂದು ಪಂಜಾಬ ನ್ಯಾಶನಲ್ ಬ್ಯಾಂಕು ಸೇನ್ ಐತೀರ್ಪಿಗೆ ಮುಂಚಿನ ಸೇವಾನಿಯಮಗಳನ್ನು ಪುನಃ ಜಾರಿಗೊಳಿಸಲು ಯತ್ನಿಸಿತು. ಆಡಳಿತ ವರ್ಗ ಸೇಡಿನ ಮನೋಭಾವದಿಂದಲೇ ಹೀಗೆ ಮಾಡಲೆಳಸಿದೆಂಬುದು ಸ್ಪಷ್ಟವೇ ಇತ್ತು. ಆಗ ಪರ್ವಾನಾರ ನೇತೃತ್ವದಲ್ಲಿ ದೇಶದಲ್ಲಿಯ ಬ್ಯಾಂಕಿನ ಎಲ್ಲ ಶಾಖೆಗಳಲ್ಲಿ ಏಕಕಾಲಕ್ಕೆ ನೌಕರರ ಮುಷ್ಕರ ಆರಂಭವಾಯಿತು. ೪೯ ದಿನಗಳ ಕಾಲ ನಡೆದ ಈ ಮುಷ್ಕರದ ಪರಿಣಾಮವಾಗಿ ಬ್ಯಾಂಕು ೧೫೦ ಜನ ನೌಕರರನ್ನು ಕೆಲಸದಿಂದ ಕಿತ್ತಿ ಹಾಕಿತು. ಸಂಘವು ಪ್ರತಿಯೊಂದು ಪ್ರಕರಣವನ್ನು ಆಯಾ ರಾಜ್ಯಗಳಲ್ಲಿ ಔದ್ಯಮಿಕ ಟ್ರಿಬ್ಯೂನಲ್ಲುಗಳೆದುರು ಒಯ್ದು ಹೋರಾಟ ಪ್ರಾರಂಭಿಸಿತು. ಆಡಳಿತ ವರ್ಗವೂ ಪಟ್ಟು ಹಿಡಿದು ಟ್ರಿಬ್ಯೂನಲ್ಲುಗಳಿಂದ ವಿವಿಧ ಹೈಕೋರ್ಟುಗಳಿಗೆ, ಕೊನೆಗೆ ವರಿಷ್ಠ ನ್ಯಾಯಾಲಯಕ್ಕೆ ಎಲ್ಲ ಪ್ರಕರಣಗಳನ್ನು ತಂದಿತು. ಅದಕ್ಕಾಗಿ ಲಕ್ಷಾವಧಿ ರೂಪಾಯಿಗಳನ್ನು ತೆರಪಿಲ್ಲದಂತೆ ವ್ಯಯಿಸಿತು. ಸತತವಾಗಿ ಒಂಬತ್ತು ವರ್ಷ ನಡೆದ ಈ ವ್ಯಾಜ್ಯದ ಕಾಲದಲ್ಲಿ ಪರ್ವಾನಾ ನಿತ್ಯ ೧೮ ತಾಸುಗಳಂತೆ ಶ್ರಮಿಸಿದರು. ಆಗ ಅವರಿಗೆ ಸಹಾಯ ದೊರೆಯುತ್ತಿದ್ದುದು ಕೈಬೆರಳ ಮೇಲೆ ಎಣಿಸುವಷ್ಟು ಸಹಕಾರಿಗಳಿಂದ ಮಾತ್ರ. ಪ್ರಕರಣಕ್ಕೆ ಸಂಬಂಧಿಸಿದ ಪ್ರತಿಯೊಂದು ಕಾಗದ ಪತ್ರವನ್ನೂ ಪರ್ವಾನಾ ಚೊಕ್ಕಟವಾಗಿ ತಾವೇ ಸಿದ್ಧಗೊಳಿಸುತ್ತಿದ್ದರು. ಕೊನೆಗೆ ವರಿಷ್ಠ ನ್ಯಾಯಾಲಯ ೧೩೭ ಜನ ನೌಕರರನ್ನು ಅವರನ್ನು ಕೆಲಸದಿಂದ ತೆಗೆದ ದಿನದಿಂದಲೇ ಮರಳಿ ತೆಗೆದುಕೊಳ್ಳುವಂತೆ ಆಜ್ಞಾಪಿಸಿತು.

ಮುಂದಿನ ಹತ್ತಾರು ವರ್ಷಗಳಲ್ಲಿ ಪರ್ವಾನಾ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಮಿಕ ಸಂಘಟನೆಯ ವ್ಯಾಪ್ತಿಯನ್ನು ಭಾರತದ ಎಲ್ಲೆಡೆಗೂ ವಿಸ್ತರಿಸತೊಡಗಿದರು. ವೇತನ ಶ್ರೇಣಿಗಳ ನಿರ್ಧಾರಕ್ಕಾಗಿ ಒಂದರ ನಂತರ ಒಂದರಂತೆ ಸೇನ್ ಆಯೋಗದ ನಂತರ ಆರು ಆಯೋಗಗಳು ಬಂದವು. ಪ್ರತಿ

ಯೊಂದರ ಎದುರೂ ಕೆಲಸಗಾರರ ಪರವಾಗಿ ಅವರು ಸಾಕ್ಷಿ ನುಡಿಯಬೇಕಾಗುತ್ತಿತ್ತಲ್ಲದೆ ಶ್ರೇಷ್ಠ ವಕೀಲರುಗಳ ಮೂಲಕ ಬ್ಯಾಂಕುಗಳು ಮಂಡಿಸುತ್ತಿದ್ದ ವಾದಗಳನ್ನು ಪರಿಣಾಮಕಾರಿಯಾಗಿ ಖಂಡಿಸಬೇಕಾಗುತ್ತಿತ್ತು. ಈ ಮಧ್ಯೆ ಆಯೋಗ ಸೂಚಿಸಿದ ಐತೀರ್ಪಿನನ್ವಯ ಸರಕಾರ ಕೈಹಾಕಲೆತ್ನಿಸಿದಾಗ ಪರ್ವಾನಾರ ನೇತೃತ್ವದಲ್ಲಿ ಕೆಲಸಗಾರರು ಅದರ ವಿರುದ್ಧವೂ ಪ್ರತಿಭಟಿಸಬೇಕಾಯಿತು (೧೯೫೪). ಇನ್ನೂ ಅನೇಕ ಮಹತ್ವದ ಪ್ರಶ್ನೆಗಳು ಎದ್ದಾಗಲೆಲ್ಲ ಅದಕ್ಕೆ ತಕ್ಕ ಆಂದೋಲನವನ್ನು ಅವರು ಹೂಡಬೇಕಾಯಿತು. ಎಲ್ಲೆಲ್ಲೂ ಬೇರೆ ಬೇರೆ ಬ್ಯಾಂಕುಗಳು ತಮ್ಮ ನೌಕರನ್ನು ಬಲಿಪಶುಗಳನ್ನಾಗಿಸಲು ಯತ್ನಿಸಿದಾಗಲೆಲ್ಲ ಪರ್ವಾನಾ ಅವರ ರಕ್ಷಣೆಗೆ ಧಾವಿಸುತ್ತಿದ್ದರು.

ಭಾರತೀಯ ಬ್ಯಾಂಕ್ ನೌಕರರ ಆಂದೋಲನದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬಹುದಾದಂಥ ದಿನವೆಂದರೆ ೧೯೬೬ ರ ಅಕ್ಟೋಬರ್ ೧೯. ಅಂದು ಈ ಆಂದೋಲನದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿ ದ್ವಿಪಕ್ಷೀಯ ಒಪ್ಪಂದಕ್ಕೆ ಅಂಕಿತ ಬಿತ್ತು. ನ್ಯಾಯಾಲಯಗಳಲ್ಲಿ ಹೋರಾಡುವಾಗ ಪರ್ವಾನಾರಲ್ಲಿ ಕಂಡುಬರುತ್ತಿದ್ದುದು ಅವರಲ್ಲಿಯ ಅಪಾರ ಆತ್ಮವಿಶ್ವಾಸ ಮತ್ತು ಛಲ. ಆದರೆ ಅಖಿಲ ಭಾರತ ಮಟ್ಟದಲ್ಲಿ ಬ್ಯಾಂಕುಗಳ ಪ್ರತಿನಿಧಿಗಳಿಗೆ ಎದುರಾಗಿ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸುವಾಗ ಇನ್ನೂ ಒಂದು ಬಗೆಯ ಕೌಶಲವೂ ಅವರಲ್ಲಿ ಕಂಡುಬಂತು. ತಮ್ಮ ಪಕ್ಷವನ್ನು ಮಂಡಿಸುವಲ್ಲಿ ಸಮರ್ಥರಿದ್ದಂತೆಯೆ ಎದುರಾಳಿಯನ್ನು ಮನವೊಲಿಸಿ ಗೆಲ್ಲುವಲ್ಲೂ ಅವರು ನಿಸ್ಸೀಮರೆಂಬುದು ಮೊದಲನೆಯ ದ್ವಿಪಕ್ಷೀಯ ಮಾತುಕತೆಗಳ ಕಾಲಕ್ಕೆ ವ್ಯಕ್ತವಾಯಿತು. ೧೯೭೦ರಲ್ಲಿ ಎರಡನೆಯ ದ್ವಿಪಕ್ಷೀಯ ಒಪ್ಪಂದವೂ ಆಯಿತು. ಈ ಎರಡೂ ಒಪ್ಪಂದಗಳ ಕಾಲಕ್ಕೂ ಪರ್ವಾನಾ ಒಂದೊಂದು ಅಲ್ಪವಿರಾಮ, ಅರ್ಧವಿರಾಮಗಳು ಬಗ್ಗೆ ಸಹ ಪೂರ್ತಿ ಯೋಚಿಸಿ ಕೆಲಸಗಾರನಿಗೆಲ್ಲೂ ಅನ್ಯಾಯಕ್ಕೆ ಅವಕಾಶವುಳಿದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುತ್ತಿದ್ದರು.

೧೯೭೧ ರಲ್ಲಿ ಅಖಿಲ ಭಾರತೀಯ ಬ್ಯಾಂಕ್ ನೌಕರರ ಸಂಘದ ಬೆಳ್ಳಿಯ ಹಬ್ಬವನ್ನು ದಿಲ್ಲಿಯಲ್ಲಾಚರಿಸಿತು. ಈ ಆಂದೋಲನದ ಇತಿಹಾಸದಲ್ಲೇ ಅದೊಂದು ಅವಿಸ್ಮರಣೀಯ ಘಟನೆಯಾಗುವಂತೆ ಅನೂಚಾನವಾಗಿ ಪ್ರತಿ ಸೂಕ್ಷ್ಮ ಅಂಶಕ್ಕೂ ಗಮನವಿತ್ತು ಸಂಘಟಿಸಿದವರು ಪರ್ವಾನಾ ಮತ್ತು ಅವರ ಸಂಗಡಿಗರು.

ಇಷ್ಟು ವರ್ಷ ಅವಿಶ್ರಾಂತ ದುಡಿಮೆಯಲ್ಲಿ ದೇಹ ಮನಸ್ಸುಗಳನ್ನು ಶ್ರಮಿಸಿದ ಪರ್ವಾನಾರವರಿಗೆ ಸಂಘ ಮತ್ತು ಬ್ಯಾಂಕ್ ಕೆಲಸಗಾರರ ಶ್ರೇಯೋಭಿವೃದ್ಧಿ ಇವೆರಡೇ ಗುರಿಗಳು ಕಾಣುತ್ತಿದ್ದುವು. ತಮ್ಮ ನಿಷ್ಠೆಯನ್ನೆಲ್ಲ ಇವರಲ್ಲೇ ಕೇಂದ್ರೀಕರಿಸಿದ ಅವರು ವೈಯಕ್ತಿಕ ಸುಖವನ್ನು ಪೂರ್ತಿ ಕಡೆಗಣಿಸಿಬಿಟ್ಟರು. ಮದುವೆಯಾಗಲು ಅವರ ಮನವೊಲಿಸಲು ಅವರ ಹಿರಿಯ ಸಹಕಾರಿಗಳು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು. ಸಂಘಟನೆಗಾಗಿ ಅವರು ಮೌನವಾಗಿ ಮಾಡಿದ ಮಹಾತ್ಯಾಗಗಳಲ್ಲಿ ಇದು ಬಹು ದೊಡ್ಡದೆಂದು ತೋರುತ್ತದೆ.

ದಿಲ್ಲಿಯಲ್ಲಿ ಸಂಘದ ಕಚೇರಿಯೇ ಈ ಬ್ರಹ್ಮಚಾರಿಗೆ ಮನೆಯಾಗಿಬಿಟ್ಟಿತ್ತು. ಹಗಲು ರಾತ್ರಿಗಳ ಪರವೆಯಿಲ್ಲದೆ ಅವರ ಕೆಲಸಗಳಲ್ಲೇ ಮೈಮರೆಯುತ್ತಿದ್ದ ಅವರ ವೈಯಕ್ತಿಕ ಅಗತ್ಯಗಳೂ ತುಂಬ ಮಿತಮಿತವಾಗಿದ್ದವು ಕಚೇರಿಯನ್ನು ಸದಾಕಾಲ ಅಚ್ಚುಕಟ್ಟಾಗಿ ಇಟ್ಟುಕೊಳ್ಳುವಲ್ಲಿಯೂ ಕಾರ್ಯನಿರ್ವಹಣೆಯಲ್ಲಿ ದಕ್ಷತೆ ತೋರುವಲ್ಲಿಯೂ ಅವರನ್ನು ಅವರ ಸಹಕಾರಿಗಳನ್ನು ನೆನೆಯುತ್ತಾರೆ. ಅವರ ಕಚೇರಿಗೆ ಬಂದ ಯಾವುದೇ ಪತ್ರಕ್ಕೆ ಕೆಲವೇ ದಿನಗಳಲ್ಲಿ ಉತ್ತರ ಹೋಗಲೇಬೇಕು. ದೇಶದ ಯಾವುದೇ ಮೂಲೆಯಿಂದ ತೀರ ಸಾಮಾನ್ಯ ನೌಕರನೂ ಸಂಘದ ಕಚೇರಿಗೆ ಬಂದರೆ ಪರ್ವಾನಾ ತೀರ ನಿಸ್ಸಂಕೋಚವಾಗಿ ಅವನೊಂದಿಗೆ ಬೆರೆತು ಅವನಿಗೆ ಆತ್ಮೀಯರಾಗಿ ಬಿಡುತ್ತಿದ್ದರು.

ಪರ್ವಾನಾ ಕಾಲೇಜು ಕಟ್ಟೆ ಏರಿರಲಿಲ್ಲವಾದ್ದರಿಂದ ಬೇಕಾದರೆ ಪ್ರಚಲಿತ ಅರ್ಥದಲ್ಲಿ ಅವರನ್ನು ಸುಶಿಕ್ಷಿತರ ಸಾಲಿಗೆ ಸೇರಿಸಲಿಕ್ಕಿಲ್ಲ, ಆದರೆ ಅವರ ಸುಸಂಸ್ಕೃತಿ ಮತ್ತು ಆಳವಾದ ಅನುಭವ ಅವರನ್ನು ಹತ್ತು ಜನರಲ್ಲಿ ಪ್ರತ್ಯೇಕವಾಗಿ ಎತ್ತಿ ಹೇಳುವಂತೆ ಮಾಡಿದ್ದವು. ಕಾರ್ಮಿಕರಿಗೆ ಸಂಬಂಧಪಟ್ಟ ಕಾನೂನುಗಳ ವಿಷಯದಲ್ಲಿ ಮತ್ತು ತತ್ಸಂಬಂಧಿತ

ಕೇಸ್‌ಲಾನಲ್ಲಿ ಅವರನ್ನು ಮೀರಿಸಿದವರು ವಿರಳ.


ಕರ್ನಾಟಕಕ್ಕೆ ಪರ್ವಾನಾ ಹಲವಾರು ಸಲ ಬಂದು ಹೋಗಿದ್ದಾರೆ. ಮೈಸೂರು ಸ್ಟೇಟ್ ಬ್ಯಾಂಕಿನಲ್ಲಿ ನೌಕರರ ಸಂಘ ಕಟ್ಟುವುದಕ್ಕೆ ಅವರ ಪ್ರಚೋದನೆಯೇ ಕಾರಣ. ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಶಿವಮೊಗ್ಗ ಮೊದಲಾದವುಗಳನ್ನು ಅವರು ಸಂದರ್ಶಿಸಿದ್ದಾರೆ.

ಪರ್ವಾನಾ ಸ್ವಂತ ಆರೋಗ್ಯದ ಪರಿವೆಯಿಲ್ಲದೆ ಸಂಘಕ್ಕಾಗಿ ದುಡಿದರು. ಈ ಅವಿಶ್ರಾಂತ ಒತ್ತಡದ ಪರಿಣಾಮ ಅವರ ಆರೋಗ್ಯದ ಮೇಲಾಯಿತು. ೧೯೬೬ ರಲ್ಲಿ ಮೊಟ್ಟ ಮೊದಲ ಅವರಿಗೆ ಹೃದಯಾಘಾತವಾಯಿತು. ಆದರೆ ಈ ವೈಯಕ್ತಿಕ ಸಮಸ್ಯೆಯಿಂದ ತಮ್ಮ ಕಾರ್ಯ ಚಟುವಟಿಕೆಗಳಿಗೆ ಆತಂಕ ತಂದುಕೊಳ್ಳಲು ಅವರು ಬಯಸಲಿಲ್ಲ. ಚೇತರಿಸಿಕೊಂಡ ನಂತರ ಅವರ ಚಟುವಟಿಕೆಗಳು ಎಂದಿನಂತೆಯೇ ಮುಂದುವರಿದವು. ಆದರೆ ಸಂಘದ ಬೆಳ್ಳಿ ಹಬ್ಬದ ನಂತರ ೧೯೭೩ ರಲ್ಲಿ ಅವರ ಆರೋಗ್ಯ ಮತ್ತಷ್ಟು ಕೆಟ್ಟಿತಲ್ಲದೆ ೧೯೭೪ ರಲ್ಲಿ ಮುಂಬಯಿಯಲ್ಲಿ ಮತ್ತೊಮ್ಮೆ ಹೃದಯಾಘಾತವಾಯಿತು. ೧೯೭೫ ರ ಏಪ್ರಿಲ್ ಎರಡನೇ ವಾರದಲ್ಲಿ ಹೃದ್ರೋಗದಿಂದ ಬಳಲುತ್ತಿದ್ದ ಪರ್ವಾನಾರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆದರೆ ಈ ಸಲ ಅವರು ಚೇತರಿಸಿಕೊಳ್ಳಲೇಯಿಲ್ಲ. ಏಪ್ರಿಲ್ ೧೯ ರ ಬೆಳಗಿನ ಹತ್ತೂವರೆಗೆ ಚಿರನಿದ್ರೆಗೈದರು.

ಅಂದು ದಿಲ್ಲಿಯು ಸ್ಮಾರಿಸಿದ ಶೋಕಛಾಯೆ ಅಸದೃಶವಾದುದು. ದೇಶದ ರಾಜಧಾನಿಯಲ್ಲಿಯ ಬ್ಯಾಂಕ್ ನೌಕರರು ಮಾತ್ರವಲ್ಲ ಕೆಬಿನೆಟ್ ಮಂತ್ರಿಗಳಿಂದಾರಂಭಿಸಿ ಸಮಾಜದ ಎಲ್ಲ ಸ್ತರಗಳಿಂದಲೂ ೬೦,೦೦೦ ಕ್ಕೂ ಮೇಲ್ಪಟ್ಟು ಜನ ಅವರ ಶವ ಸಂಸ್ಕಾರದಲ್ಲಿ ಭಾಗವಹಿಸಿ ಕಣ್ಣೀರುದುರಿಸಿದರು.

ಪರ್ವಾನಾ ತಾವೇ ನೀರೆರೆದು ಬೆಳೆಸಿದ ಸಂಘದಲ್ಲಿ ಕೂಡ ಯಾವುದೇ ಅಧಿಕಾರ ಗೌರವ ಸ್ಥಾನವನ್ನೆಂದೂ ಬಯಸಲಿಲ್ಲ. ೧೯೫೧ ಸಂಘದ ಉಪಾಧ್ಯಕ್ಷರಾದ ಅವರು ಮುಂದಿನ ಮೂರು ವರ್ಷ ಆ ಸ್ಥಾನದಲ್ಲಿದ್ದರು. ೧೯೫೪ ರಲ್ಲಿ ಸಹಾಯಕ ಕಾರ್ಯದರ್ಶಿಯಾಗಿದ್ದರು. ಎಂಟು ವರ್ಷಗಳ ನಂತರ ೧೯೬೨ ರಲ್ಲಿ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾದ ೧೩ ವರ್ಷ ಕಾಲ ದೇಹದಲ್ಲಿ ಕೊನೆಯುಸಿರಿರುವವರೆಗೂ ಕಾರ್ಯದರ್ಶಿಯಾಗಿಯೇ ಉಳಿದರು. ಸಂಘಟನೆಗೆ, ಹೋರಾಟಕ್ಕೆ– ಹಾಗೆ ನೋಡಿದರೆ ಅವರ ಎಲ್ಲ ಚಟುವಟಿಕೆಗಳಿಗೇ ಕೇಂದ್ರ ಬಿಂದು ಈ ಕಾರ್ಯದರ್ಶಿ. ಪರ್ವಾನಾ ಇರುವ ತನಕವೂ ಆ ಸ್ಥಾನಕ್ಕೆ ಅವರಿಂದಾಗಿಯೇ ಗೌರವ ಬಂದಿತ್ತು. ✡

(ಕೃಪೆ: ಧಾರವಾಡ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ೧೯೮೦ ರ ಸಂಸ್ಮರಣ ಸಂಚಿಕೆ)



ಯಾರು ಶ್ರೇಷ್ಠ ?

ಒಬ್ಬ ಜ್ಞಾನಿ ಹಾದಿಯಲ್ಲಿ ನಡೆಯುತ್ತಿದ್ದ. ಹಾದಿಹೋಕನೊಬ್ಬ ಅವನ ಹತ್ತಿರ ಬಂದು ಪಕ್ಕದಲ್ಲಿ ಮಲಗಿದ್ದ ನಾಯಿಯನ್ನು ತೋರಿಸಿ "ನಿಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು?" ಎಂದು ಕೇಳಿದ. ಜ್ಞಾನಿ ನಾಯಿಯ ಕಡೆ ನೋಡಿ ಗಂಭೀರನಾದ. ಸ್ವಲ್ಪ ಹೊತ್ತು ಮೌನವಾಗಿದ್ದು ಆಮೇಲೆ "ನಾನು ಪುಣ್ಯಪ್ರದವಾದ ಕೆಲಸ ಮಾಡುತ್ತಿರುವವರೆಗೂ ಈ ನಾಯಿಗಿಂತ ಶ್ರೇಷ್ಠನೇ ಹೌದು; ಪಾಪ ಕಾರ್ಯಗಳನ್ನು ಮಾಡುತ್ತ ನಡೆವವರೆಗೂ ಈ ನಾಯಿ ನನ್ನಂಥ ನೂರಾರು ಜ್ಞಾನಿಗಳಿಗಿಂತ ಶ್ರೇಷ್ಠವಾಗುತ್ತದೆ" ಎಂದ.

ಸಂಗ್ರಹ: **ಆನಂದ ದಂಡಾಪೂರ**

ಬರಲಿದೆ ಬುದ್ಧಿಶಾಲಿಗಳಾದ ಗಣಕಯಂತ್ರಗಳ ಸುಗ್ಗಿ!

ಮಾನವನನ್ನು ಮೀರಿಸಲಿವೆ ಈ ಗಣಕಗಳು !

ಶಿವಪ್ರಕಾಶ

ಒಂದು ಕಡೆ ಹೊಸ ಔಷಧಿಗಳ ಸಹಾಯದಿಂದ ರೋಗಗಳನ್ನು ಗೆಲ್ಲುತ್ತಿರುವ, ಇನ್ನೊಂದು ಕಡೆ ಜೀವ ವಿಜ್ಞಾನದ ನೆರವಿನಿಂದ ಅನುವಂಶಿಕ ದೌರ್ಬಲ್ಯಗಳನ್ನು ಕ್ರಮೇಣ ನೀಗಿಕೊಂಡು, ಸಾವನ್ನೇ ಜಯಿಸುವ ಹವಣಿಕೆಯಲ್ಲಿರುವ ಮನುಷ್ಯ ನಿಜವಾಗಿ ಚಿರಾಯುವಾಗಬಲ್ಲನೇ ಎಂಬ ಪ್ರಶ್ನೆಗೆ ಉತ್ತರ ನೀಡಲು ವಿಜ್ಞಾನಿಗಳು ಹೊಸ ಸಂಶೋಧನೆಗಳ ಜೊತೆ ಹೊರಟಿದ್ದಾರೆ. ಇತ್ತ ಖಗೋಳ ವಿಜ್ಞಾನ ಅಪಾರ ಭರದಿಂದ ನಮ್ಮ ವಿಶ್ವವನ್ನು ಕುರಿತು ಹೊಸ ಮಾಹಿತಿಗಳನ್ನು ಒದಗಿಸುತ್ತಿದೆ. ಸುದೂರದ ಅನ್ಯ ಲೋಕಗಳಲ್ಲಿ ಮನುಷ್ಯನಷ್ಟೇ ಅಥವಾ ಮನುಷ್ಯನಿಗಿಂತ ಅನೇಕ ಪಟ್ಟು ಹೆಚ್ಚು ಬುದ್ಧಿಶಾಲಿಯಾಗಿರುವ ಜೀವಿಗಳು ಇರುವ ಸಂಭವ ಅತಿ ಹೆಚ್ಚಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಇಂತಹ ಜೀವಿಗಳಿಗೆ ಭೂಗ್ರಹದಲ್ಲಿ ಮನುಷ್ಯನ ಅಸ್ತಿತ್ವವನ್ನು ತಿಳಿಸುವ ಸಲುವಾಗಿ ಕಳೆದ ಕೆಲವು ವರ್ಷಗಳಿಂದಲೂ ರಶಿಯಾ ಮತ್ತು ಅಮೇರಿಕಗಳ ಬೃಹತ್ ಖಗೋಳ ವೀಕ್ಷಣಾಲಯಗಳಿಂದ ಪ್ರಬಲ ರೇಡಿಯೋ ತರಂಗಗಳನ್ನು ಸೌರವ್ಯೂಹಕ್ಕೆ ಕೇವಲ ನಾಲ್ಕು ಜ್ಯೋತಿರ್ವರ್ಷಗಳ ದೂರದಲ್ಲಿ ಇರುವ ಸೆಂಟಾರಿ ನಕ್ಷತ್ರದ ದಿಕ್ಕಿನಲ್ಲಿ ಪ್ರಸಾರ ಮಾಡುತ್ತಿದ್ದಾರೆ. ಈ ಹಿಂದೆಂದೂ ಮಾನವ ಇಂದಿನಷ್ಟು ವಿಶಿಷ್ಟವಾದ ಸಂದರ್ಭವನ್ನು ಎದುರಿಸಿರಲಿಲ್ಲ ಎನ್ನಬಹುದು.

ವೈದ್ಯಕೀಯ ರಂಗದಲ್ಲಿ ಆಗುತ್ತಿರುವ ಮಹತ್ತರ ಸಂಶೋಧನೆಗಳು ದಂಗುಬಡಿಸುವಂಥವಾಗಿವೆ. ಈ ಶತಮಾನಾಂತ್ಯದ ವೇಳೆಗೆ ಇಂದು ಪ್ರಾಣಾಂತಿಕವೆನಿಸಿರುವ ಅನೇಕ ಬಗೆಯ ಕ್ಯಾನ್ಸರುಗಳು, ಮತ್ತಿತರ ರೋಗಗಳಿಗೆ ಮದ್ದು ಕಂಡು ಹಿಡಿಯುವ ಬಗ್ಗೆ ವೈದ್ಯರು ತುಂಬ ವಿಶ್ವಾಸವನ್ನಿಟ್ಟುಕೊಂಡಿದ್ದಾರೆ. ಇದೇ ರೀತಿ ಜನಸಂಖ್ಯಾ ಸ್ಫೋಟವೂ ನಿಯಂತ್ರಣಕ್ಕೆ ಬಂದು, ಭೂಮಿಯಲ್ಲಿ ಎಲ್ಲರಿಗೂ ಸಾಕಾಗುವಷ್ಟು ಆಹಾರ, ಮತ್ತಿತರ ಸೌಲಭ್ಯ–ಸೌಕರ್ಯಗಳು ಲಭ್ಯವಾಗುವ ಸಾಧ್ಯತೆಯೂ ಬಹಳವಾಗಿದೆ. ಹೀಗೆ ರೋಗ ಭಯ, ಹಸಿವಿನ ಭಯ ಮತ್ತು ಅನುವಂಶಿಕವಾದ ದೌರ್ಬಲ್ಯಗಳ ಭಯದಿಂದ ಸಂಪೂರ್ಣವಾಗಿ ಮುಕ್ತನಾಗುವ ಮನುಷ್ಯ ಚಿರಂಜೀವಿಯಾಗುವ ಹಾದಿಯಲ್ಲಿ ಮುನ್ನಡೆಯು

ತ್ತಿದ್ದಾನೆ ಎನ್ನಬಹುದು.

ಅಥವಾ, ಕನಿಷ್ಠ ಪಕ್ಷ ಹಾಗೆ ಕಾಣುತ್ತದೆ. ಮುಖ್ಯವಾಗಿ ಜೀವ ವಿಜ್ಞಾನ ಕ್ಷೇತ್ರದಲ್ಲಿ ಆನುವಂಶಿಕ ಗುಣಗಳನ್ನು ದಾಟಿಸುವ 'ಜೀನು'ಗಳು ಬ್ಯಾಕ್ಟೀರಿಯಾ ಮತ್ತು ವೈರಸ್ಸುಗಳ ಬಗ್ಗೆ ಅಗಾಧವಾದ ಸಂಶೋಧನೆಗಳು ನಡೆಯುತ್ತಿವೆ. ಈಗಾಗಲೇ ಮನುಷ್ಯ ಪ್ರಯೋಗಶಾಲೆಯಲ್ಲಿ ಕೃತಕ 'ಜೀನು'ಗಳನ್ನು ಸೃಷ್ಟಿ ಮಾಡಿದ್ದಾನೆ; ಇದರಂತೆ ಮನುಷ್ಯನಿಗೆ ಉಪಕಾರಿಯಾಗಬಲ್ಲ ಬ್ಯಾಕ್ಟೀರಿಯಗಳು ಮತ್ತು ರೋಗವುಂಟುಮಾಡುವ ವೈರಸ್ಸುಗಳನ್ನು ಎದುರಿಸಿ ಕೊಲ್ಲುವ ಪ್ರತಿ ವೈರಸ್ಸುಗಳನ್ನು ಸೃಷ್ಟಿಸಲು ಮನುಷ್ಯ ಮುಂದಾಗಿದ್ದಾನೆ. ಅಂದರೆ ಜೀವವನ್ನು ಮನುಷ್ಯ ಸೃಷ್ಟಿಸಬಲ್ಲ ಎಂದಾಯಿತು. ಈ ಪರಿಣಾಮವಾಗಿ, ಮುಂದಿನ ಶತಮಾನದ ಮೊದಲ ದಶಕದ ಹೊತ್ತಿಗೆ ಆನುವಂಶಿಕ ರೋಗಗಳಿಂದ ನರಳುತ್ತಿರುವವರು ತಮ್ಮ ಶರೀರದ 'ಜೀನು'ಗಳಿಗೆ ತಕ್ಕ ತಿದ್ದುಪಡಿ ಮಾಡಿಕೊಂಡು, ಆರೋಗ್ಯವಂತರಾಗಬಹುದು; ಅಂಗವಿಕಲರು ಕೃತಕ ಅಂಗಾಂಗಗಳನ್ನು ಮಾರುಕಟ್ಟೆಗಳಲ್ಲಿ ಕೊಂಡು, ತಮ್ಮ ದೇಹಕ್ಕೆ ಜೋಡಿಸಿಕೊಳ್ಳಬಹುದು. ಇಷ್ಟೇ ಅಲ್ಲದೆ, ಜೀವ ವಿಜ್ಞಾನದಲ್ಲಿ ಆಗಿರುವ ಅದ್ಭುತ ಬೆಳವಣಿಗೆಯ ಸಹಾಯದಿಂದ ಮನುಷ್ಯ ತನ್ನ 'ಪ್ರತಿಕೃತಿ'ಯ ವಿಶ್ವಾಮಿತ್ರ ಸೃಷ್ಟಿಯನ್ನು ಇಷ್ಟರಲ್ಲೇ ಕೈಗೊಳ್ಳಬಹುದಾಗಿದೆ. ಈ ಸಾಧ್ಯತೆಯನ್ನು ಬೊಟ್ಟುಮಾಡಿ ತೋರಿಸುವ ಹಾಗೆ, ಕೆಲವು ವರ್ಷಗಳ ಹಿಂದೆ ಅಮೇರಿಕದಲ್ಲಿ ವೃದ್ಧ ಶ್ರೀಮಂತನೊಬ್ಬನ ಕೋರಿಕೆಯ ಮೇರೆಗೆ ವಿಜ್ಞಾನಿಗಳು ಅವನ 'ಪ್ರತಿಕೃತಿ'ಯನ್ನು ತಯಾರಿಸಿದರೆಂಬ ವರದಿ ಪ್ರಕಟವಾಗಿ ಕೋಲಾಹಲವೆದ್ದುಹೋಯಿತು. 'ಪ್ರತಿಕೃತಿ' ಎಂದರೇನು?

ಯಾವನೇ ವ್ಯಕ್ತಿ ತಾಯಿ ಮತ್ತು ತಂದೆ ದಾನ ಪಡೆದ 'ಜೀನು'ಗಳ ಮೊತ್ತವೇ ಸರಿ. ಇವು ಆತನ ಎತ್ತರ, ಚರ್ಮದ ಬಣ್ಣ, ಬುದ್ಧಿಮತ್ತೆ ಇತ್ಯಾದಿಗಳನ್ನು ನಿರ್ಧರಿಸುತ್ತವೆ. ಮೇಲ್ಕಂಡ ವರದಿಯಂತೆ ಶ್ರೀಮಂತ ವೃದ್ಧನು ಈ ಎಲ್ಲ ರೀತಿಗಳಲ್ಲಿ ತನ್ನನ್ನೇ ಹೋಲುವ 'ಪ್ರತಿವ್ಯಕ್ತಿ'ಯನ್ನು ತಯಾರಿಸಲು ವಿಜ್ಞಾನಿಗಳ ಮನವೊಲಿಸಿದನಂತೆ. ಈಗ ಈ ವೃದ್ಧ ಮತ್ತು ಆತನ ನಾಲ್ಕು ವರ್ಷಗಳ ಮಗ (ಅಥವಾ ಅವಳಿ ಮತ್ತು ಅದಕ್ಕಿಂತ ಹೆಚ್ಚಾಗಿ ಯಥಾವತ್ ಪ್ರತಿ) ಜೊತೆಯಲ್ಲೇ ವಾಸಿಸುತ್ತಿದ್ದಾರಂತೆ. ಅಂದರೆ ಹೊಸ ವ್ಯಕ್ತಿಯ ನಿರ್ಮಾಣಕ್ಕೆ ಇನ್ನು ಮುಂದೆ ತಾಯಿತಂದೆಗಳ ಅವಶ್ಯಕತೆ ಇಲ್ಲ ಎಂದಾಯಿತು. ಯಾವನೇ ವ್ಯಕ್ತಿ ಎಲ್ಲ ವಿಧಗಳಲ್ಲಿ ತನ್ನಂತೆಯೇ ಇರುವ (ವಯಸ್ಸು ಬಿಟ್ಟು) ಇನ್ನೊಬ್ಬನಿಗೆ ಜನ್ಮ ನೀಡಬಹುದು.

ವೈದ್ಯವಿಜ್ಞಾನವು ಸದ್ಯಕ್ಕೆ 'ಪ್ರತಿವ್ಯಕ್ತಿ'ಯನ್ನು ಸೃಷ್ಟಿ ಮಾಡುವಷ್ಟು ಮುಂದುವರಿದಿಲ್ಲ ಎಂದು ಮೇಲ್ಕಂಡ ವರದಿಗೆ ಪ್ರತಿಕ್ರಿಯೆ ಸೂಚಿಸಿದ ಕೆಲವರು ವೈದ್ಯರು ಅಭಿಪ್ರಾಯ ಪಟ್ಟರಾದರೂ, ಇನ್ನು ಮುಂದೆ ಇಂತಹ ಸೃಷ್ಟಿ ಸಾಧ್ಯವಾಗುವುದಿಲ್ಲ ಎಂದು ಅವರು ಹೇಳಲಿಲ್ಲ. (ಮೇಲ್ಕಂಡ ವರದಿಯ ಸತ್ಯಾಸತ್ಯತೆಯನ್ನು ಸ್ಪಷ್ಟೀಕರಿಸುವ ಪತ್ರಿಕೆಗಳ ಪ್ರಯತ್ನ ಸಫಲವಾಗಲಿಲ್ಲ.) ಹಾಗೆ ನೋಡಿದರೆ, 'ಪ್ರತಿವ್ಯಕ್ತಿ' ಅಥವಾ 'ಪ್ರತಿಕೃತಿ'ಯ ಸೃಷ್ಟಿ ಪ್ರಕೃತಿಯಲ್ಲಿ ಹೊಸದೇನಲ್ಲ. ಬಲಿತ ಮರದ ರೆಂಬೆಯನ್ನು ಬಾಗಿಸಿ, ಅದರ ತುದಿಯನ್ನು ಮಣ್ಣಲ್ಲಿ ನೆಟ್ಟು 'ಕಸಿ' ಮಾಡುವ ವಿಧಾನ ಈ ಪ್ರತಿಕೃತಿ ತತ್ತ್ವಕ್ಕೆ ಒಂದು ಸಾಧಾರಣ ಉದಾಹರಣೆಯಾಗಬಹುದು. ಈ ಕಸಿ ಕೆಲವು ದಿವಸಗಳಲ್ಲಿ ಭೂಮಿಯಲ್ಲಿ ಬೇರುಬಿಟ್ಟಾಗ, ಗಿಡದಿಂದ ರೆಂಬೆಯನ್ನು ಕತ್ತರಿಸಲಾಗುತ್ತದೆ. ಆಗ ಅದು ಮಣ್ಣಲ್ಲಿ ಹೊಸ ಮರದಂತೆ ಅಥವಾ ಹಳೆಯ ಮರದ ಪ್ರತಿಕೃತಿಯಂತೆ ಬೆಳೆಯಲಾರಂಭಿಸುತ್ತದೆ; ಅನತಿ ಕಾಲದಲ್ಲಿ ಹೂ, ಹಣ್ಣು ಬಿಡಲಾರಂಭಿಸುತ್ತದೆ. ಈ ಹೊಸ ಮರಕ್ಕೆ ಮೂಲ ಮರದ ಬೀಜ, ಮೊಳಕೆ, ಚಿಗುರು, ಸಸಿಯ ಅವಸ್ಥೆಗಳನ್ನು ದಾಟುವ ಅಗತ್ಯ ಇರುವುದಿಲ್ಲ.

ಮನುಷ್ಯನೂ ಪ್ರಾರಂಭಾವಸ್ಥೆಯಲ್ಲಿ ಪ್ರತಿಕೃತಿಯೇ ಸರಿ. ತಾಯಿ ಗರ್ಭ ಧರಿಸುವಾಗ ತಂದೆಯ ವೀರ್ಯ ಬಂದು ತಾಯಿಯ ಅಂಡದೊಡನೆ ಕೂಡಿ, ಒಂದು ಏಕಾಣು ಜೀವಕೋಶದ ಉದ್ಭವವಾಗುತ್ತದೆ. ಇದು ಒಂದೆರಡಾಗಿ, ಎರಡು ನಾಲ್ಕಾಗಿ, ನಾಲ್ಕು ಎಂಟಾಗಿ ವಿಭಜನೆಗೊಳ್ಳುತ್ತದೆ. ಅಂದರೆ ಒಂದು ಕೋಶವಿದ್ದ ಜಾಗೆಯಲ್ಲಿ ಅದರ ತದ್ರೂಪದ ಸಾವಿರಾರು ಜೀವಕೋಶಗಳು ಹುಟ್ಟುತ್ತವೆ. ಹೀಗೆ ಪರಸ್ಪರ ಹೋಲುವ

ಜೀವಕೋಶಗಳು ಒಂದು ನಿರ್ದಿಷ್ಟ ಹಂತದಲ್ಲಿ ವಿಶಿಷ್ಟ ಅಂಗಾಂಗಗಳನ್ನು ರೂಪಿಸಿ, ಕೊನೆಗೆ ಶಿಶುವಿನ ಸ್ವರೂಪ, ಆಕಾರ ತಾಳುತ್ತದೆ. ಉದಾಹರಣೆಗೆ ಕಣ್ಣುಗುಡ್ಡೆಯನ್ನು ರೂಪಿಸುವ ಜೀವಕೋಶದಲ್ಲಿ ದೇಹದ ಇನ್ನಾವುದೇ ಅಂಗವನ್ನು ನಿರ್ಮಿಸುವ ಆನುವಂಶಿಕ 'ಜೀನ್'ಮಾಹಿತಿ ಹಾಗೂ ನಿರ್ದೇಶನಗಳು ಅಡಕವಾಗಿರುತ್ತವೆ. ಆದರೆ ಅದು ಕಣ್ಣುಗುಡ್ಡೆಯನ್ನು ರೂಪಿಸುವಾಗ ಅದರಲ್ಲಿರುವ ಇತರ ಅಂಗಾಂಗಗಳ ರಚನೆಯ ಆನುವಂಶಿಕ ನಿರ್ದೇಶನಗಳೆಲ್ಲ ಜಡವಾಗಿರುತ್ತವೆ; ಕಣ್ಣಿನ ರಚನೆಗೆ ಅಗತ್ಯವಾದ ನಿರ್ದೇಶನಗಳಷ್ಟೇ ಕಾರ್ಯಗತವಾಗುತ್ತವೆ. ಅಂದರೆ ಕಣ್ಣಿನ ಚರ್ಮದ ಅಥವ ಹೃದಯದ ಒಂದೇ ಒಂದು ಜೀವಕೋಶದಲ್ಲಿ ದೇಹದ ಎಲ್ಲ ಇತರ ಅಂಗಗಳನ್ನು ರಚಿಸುವ ಆನುವಂಶಿಕ ನಿರ್ದೇಶನಗಳು ಸದಾಕಾಲ ಇರುತ್ತವೆ.

ಇದರರ್ಥ ಇಷ್ಟೇ: ಮನುಷ್ಯನದೇಹದ ಯಾವುದೇ ಜೀವಕೋಶವನ್ನು ಕಿತ್ತು (ಉದಾಹರಣೆಗೆ ಚರ್ಮದ ಜೀವಕೋಶ) ಅದನ್ನು ಹೆಂಗಸಿನ ಗರ್ಭಕೋಶದಲ್ಲಿಟ್ಟು ಬೆಳೆಸಬಹುದಾಗಿದೆ. ಆಗ ಹೆಣ್ಣಿನ ಅಂಡವು ಫಲಿತವಾಗಿರಬೇಕು ಎಂದೇನಿಲ್ಲ. ಆಕೆಯ ಗರ್ಭಕೋಶದಲ್ಲಿ ಇಡಲಾದ ಈ ಚರ್ಮದ ಒಂದು ಜೀವಕೋಶವು ಅದು ಯಾವ ವ್ಯಕ್ತಿಯಿಂದ ಬಂದಿರುತ್ತದೋ ಅವನನ್ನು ಯಥಾವತ್ ಹೋಲುವ ಶಿಶುವನ್ನು ನಿರ್ಮಾಣ ಮಾಡುತ್ತದೆ. ಹೆಂಗಸು ಸಕಾಲದಲ್ಲಿ ತನ್ನ ಅಂಶವೇನೂ ಇರದ ಶಿಶುವಿಗೆ ಜನ್ಮ ನೀಡುತ್ತಾಳೆ. ಈ ಶಿಶುವು ಮೂಲ ವ್ಯಕ್ತಿಯ ಪ್ರತಿಕೃತಿಯಾಗಿದ್ದು, ವಯಸ್ಸಿನ ಹೊರತು ಎಲ್ಲ ವಿಧಗಳಲ್ಲಿ ಅವನನ್ನೇ ಹೋಲುತ್ತದೆ. ಕಾಲ ಕಳೆದಂತೆ ಇಂತಹ ಪ್ರಯೋಗಗಳನ್ನು ಪ್ರನಾಳದಲ್ಲಿ ಮಾಡಬಹುದಾಗಿದೆ. ಕಳೆದ ವರ್ಷ ಇಂಗ್ಲೆಂಡಿನಲ್ಲಿ ಪ್ರನಾಳದಲ್ಲಿ ಫಲಿತವಾದ ಅಂಡವನ್ನು ಹೆಣ್ಣೊಬ್ಬಳ ಗರ್ಭಕೋಶದಲ್ಲಿಟ್ಟು, ಒಂಭತ್ತು ತಿಂಗಳ ನಂತರ ಹೆಣ್ಣು ಮಗುವಿನ ಜನನಕ್ಕೆ ಕಾರಣವಾದ ಪ್ರಯೋಗವನ್ನು ಇಲ್ಲಿ ಪ್ರಸ್ತಾಪಿಸಬಹುದು. ಮುಂದೆ ವೈದ್ಯ ವಿಜ್ಞಾನದ ತಿಳುವಳಿಕೆ ಹೆಚ್ಚಿದಂತೆ ಒಂದು ಸಾಧಾರಣ ಜೀವಕೋಶವನ್ನು ಪ್ರನಾಳದಲ್ಲಿಟ್ಟು ಒಬ್ಬ ವ್ಯಕ್ತಿಯನ್ನು ಸೃಷ್ಟಿಸಬಹುದಾಗಿದೆ.

ಹೀಗೆ ಮನುಷ್ಯನ ಮುನ್ನಡೆ ಅವನನ್ನು ಚಿರಂಜೀವಿಯಾಗಿ ಮಾಡಲು ಹವಣಿಸುತ್ತಿದೆ. ಆದರೆ ನಿಜವಾಗಿ ಮನುಷ್ಯನ ಉತ್ತರಾಧಿಕಾರಿ ಮನುಷ್ಯನೇ? ಈಗಿನ ರಕ್ತ-ಮಾಂಸ, ಮೂಳೆಗಳಿಂದ ಕೂಡಿದ, ಆನುವಂಶಿಕ ಸಂಜ್ಞೆಗಳನ್ನು ಹೊತ್ತ ಜೀನುಗಳಿಂದ ನಿರ್ಮಿತವಾದ, ಇಂಗಾಲ, ಆಮ್ಲಜನಕ, ಖನಿಜ, ಲವಣಗಳ, ಶರ್ಕರಪಿಷ್ಟಗಳ, ಲೋಹಗಳ ಮಿಶ್ರಣವಾದ ಮನುಷ್ಯ ಪ್ರಾಣಿಯೇ? 'ಅಲ್ಲ' ಎನ್ನುತ್ತಾರೆ ಅನೇಕ ವಿಜ್ಞಾನಿಗಳು. ಮನುಷ್ಯ ತನ್ನನ್ನು ಈಗಿನ ಸ್ವರೂಪದಲ್ಲಿ, ದೇಹ ರಚನೆಯಲ್ಲಿ ಚಿರಂಜೀವಿಯಾಗಿ ಮಾಡಿಕೊಳ್ಳಲು ಯತ್ನಿಸುತ್ತಿರುವುದು ನಿಜವಾದರೂ, ಅವನ ಅಂತಿಮ ಉತ್ತರಾಧಿಕಾರಿಯು ಪ್ರಾಯಶಃ 'ಸಿಲಿಕಾನ್' ಧಾತುವಿನಿಂದ ಅವನೇ ನಿರ್ಮಿಸಿರುವ ಗಣಕಯಂತ್ರವಾಗಬಹುದು ಎಂದು ಹೇಳಲಾಗಿದೆ. ಈ ಯಂತ್ರ ಅನೇಕರು ನಂಬಿರುವಂತೆ ಕೇವಲ ಕೂಡಿಸುವ, ಕಳೆಯುವ, ಭಾಗಿಸುವ, ಗುಣಿಸುವ, ಅಪಾರ ಮಾಹಿತಿಯನ್ನು ತುಂಬಿಟ್ಟುಕೊಂಡು, ಕ್ಷಣಾರ್ಧದಲ್ಲಿ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ, ಆದರೆ 'ಜಡ'ವಾದ ಯಂತ್ರವಲ್ಲ. ಇದಕ್ಕೆ ಭಾವನೆಗಳಿವೆ. ಇದು ಭೂಮಿಯಿಂದ ಮನುಷ್ಯನ ನಿರ್ಗಮನದ ಬಳಿಕ ಆತನ ನಿಜವಾದ ಉತ್ತರಾಧಿಕಾರಿಯಾಗಬಹುದು.

ಇಂತಹ ಯಾಂತ್ರಿಕ ಉತ್ತರಾಧಿಕಾರಿಯ ಆವಿರ್ಭಾವಕ್ಕೆ ವಿಜ್ಞಾನಿಗಳು ಕೊಡುವ ಕಾರಣಗಳು ಸಾಮಾನ್ಯವಾದುವಲ್ಲ. ಮನುಷ್ಯನು ಜ್ಞಾನದ, ನಾಗರಿಕತೆಯ ಇಂದಿನ ಮಟ್ಟಕ್ಕೆ ಬರಲು ಲಕ್ಷಾಂತರ ವರ್ಷಗಳೇ ಬೇಕಾದವು. ಆತನ ನಾಗರಿಕತೆಯಂತೂ ಕೇವಲ ಕೆಲವು ಸಾವಿರ ವರ್ಷಗಳಷ್ಟು ಹಳೆಯದು. ಪ್ರಾಣಿ ಸಂಕುಲಗಳು ಇಂದು ನಿರ್ವಂಶವಾಗಿವೆ. ಮನುಷ್ಯನು ಎಂತಹ ಪರಿಸರಕ್ಕಾದರೂ ಹೊಂದಿಕೊಂಡು ಬದುಕುವುದೇ ಆತನು ಇನ್ನೂ ಅಸ್ತಿತ್ವದಲ್ಲಿರಲು ಮತ್ತು ವಿಕಾಸ ಹೊಂದಲು ಒಂದು ಮುಖ್ಯ ಕಾರಣವಾಗಿದೆ. ಆದರೆ ಇಷ್ಟು ಮಾತ್ರಕ್ಕೆ ಆತ ಚಿರಕಾಲ ಉಳಿಯಲು ಸಾಧ್ಯವಾಗದು. ಆತನ ಪ್ರಚಂಡ ವೈಜ್ಞಾನಿಕ ಪ್ರಗತಿಗೆ ಕೂಡ ಆತನಿಗೆ ಚಿರಂಜೀವಿತ್ವವನ್ನು ಕೊಡಲಾಗುವುದಿಲ್ಲ.

ಏಕೆಂದರೆ ಅನೇಕ ಜೀವವಿಜ್ಞಾನಿಗಳು ಭಾವಿಸಿರುವಂತೆ ವ್ಯಕ್ತಿಗೆ ನಿರ್ದಿಷ್ಟ ಆಯುರ್ಮಾನವಿರುವಂತೆ ಒಂದು ಜನಾಂಗಕ್ಕೆ, ಒಂದು ಪ್ರಾಣಿ ಸಂಕುಲಕ್ಕೆ ಸಾಮೂಹಿಕವಾಗಿ ಅನ್ವಯವಾಗುವಂಥ ಆಯುರ್ಮಾನವಿರಬಹುದು. ವ್ಯಕ್ತಿಯ ಆಯುರ್ಮಾನ ನೂರಾರು ವರ್ಷಗಳು ಎಂದಿಟ್ಟುಕೊಂಡರೆ ಒಂದು ಇಡೀ ಪ್ರಾಣಿ ವರ್ಗದ ಆಯುರ್ಮಾನ ಕೆಲವು ಲಕ್ಷ ವರ್ಷಗಳು ಎಂದು ಇಟ್ಟುಕೊಳ್ಳಬಹುದು. ಹೀಗೆ ಒಂದು ಜಾತಿಯ ಪ್ರಾಣಿ ಸಮೂಹದ ಆಯುಸ್ಸನ್ನು ನಿಗದಿಪಡಿಸುವ ನಿರ್ದೇಶನವು ಅವುಗಳ ಜೀನುಗಳಲ್ಲಿ ಇರಬಹುದೆಂದು ಕೆಲವರು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರಾದರೂ, ಇದಕ್ಕೆ ತಕ್ಕ ಪುರಾವೆ ಇನ್ನೂ ದೊರೆಯಬೇಕಾಗಿದೆ. ಇದು ನಿಜವಾದಲ್ಲಿ, ಪ್ರತಿಕೃತಿಯ ನಿರ್ಮಾಣದ ಮೂಲಕವೂ ಮನುಷ್ಯ ಸಂಕುಲ ಚಿರಕಾಲ ಬಾಳುವ ಅವಕಾಶ ಇರುವುದಿಲ್ಲ. ಪ್ರತಿಕೃತಿಯೂ ಜೀನುಗಳ ನಿರ್ದೇಶನಂತೆ ನಿರ್ಮಾಣಗೊಳ್ಳುತ್ತದಷ್ಟೇ; ಮನುಷ್ಯ ಜೀನುಗಳಲ್ಲಿರುವ ನಿರ್ದೇಶನಗಳನ್ನೇ ತಿದ್ದುವ ಶಕ್ತಿಯನ್ನು ಪಡೆಯಲು ಯತ್ನಿಸುತ್ತಿದ್ದಾನೆ; ಕೃತಕ ಜೀನುಗಳ ಸೃಷ್ಟಿ ಸಾಧ್ಯವಾಗಿರುವಾಗ ಜೀನುಗಳ ತಿದ್ದುಪಡಿ ಕೂಡ ಇನ್ನು ಮುಂದೆ ಸಾಧ್ಯವಾಗಬಹುದು. ಆದರೆ ಜೀನುಗಳಲ್ಲಿ ಅಮರತ್ವವನ್ನು—ತನ್ನ ಇಂದಿನ ಸ್ವರೂಪದ ಅಮರತ್ವದ ನಿರ್ದೇಶನಗಳನ್ನು—ತುಂಬಲು ಮನುಷ್ಯನಿಗೆ ಸಾಧ್ಯವಾಗದು.

ಆದರೆ ಮನುಷ್ಯನ ಅಮರತ್ವ ಆತನ ಈಗಿನ ಸ್ವರೂಪದ ಮೂಲಕವೇ ಸಾಧ್ಯವಾಗಬೇಕಾಗಿಲ್ಲ ಎಂಬುದು ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಮನುಷ್ಯರ ಮುಖ್ಯ ವೈಶಿಷ್ಟ್ಯ ಚಿಂತನಶೀಲತೆ, ಭಾವನೆ (ಭಾವನೆಗಳು ಪ್ರಾಣಿಗಳಿಗೂ ಇರುತ್ತವೆ), ತನ್ನತನದ ಅರಿವು ಮತ್ತು ತನ್ನ ಅಸ್ತಿತ್ವದ ಅರಿವು ಎನ್ನಬಹುದು. ಆತ ತನ್ನ ಪ್ರಚಂಡ ಬುದ್ಧಿಯ ಬಲದಿಂದಲೇ ಇಂದಿನ ಪ್ರಗತಿಯನ್ನು ಸಾಧಿಸಿದ್ದಾನೆ. ಇಂತಹ ಪ್ರತಿಭಾಶಾಲಿಗೆ ತಕ್ಕ ಉತ್ತರಾಧಿಕಾರಿಯಾಗಲು ಗಣಕಯಂತ್ರ ಎಲ್ಲ ಅರ್ಹತೆಗಳನ್ನೂ ಪಡೆದಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಮೊದಲು ಮೊದಲ – ಅಂದರೆ ಮೂರು ದಶಕಗಳ ಹಿಂದಿನ – ಗಣಕಯಂತ್ರಗಳಿಗೆ ಮನುಷ್ಯ ಅವುಗಳಲ್ಲಿ ತುಂಬಿದ ಮಾಹಿತಿಯ ಹೊರತು ಇನ್ನಾವ ವಿಶೇಷವೂ ಇರಲಿಲ್ಲ. ಆದರೆ ಈ ಮಾಹಿತಿಯನ್ನು ಬಳಸಿಕೊಂಡು, ಕೊಟ್ಟ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಲ್ಲಿ ಇವು ಬಲು ಚುರುಕಾಗಿದ್ದುವು. ಇಂದಿನ ಅತ್ಯಾಧುನಿಕ ಗಣಕಯಂತ್ರಗಳು ಅನುಭವದಿಂದ ಕಲಿಯುತ್ತವೆ; ಸಂಗೀತ, ಕಾವ್ಯಗಳನ್ನು ಬರೆಯುತ್ತವೆ; ಚದುರಂಗದಾಟವಾಡುತ್ತವೆ; ಸಂಭಾಷಣೆಯನ್ನು ಕೂಡ ನಡೆಸುತ್ತವೆ. ವಾಗ್ವಾದಗಳನ್ನು ತಲ್ಲೀನವಾಗಿ ಕೇಳುತ್ತವೆ ಮತ್ತು ನಡೆಸುತ್ತವೆ; ಒಂದು ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುವ ನಿರಾಶೆ, ಕೋಪದಿಂದ ಭುಸುಗುಡುತ್ತವೆ. ಅಂದರೆ ಮನುಷ್ಯನ ಸಕಲ ಚರ್ಯೆಗಳನ್ನು ಒಂದು ಆಧುನಿಕ ಗಣಕ ಯಂತ್ರವು ಅನುಕರಿಸಬಲ್ಲುದಾಗಿದೆ.

ಇಂತಹ ಗಣಕಯಂತ್ರಗಳು ಹೆಚ್ಚು ಹೆಚ್ಚು ಸುಧಾರಿಸಿದಂತೆ ಅವು ಮನುಷ್ಯನ 'ಪ್ರತಿಕೃತಿ'ಗಳೇ ಆಗಬಹುದು. ಈ ಪ್ರತಿಕೃತಿ ಮನುಷ್ಯನಿಗೆ ಅನುವಂಶಿಕವಾಗಿ ಉತ್ತರಾಧಿಕಾರಿಯಲ್ಲವಾಗಿರಬಹುದು. ಅಂದರೆ ಇವು ಮನುಷ್ಯನ ರಕ್ತ, ಮಾಂಸ, ಮೂಳೆಗಳ ಸ್ವರೂಪವನ್ನು ಹೊಂದದೆ ಇರಬಹುದು. ಆದರೆ ಚಿಂತನೆ, ಬುದ್ಧಿವಂತಿಕೆ ಇತ್ಯಾದಿಗಳ ದೃಷ್ಟಿಯಲ್ಲಿ ಇವುಗಳು ಮನುಷ್ಯನನ್ನು ಅನುಕರಿಸುತ್ತವೆ. ನಾಳಿನ ಗಣಕಯಂತ್ರಗಳು ಸ್ವತಂತ್ರವಾಗಿ (ಅವುಗಳ 'ಮೆದುಳಲ್ಲಿ,' ನಿರ್ದೇಶನಗಳನ್ನು ತುಂಬಿದಲ್ಲಿ) ತಮ್ಮ ಯಥಾವತ್ ಪ್ರತಿಕೃತಿಗಳನ್ನು ತಯಾರಿಸಲೂ ಬಲ್ಲವು. ಇಷ್ಟೇ ಅಲ್ಲ, ಅವು ಇನ್ನೂ ಮುಂದೆ ಹೋಗಿ, ತಮ್ಮನ್ನು ಸೃಷ್ಟಿಸಿದ ಮನುಷ್ಯನನ್ನೇ ಬುದ್ಧಿವಂತಿಕೆಯಲ್ಲಿ ಮೀರಿಸಿ, 'ಮಹಾಕೃತಿ'ಗಳಾಗಬಲ್ಲವು. ಈಗಾಗಲೇ ಮನುಷ್ಯನ ಮತ್ತು ಆತನ ಯಾಂತ್ರಿಕ ಪ್ರತಿಕೃತಿಗಳ ನಡುವಣ ಅಂತರ ಕಂಡೂ ಕಾಣದಷ್ಟು ಸೂಕ್ಷ್ಮವಾಗಿಬಿಟ್ಟಿದೆ. ಅನೇಕ ವಿಜ್ಞಾನಿಗಳು, ಗಣಕಯಂತ್ರ ನೂತನ ಜೀವತಳಿಯೆಂದೇ ಪರಿಗಣಿಸುತ್ತಾರೆ. ಅವುಗಳಿಗೆ ಮನುಷ್ಯನಂತೆ ಬುದ್ಧಿಮತ್ತೆ, ಚಿಂತನಶಕ್ತಿ ಇರುವುದಾದರೂ ಮನುಷ್ಯರ ರಾಗದ್ವೇಷಗಳು ಇಲ್ಲವಾದ ಕಾರಣ, ಅವುಗಳನ್ನು 'ಜೀವಂತ' ಎಂದು ಹೇಳಲು ಬಾರದು,

ಎಂದು ಕೆಲವರು ಹೇಳಬಹುದು. ಆದರೆ ಗಣಕ ಯಂತ್ರದ ಮೆದುಳಲ್ಲಿ ರಾಗ ದ್ವೇಷಗಳನ್ನೂ ಸಂಯೋಜಿಸಬಹುದು.

ಏಕೆಂದರೆ ಮನುಷ್ಯನ ಮೆದುಳು ಪ್ರಕೃತಿ ನಿರ್ಮಿತವಾದ ಗಣಕಯಂತ್ರವೇ ಆಗಿದೆ. ಈ ಗಣಕಯಂತ್ರ ಸ್ವತಃಚ್ಛಲಿಯೂ ಹೌದು. ಅಂದರೆ ಅದು ತನ್ನಷ್ಟಕ್ಕೆ ತಾನೇ ಚಿಂತಿಸಬಲ್ಲದು. ಪರಿಸರದ ಬಗ್ಗೆ ಮತ್ತು ಅಲ್ಲಿ ತನ್ನ ಸ್ಥಿತಿಯ ಬಗ್ಗೆ ಅರಿವನ್ನು ಪೊಂದಿರಬಲ್ಲದು. ಈ ಪ್ರಾಕೃತಿಕ ಗಣಕ ಯಂತ್ರದ ಕೋಪ, ಭಯ, ದ್ವೇಷ ಪ್ರೇಮ, ವಾತ್ಸಲ್ಯ ಇತ್ಯಾದಿಗಳು ಕೂಡ ನಿಸರ್ಗವು ಇವುಗಳಲ್ಲಿ ಕೇವಲ ತಮ್ಮ ಅಸ್ತಿತ್ವವನ್ನು ಕಾಪಾಡಿ ಕೊಳ್ಳುವ ಸಲುವಾಗಿ ಸಂಯೋಜಿಸಿದ ವರ್ತನೆ ಗಳು ಎಂದು ಹೇಳಬಹುದು. ತನಗಿಂತ ಶಕ್ತಿ ಶಾಲಿಯಾದ ಪ್ರಾಣಿ ಆಕ್ರಮಣ ಮಾಡಿದಾಗ, ಭಯದಿಂದ ಓಡಿಹೋಗುವ ಪ್ರವೃತ್ತಿ ಕೂಡ ರಕ್ಷ ಣೋಪಾಯವೇ. ಭಯವೂ ಒಂದು ಭಾವನೆಯೇ ತಾನೇ? ಇನ್ನು ಪ್ರೀತಿಯು ತನ್ನ ಜಾತಿಯ ರಕ್ಷಣೆಗೆ ಮತ್ತು ಆ ಮೂಲಕ ತನ್ನ ರಕ್ಷಣೆಗೆ ಅಗತ್ಯವಾದುದು; ವಾತ್ಸಲ್ಯ ಶಿಶುಗಳ ಜೀವನೆಗೆ ಅತ್ಯವಶ್ಯಕ. ಹೀಗೆ ಮನುಷ್ಯನ ಭಾವನೆ ಗಳಲ್ಲಿ ಮೂಲತಃ ಅವನು ತನ್ನ ಮತ್ತು ತನ್ನ ಸಮುದಾಯದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬೆಳಸಿಕೊಂಡ ವರ್ತನೆಗಳು ಅಥವಾ ಪ್ರತಿಕ್ರಿಯೆ ಗಳು ಎನ್ನಬಹುದು. ಪ್ರಕೃತಿ ಈ ಭಾವನೆಗಳನ್ನು ಅವನಲ್ಲಿ ಪ್ರಚೋದಿಸಿತು. ಇಂತಹ ಭಾವಾಭಿ- ವ್ಯಕ್ತಿಯನ್ನು ಇಂದು ಮನುಷ್ಯ ಗಣಕಯಂತ್ರ ದಲ್ಲಿ ಸಂಯೋಜಿಸಬಲ್ಲ. ಕೆಲವು ಗಣಕಯಂತ್ರ ಗಳು ಸೂಚಿತವಾದ ಕೆಲಸ ಕಷ್ಟವಾದಾಗ ಅಸ್ಪಷ್ಟ ನಿರ್ದೇಶನಗಳನ್ನು ನೀಡಿದಾಗ, ಮನುಷ್ಯರಂತೆ ಕಂಗೆಟ್ಟು, ಗೊಂದಲಕ್ಕೆ ಬೀಳುವುದುಂಟು.

ಇಂದು ಅತ್ಯಾಧುನಿಕ ಗಣಕಯಂತ್ರಗಳ ಮುಂದೆ ಅದನ್ನು ನಿರ್ಮಿಸಲು ಕಾರಣವಾದ ಮನುಷ್ಯನ ಮೆದುಳೇ ಪ್ರಾಚೀನವೂ ಹಿಂದು ಳಿದುದೂ ಆದ ಪ್ರಾಣಿಯಾಗುತ್ತದೆ. ಮನುಷ್ಯರ ಮೆದುಳು ಪ್ರಚಂಡ ಬುದ್ಧಿಶಾಲಿ. ನಿಜ. ಆದರೆ ಈ ಬುದ್ಧಿಯನ್ನು ಅದು ಗಳಿಸಲು ಸಾವಿ ರಾರು ವರ್ಷಗಳೇ ಬೇಕಾಯಿತು. ಮನುಷ್ಯನ ಮೆದುಳಿನ ಸಂಪರ್ಕ ವ್ಯವಸ್ಥೆಯು ಗಣಕಯಂತ್ರದ ಸಂಪರ್ಕ ವ್ಯವಸ್ಥೆಯ ಮುಂದೆ ದೋಷಪೂರ್ಣ ವಾಗಿ ಕಾಣುತ್ತದೆ. ಈ ಕಾರಣದಿಂದಲೇ ಮನುಷ್ಯನ ಮೆದುಳು ಒಮ್ಮೆಲೆ ಒಂದು ವಿಷಯದ ಬಗ್ಗೆ ಮಾತ್ರ ಲಕ್ಷ್ಯ ಕೊಡಲು ಸಾಧ್ಯ. ಹೆಚ್ಚು ವಿಷಯಗಳನ್ನು ಅದರ ಮುಂದೆ ಒಮ್ಮೆಲೆ ಇಟ್ಟಲ್ಲಿ, ಅದು ಕಕ್ಕಾಬಿಕ್ಕಿಯಾಗಿ, ನಿಷ್ಕ್ರಿಯವಾಗಿ ಬಿಡು ತ್ತದೆ. ಇದಕ್ಕೆ ಪ್ರತಿಯಾಗಿ ಗಣಕಯಂತ್ರದ ಗ್ರಹಣಶಕ್ತಿ, ಬುದ್ಧಿಮತ್ತೆಗಳು ಅದ್ಭುತ ವೇಗ ದಲ್ಲಿ ಹೆಚ್ಚುತ್ತಿವೆ. ಕಳೆದ ಮೂರೂವರೆ ದಶಕ ಗಳಲ್ಲಿ ಗಣಕಯಂತ್ರದ ಸಾಮರ್ಥ್ಯವು ಪ್ರತಿ ಎಂಟು ವರ್ಷಗಳಿಗೆ ಹತ್ತು ಪಟ್ಟಿನಂತೆ ವೃದ್ಧಿ ಸಿದೆ. ಇದೇ ಕಾಲಾವಧಿಯಲ್ಲಿ ಮನುಷ್ಯನ ಮೆದು ಳಿನ ಮೂಲಭೂತ ಬುದ್ಧಿಶಕ್ತಿಯಲ್ಲಿ ಆಗಿರ ಬಹುದಾದ ಹೆಚ್ಚಳ ಗಣನೀಯವಲ್ಲ. ಅಂದರೆ ಕಳೆದ ಅನೇಕ ಸಾವಿರ ವರ್ಷಗಳಿಂದ ಮನುಷ್ಯನ ಮೆದುಳಿನ ಪರಮಾವಧಿ ಬುದ್ಧಿಶಕ್ತಿಯಲ್ಲಿ ಯಾವ ಏರಿಕೆಯೂ ಆಗಿಲ್ಲ. ಈಗಿನ ಪ್ರಗತಿಗೆ ಕಾರಣವೆಂದರೆ ಇರುವ ಬುದ್ಧಿಶಕ್ತಿಯನ್ನೇ ಮನುಷ್ಯ ನಿರ್ದಿಷ್ಟ ಸಮಸ್ಯೆಗಳನ್ನು ಬಿಡಿಸಲು ಬಳಸಿಕೊಂಡದ್ದೇ ಆಗಿದೆ. ಆದರೆ ಮನುಷ್ಯನ ಮೂಲಭೂತ ಬುದ್ಧಿಶಕ್ತಿ ಹೆಚ್ಚಿಲ್ಲ.

ಆದರೆ ಗಣಕಯಂತ್ರಗಳು ಐದು ಪೀಳಿಗೆ ಗಳನ್ನು ದಾಟುವಷ್ಟರಲ್ಲಿ ಅವುಗಳ ಮೂಲಭೂತ ಬುದ್ಧಿಮತ್ತೆಯಲ್ಲಿ ಶೇಕಡಾ ೧,೦೦೦ ಪಟ್ಟು ಅಧಿಕ ಕಂಡು ಬಂದಿತು. ಅಂದರೆ ಮೊದಲ ಪೀಳಿಗೆಯ ಗಣಕಯಂತ್ರಕ್ಕೆ ಹೋಲಿಸಿದಾಗ ಇತ್ತೀಚಿನ ಗಣಕಯಂತ್ರದ ಬುದ್ಧಿಶಕ್ತಿ ನಲವತ್ತು ಪಟ್ಟು ಹೆಚ್ಚಿದೆ. ಇಂತಹ ಬೆಳವಣಿಗೆಯನ್ನು ಸಾಧಿಸಲು ಮನುಷ್ಯನ ಮೆದುಳಿಗೆ ಲಕ್ಷಾಂತರ ವರ್ಷಗಳೇ ಬೇಕು. ಆದ್ದರಿಂದ ಮನುಷ್ಯನ ಬುದ್ಧಿಶಕ್ತಿಯ ಫಲವಾಗಿಯೇ ನಿರ್ಮಾಣಗೊಂಡಿರುವ ಗಣಕ ಯಂತ್ರಗಳು ಅವನನ್ನು ಬುದ್ಧಿಮತ್ತೆಯಲ್ಲಿ ಮೀರಿಸುವ ದಿನಗಳು ದೂರವಿಲ್ಲ. ಇನ್ನು ಒಂದು ದಶಕದಲ್ಲಿ ಬರಲಿರುವ ಆರನೇ ಪೀಳಿಗೆಯ ಗಣಕ ಯಂತ್ರಗಳು ತಮ್ಮ ಪ್ರತಿಭೆ, ಬುದ್ಧಿಶಕ್ತಿಯಲ್ಲಿ ಅತ್ಯಂತ ಬುದ್ಧಿಶಾಲಿಯಾದ ಮನುಷ್ಯನ ಮೆದುಳಿಗೆ ಸರಿಸಮನಾಗಿರುತ್ತವೆ ಮತ್ತು ಈ ಬುದ್ಧಿಶಕ್ತಿ


ಯನ್ನು ಬಳಸಿಕೊಳ್ಳುವಲ್ಲಿ ಅವು ಅತ್ಯಂತ ಶ್ರೇಷ್ಠ ಮಟ್ಟದ ಮೆದುಳಿಗಿಂತ ಸಾವಿರಾರು ಪಟ್ಟು ಹೆಚ್ಚು ಚುರುಕಾಗಿರುತ್ತವೆ.

ಈ ಬಳಿಕ ಗಣಕಯಂತ್ರಗಳು ಮನುಷ್ಯನನ್ನು ಮೀರುತ್ತವೆ. ಆಗ ಅವುಗಳನ್ನು ಹೇಗೆ 'ನಿರ್ಜೀವ ಯಂತ್ರ'ಗಳೆಂದು ಕರೆಯಲಾದೀತು? ಅವು ಮನು- ಷ್ಯನ ಎಲ್ಲ ಗುಣಧರ್ಮಗಳನ್ನು ಭಾವನೆಗಳನ್ನು ಹೊಂದಿ, ಅವನಿಗೆ ಮೀರಿದ ಬುದ್ಧಿಶಕ್ತಿಯನ್ನು ಪಡೆದಿರುತ್ತವಾಗಿ, ಅವುಗಳನ್ನು ನಾವು ಒಂದು ಜೀವವಿಶೇಷವೆಂದೇ ಪರಿಗಣಿಸಬೇಕಾಗುತ್ತದೆ. ಮನುಷ್ಯ ಅವುಗಳ ವಿದ್ಯುಚ್ಛಕ್ತಿ ಮತ್ತು ಬಿಡಿ ಭಾಗಗಳ ಸರಬರಾಜನ್ನು ನೋಡಿಕೊಳ್ಳುತ್ತಾನೆ. ಇದಕ್ಕೆ ಬದಲಾಗಿ ಅವು ಮನುಷ್ಯನ ಅಸಂಖ್ಯ ಸಮಸ್ಯೆಗಳನ್ನು ನಿವಾರಿಸುತ್ತವೆ. ಇಷ್ಟೇ ಅಲ್ಲದೆ, ಅವು ಸಮಸ್ಯೆಗಳನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ಇಂತಹ ಗಣಕಯಂತ್ರಗಳು, ಕ್ರಮೇಣ ತಮ್ಮತನದ ಅರಿವನ್ನು ಪಡೆದುಕೊಳ್ಳ ಲಾರವೇಕೆ? ಆಗ ಮನುಷ್ಯ ಮತ್ತು ಗಣಕ ಯಂತ್ರಗಳ ಸಹಯೋಗದ ಹೊಸ ನಾಗರಿಕ ಕತೆಯೇ ಹುಟ್ಟಿಕೊಳ್ಳಬಹುದು.

ಅಂದರೆ ಇನ್ನು ಮುಂದೆ ಮನುಷ್ಯ ಮತ್ತು ಗಣಕ ಯಂತ್ರಗಳ ಸಂಬಂಧ ಯಜಮಾನ-ಗುಲಾ ಮನ ಸಂಬಂಧವಾಗಿ ಉಳಿಯುವದಿಲ್ಲ. ಗಣಕ ಯಂತ್ರಗಳ ಬುದ್ಧಿಶಕ್ತಿಯ ಬೆಳವಣಿಗೆಗೆ ಇಂದು ಯಾವ ಮಿತಿಯೂ ಕಾಣುತ್ತಿಲ್ಲ. ಆದರೆ ಮನುಷ್ಯನ ವಿಕಾಸವು ಮುಗಿದ ಅಧ್ಯಾಯವಾ ಗಿದೆ; ಅವನ ಮೂಲ ಭೂತ ಬುದ್ಧಿಶಕ್ತಿಯಲ್ಲಿ ಏರಿಕೆ ಇನ್ನಿಲ್ಲ. ಆತನ ಮೆದುಳಿನಲ್ಲಿ ಕಳೆದ ಒಂದು ಲಕ್ಷ ವರ್ಷಗಳಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಹೀಗೆ ಮನುಷ್ಯನ ಮೆದುಳಿಗೆ ಪ್ರಕೃತಿ ವಿಧಿಸಿರುವ ಮಿತಿಯು ಗಣಕಯಂತ್ರಗಳಿಗೆ ಇಲ್ಲ ವಾಗಿದೆ. ಗಣಕಯಂತ್ರಗಳ ಬೌದ್ಧಿಕ ಕ್ರಾಂತಿಯು ಪರಿಣಾಮವೇನು? ಪ್ರಾಥಮಿಕ ಮನುಷ್ಯ ಕಲ್ಲು, ಗಿಡ, ಬೆಟ್ಟ, ಮಿಂಚು, ಗುಡುಗುಗಳನ್ನು ದೇವ- ರೆಂದು ಪೂಜಿಸುತ್ತಿದ್ದ. ಅನಂತರ ದೇವರಿಗೆ ತನ್ನ ರೂಪವನ್ನೇ ನೀಡಿದ- ಅಂದರೆ ಮನುಷ್ಯನ ದೃಷ್ಟಿ ಮಾನವಿಕವಾದುದು ತನ್ನ ರೂಪ್ರಕ್ಕದ್ದು. ದೇವರೂ ಆಗಿರಬಹುದೆಂದು ನಂಬುವ ಮನುಷ್ಯನ ಮೆದುಳು ತನ್ನ ಉತ್ತರಾಧಿಕಾರಿಯೂ ಮನುಷ್ಯಾಕಾರವನ್ನೇ ತಳೆದಿರಬೇಕು ಎಂದು ನಿರೀಕ್ಷಿಸುವುದರಲ್ಲಿ ಆಶ್ಚರ್ಯ ವೇನು?

ಆದರೆ ಗಣಕಯಂತ್ರಗಳ ಪ್ರಗತಿಯ ಕಾರಣ ಮನುಷ್ಯ ತನ್ನ ಭವಿಷ್ಯದ ತದ್ರೂಪಿನ ಮುಂದಿನ ಪೀಳಿಗೆಗಳಿಗೆ ಒಪ್ಪಿಸಲ್ಪಡುತ್ತದೆ ಎಂದು ಭಾವಿಸು ವುದನ್ನು ತೊರೆಯಬೇಕಾಗಿದೆ. ಗಣಕ ಯಂತ್ರಗಳ ಆವಿರ್ಭಾವವು ಮನುಷ್ಯನನ್ನು ಆತನ 'ಇಮೇಜಿ' ನಿಂದ ವಿಮುಕ್ತಗೊಳಿಸುತ್ತದೆ ಎನ್ನಬಹುದು. ಏಕೆಂದರೆ, ಮನುಷ್ಯನ ಉತ್ತರಾಧಿಕಾರಿ ಮನು- ಷ್ಯನ ರೂಪವನ್ನೇ ಹೊಂದಿರಬೇಕಾಗಿಲ್ಲ ಎಂಬು ದನ್ನು ಗಣಕಯಂತ್ರಗಳು ಸೂಚ್ಯವಾಗಿ ಹೇಳುತ್ತವೆ. ಗಣಕ ಯಂತ್ರದಲ್ಲಿ ಮನುಷ್ಯನ ಮೆದುಳಲ್ಲಿ ನಡೆ ಯುವ ರಾಸಾಯನಿಕ ಕ್ರಿಯೆಗಳು ನಡೆಯಬೇಕಾ ಗಿಲ್ಲ. ಅಂದರೆ ಮನುಷ್ಯದ ಉತ್ತರಾಧಿಕಾರಿ ಆತನ ಯಥಾವತ್ ಪ್ರತಿಕೃತಿಯಾಗಬೇಕಾಗಿಲ್ಲ. ಬದಲಾಗಿ ಆತನ ಮಾನವ ಪುತ್ರನಾದ ಗಣಕಯಂತ್ರ ಮನು ಷ್ಯನ ಬೌದ್ಧಿಕ, ಆಧ್ಯಾತ್ಮಿಕ ಉತ್ತರಾಧಿಕಾರಿಯಾಗ ಬಹುದು. ಇದರಿಂದ ನಾವು ವ್ಯಥೆಪಡಬೇಕಾದದ್ದು ಏನೂ ಇಲ್ಲ. ಮನುಷ್ಯನಂತೆ ಚಿಂತಿಸುವುದನ್ನು ಕಲಿತ ಗಣಕಯಂತ್ರಗಳು ಎಷ್ಟೇ ಮುಂದುವರೆದರೂ ಅವುಗಳ ಹಿನ್ನೆಲೆಯಲ್ಲಿ ಮನುಷ್ಯ ಸ್ಫೂರ್ತಿಯೇ ಸದಾಕಾಲ ಕೆಲಸ ಮಾಡುತ್ತಿರುತ್ತದೆ. ದೈಹಿಕವಾಗಿ ಚಿರಂಜೀವಿಯಾಗಲು ಮನುಷ್ಯನಿಗೆ ಪ್ರಕೃತಿಯೇ ಅವಕಾಶ ನೀಡದಿರಬಹುದು. ಆದರೆ ಮನುಷ್ಯರ ಮೆದುಳಿಗೆ ಪ್ರಕೃತಿ ವಿಧಿಸಿರುವ ಕಟ್ಟುಪಾಡು ಗಳು, ಮಿತಿಗಳು ಗಣಕಯಂತ್ರಕ್ಕಿಲ್ಲ. ಅದು ಮನುಷ್ಯನ ಮುಕ್ತ ಚೇತನದ ಪ್ರತೀಕ ವಾಗಬಹುದು; ಹಂಬಲದ ಸಾಕ್ಷಾತ್ಕಾರವಾ ಗಬಹುದು. ✿

೧೮೭೦ ರಿಂದ ೧೮೯೧ ರ ವರೆಗೆ ಅಫಘಾನಿಸ್ತಾನದ ಪೋಸ್ಟ್ ಮಾಸ್ಟರುಗಳು ಅಂಚೆ ಚೀಟಿಗಳನ್ನು 'ಕ್ಯಾನ್ಸಲ್' ಮಾಡುತ್ತಿದುದು ಹೇಗೆಂಬುದು ಗೊತ್ತೆ? ಅಂಚೆ ಚೀಟಿಯ ಒಂದು ಭಾಗವನ್ನು ಹಲ್ಲಿನಿಂದ ಕಡಿದು ತೆಗೆಯುತ್ತಿದ್ದರಂತೆ. ಸಂಗ್ರಹ: ಎಸ್. ವಿಶ್ವನಾಥ


ಝಗಮಗಿಸುವ
ಬಿಳುಪು
ಡೆಟ್‌ನ
ಬಿಳುಪು
ಹೊಸ ಫಾರ್ಮ್ಯುಲಾ
ಡೆಟ್
ಡಿಟರ್ಜೆಂಟ್ ಒಗೆಯುವ
ಪೌಡರ್
det
det
ಸಾಟಿಯಿಲ್ಲದ ಒಗೆಯುವ ಶಕ್ತಿ, ವಿಪುಲವಾದ ನೊರೆ.

ನಿಮ್ಮ ಶಬ್ದ ಸಂಪತ್ತನ್ನು ಹೆಚ್ಚಿಸಿರಿ!

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧ **ಲಾಳಿ ಹಾಕು**
(ಅ) ನೂಲು ತೆಗೆ (ಆ) ಕಂಬಣ್ಣ ಬರೆ (ಇ) ಹಾಡುತ್ತ ತೊಟ್ಟಿಲು ತೂಗು (ಈ) ಎಡತಾಕು

೨ **ಕೊಸರು**
(ಅ) ರಾಡಿ (ಆ) ಚಿಗುರಿಡು (ಇ) ಲೆಕ್ಕಕ್ಕಿಂತ ಹೆಚ್ಚಿನದು (ಈ) ಕೈ ತಿಕ್ಕುವಿಕೆ

೩. **ದಾಷ್ಟೀಕ**
(ಅ) ದಿಟ್ಟತನ (ಆ) ಬಡಿಗೆ (ಇ) ಮೈ ತುಂಬಿರುವುದು (ಈ) ಔದಾರ್ಯ

೪. **ಚರಪು**
(ಅ) ಸಪ್ಪಳ (ಆ) ಅತಿಥಿ ಸತ್ಕಾರ (ಇ) ಪಾತು (ಈ) ಸೊಪ್ಪು

೫. **ಮೆಟ್ಟಿಕೊಳ್ಳು**
(ಅ) ಭೂತ ತಗಲು (ಆ) ಹೆದರಿಸಿ ಕಸಿದುಕೋ (ಇ) ಹಣ್ಣು ಹಚ್ಚಿಕೋ (ಈ) ಬಡಿಗೆ ಒಡಿ

೬ **ಹರದ**
(ಅ) ಛಿದ್ರ (ಆ) ಚೆದರಿದ ಪದಾರ್ಥ (ಇ) ಮನಃಪೂರ್ವಕ (ಈ) ಆನಂದ

೭. **ಬಗ್ಗಡ**
(ಅ) ಕೋಗಿಲೆಯ ಹಾಡು (ಆ) ಬೊಗರಿ (ಇ) ಬಿಲ್ಲು (ಈ) ಕೊಳಚೆ

೮. **ತರುಣ**
(ಅ) ದೋಣಿ ದಾಟು (ಆ) ಸೂರ್ಯ (ಇ) ಹೊಸದರಲ್ಲಿ (ಈ) ಉಣ್ಣೆ

೯. **ತರ್ಪಣ**
(ಅ) ತೃಪ್ತಿಪಡಿಸುವಿಕೆ (ಆ) ಕನ್ನಡಿ (ಇ) ತಡೆ (ಈ) ದಬಾಯಿಸುವಿಕೆ

೧೦. **ಪೇಲವ**
(ಅ) ಕೋಕ (ಆ) ಹಿಂದುಳಿದ (ಇ) ಬಣ್ಣಗೆಟ್ಟ (ಈ) ವಿನೋದ

೧೧. **ಪಿಷ್ಟಪೇಷಣ**
(ಅ) ಒಕ್ಕೆ (ಆ) ಹೇಳಿದ್ದೇ ಹೇಳುವುದು (ಇ) ಕುದುರೆಯ ಕೆನೆತ (ಈ) ಹಿಂದಿನಿಂದ ಬಯ್ಯುವುದು

೧೨. **ಮೂಗು ಮುರಿ**
(ಅ) ಸೀನು (ಆ) ಎಡವು (ಇ) ಇತರರ ಕೆಲಸದಲ್ಲಿ ಕೈ ಹಾಕುವುದು (ಈ) ತಿರಸ್ಕರಿಸು.

'ಶಬ್ದ ಭಾಂಡಾರ'ದ ಸರಿಯಾದ ಅರ್ಥಗಳು

೧. **ಲಾಳಿಹಾಕು** (ಈ) (ನೇಯ್ಗೆ ಮಗ್ಗದ ಒಂದು ತುದಿಯಿಂದ ಇನ್ನೊಂದಕ್ಕೆ ನಿರಂತರ ಹರಿದಾಡುವ ಲಾಳಿಯು ಹಾಗೆ) ಯಾವುದಾದರೂ ಕೆಲಸಕ್ಕೆ ಎಡತಾಕು ಉದಾ:- ಪರ್ಮಿಟ್ಟಿಗಾಗಿ ಲಾಳಿಹಾಕಿದೆ. [ದೇಶ್ಯ- ಲಾಳಿ. ನಾಳಿ + ಹಾಕು]

೨. **ಕೊಸರು** (ಇ) ಲೆಕ್ಕಕ್ಕಿಂತ ಹೆಚ್ಚಿನದು, ಆಧಿಕ್ಯ ಉದಾ:— ಮೊಸರು ಕೊಳ್ಳುವಾಗ ಕೊಸರು ಹಾಕಿಸಿಕೊಂಡ. [ದೇಶ್ಯ]

೩. **ದಾರ್ಷ್ಟೀಕ** (ಅ) ದಿಟ್ಟತನ, ಎದೆಗಾರಿಕೆ; ಆ ಗುಣವುಳ್ಳವನು ಉದಾ:— ದಾರ್ಷ್ಟೀಕದಿಂದ ಕೆಲಸ ಸಾಧಿಸಿದ, [ಸಂ. ಧಾರ್ಷ್ಟಿಕ, ಧೃಷ್ಟ = ದಿಟ್ಟ]

೪. **ಚರಪು** (ಆ) ಆತಿಥ್ಯ, ಸಮಾರಾಧನೆ, ಗೌರವಾದರ, ಊಟ ಉಪಚಾರ. ಉದಾ:- ಹಳೆಯ ಕಾಲದ ಚರಪು ಆತ್ಮೀಯವಾಗಿತ್ತು. ಹಳೆಗನ್ನಡ-ಸೆರಮು, ತಮಿಳು- ಚಿರಪ್ಪು]

೫. **ಮೆಟ್ಟಿಕೊಳ್ಳು** (ಅ) ಭೂತ ತಗಲಿಕೊಳ್ಳು, ಭೂತದ ಹಾಗೆ ಚಟ ಅಂಟು, ಉದಾ:— ಅವನಿಗೆ ಹೆಂಡದ ಹಂಬಲು ಮೆಟ್ಟಿಕೊಂಡಿತ್ತು. [ಕನ್ನಡ ನುಡಿಕಟ್ಟು]

೬. **ಹರದ** (ಆ) ಚೆಲ್ಲಾಪಿಲ್ಲಿಯಾದ್ದು, ರದ್ದಿ ಪದಾರ್ಥ. ಉದಾ:— ತೋಟದಲ್ಲಿ ತಿಂಡಿ ತಿಂದು ಹರದವನ್ನು ಹಾಗೇ ಬಿಟ್ಟುಹೋದ [ಕನ್ನಡ, ಹರದು-ಇಂಪ]

೭. **ಬಗ್ಗಡ** (ಈ) ಕೊಳಚೆ, ಕೊಚ್ಚೆ, ಕೆಸರು, ಹಾಳು ಪದಾರ್ಥ. ಉದಾ:- ಸಂಸಾರದ ಬಗ್ಗಡ. [ಮರಾಠಿ-ವಗಳ, ವಂಗಳ]

೮. **ತರುಣ** (ಇ) ಹೊಸದರಲ್ಲಿ, ಪ್ರಾರಂಭದ ಸಮಯ ಉದಾ:— ಮದುವೆಯಾದ ತರುಣದಲ್ಲಿ [ಸಂ. ತರುಣ = ಯುವಕ; ಅಥವಾ ದೇಶ್ಯ-ತರುವಾಯ = ಅನಂತರದ]

೯. **ತರ್ಪಣ** (ಅ) ತೃಪ್ತಿಪಡಿಸುವಿಕೆ, ಖುಶಿ ಮಾಡುವಿಕೆ; ಸತ್ತವರಿಗೆ ಬಿಡುವ ನೀರು. [ಸಂ.]

೧೦. **ಪೇಲವ** (ಇ) ಬಣ್ಣಗೆಟ್ಟ, ಕಂದಿದ; ಬಿಳಿಚಿದ. ಉದಾ:- ಬೆಳೆ ಪೋಷಣೆಯಿಲ್ಲದೆ ಪೇಲವವಾಗಿತ್ತು. [ಸಂ. ಪೇಲವ = ಎಳೆಯ, ಇಂಗ್ಲೀಷಿನ Pale ನಿಂದ ಪ್ರಭಾವಿತ]

೧೧. **ಪಿಷ್ಟಪೇಷಣ** (ಆ) ಕುಟ್ಟಿದ್ದನ್ನೇ ಕುಟ್ಟುವುದು, ಹೇಳಿದ್ದೇ ಹೇಳುವುದು. ಉದಾ:- ರಾಜಕಾರಣಿಗಳ ಪಿಷ್ಟಪೇಷಣ. [ಸಂ. ಪಿಷ್ಟ = ಹಿಟ್ಟು + ಪೇಷಣ = ಕುಟ್ಟುವುದು.

೧೨. **ಮೂಗುಮುರಿ** (ಈ) ತಿರಸ್ಕರಿಸು, ತುಚ್ಛವಾಗಿ ಕಾಣು, ಉದಾ:— ಕನ್ನಡವೆಂದರೆ ಮೂಗು ಮುರಿಯುತ್ತಾರೆ. [ಕನ್ನಡ, ತಿರಸ್ಕಾರ ಮಾಡುವಾಗ ಮೂಗನ್ನು ಮುದುರಿಸುವುದರಿಂದ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	...	ಸಾಧಾರಣ
೯—೧೦	,,	...	ಉತ್ತಮ
೧೧—೧೨	,,	...	ಅತ್ಯುತ್ತಮ

ಉರ್ದು ಕತೆ

ಅದ್ದೂ

ಮೂಲ :

ಶ್ರೀಮತಿ ಜಿಲಾನಿ ಬಾನು

ಅನುವಾದ :

ಹಸನ್ ನಯೀಮ್ ಸುರಕೋಡ

ಇತ್ತೀಚೆಗೆ ಅದ್ದೂ ಇದ್ದಕ್ಕಿದ್ದಂತೆ ಬಹಳ ದೊಡ್ಡವನಾಗಿಬಿಟ್ಟಿದ್ದಾನೆ, ಇತರರಿಗಿಂತ ಶ್ರೇಷ್ಠನಾಗಿ ಬಿಟ್ಟಿದ್ದಾನೆ– ಕಟೆದ ಮೇಲೆ ಕಲ್ಲು ತನ್ನವರಿಂದ ಬೇರೆಯಾಗಿ ದೇವರಾಗುವಂತೆ. ತನ್ನ ಸಾಹೇಬರಂತೇ ದೊಡ್ಡವನು ಎಂದು ತನ್ನಷ್ಟಕ್ಕೇ ತಾನು ಭಾವಿಸಿಕೊಂಡಿದ್ದರಿಂದ ಜಗತ್ತಿನ ಯಾವುದೇ ವಸ್ತು ತೀರ ಕ್ಷುಲ್ಲಕವೆಂದೂ ಬಯಸಿದ್ದನ್ನೆಲ್ಲ ಪಡೆಯಬಹುದೆಂದೂ ಅವನಿಗೆ ಅನ್ನಿಸುತ್ತಿದೆ. ಯಾಕೆಂದರೆ ಇಂದು ಆತನ ಜೇಬಿನಲ್ಲಿ ಒಂದು ರೂಪಾಯಿ ಇದೆ, ಪೂರ್ತಿ ಒಂದು ರೂಪಾಯಿ! ಅದು ಭಾರವಾಗಿ ಆತ ಜೇಬಿದ್ದ ಭಾಗದೆಡೆಗೆ ಬಗ್ಗಿಬಿಟ್ಟಿದ್ದಾನೆ. ಯಾವ ದಾರದ ಸಹಾಯವೂ ಇಲ್ಲದೆ ಆಕಾಶದಲ್ಲಿ ವಿಮಾನವೂ ಹಾರಾಡಬಲ್ಲದು ಎಂಬುದು ಅವನಿಗೆ ತಿಳಿಯಿತು. "ಸಾಹೇಬರ ಕಾರು ಮುಂದಗಮನೆಯ ಹಾಗೆ ನಡೆದುಹೋಗುವದು, ಸರ್ಕಸ್ಸಿನಲ್ಲಿ ಪೈಲವಾನ ಆನೆಯನ್ನು ತನ್ನ ಎದೆಯ ಮೇಲೆ ನಿಲ್ಲಿಸಿಕೊಳ್ಳುವದು, ಇದೆಲ್ಲ ಹಣದ ಮಹಿಮೆ, ಮಹಾರಾಯಾ" ಎಂದು ಮಸ್ತಾನ ಚಿಕ್ಕಪ್ಪ ಹೇಳಿದ್ದು ನಿಜ. ಅದಕ್ಕೆಂತಲೇ ಅದ್ದೂ ನೆಲ ಬಿಟ್ಟು ಆರಡಿ ಮೇಲಿದ್ದವನಂತೆ, ತನ್ನ ಕಾಲ ಬುಡದಲ್ಲಿಯ ಬಡ ಪ್ರಾಣಿಗಳನ್ನೆಲ್ಲ ತುಳಿದುಕೊಂಡು ನಡೆದಾಡುವವರಂತೆ ಪೇಟೆಯಲ್ಲಿ ಅಲೆಯುತ್ತಲಿದ್ದಾನೆ.

ಫುಟ್‌ಪಾಥಿನ ಮೇಲೆ ಬುಟ್ಟಿಗಳನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿರುವವರನ್ನೆಲ್ಲ ಕೇಳುತ್ತಿದ್ದಾನೆ: "ಗಜ್ಜರಿ ಹೇಗೆ, ಕಿಲೋ ಕೊಡುತ್ತಿ?"

"ಸೀತಾಫಲ ರೂಪಾಯಿಗೆ ಎಷ್ಟು?"

"ಒಂದು ರೂಪಾಯಿಯ ಆಯಿಸ್‌ಕ್ರೀಮ್ ಇದೆಯಾ?"

ಇವೆಲ್ಲ ವಸ್ತುಗಳ ಬೆಲೆ ಕೇಳುತ್ತ ಚೌಕಾಸಿ ಮಾಡುತ್ತ (ದೊಡ್ಡವರು ಮಾಡುವ ಹಾಗೆ) ಅವನ ಮನಸ್ಸಿಗೆ ಒಂದು ಬಗೆಯ ನೆಮ್ಮದಿಯೆನಿಸಿತು. ಪೂರ್ತಿ ಒಂದು ರೂಪಾಯಿಯ ಪೂರ್ತಿ ಒಂದು ಗ್ಲಾಸ್ ಆಯಿಸ್‌ಕ್ರೀಮನ್ನೇ ತಿಂದಂತೆನಿಸಿತು. ಬೇಗಂ ಸಾಹೇಬರೊಂದಿಗೆ ಪೇಟೆಗೆ ಬಂದಾಗಲೆಲ್ಲ ಇಷ್ಟೆಲ್ಲ ಸೇಬು, ಆಯಿಸ್‌ಕ್ರಿಮ್, ಮಿಠಾಯಿ ಮಾರಾಟವಾಗುತ್ತಿದ್ದವು. ಪರ್ಸಿನಲ್ಲಿ ಸಾಕಷ್ಟು ಹಣವಿದ್ದರೂ ಅವನ್ನು ತಿನ್ನಬೇಕೆಂದು ಅವರಿಗೇಕೆ ಆಸೆಯಾಗುತ್ತಿಲ್ಲವೋ ಎಂದು ಅವನಿಗೆ ಆಶ್ಚರ್ಯವೆನಿಸಿತು. ಅವನೂ ಒಂದು ರೂಪಾಯಿಯಲ್ಲಿ ಜಗತ್ತಿನ ಪ್ರತಿಯೊಂದು ತಿನಿಸಿನ ರುಚಿ ನೋಡಬಲ್ಲ, ಪ್ರತಿಯೊಂದು ವಸ್ತುವನ್ನೂ ಕೊಂಡುಕೊಳ್ಳಬಲ್ಲ. ಆದರೆ ಗಡಿಬಿಡಿ ಮಾಡುವುದೇಕೆ? ಮೊದಲು ತಾನೂ ತನ್ನ ವಯಸ್ಸಿನ ಹುಡುಗರಂತೆಯೇ ಎಲ್ಲಿಯಾದರೂ ಒಂದು ರೂಪಾಯಿ ಸಿಕ್ಕರೆ ಒಂದು ನಿಮಿಷದಲ್ಲಿಯೇ ತಿಂದೋ, ಕುಡಿದೋ ಮುಗಿಸಿಬಿಡಬೇಕೆಂದು ಲೆಕ್ಕ ಹಾಕುತ್ತಿದ್ದ.

ಆದರೆ ಸಂಪತ್ತು ಮನುಷ್ಯನಿಗೆ ಗಾಂಭೀರ್ಯವನ್ನೂ ಕಲಿಸುವುದು.

ಜೇಬಿನಲ್ಲಿ ಒಂದು ರೂಪಾಯಿ ಇದ್ದುದರಿಂದ ಅದ್ದೂ ಬಹಳ ಸಂತೃಪ್ತನಾಗಿಬಿಟ್ಟಿದ್ದಾನೆ.



ಎಂದಿನಂತೆ ಇಂದು ಕೂಡಾ ಬೇಗಂ ಸಾಹೇಬರ ಒದೆತ ತಿಂದು ಎದ್ದೂ ಅದ್ದೂನಿಗೆ ಇಂದಿನ ಸೂರ್ಯ ತನ್ನ ಭಾಗ್ಯದ ಬಾಗಿಲನ್ನು ತೆರೆಯು ಲಿರುವನೆಂದು ಅನ್ನಿಸಿರಲೇ ಇಲ್ಲ! ಇದೆಲ್ಲ ಸುಳ್ಳು ಹೇಳದಿರುವುದರ ಫಲವಾಗಿತ್ತು! ಮೌಲವಿ ಸಾಹೇಬರ ಉಪದೇಶದ ಮೇರೆಗೆ 'ಎಂದೂ ಸುಳ್ಳು ಹೇಳುವದಿಲ್ಲ' ಎಂದು ಆಣೆ ಮಾಡಿದ್ದ, 'ಕಳ್ಳತನ ಎಂದೂ ಮಾಡುವದಿಲ್ಲ'ಎಂದು ಆತ್ಮ ಸಾಕ್ಷಿಯಾಗಿ ನಿರ್ಧಾರ ಮಾಡಿದ್ದ. ಎಂದಾದರೂ ತನ್ನ ಮನಸ್ಸು ಯಾವುದಾದರೂ ವಸ್ತುವಿಗಾಗಿ ಹಾತೊರೆದಾಗಲೆಲ್ಲ ಎದೆ ಧಸಕ್ ಎನ್ನುವುದು. ಪವಿತ್ರ ಗ್ರಂಥ 'ಕುರ್‌ಆನ್' 'ಅಲೀಫ್ ಲಾಮ್ ಮೀಮ್' ಖಂಡವನ್ನು ಎತ್ತಿಕೊಂಡು ಮುತ್ತು ಕೊಡುವನು. ಅಷ್ಟಾದರಾಯ್ತು, ಕೂಡಲೇ ಮನಸ್ಸಿಗೆ ನೆಮ್ಮದಿ ಸಿಗುವುದು. ಕಳ್ಳತನ ಮಾಡದಿರುವವರಿಗಾಗಿ ಸ್ವರ್ಗದ ಬಾಗಿಲುಗಳು ತೆರೆದಿರುವವು ಎಂದು ಮೌಲವಿ ಸಾಹೇಬರು ಹೇಳುತ್ತಾರೆ. ಅವರು ಕಳ್ಳತನ ಮಾಡುವುದಿಲ್ಲ, ಸುಳ್ಳು ಹೇಳುವುದಿಲ್ಲ. ಬೆವರು ಹಾಗೂ ಹೊಲಸು ತುಂಬಿದ ಅದ್ದೂನ ಬಟ್ಟೆಯಿಂದ ಸ್ವರ್ಗದ ಹೂದೋಟದ ಸುವಾಸನೆಯೇ ಹೊರಹೊಮ್ಮಲಾರಂಭಿಸಿತು. ಈ ಪ್ರಪಂಚವಂತೂ ಶಾಶ್ವತವಲ್ಲ. ಎಷ್ಟೇ ಕಷ್ಟ ಬರಲಿ, ಅವೆಲ್ಲ ಕ್ಷಣದಲ್ಲಿ ದೂರಾಗುವವು. ಪರಿಶುದ್ಧ ಮನಸ್ಸುಳ್ಳ ಮನುಷ್ಯನಿಗಾಗಿ ದೇವತೆಗಳು ಸ್ವರ್ಗದ ಬಾಗಿಲನ್ನು ತೆರೆಯುತ್ತಾರೆ! ಮೌಲವಿ ಸಾಹೇಬರು ಸಿದ್ದೀಕ್ ಹಾಗೂ ಶಫೀಕ್‌ರಿಗೆ ಕುರ್‌ಆನ್ ಪಠನ ಮಾಡಿಸುತ್ತಿದ್ದಾಗ ದೂರದಲ್ಲಿ ಕುಳಿತ ಅದ್ದೂ ಸಾಹೇಬರ ಮಾತುಗಳನ್ನೆಲ್ಲ ಮನಸ್ಸುಗೊಟ್ಟು ಕೇಳುತ್ತಿದ್ದ. ಹಾಗೆ ನೋಡಿದರೆ ಶಫೀಕ್ ಹಾಗೂ ಸಿದ್ದೀಕರಿಗೆ ಮೌಲವಿ ಸಾಹೇಬರ ಮಾತುಗಳಾಗಲಿ ಪಾಠವಾಗಲಿ ನೆನಪಿ

ನಲ್ಲಿ ಉಳಿಯುತ್ತಿರಲಿಲ್ಲ. ತಟ್ಟೆಯಲ್ಲಿಟ್ಟ ಹಣ್ಣುಗಳೆಷ್ಟೋ ಸಲ ಅವನಿಗೆ ಸನ್ನೆ ಮಾಡಿವೆ! ಟೇಬಲ್ಲಿನ ಮೇಲಿಟ್ಟದ್ದ ಮಿಠಾಯಿ ಅದೆಷ್ಟೋ ಬಾರಿ ಅವನನ್ನು ಕರೆದಿವೆ! ಕಸ ಗೂಡಿಸುವಾಗ ಯಾವಾಗಲಾದರೊಮ್ಮೆ ಬೇಗಂ ಸಾಹಿಬಾರ ಎಲೆ ಅಡಿಕೆಯ ಡಬ್ಬಿಯೊಳಗಿಂದ ಬಿದ್ದ ನಾಲ್ಕಾಣೆ ಅಥವಾ ಎಂಟಾಣೆ ನಾಣ್ಯವನ್ನು ಕಂಡರೆ ಸುಡುವ ಕೆಂಡವನ್ನು ಮುಟ್ಟುವವರಂತೆ ಕೈಗೆತ್ತಿಕೊಂಡಿದ್ದ. ಕೇವಲ ನಾಲ್ಕಾಣೆಗೋಸ್ಕರ ನರಕದ ಬೆಂಕಿಯನ್ನು ಯಾರು ಕೊಂಡುಕೊಳ್ಳಲಿಚ್ಛಿಸುವರು ?

ರಾತ್ರಿಯ ಹೊತ್ತು ದಣಿವಿನಿಂದಾಗಿ ನಿದ್ರೆ ಬಾರದಿದ್ದಾಗ ಅವನು ಯೋಚಿಸುತ್ತಿದ್ದ—ಹಬ್ಬ ಏನು ಬರುವುದೊ? ಹಬ್ಬದ ದಿನ ಸಾಹೇಬರು ಎಂಟಾಣೆ ಕೊಟ್ಟೇ ಕೊಡುವರು. ಬೇಗಂ ಸಾಹಿಬಾರಂತೂ ನಾಲ್ಕಾಣೆಗಿಂತ ಹೆಚ್ಚಿಗೆ ಕೊಡಲಾರರು. ಸಣ್ಣ ಸಾಹೇಬರೂ ನಾಲ್ಕಾಣೆ ಕೊಡಬಹುದು. ಒಂದು ರೂಪಾಯಿ ಆಗಿಬಿಡುವುದು. ಎಂಟಾಣೆಯ ಆಯಿಸ್‌ಕ್ರೀಮ್! ಹತ್ತು ಪೈಸೆಯ ಕಡಲೆ. ನಾಲ್ಕಾಣೆಯ ಶರಬತ್ತು!

ಅರೆ, ಇಂಥ ದುಂದು ವೆಚ್ಚ ಸರಿಯಲ್ಲ. ಆ ರೂಪಾಯಿಯನ್ನು ನಾನು ಅಕ್ಕನ ಮಗುವಿಗೆ ಕೊಟ್ಟು ಬರುವೆ. ಗಂಡನ ಮನೆಯಲ್ಲಿ ಪಾಪ ಅಕ್ಕ ಅದೆಷ್ಟು ಸೊರಗಿಬಿಟ್ಟಿದ್ದಾಳೊ! ಒಮ್ಮೆ ಐದು ಮೈಲು ಕಾಲ್ನಡಿಗೆಯಿಂದ ಅಕ್ಕನ ಮನೆಗೆ ಹೋದರೆ ಅವನನ್ನು ನೋಡಿ ಅಕ್ಕನಿಗೆ ಹರ್ಷವೆನಿಸಲಿಲ್ಲ. ಒಂದು ಮೂಲೆಗೆ ಕರೆದುಕೊಂಡು ಹೋಗಿ ಹೇಳಿದಳು: "ಅದ್ದೂ, ನೀ ಇಲ್ಲಿಗೆ ಬರಲೇಬೇಡ. ಮಗುವಿಗಾಗಿ ಮಾವ ಅದೇನು ತಂದಿದ್ದಾನೆ ಅಂತ ಅತ್ತೆ ಹಂಗಿಸುತ್ತಾಳೆ. ತಿಳಿಯಿತಾ?"

ಆಯ್ತು, ಈ ಸಲ ಹಬ್ಬದ ದಿನ ಮಗುವಿಗೆ ಒಂದು ರೂಪಾಯಿ ಕೊಟ್ಟು ಬರುವೆ. ಅಕ್ಕನಿಗೆ ಬಹಳೇ ಸಂತೋಷವಾಗುವುದು. ಆದರೆ ರೂಪಾಯಿ [illegible] ಒಂದು [illegible] ಕೇಳಿ ತಾಯಿ [illegible] ಕೂರುತ್ತಾಳೆ. [illegible] ದಾಗ ಹತ್ತು ಪೈಸೆ ಕೊಡಬಹುದು. ನಾಲ್ಕಾಣೆ ಕೊಡುತ್ತೇನೆಂದು ಸಾಹೇಬರು ಬಹಳ ದಿನಗಳಿಂದ ಹೇಳುತ್ತಿದ್ದಾರೆ. ಏಕೆಂದರೆ, ಪ್ರತಿದಿನವೂ ಅವನು ಸಾಹೇಬರ ಕಾರನ್ನು ಅರ್ಧ ಮೈಲಿನವರೆಗೂ ನೂಕುತ್ತಿದ್ದನು. ಕಾರು ಸ್ಟಾರ್ಟ್ ಆದ ಕೂಡಲೆ ಅವರು ಮೆಲ್ಲನೆ ಹೊರಟುಬಿಡುತ್ತಿದ್ದರು. ನಾಲ್ಕಾಣೆಯ ಮಾತು ಮರುದಿನದವರೆಗೆ ಮುಂದೂಡಲ್ಪಡುತ್ತಿತ್ತು.

ಇಂದು ಕಾರನ್ನು ನೂಕುತ್ತಿದ್ದಂತೆಯೇ ಅದ್ದೂಗೆ ತೇಕು ಹತ್ತಿತ್ತು. ನಾಲ್ಕಾಣೆಯ ಮಾತನ್ನು ಸಾಹೇಬರಿಗೆ ನೆನಪು ಮಾಡಿಕೊಡುವುದರ ಬಗ್ಗೆ ಯೋಚಿಸಹತ್ತಿದ. ಆದರೆ ಸಾಹೇಬರಿಗೆಯೇ ಅದರ ನೆನಪಾಗಿರಬೇಕು. ಅವರು ಪರ್ಸ್ ಬಿಚ್ಚಿದರು. ನಾಲ್ಕಾಣೆ ಹುಡುಕಾಡಿದರು. ಆದರೆ ಸಿಗಲಿಲ್ಲ. ಪರ್ಸ್ ಮುಚ್ಚಿ ಜೇಬಿನಲ್ಲಿಟ್ಟುಕೊಂಡರು. ಕಾರ್ ಸ್ಟಾರ್ಟ್ ಮಾಡಿದರು. ಹೊಲಸಾದ ಕೈಗಳನ್ನು ಒರಸುತ್ತ ಅದ್ದೂ ಒಂದೇ ಸಮನೆ ತೇಕಲಾರಂಭಿಸಿದನು. ದಿನವೂ ಕಾರನ್ನು ನೂಕಿ ನೂಕಿ ಎದೆಯಲ್ಲಿ ನೋವು ಕಾಣಿಸಿಕೊಂಡಿದೆ. ಬಾಗಿಲಿನತ್ತ ತಿರುಗುತ್ತಿದ್ದಂತೆಯೇ ಅವನು ನೆಲದೆಡೆ ದೃಷ್ಟಿ ಹಾಯಿಸಿದ. ಒಮ್ಮೆಲೆ ಅವನು ಆ ಕಡೆ ಜಿಗಿದು ಬಿಟ್ಟ. ಅವನ ಮುಷ್ಟಿಯಲ್ಲಿ ಈಗ ಒಂದು ರೂಪಾಯಿಯ 'ಕೋರಾ ನೋಟು' ಇತ್ತು. ನಿಜವಾದ ನೋಟು. ಭಯ ಹಾಗೂ ಸಂತೋಷದಿಂದ ಅವನು ನಡುಗಲಾರಂಭಿಸಿದ. ರೂಪಾಯಿ ನೋಟಿನ ಭಾರದಿಂದಾಗಿ ಒಂದು ಹೆಜ್ಜೆ ಸಹ ಕಿತ್ತಿಡಲಾಗುತ್ತಿಲ್ಲ. ಬಹಳಷ್ಟು ರೂಪಾಯಿಗಳುಳ್ಳವರು ಅದೆಂತಹ ಘೋರ ಸಂಕಟದಲ್ಲಿ ಸಿಕ್ಕಿ ಬೀಳುವರೋ! ಅದ್ದೂ ಚಿಂತಾಕ್ರಾಂತನಾದನು. ಈಗ ಸಾಹೇಬರ ಕಾರು ಕತ್ತರಿ ದಾರಿ ದಾಟಿತ್ತು. ತೆರೆದ ಬಾಗಿಲ ಹೊರಗೆ ಯಾರೂ ಇರಲಿಲ್ಲ.

ಕೈಯಲ್ಲಿ ರೂಪಾಯಿ ಬರುತ್ತಲೇ ಅದ್ದೂ ಭಯಭೀತನಾದ. ಅವನು ಒಂದು ರೂಪಾಯಿಯ ಸಂಪತ್ತನ್ನು ಸೂರೆಗೈದು ಒಬ್ಬಂಟಿಗನಾಗಿದ್ದಾನೆ. ಜಗತ್ತು ಕಳ್ಳರಿಂದ ತುಂಬಿದೆ. ಆತನಿಗೆ ಭಯ. ಭಾರವಾದ ಕಾಲುಗಳನ್ನೆಳೆದುಕೊಂಡು ಮೆಲ್ಲ ಮೆಲ್ಲನೆ ಪೇಟೆಯ ಕಡೆಗೆ ಹೊರಟ. ಮತ್ತೊಮ್ಮೆ ಫುಟ್‌ಪಾಥಿನ ಮೇಲೆ ಕುಳಿತು ನೋಟನ್ನು ನೋಡಿದ. ನೋಡಿಯೇ ನೋಡಿದ. ನಂತರ ಮಡಿಕೆ ಹಾಕಿ ನೋಟಿನ ಗಾತ್ರ ಕಡಿಮೆ ಮಾಡಿ ಒಂದು ಕಾಗದದಲ್ಲಿ ಸುತ್ತಿದ. ಬಹಳೇ ಜೋಪಾ

ನದಿಂದ ಜೇಬಿನಲ್ಲಿಟ್ಟುಕೊಂಡ. ಈಗ ಅವನಲ್ಲಿ ಒಬ್ಬ ಶ್ರೀಮಂತನ ಬುದ್ಧಿಮತ್ತೆ ಬಂದು ಬಿಟ್ಟಿತ್ತು. ಅವನ ಬಾಯಲ್ಲಿ ಅದೆಷ್ಟೋ ವಸ್ತುಗಳ ಹೆಸರು ಬಂದುಹೋದವು. ಆದರೆ... ಆದರೆ ಭಯ ಸುತ್ತಲೆಲ್ಲ ಹರಡಲಾರಂಭಿಸಿತು.

ಚಾವೂಸನ ಅಂಗಡಿಯಲ್ಲಿ ಹುಡುಗನೊಬ್ಬ ತೆಂಗಿನಕಾಯಿ ಕೊಳ್ಳಲು ನಿಂತಿದ್ದ. "ನನಗೂ ಒಂದು ತೆಂಗಿನಕಾಯಿ ಕೊಡು" ಎಂದ ಅದ್ದೂ. ಆದರೆ ಗ್ರಾಹಕರ ಗದ್ದಲದಲ್ಲಿ ಅಂಗಡಿಯವನಿಗೆ ಅದ್ದೂನ ಮಾತು ಕೇಳಲೇ ಇಲ್ಲ. ಒಳ್ಳೆಯದೇ ಆಯಿತು. ಆ ಒಂದು ರೂಪಾಯಿಯಲ್ಲಿ ತೆಂಗಿನಕಾಯಿಯನ್ನು ಕೊಂಡು ತಿಂದಿದ್ದರೆ ಕಯಾಮತ್(ಪ್ರಳಯ)ನ ದಿನ ಅಲ್ಲಾಹನು ಅವನ ಕೈಗಳಲ್ಲಿ ಕೆಂಡವನ್ನಿಡುತ್ತಿದ್ದನು. ಕೆಂಡದಿಂದ ಸುಟ್ಟುಕೊಂಡವನಂತೆ ಭಯಗ್ರಸ್ತನಾಗಿ ಅದ್ದೂ ಕೈಗಳನ್ನು ಎಳೆದುಕೊಂಡ ಕೂಡಲೆ ರೂಪಾಯಿ ಕೆಳಗೆ ಬಿದ್ದುಬಿಟ್ಟಿತು. ಅಗಾಬಗೆಯಿಂದ ನೋಟನ್ನು ಕೈಗೆತ್ತಿಕೊಂಡು ಕಣ್ಣು ಬಿಡದೆ ನೋಡತೊಡಗಿದನು. ರೂಪಾಯಿಯ ಮೇಲೆ ಮೂರು ಸಿಂಹಗಳ ಚಿತ್ರವಿತ್ತು. ರೂಪಾಯಿಯನ್ನು ದುಷ್ಟ ಬುದ್ಧಿಯಿಂದ ಯಾರಾದರೂ ಕಳವು ಮಾಡಿಯಾರೆಂದು ಆ ಸಿಂಹಗಳು ಕಾವಲು ನಡೆಸಿದಂತಿತ್ತು.

ಪಕ್ಕದಲ್ಲಿ ಹಾಯ್ದು ಹೋದವನೊಬ್ಬ ಅದ್ದೂನನ್ನೇ ನೋಡುತ್ತಲಿದ್ದ. ತನ್ನನ್ನು ಕಳ್ಳನೆಂದು ಆತ ತಿಳಿದುಬಿಟ್ಟನೋ ಏನೊ! ಎಲ್ಲಿ ಪೋಲೀಸರಿಗೆ ತಿಳಿಸಿಬಿಡುವನೊ! ಕೈಕೋಳಗಳನ್ನು ತೊಟ್ಟುಕೊಂಡು ಠಾಣೆಗೆ ಹೋಗಬೇಕಾಗುವದು. ಅದ್ದೂ ಭಯದಿಂದ ತತ್ತರಿಸಿದ.

ಇಕೊ, ಹನ್ನೊಂದು ಗಂಟೆ ಆಯಿತು. ಇವತ್ತು ಅದ್ದೂ ಎಲ್ಲಿ ಸಿಟೆದನೊ ಎಂದು ಬೇಗಂ ಸಾಹೇಬಾ ಕೂಗಾಡುತ್ತಿರಬೇಕು. 'ಮಾಂಸ, ತರಕಾರಿ ಯಾರು ತರಬೇಕು? ಕಸ ಯಾರು ಗುಡಿಸಬೇಕು? ಬಟ್ಟೆ ಯಾರು ತೊಳೆಯಬೇಕು? ಮಕ್ಕಳ ಟಿಫಿನ್ ತೆಗೆದುಕೊಂಡು ಯಾರು ಶಾಲೆಗೆ ಹೋಗಬೇಕು?' ಬೇಗಂ ಸಾಹೇಬಾರ ಕೂಗಾಟವನ್ನು ಕೇಳಿದವನಂತೆ ದಿಕ್ಕುಗಾಣದವನಂತೆ ಓಡಲಾರಂಭಿಸಿದನು. ಎಂತಹ ಒಳ್ಳೆಯ ಹೆಸರಿದ್ದುದನ್ನು ವಿಕೃತಗೊಳಿಸಿಬಿಟ್ಟಿದ್ದಾರೆ. ಅವನ ಹೆಸರು ಆದಮ್‌ಖಾನ್ ಎಂದಿತ್ತು. ಮನುಷ್ಯನ (ಆದಮ್) ಹೆಸರಿಗೆಯೇ ಕಲಂಕ ತಂದ ಈ ಜನ ಆದಮನನ್ನೂ ಬಿಡಲಿಲ್ಲ. ಅವನ ಹೆಸರಿನ ಹೂ ಎಲೆಗಳನ್ನೆಲ್ಲ ಕತ್ತರಿಸಿ ಮೊಟಕುಗೊಳಿಸಿದರು. ಆತ ಈಗ ಕೇವಲ 'ಅದ್ದೂ' ಆಗಿ ಉಳಿದ. 'ನಾನು ಈಗ ಈ ರೂಪಾಯಿಯನ್ನು ಅಕ್ಕನ ಮಗುವಿಗೆ ಕೊಟ್ಟು ಬರುವೆ, ಅಕ್ಕನಿಗೆ ತುಂಬ ಸಂತೋಷವಾಗಬಹುದು. ಅನ್ನ ಸಾರನ್ನು ಮಾಡಿ ಬಡಿಸಲೂ ಬಹುದು. ಈಗ ಹಸಿವೆಯೂ ಎನ್ನಿಸುತ್ತಿದೆ. ಅರ್ಧ ದಿನ ಕಳೆದುಬಿಟ್ಟಿದೆ. ಇವತ್ತು ಉಪಹಾರವನ್ನು ಮಾಡಿಲ್ಲ. ಆದರೆ ಅಕ್ಕನ ಮನೆ ಐದು ಮೈಲಿನ ಮೇಲಿದೆ. ಕಾಲು ನೋವಾಗುವವು...'

ಆದರೂ ಅವನು ನಡೆಯುತ್ತಲೇ ಇದ್ದ. ಅಕ್ಕನ ಮಗುವಿಗೆ ರೂಪಾಯಿ ಕೊಡುವ ಖುಷಿ! ಕಾದ ರಸ್ತೆ. ಕಾಲುಗಳು ಸುಡುತ್ತಿದ್ದವು. 'ಈ ರೂಪಾಯಿಯಲ್ಲಿ ಚಪ್ಪಲಿಗಳನ್ನು ಕೊಂಡುಕೊಳ್ಳಲೆ? ಹಳೆಯ ಚಪ್ಪಲಿಗಳನ್ನು ಸಮಗಾರನು ಒಂದು ರೂಪಾಯಿಯಲ್ಲಿ ಕೊಟ್ಟೇ ಕೊಡುವನು. ಆದರೆ ಆಯಿಸ್ ಕ್ರೀಮ್ ಹೇಗೆ ತಿನ್ನಲಿ?'

ಒಂದು ಅಂಗಡಿಯಲ್ಲಿ ಒಳ್ಳೆಯ ಬಾಳೆಯ ಹಣ್ಣುಗಳು ಕಂಡವು. ಬಹಳ ದಿನಗಳಿಂದ ಅವನಿಗೆ ಬಾಳೆಯ ಹಣ್ಣುಗಳನ್ನು ತಿನ್ನುವ ಮನಸ್ಸಾಗಿತ್ತು. ಕೂಡಲೇ ಒಂದು ಒಳ್ಳೆಯ ಹಣ್ಣನ್ನು ಕೊಂಡನು. ಅಂಗಡಿಯವನು ಒಂದು ಎಂಟಾಣೆ ಹಾಗೂ ನಾಲ್ಕಾಣೆಯ ನಾಣ್ಯಗಳನ್ನು ಕೈಯಲ್ಲಿಟ್ಟ. ಕೂಡಲೇ ಅದ್ದೂನ ಎದೆ ಬಡಿದುಕೊಳ್ಳಲಾರಂಭಿಸಿತು. ಇಕೊ, ರೂಪಾಯಿ ಮುಗಿದಂತಾಯಿತು ! ಕೇವಲ ಒಂದು ಎಂಟಾಣೆ ಹಾಗೂ ನಾಲ್ಕಾಣೆ ನಾಣ್ಯ ಉಳಿಯಿತು ! "ಬೇಡ, ನನಗೆ ಬಾಳೆ ಹಣ್ಣು ಬೇಡ!" ಎಂದವನೇ ಬಾಳೇ ಹಣ್ಣನ್ನು ಬುಟ್ಟಿಯಲ್ಲಿಟ್ಟ, ಚಿಲ್ಲರೆ ಕೊಟ್ಟು ರೂಪಾಯಿಯ ನೋಟನ್ನು ಮರಳಿ ಪಡೆದು ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದುಕೊಂಡ. "ದೇವರೆ, ನಿನ್ನ ಕೃಪೆ ದೊಡ್ಡದು. ನನ್ನ ಶ್ರದ್ಧೆಯನ್ನು ಕೊನೆಗೂ ಬದಲಾಗಗೊಡಲಿಲ್ಲ. ಬಾಳೆ ಹಣ್ಣನ್ನು ತಿಂದು ಬಿಟ್ಟಿದ್ದರೆ, ಅವ್ವ ಎಂಟಾಣೆಯನ್ನು ಕಸಿದುಕೊಂಡು ಬಿಡುತ್ತಿದ್ದಳು. ಕಯಾಮತ್ ದಿನ ಯಾವ ತಾಯಿಯೂ ತನ್ನ ಮಕ್ಕಳನ್ನು ಗುರುತಿಸಲಾರಳು. ಪ್ರತಿ

ಯೊಬ್ಬನೂ ತನ್ನ ಪಾಪದ ಹೊಣೆಯನ್ನು ತಾನೇ ಹೊರಬೇಕು. ಅಪ್ಪನೂ ಎಂಟಾಣೆಯಲ್ಲಿ ಅಕ್ಕಿ ತಂದು ಅಡಿಗೆ ಮಾಡಿ ಬಿಡುವಳು. ನರಕದ ಹಾವು ಚೇಳುಗಳು ನನ್ನನ್ನು ಕಚ್ಚುವವು."

ಈಗ ಅಕ್ಕನ ಮನೆ ಎದುರಿಗೆ ಕಾಣುತ್ತಿತ್ತು. ಆಕೆ ತನ್ನ ಗಡಿಸಲಿನ ಮುಂದೆ ಕುಳಿತುಕೊಂಡು ಮಗುವಿನ ತಲೆಯಲ್ಲಿಯ ಹೇನುಗಳನ್ನು ಒರೆ ಯುತ್ತಲಿದ್ದಳು.

ಮಗುವನ್ನು ನೋಡಿದೊಡನೆ ಹರ್ಷಗೊಂಡು ಓಡಲಾರಂಭಿಸಿದ. 'ಆದರೆ ಮಗುವಿಗೆ ರೂಪಾಯಿ ಯನ್ನು ಕೊಟ್ಟರೂ, ನಾನು ನರಕದ ಯಾತನೆ ಯನ್ನು ಅನುಭವಿಸಲೇಬೇಕು.'

ಆತ ನಿಂತುಬಿಟ್ಟ. ಹಸಿವೆ, ನೀರಡಿಕೆಯಿಂದ ಆತನ ಗಂಟಲು ಒಣಗುತ್ತಲಿತ್ತು. ಎದುರಿಗೆ ಹೋಟಲಿನ ಮೇಲೆ ದೊಡ್ಡ ಘಂಟಾ ಬಾಟ ಲಿಯ ಚಿತ್ರವಿತ್ತು. ಬಾಟಲಿಯಿಂದ ಸಿಹಿಯಾದ ಹಾಗೂ ತಂಪಾದ ಶರಬತ್ತು ಧಾರಾಕಾರವಾಗಿ ಬೀಳುತ್ತಿತ್ತು. ಈ ಶರಬತ್ತನ್ನು ಕುಡಿದರೆ, ಎಷ್ಟು ಮಜವೆನಿಸುವದೊ? ಅದ್ದೂ ಅಂಗೈಯಲ್ಲಿ ಅದು ಮಿಕೊಂಡಿದ್ದ ರೂಪಾಯಿಯನ್ನು ಲಕ್ಷ್ಯಗೊಟ್ಟು ನೋಡಿದ. ಆದರೆ ಅದು ಒಂದು ಕನ್ನಡಿಯಾಗಿ ಬಿಟ್ಟಿತ್ತು. ಅದರಲ್ಲಿ ನರಕದ ಪ್ರಜ್ವಲಿಸುವ ಬೆಂಕಿ ತನ್ನತ್ತ ಧುಮುಕುತ್ತಿದ್ದಂತೆ ಭಾಸವಾಯಿತು.

ನತದೃಷ್ಟ ಅದ್ದೂನಿಗೆ ಆಯಾಸವಾಗಿತ್ತು. ನರಕದ ಬೆಂಕಿಯಲ್ಲಿ ಸುಟ್ಟು ಕೊಳ್ಳುತ್ತಿರುವವ ನಂತೆ, ಹಸಿದ, ನೀರಡಿಸಿದ ಅದ್ದೂ ತಿರುಗಿ ಓಡ ಲಾರಂಭಿಸಿದ, ಅಕ್ಕನನ್ನೂ ಅಕ್ಕನ ಮಗುವನ್ನು ಭೆಟ್ಟಿಯಾಗದೆಯೆ !

"ಲೇ, ಅದ್ದೂ ಮಗನೇ! ಇಂದು ಮುಂಜಾ ವಿನಿಂದ ಎಲ್ಲಿದ್ದಿ? ಬೇಗಂ ಸಾಹಿಬಾ ಸಿಟ್ಟಾಗಿ ದ್ದಾರೆ" ನೆರೆ ಮನೆಯ ಮಾಮಿ ಅವನನ್ನು ನೋಡಿ ಅವನನ್ನು ನೋಡಿ ಕೂಗಿದಳು. ಅದ್ದೂ ರೂಪಾ ಯಿಯನ್ನು ಜೇಬಿಗಿಳಿಸುತ್ತಿದ್ದಂತೆಯೆ ಮಾಮಿ ಸಮೀಪ ಬಂದೇಬಿಟ್ಟಳು. "ನೀನು ಬಂಗ್ಲೆ ಯಿಂದ ಅದೇನು ಕಳವು ಮಾಡಿ ಓಡಿ ಬಂದಿ ರುವಿ ?" ಮಾಮಿ ಸಂಶಯದ ದೃಷ್ಟಿಯಿಂದ ಆತ ನನ್ನು ನೋಡತೊಡಗಿದಳು. "ಇಲ್ಲವಲ್ಲ, ನಾನೇಕೆ ಕಳುವು ಮಾಡಲಿ?" ಎಂದು ಹೇಳಿ ಅವನು ಮಾಮಿ ಯಿಂದೇನೋ ಪಾರಾದ. ಅಶ್ರುಧಾರೆಯನ್ನು ತಡೆ ಯಲಾಗಲಿಲ್ಲ. 'ಬೇಗಂ ಸಾಹಿಬಾರಿಗೆ ನಾನು ರೂಪಾಯಿ ಕಳುವು ಮಾಡಿರುವೆನೆಂದು ಗೊತ್ತಾದರೆ ಅವರು ಪೋಲೀಸರನ್ನು ಕರೆಸುವರು. ಜನರೆಲ್ಲ ನನ್ನನ್ನು ಕಳ್ಳ ಎನ್ನುವರು.' ಅವನು ಕೂಡಲೇ ಹೋಗಿ ಬೇಗಂ ಸಾಹಿಬಾರಿಗೆ ರೂಪಾಯಿ ಕೊಡಬೇ ಕೆಂದುಯೋಚಿಸಿದ. ಬೇಗಂ ಸಾಹಿಬಾರು ಬಹಳ ಖುಶ್ ಆಗುವರು. ಓಣಿಯಲ್ಲೆಲ್ಲ ಆತನ ಪ್ರಾಮಾ ಣಿಕತೆಯ ಮಾತು ಕೇಳಿ ಬರುವುದು. ಓಣಿಯ ಲ್ಲಿಯ ಬೇರೆ ಆಳುಗಳಿಗೆ ಈತನ ಉದಾಹರಣೆ ಯನ್ನು ಕೊಡುವರು. ಹಾಗೆಯೇ ಸ್ವರ್ಗದ ಬಾಗಿ ಲುಗಳು ಅವನ ಮುಂದೆ ತೆರೆಯತೊಡಗಿದವು. ಮೆಲ್ಲ ಮೆಲ್ಲನೆ ಹೆಜ್ಜೆಯಿಡುತ್ತ ಬಾಗಿಲಿಗೆ ಬಂದನು. ಈಗಾಗಲೇ ಇವನ ಬಗ್ಗೆ ಮನೆಯಲ್ಲಿ ಸುದ್ದಿ ಮುಟ್ಟಿತ್ತು. ಇಡೀ ಓಣಿಯ ಆಳುಗಳೆಲ್ಲ ಬೇಗಂ ಸಾಹಿಬಾರ ನ್ಯಾಯಾಲಯದಲ್ಲಿ ಈತನ ಮೊಕದ್ದ ಮೆಯನ್ನು ಕೇಳಲು ಹಾಜರಾಗಿದ್ದರು.

ಮುಂಜಾನೆಯವರೆಗೆ ಬಾಗಿಲಲ್ಲಿಯೇ ಬಿದ್ದು ಕೊಂಡಿದ್ದನು. ಹೊಲಸು ಹಾಗೂ ಬೆವರಿನಲ್ಲಿ ತೊಯ್ದು ಹೋಗಿದ್ದ ನೋಟನ್ನು ಬೇಗಂ ಸಾಹಿ ಬಾರ ಮುಂದಿಟ್ಟನು. ಅವರು ವರಾಂಡದಲ್ಲಿಯ ಆಸನದ ಮೇಲೆ ಪತ್ರಿಕೆಯೊಂದನ್ನು ಓದುತ್ತಿ ದ್ದರು ಪತ್ರಿಕೆಯನ್ನು ಬದಿಗಿಟ್ಟು, ಅದ್ದೂನ ನ್ನೊಮ್ಮೆ ಹರಿದು ತಿನ್ನುವವರಂತೆ ನೋಡಿ ಅವನ ಕೆನ್ನೆಗೊಂದು ಏಟು ಕೊಟ್ಟು, "ಏಲೊ ಕಳ್ಳ, ನಿಜ ಹೇಳು, ನೀನು ಇಂದು ಮತ್ತೆ ಎಷ್ಟು ರೂಪಾಯಿ ಕದ್ದು ಮೋಜು ಮಾಡಿರುವಿ?" ಎಂದರು. ✡



ಮದರಾಸು ಗ್ರಂಥಾಲಯದಲ್ಲಿನ

ಕೈಫಿಯತ್ತುಗಳು

ಪುರುಷೋತ್ತಮ ಬಿಳಿಮಲೆ

ಕನ್ನಡ ನಾಡು ಮತ್ತು ನುಡಿಗಾಗಿ ಅನೇಕ ಮಹನೀಯರು ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಹೋರಾಡಿದ್ದಾರೆ. ಅಂಥವರಲ್ಲಿ ಮೆಕೆಂಜಿಗೆ ಅಗ್ರಸ್ಥಾನ ಸಲ್ಲುತ್ತದೆ. ಕವಲಾಜೆಯಿಂದ ಬಂದು ಆತ ಇಲ್ಲಿ ಸಂಗ್ರಹಿಸಿದ ನಾಣ್ಯಗಳು, ಕವಿಕೃತಿಗಳು, ಶಿಲಾಶಾಸನ ಮತ್ತು ಕೈಫಿಯತ್ತುಗಳು ಇದಕ್ಕೆ ಸಾಕ್ಷಿ. ಇದರಿಂದ ದಕ್ಷಿಣ ಭಾರತದ ಇತಿಹಾಸದಲ್ಲಿ ಇವನಿಗೆ ವಿಶಿಷ್ಟವಾದ ಸ್ಥಾನವೊಂದು ಲಭ್ಯವಾಗುತ್ತದೆ.

ಕ್ರಿಸ್ತಶಕ ೧೭೯೯-೧೮೧೧ರ ಮಧ್ಯೆ ಮೆಕೆಂಜಿಯು ಟಿಪ್ಪುಸುಲ್ತಾನನಿಗೆ ವಿರೋಧವಾಗಿ ಪ್ರಚಾರ ಮಾಡಲು ಮೈಸೂರು ಪ್ರಾಂತಗಳಲ್ಲಿ ಸುತ್ತಾಡಿದ. ಶ್ರೀರಂಗಪಟ್ಟಣದ ಪತನವಾದ (ಏಪ್ರಿಲ್ ೪, ೧೭೯೯) ಅನಂತರ ಭೂ-ವೀಕ್ಷಣೆಗೆ ತೊಡಗಿ ಸುಮಾರು ೪೨,೦೦೦ ಮೈಲುಗಳಷ್ಟು ಪ್ರದೇಶವನ್ನು ಆತ ಸುತ್ತಿದ. ಆ ಸಂದರ್ಭದಲ್ಲಿ ಇತಿಹಾಸ ಸಂಸ್ಕೃತಿಗೆ ಸಹಾಯಕವಾದ ಎಲ್ಲ ವಿಷಯಗಳನ್ನು ಆತ ಸಂಗ್ರಹಿಸಿದ. ವಿವಿಧ ಭಾಷೆಗಳಲ್ಲಿ ಆತನ ಸಂಗ್ರಹದ ಒಟ್ಟು ವಿವರ ಇಂತಿದೆ:

೧ ಹಸ್ತಪ್ರತಿಗಳು ಒಟ್ಟು ೧,೫೬೮
೨ ಕೈಫಿಯತ್ತುಗಳು ೨,೦೭೦
೩ ಶಾಸನದ ನಕಲುಗಳು ೮,೦೭೦
೪ ನಕ್ಷೆಗಳು ೭೯
೫ ಚಿತ್ರಗಳು ೨,೬೩೦
೬ ನಾಣ್ಯಗಳು ೬,೨೧೮ ಮತ್ತು
೭ ಪುರಾತನ ವಿಗ್ರಹಗಳು ೧೦೦

ಈ ಸಂಗ್ರಹದಲ್ಲಿ ಮುಖ್ಯವಾದದ್ದನ್ನು ಆಯ್ದು ೧೮೨೩ರಲ್ಲಿ ಮತ್ತು ೧೮೩೫ರಲ್ಲಿ ಹೀಗೆ ಎರಡು ಬಾರಿ ಇಂಗ್ಲೆಂಡಿಗೆ ಸಾಗಿಸಲಾಯಿತು. ಇಂಗ್ಲೆಂಡಿಗೆ ಸಾಗಿಸಲಾದ ಕನ್ನಡ ಸಂಗ್ರಹಗಳು ಇಂತಿವೆ.

೧ ಪೌರಾಣಿಕ ಮತ್ತು ಕವಿಕೃತಿಗಳು ೪೮ ಹಸ್ತಪ್ರತಿಗಳು.
೨ ಕೈಫಿಯತ್ತುಗಳು ಮತ್ತು ಆತ್ಮಚರಿತ್ರೆ ೧೭ ಹಸ್ತಪ್ರತಿಗಳು.
೩ ಕಥೆ, ಕವನ ಇತ್ಯಾದಿ ೧೮ ಹಸ್ತಪ್ರತಿಗಳು.
೪ ತಾತ್ವಿಕ ಮತ್ತು ಜ್ಯೋತಿಷ್ಯಕ್ಕೆ ಸಂಬಂಧಿಸಿದ ೧೬ ಹಸ್ತಪ್ರತಿಗಳು.

ಹೀಗೆ ೯೯ ಹಸ್ತಪ್ರತಿಗಳನ್ನು ಮದರಾಸಿನಿಂದ ಇಂಗ್ಲೇಡಿಗೆ ಸಾಗಿಸಿದ್ದಕ್ಕೆ ಆಧಾರಗಳಿವೆ.

ಇಂಗ್ಲೇಡಿಗೆ ಸಾಗಿಸಿ ಅಳಿದುಳಿದ ಹಸ್ತಪ್ರತಿಗಳನ್ನು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಲೈಬ್ರರಿಯಲ್ಲಿ ರಾಶಿ ಹಾಕಿ ಇಡಲಾಯಿತು. ಮೇ ೮, ೧೮೨೧ ರಂದು ಮೆಕೆಂಜಿ ತೀರಿಕೊಂಡ ಅನಂತರ ಆ ಹಸ್ತಪ್ರತಿಗಳು ನಶಿಸುತ್ತಾ ಬಂದವು. ೧೮೫೮ರಲ್ಲಿ ಮದರಾಸು ಸರಕಾರವು ವಿಶೇಷ ಗಮನ ವಹಿಸಿ ಈ ಸಂಗ್ರಹವನ್ನು ರಕ್ಷಿಸಲು ಏರ್ಪಾಡು ಮಾಡಿತು. ಅದು "ಪ್ರಾಚ್ಯ ಗ್ರಂಥಮಾಲೆ" ಎಂಬ ಹೆಸರಿನಡಿಯಲ್ಲಿ ಅವನ್ನು ರಕ್ಷಿಸಿ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಿ ಪುಣ್ಯ ಕಟ್ಟಿಕೊಂಡಿತು.

ಈ ಅಳಿದುಳಿದ ಸಂಗ್ರಹದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಅತ್ಯುತ್ತಮ ದಾಖಲೆಗಳಿವೆ. ಮೈಸೂರಿನ ಇತಿಹಾಸಕ್ಕೆ ಸಂಬಂಧಿಸಿದ ಸಾವಿರ ವಿಚಾರಗಳಿವೆ. ಅದರಲ್ಲಿ ಕೈಫಿಯತ್ತುಗಳು ಪ್ರಮುಖ ಪಾತ್ರ ವಹಿಸುತ್ತವೆ. ಕೈಫಿಯತ್ತುಗಳು ಅನೇಕ ವಿವರಗಳನ್ನೊಳಗೊಂಡ ದಾಖಲೆಗಳಾಗಿವೆ. ಕೈಫಿಯತ್ತುಗಳನ್ನು ಬರೆಸಿ ಸಂಗ್ರಹಿಸುವಲ್ಲಿ ಮೆಕೆಂಜಿಯ ಉದ್ದೇಶವೇನಿತ್ತೆಂಬುದನ್ನು ಅವನ ಪತ್ರವೇ ವ್ಯಕ್ತಪಡಿಸುತ್ತದೆ.

"ಹಿಂದು ಜನರ ಬದುಕಿನ ಮೇಲೆ ಬೆಳಕು ಚೆಲ್ಲಬಲ್ಲ ಅನೇಕ ಸಂಗತಿಗಳನ್ನು ನಾನು ಸಂಗ್ರಹಿಸಿದ್ದೇನೆ. ಇವರ ಜೊತೆಯಲ್ಲಿ ಮೂರುಸಾವಿರಕ್ಕೂ ಮಿಕ್ಕಿ ಬರಹಗಳನ್ನು ಸಂಗ್ರಹಿಸಿದೆ......ಇಲ್ಲಿಯವರೆಗೆ ಈ ಕ್ಷೇತ್ರದಲ್ಲಿ ಯಾರೂ ಕೈಮಾಡಿಸಿಲ್ಲ... ಇವೆಲ್ಲಾ ಈ ನಾಡಿನ ಜನರು ಬದುಕಿದ ರೀತಿಯನ್ನು ಬದುಕುತ್ತಿರುವ ರೀತಿಯನ್ನು ಮುಖ್ಯವಾಗಿ ವಿವರಿಸಿ ಹೇಳುತ್ತದೆ......" (ಜರ್ನಲ್ ಆಫ್ ರಾಯಲ್ ಏಶಿಯಾಟಿಕ್ ಸೊಸಾಯಿಟಿ, ೧೮೩೪ ಪು. ೩೪೬).

ಈ ಉದ್ದೇಶದಿಂದಲೇ ಮೆಕೆಂಜಿ ಹಳ್ಳಿಹಳ್ಳಿಗಳಲ್ಲಿ ಸಾಕಷ್ಟು ಅಲೆದು ಅನೇಕ ವಿಚಾರಗಳನ್ನು ಬರಹದ ಮೂಲಕ ಶಾಶ್ವತಗೊಳಿಸಲು ಯತ್ನಿಸಿದ್ದಾನೆ.

ಈ ಕೈಫಿಯತ್ತುಗಳ ವಸ್ತು ವೈವಿಧ್ಯತೆ ಬಹಳ ವಿಶಾಲವಾಗಿದೆ. ಅವನ್ನು ಸ್ಥೂಲವಾಗಿ ವರ್ಗೀಕರಿಸಿ ನೋಡಬಹುದು (ಇನ್ನೂ ಯಾವುದೇ ಅಧ್ಯಯನಕ್ಕೆ ಒಳಗಾಗದೆ ಅನಾಥವಾಗಿ ಬಿದ್ದಿರುವ ಕನ್ನಡ ಕೈಫಿಯತ್ತುಗಳ ಒಟ್ಟು ಸಂಖ್ಯೆ ೧೭೧).

೧ ಊರುಗಳಿಗೆ ಸಂಬಂಧಿಸಿದ ಕೈಫಿಯತ್ತುಗಳು

ಮೆಕೆಂಜಿ ಸಂಗ್ರಹದ ೧೭೧ ಕೈಫಿಯತ್ತುಗಳಲ್ಲಿ ೭೨ ಕೈಫಿಯತ್ತುಗಳು ಊರುಗಳ ವಿವರಗಳನ್ನು ಕೊಡುತ್ತವೆ. ಇದರಲ್ಲಿ ಆಯಾ ಊರಿನ ಇತಿಹಾಸ ಸ್ಥಿತಿಗಳನ್ನು ವಿವರಿಸಲಾಗಿದೆ. ಸ್ಥಳ ಪುರಾಣವನ್ನು ಸಂಗ್ರಹಿಸಿ ಕೊಡಲಾಗಿದೆ. ಆ ಊರಿಗೆ ಆ ಹೆಸರು ಬರಲು ಕಾರಣವನ್ನೂ ಕೊಡಲಾಗಿದೆ.

ಉದಾ: ಕಡಬಾ ಹೆಸರು ಬರಲು ಕಾರಣ— "...ಕಡವೆ ಮೃಗದ ನೆತನವಾಗಿ ರಸಭಾವಿ ದೃಷ್ಟಿಗೆ ಬಿದ್ದು ರಾಜ್ಯವಾದದ್ದರಿಂದ ಆ ಸ್ಥಳಕ್ಕೆ ಕಡಬಾ ಸಂಸ್ಥಾನವೆಂದು..." (ಮೆಕೆಂಜಿ ಸಂಗ್ರಹ ಸಂ. ೩೫೩, ಪು: ೪೮೯)

ಊರಿನ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಲಾಗಿದೆ. ಕೆಲವೆಡೆ ಐತಿಹಾಸಿಕ ವ್ಯಕ್ತಿಗಳೇ ಪುರಾಣ ಪುರುಷರಂತೆ ವರ್ತಿಸುವುದಿದೆ. ಏನಿದ್ದರೂ ಮೆಕೆಂಜಿಯ ಪ್ರಯತ್ನ ಇಲ್ಲಿ ಮುಖ್ಯ.

ಊರಿನ ಭೌಗೋಲಿಕ ಹಿನ್ನಲೆಯ ವಿವರಗಳನ್ನು ಈ ಜಾತಿಯ ಕೈಫಿಯತ್ತುಗಳು ವಿವರಿಸಿ ಕೊಡುತ್ತವೆ.

ಉದಾ: ಶೃಂಗೇರಿ ಸೀಮೆಯ ಭೌಗೋಲಿಕ ವಿವರಗಳು—

"...ಯೀ ಶೀಮೆಯಲ್ಲಿರುವ ನದಿಗಳು ಅವುಗಳು ವಿವಾರಾ—ತುಂಗಭದ್ರಾ, ನೇತ್ರಾವತಿ, ವರದಾನದಿ, ಕುಶವತಿ, ಕುಮುದ್ವತಿ...ಅಂತು ನದಿ ೧೦ ಈ ಮೇರೆಗೆ ಇರುವುದು. ಸೂಳೆ ಕೆರೆಯ ನೀರಿನಿಂದ ಪೈರುಗಳು ಆಗುತ್ತವೆ" (ಮೆಕೆಂಜಿ ಸಂಗ್ರಹ ೩೫೦ ಪು: ೪೮೪)

ಆ ಊರಿನ ಜನಗಳ ಬಗೆಗಿನ ವಿವರಗಳನ್ನು ಮೆಕೆಂಜಿ ಸಂಗ್ರಹಿಸದೆ ಬಿಟ್ಟಿಲ್ಲ.

ಉದಾ: ಶೃಂಗೇರಿಯ ಕೈಫಿಯತ್ತಿನಲ್ಲಿ ಜನಗಳ ಬಗೆಗೆ ವಿವರ ಇಂತಿದೆ—

'...ಯೀ ಶೀಮೆಯಲ್ಲುಯಿರುವ ಜನಗಳಲ್ಲಿ ಯಾವ ಜಾತಿ ಹೇರಳಯಿದೆಯೆಂಬ ಬಗ್ಗೆ ವಿವರ—

೧ ಜಂಗಮ ಲಿಂಗಗಳ ಕಟ್ಟಿದವರ ಜಾತಿ

೨ ಹೊಲೇರು ಮಾದಿಗರು ಜಾತಿ.

ಯೀಗ ಜಾತಿ ಹೇರಳವಾಗಿಯಿದೆ.

ಬ್ರಾಹ್ಮಣ ಜಾತಿಯಲ್ಲು ಯಷ್ಟು ಜಾತಿಗಳಿವೆ ಎಂಬ ಬಗ್ಗೆ ವಿವರ–

೫ ಪಂಚದ್ರಾವಿಡಕ್ಕೆ–ದ್ರಾವಿಡ ಜಾತಿ, ಆಂಧ್ರ ಜಾತಿ, ಕರ್ನಾಟಕ ಜಾತಿ, ಮಹಾರಾಷ್ಟ್ರ ಜಾತಿ, ಗುಜರಾತಿ ಜಾತಿ...

ಪಂಚ ಗಉಡ ಜಾತಿಯೆಂಬುವ ಜಾತಿ ೫ದು ವಿವರ

೧ ಗಉಡ ಜಾತಿ	೧ ಮೈತಾಳಿ
೧ ಸಾರಸ್ವತಿ	೧ ಮಿಸ್ರಾ
೧ ವಾಂನ್ಯಗು	

ಯೀ ಜಾತಿಯವರು ನಡೆಯುವ ಆಚಾರ–ಸ್ನಾನ ಸಂಧ್ಯಾವಂದನೆ ಮಾಡಿಕೊಂಡುಯಿರುತ್ತಾರೆ. ಯಜ್ಞಾದಿಗಳು ನಡಿಯಬೇಕಾದರೆ ಇವರಿಗೆ ಸ್ವಾತಂತ್ರ್ಯವಿಲ್ಲ...

ಮುಸಲಮಾನ ಜಾತಿ ಮಾಡುವಂತಾದ್ದು ನಿರಾಕಾರ ಮೂರ್ತಿ ಅಲ್ಲಾಯಮಾಮಯೆಂಬುದಾಗಿ ಐದು ವೇಳೆಯು ನಿಮಾಜ ಮುಂತಾಗಿ ಮಾಡಿಕೊಂಡು ಅರಮನೆ ಚಾಕರಿ ಮೊದಲಾಗಿ ಸಮಸ್ತ ಚಾಕರೀನು ಮಾಡಿಕೊಂಡು ಬರುತಯಿದಾರೆ. ಹೆಂಗಳರು ಘೋಷಾದಿಂದ ಕಾಲು ಪರಿಯಂತ್ರ ಪರದೇಯಲ್ಲಿ ಮುಸುಕು ಹಾಕಿಕೊಂಡು ಇರುತ್ತಿಯಿದ್ದಾರೆ..." (ಮೆಕೆಂಜಿ ಸಂಗ್ರಹ ನಂ: ೩೫೧. ಪುಟ ೫೪೯–೫೫೬)

ಕೆಡಬಾ ಸಂಸ್ಥಾನದ ಕೈಫಿಯತ್ತಿನಲ್ಲಿ ಜನರ ಬಗ್ಗೆ ಸ್ವಲ್ಪ ವಿವರವಿದೆ– "...ಯೀ ಉರಲ್ಲಿ ಮನೆಗಳು ದೂರದೂರವಾಗಿ ಕಟ್ಟಿಸ್ತಾಯಿದ್ದಾರೆ. ಅದೇನು ಕಾರಣಯೆಂದರೆ ಯಾರು ಯಾರು ವ್ಯವಸಾಯ ಮಾಡುತ್ತಾರೋ ಅವರವರ ಸ್ಥಳದಲ್ಲಿ ಮನೇಗಳು ಕಟ್ಟುತ್ತಾರೆ." (ಮೆಕೆಂಜಿ ಸಂಗ್ರಹ ನಂ. ೩೫೩ ಪು: ೪೬೦)

ಇದಾದ ಅನಂತರಲ್ಲಿ ಊರಿನ ಬೆಳೆಗಳ ಬಗೆಗೆ ವಿವರಗಳಿವೆ–

ಉದಾ: "...ಯೀ ಶೀಮೆಯಲ್ಲು ಹುಟ್ಟೋ ಜಿನಿಸು ಅಡಿಕೆ. ಮೆಣ್ಸು, ಯಾಲಕ್ಕಿ, ಭತ್ತ, ರಾಗಿ ಜೋಳ. [illegible]. ತೆಂಗು. ಬಾಳೆ. [illegible]. ಹೆಸರು. ಹುರುಳಿ. ಶೊಂಠಿ ...ಯೀ ಶೀಮೆಯಿಂದ ಹೊರಗಿನ ಶೀಮೆಗೆ ಹೋಗುವ ಜಿನಿಸು. ಅಡಿಕೆ, ಯಾಲಕ್ಕಿ, ಮೆಣ್ಸು ಉತ್ತರ ಪೂರ್ವ ಸರಕು ಕಡೆಸಾಗತದ" (ಮೆಕೆಂಜಿ ಸಂಗ್ರಹ ನಂ. ೩೩೨ ಪು: ೧೭೯–೧೮೦)

ಬೆಳೆಗಳ ವಿವರಗಳನ್ನು ಕೊಡುವುದರ ಜೊತೆಗೆ ತೂಕದ ವಿವರಗಳನ್ನು ಹಲವೆಡೆ ಕೊಡಲಾಗಿದೆ.

"...ಯೀ ಊರಲ್ಲಿ ತೂಕಾ ಮಾಡುವುದು ಅಳತೆ ವಿವಾರಾ...ನವರಸ ದುಡ್ಡು ೨೪ಕ್ಕೆ ವಂದು ಕಚ್ಚಾ ಶೇರು, ಆರು ಕಚ್ಚಾಸೆರಿಗೆ ವಂದು ಪಂಚೇರು, ಪಂಚೇರು ೨ಕ್ಕೆ ಧಡಿಯಾ, ಧಡಿಯಾ ನಾಲ್ಕಕ್ಕೆ ವಂದು ಮಣಾ, ಮಣ ೪೮ಕ್ಕೆ ಕಚ್ಚಾ ನಾಲ್ವತ್ತೆಂಟು ಶೇರು ಅಂದರೆ ವಂದು ಮಣಾ, ಮಣಾ ಎಂಟಕ್ಕೆ ವಂದು ಯೆತ್ತಿನ ಹೇರು, ನಿಜ ವಂದಕ್ಕೆ ೨೨ ಮಣಾ–ಯಿದು ಅಂಗಡಿಯಲ್ಲಿ ನಡೆಯೋ ಅಂಥಾದ್ದು..." (ಮೆಕೆಂಜಿ ಸಂಗ್ರಹ ನಂ. ೩೩೨, ಪು:೧೭೮)

ಕುರುಗೋಡು ಕೈಫಿಯತ್ತಿನಲ್ಲಿ ಆ ಊರಿನಲ್ಲಿ ರುವ ಬಟ್ಟೆಗಳ ವಿವರ ಕೂಡ ದೊರಕುತ್ತದೆ.

"...ಯೀ ಶೀಮೆಯಲ್ಲಿ ಆಗುವಂತಾ ಬಟ್ಟೆಗಳು ಧೋತ್ರ ೧ ರೂಪಾಯಿ ಪರಿಯಂತ್ರ ೬ ರೂಪಾಯಿ ಶೀರೆಗಳು ಒಂದು ರೂಪಾಯಿ ಮೊದಲು ಮಾಡಿಕೊಂಡು ೧೦ ರೂಪಾಯಿ ಪರಿಯಂತ್ರ..." (ಮೆಕೆಂಜಿ ಸಂಗ್ರಹ ನಂ. ೩೯೯ ಪು: ೫೮)

ಊರುಗಳಿಗೆ ಸಂಬಂಧಿಸಿದ ಇಂಥ ಕೈಫಿಯತ್ತುಗಳು ಕೊನೆಯಲ್ಲಿ ಬರೆದವರ ವಿವರಗಳನ್ನು ಸಂಕ್ಷಿಪ್ತವಾಗಿ ನಮೂದಿಸಲಾಗಿದೆ. ಉದಾ:

"...ಯೀ ಪ್ರಕಾರ ಕಲಮುಗಳನ್ನು ತಯಾರು ಮಾಡಿ ಬರೆಸಿದವರು ನಗರ ಸೀಮೇ ಕೊಪ್ಪದ ಹೋಂಗಳಿಯಲಿರುವ ಮೇಲು ಬಂಗಡಿ ತಾಲೂಕ ಶಿರಸ್ತೆದಾರ ಕೃಷ್ಣರಾಯರು ಬರೆಸಿದರು. ರುದ್ರೋದ್ಗಾರಿ ಸಂವತ್ಸರ ಫಾಲ್ಗುಣ ಶು: ೩ ಮಂಗಳವಾರ ಬರಶಿಯಿದಾರೆ" (ಮೆಕೆಂಜಿ ಸಂಗ್ರಹ ೩೫೧ ಪು: ೫೫೬)

ಒಟ್ಟಿನಲ್ಲಿ ಊರುಗಳಿಗೆ ಸಂಬಂಧಿಸಿದ ಕೈಫಿಯತ್ತುಗಳಲ್ಲಿ ಅತ್ಯುತ್ತಮವಾದ ವಿಷಯಗಳು ಅಡಕವಾಗಿವೆ.

೨ ಜಾತಿಗೆ ಸಂಬಂಧಿಸಿದ ಕೈಫಿಯತ್ತುಗಳು

೧೬ ಕೈಫಿಯತ್ತುಗಳು ಜಾತಿಯ ವಿವರಗಳನ್ನು ಕೊಡುತ್ತವೆ. ಆ ಜಾತಿಗಳು–

೧ ಉಪ್ಪಲಿಗ ಜಾತಿ
೨ ಕುಂಚಿ ಒಕ್ಕಲಿಗ
೩ ಕುಡಿ ಕುಂಬಾರ
೪ ಕೊಂಕಣಿ
೫ ಕೊರಮ
೬ ಕೋಮಟಿಗ
೭ ಗಂಗಡಿಕಾರ ಒಕ್ಕಲಿಗ
೮ ನವಾಯಿತರು
೯ ಪದ್ಮಸಾಲೆಯವರು
೧೦ ಬಂಜಾರೆ ಜಾತಿ
(ಇದು ಎರಡು ರೀತಿಯಲ್ಲಿದೆ)
೧೧ ಬನವಳ್ಳಿ ಬಣಜಗರು
೧೨ ಮಣ್ಣು ಒಡ್ಡ ಜಾತಿ
೧೩ ಮರಾಠೆಯವರು
೧೪ ಮೇದಾರ ಜಾತಿ

ಈ ೧೪ ಜಾತಿಗಳ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ಈ ಕೈಫಿಯತ್ತಿನಿಂದ ಪಡೆಯಬಹುದು.

೩ ಮಠಗಳಿಗೆ ಸಂಬಂಧಿಸಿದ ಕೈಫಿಯತ್ತುಗಳು

೧೫ ಕೈಫಿಯತ್ತುಗಳು ಮಠಗಳ ಬಗ್ಗೆ ವಿವರಗಳನ್ನೊದಗಿಸುತ್ತವೆ. ಇವುಗಳನ್ನು ಮತ್ತೆ ಮೂರು ವಿಭಾಗ ಮಾಡಬಹುದು:

(ಅ) ವೈಷ್ಣವ ಮಠಗಳಿಗೆ ಸಂಬಂಧಿಸಿದವು ೧೨ ಕೈಫಿಯತ್ತುಗಳು
(ಆ) ಶೈವ ಮಠಗಳಿಗೆ ಸಂಬಂಧಿಸಿದವು ಎರಡು
(ಇ) ಜೈನಮಠ ಅಥವಾ ಬಸದಿಗೆ ಸಂಬಂಧಿಸಿದ್ದು ಒಂದು ಕೈಫಿಯತ್ತು.

ಉಡುಪಿಯ ಅಷ್ಟಮಠಗಳ ಬಗೆಗೆ ಬರೆವಾದ ಕೈಫಿಯತ್ತಿನಲ್ಲಿ ಆ ಮಠದ ಸಂಪ್ರದಾಯ, ಸ್ವಾಮಿಗಳು, ಅಲ್ಲಿ ದೊರಕುವ ಗ್ರಂಥಗಳು ಇವುಗಳ ಬಗೆಗೆ ವಿವರಗಳಿವೆ. ಕೆಲವೆಡೆ ಐತಿಹಾಸಿಕ ಘಟನೆಗಳನ್ನು ದೇವರ ಪವಾಡಗಳೆಂಬಂತೆ ವರ್ಣಿಸಲಾಗಿದೆ.

೪ ದೇವಸ್ಥಾನಗಳಿಗೆ ಸಂಬಂಧಿಸಿದ ಕೈಫಿಯತ್ತುಗಳು

ಏಳು ಕೈಫಿಯತ್ತುಗಳು ಕರ್ನಾಟಕದ ವಿವಿಧ ದೇವಸ್ಥಾನಗಳ ಪೂರ್ಣಪರಿಚಯ ಮಾಡಿಕೊಡಲು ಯತ್ನಿಸಿವೆ. ಧರ್ಮಸ್ಥಳಕ್ಕೆ ಸಂಬಂಧಿಸಿದ ಕೈಫಿಯತ್ತು ಅಲ್ಲಿಯ ಬಗ್ಗೆ ಸುದೀರ್ಘ ವಿವರಗಳನ್ನೊದಗಿಸುತ್ತದೆ.

೫ ಅರಸು ಮನೆತನಕ್ಕೆ ಸಂಬಂಧಿಸಿದವು

ಆರು ಕೈಫಿಯತ್ತುಗಳು ವಿವಿಧ ರಾಜಮನೆತನದ ಬಗ್ಗೆ ವಿವರಗಳನ್ನೊದಗಿಸುತ್ತವೆ ಆ ಅರಸು ಮನೆತನಗಳು

೧ ಅಜಿಲ ಅರಸರು
೨ ಕಾರ್ಕಳದ ಅರಸರು
೩ ಚೌಟ ಅರಸರು
೪ ಮೈಸೂರು ರಾಜರು
೫ ರಾಜವಂಶಾವಳಿ ಕೈಫಿಯತ್ತು ಮತ್ತು
೬ ಸೋದೆ ವಂಶಾವಳಿ

ಮೈಸೂರರಾಜರ ಕೈಫಿಯತ್ತನ್ನು ಹೊರತುಪಡಿಸಿದರೆ ಉಳಿದವು ದಕ್ಷಿಣ ಕನ್ನಡದ ರಾಜಮನೆತನಗಳೇ ಆಗಿವೆ ಎಂಬುದು ಗಮನಾರ್ಹ.

೬ ವ್ಯಕ್ತಿಯೊಬ್ಬನ ವೈಯಕ್ತಿಕ ಚರಿತ್ರೆ

ಕುಮಾರರಾಮ, (ಇವನ ಬಗ್ಗೆ ಎರಡು ಕೈಫಿಯತ್ತುಗಳಿವೆ) ಬಸವಲಿಂಗಯ್ಯ, ಹೈದರ ಮತ್ತು ತ್ರೊಣ್ಣೂರ ರಾಕ್ಷಸಿಯರ ಬಗ್ಗೆ ಕೈಫಿಯತ್ತನ್ನು ಬರೆಸಲಾಗಿದೆ. ಕನ್ನಡದಲ್ಲಿ ಜೀವನಚರಿತ್ರೆಗಳು ಈಚೆಗೆ ಹುಟ್ಟಿವೆಯೆಂದು ಭಾವಿಸಲಾಗಿದ್ದರೂ ಮೆಕೆಂಜಿಯಲ್ಲಿ ಅಂಥ ಆರಂಭದ ಪ್ರಯತ್ನಗಳನ್ನು ಕಾಣಬಹುದು.

೭ ಜಾತಿ-ರಿವಾಜು ಕೈಫಿಯತ್ತುಗಳು

ಐದು ಕೈಫಿಯತ್ತುಗಳು ಐದು ವಿವಿಧ ಜಾತಿಯಲ್ಲಿ ನಡೆಯುವ ಕಟ್ಟುಕಟ್ಟಳೆಗಳ ವಿವರಗಳನ್ನು ನೀಡುತ್ತವೆ. ಅದರಲ್ಲಿ ಈ ಕೆಳಗಿನ ವಿವರಗಳನ್ನು ನೀಡಲಾಗಿದೆ.

೧ ಜನನ ಸಂದರ್ಭದ ಕ್ರಿಯೆಗಳು
೨ ಮದುವೆಗೆ ಹೆಣ್ಣು ನೋಡುವುದು ಮತ್ತು ಲಗ್ನ ಇಡಿಸುವುದು.
೩ ಲಗ್ನ ಸಂಬಂಧ ಖರ್ಚು ವಿವರಗಳು
೪ ಹೆಣ್ಣಿಗೆ ಸೀರೆ ಉಡಿಸುವ ಕ್ರಮ
೫ ವಿವಾಹ ಕ್ರಮಗಳು

೬ ಜಾತಿ ಬಿಟ್ಟು ಬೇರೆ ಜಾತಿ ಸೇರಬೇಕಾದರೆ ಕ್ರಮಗಳು

೭ ಜಾತಿದ್ರೋಹ ಮಾಡಿದವರಿಗೆ ಶಿಕ್ಷೆ, ಆತನನ್ನು ಜಾತಿ ಬಿಡಿಸುವುದು ಮತ್ತೆ ಜಾತಿಗೆ ಸೇರಿಸಿಕೊಳ್ಳುವುದು. ಆಗ ಸಲ್ಲಿಸಬೇಕಾದ ಕಪ್ಪು ಕಾಣಿಕೆ ವಿವರಾ ಮತ್ತು

೮ ಸತ್ತವರಿಗೆ ನಡೆಸುವ ಅಂತ್ಯಕ್ರಿಯೆ.

ಇವುಗಳ ವಿವರಣೆಯ ಒಂದು ಮಾದರಿ..."ಯೀ ಜಾತಿಯಲ್ಲಿ ಜನನವಾದರೆ ಗಂಡು ಹುಟ್ಟಿದರೆ ಐದುದಿನ, ಹೆಣ್ಣು ಹುಟ್ಟಿದರೆ ಮೂರು ದಿನ ಹೊಲೆ, ನಾಕನೇ ದಿನ, ಆರನೇ ದಿನಾ ಮೈ ಮನೆ ತೊಳಿದು ಅರಿವೆ ಒಗೆದುಕೊಂಡೇ ಯರಕೊಂಡು ಊಟಾ ಮಾಡಿ ಸಂಜೀ ತನಕ ಹಡದಾಡಿ ಸೂಲಗಿತ್ತಿ ಯಿಬ್ಬರು ಹಸದು ಸಂಜೆಗೆ ತೊಟ್ಟಿಲವೊಳಗೆ ಕೂಸ್ನ ಹಾಕಿ ಆ ಮೇಲೆ ವೂಟಾ ಮಾಡಬೇಕು. ಗವುಡ ಬುದ್ಧಿವಂತರನು ಕರೆದರು ಆದೀತು. ಯಿಲ್ಲದಿದ್ದರೆ ಚಿಂತೆಯಿಲ್ಲಾ ಕಲಂ (ಮೆಕೆಂಜಿ ಸಂಗ್ರಹ ನಂ. ೧೧೯).

ಇದೇ ರೀತಿ ಉಳಿದ ಕರ್ಮಗಳ ಬಗೆಗೆ ಸಾಕಷ್ಟು ವಿವರಗಳಿವೆ. ಇಂಥವುಗಳಲ್ಲಿ ಸುಳ್ಳು, ಉತ್ಪ್ರೇಕ್ಷೆಗಳು ಸೇರುವುದಿಲ್ಲ.

೮ ಅಗ್ರಹಾರಗಳ ಕೈಫಿಯತ್ತುಗಳು

ತಳಕಾಡು, ಸೊಗಾನಿ, ಸೋಮನಾಥಪುರಿ, ಮತ್ತು ಸೋಸಲೆ ಅಗ್ರಹಾರಗಳ ಬಗ್ಗೆ ನಾಲ್ಕು ಕೈಫಿಯತ್ತುಗಳು ದೊರಕುತ್ತವೆ. ಈ ಅಗ್ರಹಾರಗಳಿಗೆ ಬಟ್ಟದತ್ತಿ ಆದರ ಪ್ರಾಚೀನ ವೈಭವಗಳ ಬಗ್ಗೆ ಇವುಗಳಲ್ಲಿ ವಿವರಗಳಿವೆ.

೯ ಧರ್ಮಕ್ಷೇತ್ರಗಳ ಕೈಫಿಯತ್ತುಗಳು

ಕದಿರಿದೇವಸ್ಥಾನ, ಅನಂತಪುರ ದೇವಸ್ಥಾನ, ಕದರಿಮಾಗಣಿ ದೇವಸ್ಥಾನ ಮತ್ತು ಧರ್ಮಸ್ಥಳದ ಕೈಫಿಯತ್ತುಗಳು ಆಯಾ ದೇವಳಗಳಿಗೆ ಸಂಬಂಧಿಸಿದ ವಿವರಗಳನ್ನು ಕೊಡುತ್ತವೆ.

೧೦ ಕೋಟೆಗಳಿಗೆ ಸಂಬಂಧಿಸಿದ ಕೈಫಿಯತ್ತುಗಳು

ಕಣ್ಣುಕುಪ್ಪೆ ಕೋಟೆ ಕೈಫಿಯತ್ತು ಜಮಾಬಾದ್ ಕೈಫಿಯತ್ತು ಮತ್ತು ತೆಕ್ಕಲಕೋಟೆ ಕೈಫಿಯತ್ತುಗಳು ಆಯಾ ಕೋಟೆಗಳ ಬಗ್ಗೆ ಅತ್ಯಂತ ಉಪಯುಕ್ತ ಮಾಹಿತಿಗಳನ್ನೊದಗಿಸುತ್ತವೆ.

೧೧ ಮತಗಳಿಗೆ ಸಂಬಂಧಿಸಿದ ಕೈಫಿಯತ್ತುಗಳು

ಅದವಾನಿ ಜೈನರ ಕೈಫಿಯತ್ತು ಮತ್ತು ವೆಂಕಟಪುರದ ವೈಷ್ಣವರ ಕೈಫಿಯತ್ತು, ಮತಗಳಿಗೆ ಸಂಬಂಧಿಸಿದ್ದು ಆಯಾ ಮತಗಳ ಬಗ್ಗೆ ಮೊಗಳಿಕೆ ಮಾತುಗಳಿವೆ.


೧೨ ಪರ್ವತದ ಕೈಫಿಯತ್ತು

ದತ್ತಾತ್ರೇಯ ಪರ್ವತದ ಮಾಹಾತ್ಮ್ಯವನ್ನು ವರ್ಣಿಸುವ ಒಂದು ಕೈಫಿಯತ್ತು ಆ ಪರ್ವತದ ಪೌರಾಣಿಕ, ಹಿನ್ನಲೆ, ಐತಿಹಾಸಿಕ ಬೆಳವಣಿಗೆಯ ವಿವರಗಳನ್ನು ಒದಗಿಸುತ್ತದೆ.

೧೩ ಪಶುಪಕ್ಷಿ ಕೈಫಿಯತ್ತು

ಒಂದು ಕೈಫಿಯತ್ತು ಪಶುಪಕ್ಷಿ ಮೃಗಜಾತಿಗಳ ಕುರಿತು ವಿವರ ನೀಡುತ್ತದೆ. ಅದರಲ್ಲಿ ೮೭ ಮರಗಳ ಹೆಸರುಗಳು ಮತ್ತು ೫೯ ಪ್ರಾಣಿಗಳ ಹೆಸರುಗಳಿವೆ. ಇದರ ಜೊತೆ ಕೆಲವು ಬೆಳೆಗಳನ್ನು ಬೆಳೆಸುವ ಬಗೆಗೂ ವಿವರಗಳಿವೆ.

ಹೀಗೆ ೧೬೧ ಕೈಫಿಯತ್ತುಗಳ ಮೂಲಕ ಮೆಕಂಜಿ ವಿವಿಧ ವಿಷಯಗಳನ್ನು ಸಂಗ್ರಹಿಸುವ ಮಹಾತ್ಕಾರ್ಯವನ್ನು ಮಾಡಿದ್ದಾನೆ. ಪ್ರತಿಯೊಂಡಕ್ಕೂ ಅದರದ್ದೇ ಆದ ಹಿರಿಮೆಯಿದೆ. ✡



ಅನುಪಯುಕ್ತ ಮಾಹಿತಿ

ಡಚ್‌ರಲ್ಲಿ ಏಕಕಾಲಕ್ಕೆ ಆರು 'ಹ್ಯಾಟ್'ಗಳನ್ನು ಹಾಕಿಕೊಳ್ಳುವ ರೂಢಿಯಿತ್ತು.

ರೋಗಿ: ಡಾಕ್ಟರ್, ತಾವು ತಮ್ಮ ಜೀವನದಲ್ಲಿ ಒಮ್ಮೆಯಾದರೂ ತಪ್ಪು ಮಾಡಿದ್ದಿರಾ?"

ಡಾಕ್ಟರ್: "ಹಾಂ, ಕೇವಲ ಒಂದೇ ಒಂದು ಸಲ ಮಾಡಿದ್ದೇನೆ, ಒಂದು ಸಲ ಒಬ್ಬ ಕೋಟ್ಯಾಧೀಶನಿಗೆ ಕೇವಲ ಎರಡೇ ಇಂಜೆಕ್ಷನ್ ಕೊಟ್ಟು ಆತನ ರೋಗವನ್ನು ಗುಣಪಡಿಸುವದರಿಂದ."

*

ನಗೆಮಲ್ಲಿಗೆ

ಬಾಕ್ಸಿಂಗ್ ಸ್ಪರ್ಧೆಗೆ ರಂಗೇರಿತ್ತು. ಸ್ಪರ್ಧಾಳುಗಳಿಬ್ಬರು ಹಸಿದ ಹುಲಿಗಳಂತೆ ಸೆಣಸುತ್ತಿದ್ದರು. ಅವರು ಒಬ್ಬರ ಮೇಲೊಬ್ಬರು ಪ್ರಹಾರ ಮಾಡಿದಾಗೊಮ್ಮೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತ ಒಬ್ಬಾತ ಭಾವಾವೇಶದಿಂದ ತನ್ನ ಆಸನದಿಂದ ಪುಟದೇಳುತ್ತ ಕಿರುಚುತ್ತಿದ್ದ, "ಹೂಂ ಹೊಡೆ! ಹೂಂ ಉರುಳಿಸು ಅವನ ಹಲ್ಲುಗಳನ್ನು!"

ಆತನ ಉತ್ಸಾಹವನ್ನು ಕಂಡು ಪಕ್ಕದಲ್ಲಿ ಕುಳಿತ ಪ್ರೇಕ್ಷಕನಿಗೆ ಕುತೂಹಲವುಂಟಾಯಿತು. ಆತನನ್ನು ಅಭಿನಂದಿಸುತ್ತ ನುಡಿದ, "ತಮ್ಮ ಉತ್ಸಾಹವನ್ನು ಕಂಡರೆ ಹಿಂದೆ ತಾವೊಬ್ಬ ಶ್ರೇಷ್ಠ ಬಾಕ್ಸಿಂಗ್ ಪಟುವಾಗಿದ್ದಿರಬೇಕೆಂದು ನನಗೆನಿಸುತ್ತದೆ. ಈ ಇಳಿವಯಸ್ಸಿನಲ್ಲೂ ತಮ್ಮಲ್ಲಿ ಆ ಉತ್ಸಾಹವೇ ಉಳಿದಿರುವದು ನಿಜಕ್ಕೂ ಹೆಮ್ಮೆಯ ಸಂಗತಿ."

"ಇಲ್ಲ ಸ್ವಾಮಿ, ನಾನೊಬ್ಬ ಗಿರಾಕಿಗಳಿಲ್ಲದ ದಂತವೈದ್ಯ" ಎಂದಾತ ನುಡಿದ.

*

ತ್ರಿಲೋಕಚಂದ ಮತ್ತು ಭಗವಾನದಾಸ ಇಬ್ಬರಲ್ಲೂ ಗಾಢಮೈತ್ರಿಯಿದ್ದಿತು. ಇಬ್ಬರೂ ಸೇರಿ ಒಂದು ಬಟ್ಟೆ ಅಂಗಡಿಯನ್ನು ಪ್ರಾರಂಭಿಸಿದರು. ಇಬ್ಬರೂ ಮಹಾ ಜಿಪುಣರು. ತಮ್ಮ ಅಂಗಡಿಗೆ ಆದಷ್ಟು ಚಿಕ್ಕ ನಾಮಫಲಕವನ್ನು ಬರೆಸಬೇಕೆಂದು ನಿಶ್ಚಯಿಸಿದರು.

ಮರುದಿನ ಅವರ ಅಂಗಡಿಯೆದುರು ಅತಿ ಚಿಕ್ಕ ಹಲಗೆಯೊಂದು ತೂಗಾಡುತ್ತಿತ್ತು, 'ಟಿ.ಬಿ. ಕ್ಲಾಥ್ ಮರ್ಚಂಟ್' ಎಂದು.

ಕಲಬೆರಕೆಯ ಅಪರಾಧಕ್ಕಾಗಿ ಮಾಂಸದ ಅಂಗಡಿಯವನೊಬ್ಬನನ್ನು ಪೋಲಿಸರು ಬಂಧಿಸಿದರು.

ಕುರಿಯ ಮಾಂಸದಲ್ಲಿ ಕುದುರೆಯ ಮಾಂಸವನ್ನು ಬೆರಸಿ ಮಾರುತ್ತಾನೆಂಬ ಆಪಾದನೆಯನ್ನು ಅವನ ಮೇಲೆ ಹೊರಿಸಲಾಗಿತ್ತು.

ಕೇಸು ವಿಚಾರಣೆಗೆ ಬಂದಾಗ, ನ್ಯಾಯಾಧೀಶರು ಆತನನ್ನು ಪ್ರಶ್ನಿಸಿದರು.

"ಆಣೆಮಾಡಿ ನಿಜವನ್ನು ಹೇಳು, ನೀನು ಎಷ್ಟು ಕುರಿಯ ಮಾಂಸಕ್ಕೆ ಎಷ್ಟು ಕುದುರೆಯ ಮಾಂಸವನ್ನು ಬೆರೆಸುವೆ?"

"ನಿಜ ಹೇಳುತ್ತೇನೆ ಮೈ ಲಾರ್ಡ್, ಸಮ-ಸಮ ಪ್ರಮಾಣದಲ್ಲಿ ಬೆರೆಸುವೆ."

"ಸಮ-ಸಮ ಎಂದರೆ ಎಷ್ಟು? ಸ್ವಲ್ಪ ವಿವರವಾಗಿ ಹೇಳು" ನ್ಯಾಯಾಧೀಶರು ನುಡಿದರು.

"ಒಂದು ಕುರಿಗೆ ಒಂದು ಕುದುರೆ ಮೈ-ಲಾರ್ಡ್" ಆರೋಪಿ ಉತ್ತರಿಸಿದ.

*

ತಾನಿಲ್ಲದ ಸಮಯದಲ್ಲಿ ತನ್ನ ಹೆಂಡತಿ ಪರಪುರುಷನ ಸಂಗ ಮಾಡಿದ್ದಾಳೆ ಎಂಬ ಕಾರಣದಿಂದ ಅವಳಿಂದ ಡೈವೋರ್ಸ್ ತೆಗೆದುಕೊಳ್ಳಲು ಗಂಡ ನ್ಯಾಯಾಲಯದ ಕಟ್ಟೆ ಹತ್ತಿದ.

ಕೇಸು ವಿಚಾರಣೆಗೆ ಬಂತು. ತಾನು ಊರಲ್ಲಿಲ್ಲದ ಸಮಯ ಸಾಧಿಸಿ ತನ್ನ ಹೆಂಡತಿ ಚೆನ್ನಿ ಪರಪುರುಷನ ಸಂಗ ಮಾಡಿದ್ದಾಳೆ. ಹೀಗೆ



"ಅಯ್ಯೋ ಬೆಪ್ಪೇ...ಆತ ಈಜಲು ಬಾರದ ಕಾರಣ ಮುಳುಗುತ್ತಿದ್ದಾನೆಂದು ಹೇಳುತ್ತಿದ್ದೀಯಲ್ಲ.. ಆ ಪ್ರದೇಶವನ್ನಾವರಿಸುವ ದ್ರವದ ಸಾಂದ್ರತೆಗಿಂತ ಆತನ ಸಾಂದ್ರತೆ ಹೆಚ್ಚು ಅಷ್ಟೇ..."

ಪತಿಯಾದ ತನಗೆ ಅವಳು ಮೋಸ ಮಾಡಿದ್ದಾಳೆ ಎಂದು ಗುಂಡ ನುಡಿದ. ಅಪರಾಧಿಯ ಸ್ಥಾನದಲ್ಲಿ ನಿಂತ ಗುಂಡನ ಪತ್ನಿಯನ್ನು ನ್ಯಾಯಾಧೀಶರು ಪ್ರಶ್ನಿಸಿದರು, "ನಿನ್ನ ಪತಿ ನಿನ್ನ ಮೇಲೆ ಹೊರಿಸಿರುವ ಆರೋಪ ನಿಜವೆ?"

"ಮೋಸ ಮಾಡಿದವಳು ನಾನಲ್ಲ, ಆತ ಮೈ ಲಾರ್ಡ್."

"ಹೇಗೆ?"

"ಊರಿಗೆ ಹೋಗಿ ಎರಡು ದಿವಸಗಳ ನಂತರ ಮರಳಿ ಬರುತ್ತೇನೆ ಎಂದು ಹೇಳಿ ಹೋಗಿದ್ದ ಆತ ಅಂದಿನ ರಾತ್ರಿಯೇ ಏಕೆ ಮರಳಿ ಬರಬೇಕಿತ್ತು?"

ಚೆನ್ನಿ ನ್ಯಾಯಾಧೀಶರನ್ನೇ ಪ್ರಶ್ನಿಸಿದಳು.

*

ಒಬ್ಬ : "ನೀನು ಜೇನುನೊಣಗಳನ್ನು ಸಾಕುವ ವ್ಯವಸಾಯ ಪ್ರಾರಂಭಿಸಿದ ಮೇಲೆ ನಿನಗೇನಾದರೂ ಲಾಭವಾಯಿತೆ?"

ಇನ್ನೊಬ್ಬ : "ಆಗದೇನು? ಅವು ಕಡಿದಾವೆಂಬ ಭಯದಿಂದ ನಮ್ಮ ಮನೆಗೆ ಬರುವ ಅತಿಥಿಗಳ ಸಂಖ್ಯೆ ಕಡಿಮೆಯಾಗಿದೆ."

ಸಂಗ್ರಹ: - ಮುರಲೀಧರ ಕುಲಕರ್ಣಿ

ಡಿಸೆಂಬರ 1980

ಗೀಜಗನ ಗೂಡು

ಮನಸ್ಸೋ ಗೀಜಗನ ಗೂಡು
ಬೋಳು ಮರದ
ಒಂಟಿ ರೆಂಬೆಗೆ
ಜೋತು ಬಿದ್ದ ಬದುಕು
ನಿರಭ್ರ ಆಗಸದಲ್ಲಿ
ಆಸೆ
ಚೂರು ಚೂರೆ ಚದರುವ ಮೋಡ
ಹಸಿರಿಲ್ಲ; ಹಸಿದ ಭೂಮಿ
ಗಾಳಿಗೂ ಸಂಚಕಾರ
ಬೆವರ ಸೋನೆ ; ಬಿಸಿಲ ಇರಿತ
ಬಂಡೆ ಬೆಟ್ಟದ ತುದಿಗೆ
ಹೊಂಚು ಕುಳಿತ ರಣಹದ್ದು
ನೋಟ ಇತ್ತ ಕಡೆಗೆ
ಯಾವ ಮರಿ ಬಲಿಯೋ ?
ಆರೆ ತೆರೆ ತೂಗುವ ಗಾಳಿಗೆ
ಗೂಡು ತೂಗುತ್ತಿದೆ ?
ಬದುಕುವ ಹಂಬಲ
ಜಗ್ಗುತ್ತಿದೆ.



ಅಕೋ... ಆ ತುದಿಯ ಕಲ್ಲು ಬೆಂಚಿನ ಮೇಲೆ ಕುಳಿತಿದ್ದಾನಲ್ಲಾ, ಅವನತ್ತ ಸ್ವಲ್ಪ ನಿಮ್ಮ ಗಮನ ಹರಿಸಿ. ಅವನ ಮುಖದಲ್ಲಿ ಬೇಸರದ ಛಾಯೆ ಕಾಣಿಸುವುದಿಲ್ಲವೇ? ಬೇಸರಕ್ಕೇನು ಬಿಡಿ. ಏನಾದರೂ ಕಾರಣವಿರಬಹುದು– ಸಂಸಾರಸ್ಥನಾಗಿದ್ದರೆ ಅದರ ಹಗರಣ; ಅಲ್ಲವಾದಲ್ಲಿ ಒಬ್ಬಂಟಿತನ. ನೌಕರಸ್ಥನಾಗಿದ್ದರೆ ಬಾಸ್‌ನ ಅಥವಾ ಆಫೀಸಿನ ಕಿರುಕುಳ; ನಿರುದ್ಯೋಗಿಯಾಗಿದ್ದರೆ ಅದಕ್ಕೆ ಅಂಟಿಕೊಂಡ ಹಲವು ಸಮಸ್ಯೆಗಳು. ಹೀಗೆ ಊಹಾಪಟ್ಟಿಯನ್ನು ಬೆಳೆಸಿ ವಿಷಯವನ್ನು ತೀರಾ ಲಘುವಾಗಿ ತೆಗೆದುಕೊಳ್ಳಲಾಗದು. ಹಾಗೆಂದರೆ, ಅವನ ಬೇಸರವನ್ನು ತೀರಾ ತೀವ್ರ ಸ್ವರೂಪದ್ದೆಂದು ಪರಿಗಣಿಸಬೇಕೆಂಬುದಾದರೆ, ಅವನ ಬದುಕಿನಲ್ಲಿ ಯಾವುದೋ ಗಂಭೀರ ದುರಂತ ಘಟಿಸಿರಬೇಕು ಅಲ್ಲವೇ ಎಂದು ನೀವು ಕೇಳೀರಿ. ದುರಂತವೇನೋ ಘಟಿಸಿದೆ. ಆದರೆ, ಅದನ್ನು ಮಹಾ ಎನ್ನಲಾಗದು ಬಿಡಿ. ಕೆಲವರ ಬದುಕಿನಲ್ಲಾದರೂ ಅದು ಘಟಿಸಬಹುದಾದದ್ದೇ ! ಇಷ್ಟೇ: ಅವನು ಪ್ರೀತಿಸಿ ಮದುವೆಯಾಗ ಬಯಸಿದ್ದ ಹುಡುಗಿಯ ಮದುವೆ ಎರಡು ತಿಂಗಳ ಹಿಂದೆ ಜರುಗಿಹೋಯಿತು ಬೇರೊಬ್ಬನೊಂದಿಗೆ. ಆದರೆ, ಇದೇ

ಜೋಡಿ

ಟಿ. ಎಂ. ಸುಬ್ಬರಾಯ

ಹೌದು ಎಂದು ಘಟ್ಟಿಯಾದ ನಿರ್ಣಯ ತಳೆಯು ವಂತಿಲ್ಲ. ಏಕೆಂದರೆ ಆತ ಯಾರೊಂದಿಗೂ ತನ್ನ ಬೇಸರದ ಕಾರಣವನ್ನು ಹೇಳಿಕೊಳ್ಳುವದಿಲ್ಲ. ಆತ ನಿಜಕ್ಕೂ ಇಂಟ್ರೋವರ್ಟ್. ಎಲ್ಲವನ್ನೂ ತನ್ನಲ್ಲಿಯೇ ಅದುಮಲು ಯತ್ನಿಸುತ್ತಾನೆ ಆತ.

ನೋಡಿ, ಅವನ ವರ್ತನೆಯನ್ನು ತುಸು ನೋಡಿ, ಕುಳಿತಲ್ಲಿಂದಲೇ ಬಾಗಿ ನೆಲದಲ್ಲಿ ಬೆಳದಿದ್ದ ಹುಲ್ಲಿನ ಎಸಳನ್ನು ಕಿತ್ತಿದ್ದಾನೆ. ಅದನ್ನು ಬಾಯಲ್ಲಿ ಇರಿಸಿ ಸಣ್ಣ ಸಣ್ಣ ತುಂಡು ಮಾಡುತ್ತಾ ಉಗುಳುತ್ತಿದ್ದಾನೆ. ಅಲ್ಲಾ, ಹೀಗೆ ಹುಲ್ಲು ಕಡ್ಡಿ ಜಗಿದು ಉಗುಳಲು ಅವನಿಗೇನಾಗಿದೆ ಧಾಡಿ? ಕೈ ತುಂಬಾ ಪಗಾರ ತರೋ ಒಳ್ಳೆಯ ನೌಕರಿ ಉಂಟು ಅವನಿಗೆ. ಆಫೀಸ್‌ನಲಿ ಅವನಿಗೇನೋ ಹೆಚ್ಚು ತೊಂದರೆ ಇದ್ದಂತಿಲ್ಲ. ಸಣ್ಣ ಪುಟ್ಟ ತರಲೆ. ಯಾವ ಆಫೀಸ್‌ನಲ್ಲಿ ಇರುಲ್ಲ? ಅಷ್ಟಕ್ಕೇ ಹೀಗೆ ರಜಾ ಗುದ್ದಿ, ಈ ಉರಿ ಬಿಸಿಲಿನ ವೇಳೆ, ಪಾರ್ಕಿಗೆ ಬಂದು ಹುಲ್ಲು ಜಗಿಯುತ್ತಿದ್ದಾನೆ! ಸ್ಸರಿ ಬಿಡಿ .. ಆಫೀಸಿಗೆ ರಜಾ ಹಾಕಿರುವುದರಿಂದ ಬೇಸರ ಬಂದು ಇಲ್ಲಿಗೆ ಬಂದಿದ್ದಾನೆ ಎನ್ನುವ ತೀರ್ಮಾನಕ್ಕೆ ಬರಬೇಡಿ. ಅವಸರದ ತೀರ್ಮಾನ ಒಳ್ಳೆಯದಲ್ಲ. ಇಲ್ಲಿಗೆ ಬರುವ ಮುಂಚೆಯೇ ಅವನಿಗೆ ಬೇಸರವಾಗಿತ್ತು, ರಜೆ ಗುದ್ದಿದ್ದಾನೆ. ಮತ್ತು... ಬೇಡಬಿಡಿ, ಈ ತರ್ಕ ನಿಮಗೂ ಬೇಸರ ಹುಟ್ಟಿಸಿತು!

ಅವನು ತನ್ನ ಪ್ಯಾಂಟಿನ ಜೇಬಿಗೆ ಕೈ ತೂರಿಸಿದ. ಅಲ್ಲಿಂದ ಪ್ಲಾಸ್ಟಿಕ್ಕಿನ ಸಿಗರೇಟ್ ಕೇಸ್ ತೆಗೆದ. ಅದರ ಬಾಯಿ ತೆರೆದ. ಒಂದು ಸಿಗರೇಟ್ ತೆಗೆದುಕೊಂಡು ಬಾಯಿಗಿರಿಸಿದ. ಮತ್ತೆ ಜೇಬಿಗೆ ಕೈ ತೂರಿ ಲೈಟರ್ ತೆಗೆದ. ಪ್ಯಾಕ್‌ನ ಬಾಯಿ ಮುಚ್ಚಿ ಜೇಬಿಗೆ ತೂರಿದ. ಲೈಟರ್ ಉರಿ ಮಾಡಿದ. ಸಿಗರೇಟಿನ ಇನ್ನೊಂದು ತುದಿಗೆ ಅದನ್ನು ತಾಗಿಸಿದ. ಹೊಗೆ ಎಳೆದು ಚೆಲ್ಲಿದ. ಇದರಲ್ಲೇನು ಮಹಾ ವಿಶೇಷ ಉಂಟು...? ಸಿಗರೇಟು ಯಾರು ತಾನೇ ಸೇದುವುದಿಲ್ಲ? ರಾಗ ಎಳೆದೀರಿ... ಅವನು ಸಿಗರೇಟು ಸೇದುವ, ಆಸ್ವಾದಿಸುವ ರೀತಿ ಗಮನಿಸಿ... ಅದರಲ್ಲಿ ಉತ್ಸಾಹ ಉಂಟಾ? ಅಪೇಕ್ಷೆ ಉಂಟಾ? ಆಸಕ್ತಿ ಉಂಟಾ? ಒಟ್ಟು... ಸೇದುತ್ತಿದ್ದಾನೆ ಅಷ್ಟೇ!

ಅರೇ ಇಸ್ಸಿ! ಮತ್ತೊಂದು ಜೇಬಿಗೆ ಕೈ ತೂರಿ ರೊಕ್ಕವನ್ನೇಕೆ ಹೊರ ತೆಗೆದ!? ಅದೂ ಹತ್ತು ರೂಪಾಯಿಯ ನೋಟು? ನೋಡಿ, ಈಗಲಾದರೂ ತಿಳಿಯಿತಲ್ಲಾ, ಅವನ ರೀತಿ ವಿಶೇಷವಾದದ್ದೆಂದು. ನೋಟನ್ನು ಎಡಗೈಯಲ್ಲಿ ನೇರವಾಗಿ ಹಿಡಿದ. ಬಲಗೈಯಿಂದ ಸಿಗರೇಟು ಹಿಡಿದು ನೋಟಿನ ಮೇಲ್ಬದಿಗೆ ಮಧ್ಯದಲ್ಲಿ ಉರಿ ತಾಗಿಸಿ ತೂತು ಮಾಡಿದ, ಕರಕಲು ಕಂಡು ಖುಷಿಪಟ್ಟ. ತೂತಿನ ಬೆಂಕಿ ಆರಿಸಿದ. ಪುನಃ ಸಿಗರೇಟು ಬಾಯಿಗಿಟ್ಟು ದಂ ಎಳೆದ. ಹೊಗೆ ಚೆಲ್ಲಿದ. ಅರೇ ಇವನಾ! ಪುನಃ ನೋಟಿಗೆ ತೂತು ಮಾಡುತ್ತಿದ್ದಾನೆ! ಈ ಬಾರಿ ಮೊದಲು ಮಾಡಿದ್ದ ತೂತಿಗಿಂತ ತುಸು ಕೆಳಗೆ, ಅದರ ಆಚೆ, ಈಚೆ ತುಸು ಬದಿಗೆ ಎರಡು ತೂತು ಮಾಡಿದ್ದಾನೆ!

ಈಗ ಅವನ ಮೋರೆ ನೋಡಿ... ಬೇಸರಿಕೆ ಮಾಯವಾಗಿದೆ. ಒಂದು ಬಗೆಯ ತೃಪ್ತಿ ಕಾಣಿಸುವುದಿಲ್ಲವೇ? ಹೀಗೆ ನೋಟು ತೂತುಮಾಡುತ್ತಿರುವ ಅವನಿಗೆ ಬುದ್ಧಿ ಸರಿಯಿಲ್ಲವೇ ಎನ್ನಿಸೀತು. ಅಲ್ಲಾ? ಸರಿ ಉಂಟು... ಸ್ವಾಮಿ, ಖಂಡಿತಾ ಬುದ್ಧಿ ಸಮಾ ಉಂಟು. ನೋಟನ್ನೇನೂ ಪೂರ್ಣವಾಗಿ ಸುಟ್ಟು ಹಾಕಿಲ್ಲವಲ್ಲಾ! ಛೆ, ಛೆ... ಅರೆ ಹುಚ್ಚ ಎನ್ನುವ ಧ್ವನಿ ಇದರಲ್ಲಿ ಅರಸಬೇಡಿ. ನೋಟುಗಳ ಬಗ್ಗೆ ಅವನಿಗೆ ಅಲರ್ಜಿ ಇರಬೇಕು. ದ್ವೇಷವಿರಬೇಕು. ಅವನ ಈ ಬಗೆಯ ವರ್ತನೆಯಿಂದ ಹೀಗೆ ಊಹಿಸಲು ಅವಕಾಶವೇನೋ ಇದೆ. ಆದರೆ, ನೋಡಿ, ಈ ನೋಟುಗಳ ಸಂಪಾದನೆಗಾಗಿಯೇ ಆತ ಬೆಳಿಗ್ಗೆ ಹತ್ತರಿಂದ ಸಂಜೆ ಐದರ ತನಕ ಆಫೀಸ್‌ನಲ್ಲಿ ತೆಯ್ಯುತ್ತಾನೆ. ಮತ್ತೇಕೆ ದಿಗಡು ಧಾಂಚೋದ್ ವ್ಯವಹಾರ. ಪುಣ್ಯ, ನೋಟನ್ನು ಪೂರ್ತಿ ಸುಟ್ಟು ಹಾಕಲಿಲ್ಲವಲ್ಲಾ!

ತೃಪ್ತಿಯಾಗುವವರೆಗೂ ನೋಟಿನಲ್ಲಿ ತಾನು ಮಾಡಿದ ಮೇಲಿನ ಹಾಗೂ ಕೆಳಗಿನ ತೂತುಗಳನ್ನು ಅವನು ನೋಡಿದ. ಚಿಕ್ಕದಾಗುತ್ತಿದ್ದ ಸಿಗರೇಟನ್ನು ಕಲ್ಲು ಬೆಂಚಿನ ತಳಭಾಗದತ್ತ ಸರಿಸಿ ಬೆಂಕಿ ಆರಿಸಿದ. ಆ ತುಂಡನ್ನು ನೋಟಿನೊಂದಿಗೆ ಸೇರಿಸಿದ. ಅರೇ ಇವನ! ಸಿಗರೇಟು ತುಂಡಿನೊಂದಿಗೆ ನೋಟನ್ನು ಸೇರಿಸಿ ಮುದುಡೆ ಮಾಡಿಬಿಟ್ಟನಲ್ಲಾ! ಹತ್ ರೂಪಾಯಿ ಸುಮ್ನೇ ದಂಡವಾಗಿ ಹೋಯ್ತು! ಮುದುಡೆ ಮಾಡಿದ್ದಲ್ಲದೆಗಟಾರದ ಆ ಸಮೀಪದ ಮರದ ಕೆಳಗೆ ಎಸೆದುಬಿಟ್ಟ!

ಬೇಸರವಾಗುತ್ತಿದೆಯಲ್ಲಾ, ಜುಗುಪ್ಸೆ ಉಂಟಾಗುತ್ತಿದೆಯಲ್ಲಾ ಅವನ ವರ್ತನೆಯಿಂದ. ದುಡ್ಡು ನೋಡಿ, ಹೀಗೆ ಎಸೆಯುವುದುಂಟಾ? ಸುಡುವುದುಂಟಾ? ಕಿಮ್ಮತ್ತಿಲ್ಲವಾ ಅವಕ್ಕೆ? ತಿಳುವಳಿಕೆ ಇಲ್ಲವಾ ಅವನಿಗೆ!

ಖೇದಗೊಂಡು ಹೊರಟಿರಾ... ಸ್ವಲ್ಪ ನಿಲ್ಲಿ, ನೋಟನ್ನು ಮುದ್ದೆ ಮಾಡಿ ಎಸೆದ ಬಗ್ಗೆ ಅವ

ನಿಗೂ ಖೇದವಾಗಿರಬೇಕು. ತಾನು ಮಾಡಿದ್ದು ಸರಿಯಲ್ಲ ಎನ್ನಿಸಿರಬೇಕು. ಮೇಲೆದ್ದು ತಾನು ನೋಟು ಎಸೆದ ಕಡೆಗೇ ಹೋಗುತ್ತಿದ್ದಾನೆ! ಪ್ರಾಯಶಃ ಅದನ್ನು ಹೆಕ್ಕಲು ವ್ಯಾಮೋಹ... ಯಾರಿಗಿರುಲ್ಲ ಹಣದ ವ್ಯಾಮೋಹ?

ಈಗ ನೋಡಿ... ಅವನ ನಡಿಗೆಯ ಗತಿ, ಯಾರಾದರೂ ಅವನನ್ನು ಸೋಮಾರಿ ಎನ್ನಲಾದೀತಾ? ಅವನ ಕಾಲು, ಕೈ, ಕಣ್ಣುಗಳೆಲ್ಲಾ ಈಗ ಎಷ್ಟು ಚುರುಕಾಗಿವೆ ನೋಡಿ. ಎತ್ತಿಕೊಂಡ. ಅರರೆ... ತಾನು ಮುದುಡೆ ಮಾಡಿ ಎಸೆದ ನೋಟಿನ ಉಂಡೆಯನ್ನಲ್ಲ. ಅದರ ಪಕ್ಕದಲ್ಲಿ ಬಿದ್ದಿದ್ದ ಇನ್ನೊಂದು ಮುದುಡೆ ಉಂಡೆಯನ್ನು! ಮೈಯಲ್ಲಿ ಮುಖದಲ್ಲಿ, ಕಣ್ಣಿನಲ್ಲಿ, ನರನರಗಳಲ್ಲಿ ಕುತೂಹಲದ ಸರಯೂ.

ಬಿಡಿಸಿದ. ಮೇಲಿನದು ಯಾವುದೋ ಬಿಲ್ ಪಾವತಿಯ ತೆಳು ಕಾಗದ. ಅದರೊಳಗೆ ಒಂದು ನೋಟು! ಬಿಲ್ ಪಾವತಿಯ ಕಾಗದ ಕೆಳಗೆಸೆದು ಮೆಲ್ಲನೆ ನೋಟು ಬಿಡಿಸಿದ. ನೋಟು ಸುಡುವ ಜಾಯಮಾನದವನು ಇವನೇ ಎನ್ನುವ ಸಂಶಯದ ರೇಶ್ಮೆ ಸುಳಿಯದಂತೆ ತೀರಾ ಎಚ್ಚರಿಕೆಯಿಂದ ಬಿಚ್ಚಿದ. ನೋಡಿದ. ಇಪ್ಪತ್ತು ರೂಪಾಯಿಯ ಒಂದು ನೋಟಿನ ಮೇಲೆಲ್ಲಾ ಗೀಚು ಬರಹ. ಹತ್ತಿರಕ್ಕೆ ತೆಗೆದೊಯ್ದು ಓದಿದ. ಒಂದರ ಮೇಲೆ ಮತ್ತೊಂದು ಬರಹ... ವಾಂಟೆಡ್.. ವಾಂಟೆಡ್... ಡಬ್ಲ್ಯು ಎ ಎನ್ ಟಿ ಇ ಡಿ... ವಾಂಟೆಡ್. ತಿರುಗಿಸಿ ನೋಡಿದ... ಅದೇ... ವಾಂಟೆಡ್... ವಾಂಟೆಡ್! ಗೀಚು ಬರಹ... ಗೀಚು ಬರಹ! ನಮ ನಿಮಗೆ ಅವನು ಪ್ರಶ್ನೆಯಾದಂತೆ ಆ ನೋಟು ಅವನಿಗೆ ಈಗ ಪ್ರಶ್ನೆಯಾಗಿದೆ! ವಾಂಟೆಡ್ ಕಾಲಂ ನೋಡಿ, ಅರ್ಜಿ ಗುಜರಾಯಿಸಿ ನಿರಾಶರಾದವರ ಕೃತ್ಯವೇ? ಹಣ ಇದ್ದೂ ಕೊಳ್ಳಲಾಗದ ವಸ್ತುವಿನ ಬೇಡಿಕೆಯೇ?

ತಾನೆಸೆದದ್ದನ್ನೂ ಹೆಕ್ಕಿಕೊಂಡ. ಅದನ್ನು ಬಿಡಿಸಿದ. ಎರಡನ್ನೂ ಜೋಡಿಸಿದ: ಮೂವತ್ತು. ನೋಡಿದ. ಸಿಕ್ಕಿದ್ದನ್ನು ಕೆಳಗಿಟ್ಟ. ಸುಟ್ಟ ತನ್ನ ನೋಟು ಮೇಲಿಟ್ಟ. ಯಾವುದೋ ನಿರ್ಧಾರಕ್ಕೆ ಬಂದವನಂತೆ ಎರಡನ್ನೂ ಮೆಲ್ಲನೆ ಜೇಬಿಗೆ ತೂರಿದ. ಕಲ್ಲು ಬೆಂಚಿನತ್ತ ತಿರುಗದೆ ಬಲಕ್ಕೆ ನಡೆದ. ಪಾರ್ಕಿನ ಬೇಲಿ ದಾಟಿದ.

"ನೋಡಿ, ನನಗಿವತ್ತು ಇಂಥಾ ಪಾರ್ಕಿನಲ್ಲಿ ಹೀಗೆ ಬರೆದ ಈ ಇಪ್ಪತ್ತು ರೂಪಾಯಿಯ ನೋಟು ಇಂಥಾ ಸ್ಥಿತಿಯಲ್ಲಿ ಸಿಕ್ಕಿತು" ಎಂಬುದಾಗಿ ಆತ ತನ್ನ ಗೆಳೆಯರ ಇದಿರು ಹೇಳಿ, ನೋಟು ಪ್ರದರ್ಶಿಸಲು ಹೊರಟನೆಂದು ಊಹಿಸಿದರೆ ಪಸಿ ಬಿದ್ದಂತೆ. ಆತನಿಗೆ ಗೆಳೆಯರೆಂಬುವರು ಇಲ್ಲ. ಇದ್ದರೂ ಆತ ಸಂಕೋಚ ಸ್ವಭಾವದವನಾದುದರಿಂದ ಈ ಇದನ್ನೆಲ್ಲಾ ಹೇಳಿಯಾನು ಎನ್ನಲಾಗದು. ಇದನ್ನು ಹೇಳಿ ಏನಾಗಬೇಕು... ಕೇಳಿ ಅವರೇನು ಮಾಡಿಯಾರು ಎನ್ನುವ ಧೋರಣೆ ಅವನದು! ತನ್ನ ಸಂತಸವನ್ನೋ ದುಃಖವನ್ನೋ ಯಾರೊಂದಿಗೂ ಹಚ್ಚಾಗಿ ಹೇಳಿಕೊಳ್ಳುವವನು ಅವನಲ್ಲ. ಹಾಗೆ ಹೇಳಿಕೊಳ್ಳುವವನಾಗಿದ್ದರೆ ಅವನೇಕೆ ಇಲ್ಲಿ ಬಂದು ಹೀಗೆ ಒಬ್ಬಂಟಿಯಾಗಿ ಬೇಸರವನ್ನು ನುಂಗುತ್ತಾ ಹುಲ್ಲು ಕಡಿಯುತ್ತಾ, ನೋಟು ತೂತು ಮಾಡುತ್ತಾ ಕುಳಿತಿರುತ್ತಿದ್ದ? ಪಾರ್ಕನ್ನು ದಾಟಿದ ಅವನು ತನ್ನ ಮನೆಯ ದಾರಿ ಹಿಡಿಯಲಿಲ್ಲ. ಬಲಕ್ಕೆ ತಿರುಗಿದ. ಬಜಾರದತ್ತ ಹೆಜ್ಜೆ ಎತ್ತಿಡ-ತೊಡಗಿದ. ಐದು ನಿಮಿಷ ನಡೆದ. ದೊಡ್ಡ ಕಟ್ಟಡದ ಬಳಿ ತಿರುಗಿದ. ಓಹ್... ಅದು ರಾಷ್ಟ್ರೀಕೃತ ಬ್ಯಾಂಕೊಂದಿರುವ ಕಟ್ಟಡ.

ಬೋರ್ಡ್ ಹಾಕಿರುವುದು ಕಾಣಿಸುತ್ತದೆಯ-ಲ್ಲಾ... ಮೆಟ್ಟಿಲೇರಿ ಒಳಗೆ ಹೋದ. ತಿಳಿಯಿತು ಬಿಡಿ. ಸುಟ್ಟು ತೂತು ಮಾಡಿದ ಮತ್ತು ಯಾರಿಂದಲೋ ಗೀಚಲ್ಪಟ್ಟ ನೋಟುಗಳನ್ನು ಬದಲಾಯಿಸಿಕೊಳ್ಳಲು ಹೋಗುತ್ತಿದ್ದಾನೆ. ನಿಸ್ಸಂಶಯ... ಅದಕ್ಕೇ...

ಪಂಕಗಳ ಗಾಳಿ ತಿನ್ನುತ್ತಾ ಸಾಲಾಗಿ ಕುಳಿತ ಕ್ಲರ್ಕ್‌ಗಳ ಸಾಲು ದಾಟಿ ಹಣ ನೀಡುವ ಕೌಂಟರಿನ ಬಳಿ ಹೋಗಿ ನಿಂತ. ಜೇಬಿಗೆ ಕೈ ತೂರಿ ಎರಡೂ ನೋಟುಗಳನ್ನು ಹೊರ ತೆಗೆದ. ಇದೇನು... ನಿಮ್ಮ ಲಕ್ಷ್ಯ ಅವನತ್ತ ಇಲ್ಲ. ಹಾಗೇಕೆ. ಕೌಂಟರಿನೊಳಗೆ ಕುಳಿತ ಯುವತಿಯತ್ತ ನೋಡುತ್ತಿದ್ದೀರಿ? ಏನುಂಟು ಅವಳಲ್ಲಿ ಅಂಥಾ ವಿಶೇಷ?

ಸಾಧಾರಣ ಇದ್ದಾಳೆ. ವಯೋಮಾನಕ್ಕೆ ಸರಿಯಾದ ಆಕರ್ಷಣೆ ಇದೆ. ಆದರೆ... ಮುಖದಲ್ಲಿ ತೀರಾ ಕಳಪೆ ಕಳೆ. ನಿರಾಸಕ್ತಿ, ಯಾಂತ್ರಿಕವಾಗಿ



ಸ್ವಚ್ಛ, ಆಹ್ಲಾದಕರ ಶ್ವಾಸ
ಆರೋಗ್ಯಕರ, ಗಟ್ಟಿ ಹಲ್ಲುಗಳು
ಕೋಲ್ಗೇಟ್ ಡೆಂಟಲ್ ಕ್ರೀಮ್‌ನ ಕೊಡುಗೆ
ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ.
ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ:
ಕೋಲ್ಗೇಟ್ ಡೆಂಟಲ್ ಕ್ರೀಮ್‌ನಿಂದ
ಉಸಿರಿನ ದುರ್ವಾಸನೆಯನ್ನು
ನಿವಾರಿಸಿರಿ...
ದಂತಕ್ಷಯವನ್ನು ಎದುರಿಸಿರಿ.
Colgate
DC.G.74 KN

ಗುಂಗು

ಮಂಕು ಕವಿದ
ಚಿಂತನೆಯ ದಾರಿ ತಪ್ಪಿ
ಅಡ್ಡಾದಿಡ್ಡಿ ಹಾತೊರೆವ
ಅಭಿವ್ಯಕ್ತಿ.
ನಿರೂರ್ಮಿ ಮನದ
ಸ್ವೇಚ್ಛೆಯಲ್ಲಿ
ಸಹಜ ಸಮಾಧಿಯ
ಪುನರುಕ್ತಿ.
ಅನಂತಾನಂತ
ಅಂತರ್ಮಾಧ್ಯ
ಅತೀತ ನಿರತ
ವ್ಯರ್ಥ ಅಂತಃಶಕ್ತಿ.

—ಸಂತೋಷಕುಮಾರ ಗುಲ್ವಾಡಿ

ಕೆಲಸ ಸಾಗಿಸಿ. ಸ್ಲಿಪ್ಪು, ಎತ್ತುತ್ತಾಳೆ; ಬರೆಯುತ್ತಾಳೆ; ತಾರೀಕು, ಪೆಯ್ಡು ಮುದ್ರೆ ಒತ್ತುತ್ತಾಳೆ; ಲೆಡ್ಜರಿಗೆ ನಮೂದಿಸುತ್ತಾಳೆ; ಸಹಿ ಗುದ್ದಿ ಸ್ಲಿಪ್ಪು ಸರಿಸುತ್ತಾಳೆ; ಹಣ ಎಣಿಸಿ ಒಳಗಿಡುತ್ತಾಳೆ; ಹೊರತೆಗೆಯುತ್ತಾಳೆ; ಎಣಿಸುತ್ತಾಳೆ. ಯಾವುದರಲ್ಲೂ ಉತ್ಸಾಹವಿಲ್ಲ... ನಡುವೆ ನಿರುತ್ಸಾಹದ ಉಸಿರು... ಆ ಉಸಿರಿನಲ್ಲೂ ಉಮೇದಿಲ್ಲ. ಮುಖದಲ್ಲಿ ಬೇಸರ.

ಕೌಂಟರಿನ ಕಿಂಡಿಯ ಮೂಲಕ ಕೈತೂರಿ ಹತ್ತು ನಿಮಿಷ ಅವನು ನಿಂತಿದ್ದರೂ ಅವಳ ಗಮನ ಈ ಕಡೆ ಹರಿಯಲಿಲ್ಲ. ಕೆಲಸದಲ್ಲಿ ಅಷ್ಟೊಂದು ತಲ್ಲೀನಳಾಗಿದ್ದಾಳೆ ಎನ್ನಲಾಗದು. ನೋಡಿ, ಎಷ್ಟು ಬಾರಿ ತಪ್ಪು ಎಂಟ್ರಿಯಾಯಿತು! ಲೆಡ್ಜರ್ ತುಂಬಾ ಚಿತ್ತು ಕಾಟು...

"ಈ ನೋಟುಗಳನ್ನು ಸ್ವಲ್ಪ..." ಎರಡು ಬಾರಿ ಅವನು ಹೇಳಿ ಅವಳ ಲಕ್ಷ್ಯ ಸೆಳೆಯಲು ಯತ್ನಿಸಿ, ಕೊನೆಗಂತೂ ಸಫಲನಾದ. ಅವಳು ತಲೆ ಎತ್ತಿದಳು. ಅವನು ಚಾಚಿ ಹಿಡಿದ ನೋಟಿನತ್ತ ದೃಷ್ಟಿ ತೂರಿದಳು. ಅರ್ಥವಾಗದೆ ಏನೆಂದು ಪುನಃ ಕೇಳಿದಳು. ಇವನು "ಇದನ್ನು ಬದಲಾಯಿಸಬೇಕಾಗಿತ್ತು" ಎಂದ. ಅವಳು ಅದನ್ನು ತೆಗೆದುಕೊಂಡಳು. ಮೇಲಿನ ನೋಟು ಪರೀಕ್ಷಿಸಿದಳು. ಕಿರುನಗೆ ಮೂಡಿತು ಅವಳ ಮುಖದಲ್ಲಿ. ಆ ತೂತುಗಳನ್ನು ನೋಡಿದಳು. ಪುನಃ ಕೌಂಟರಿನ ಸರಳುಗಳ ಮೂಲಕ ಅವನನ್ನು ನೋಡಿದಳು. ಅವನು ನಿರ್ಲಿಪ್ತನಾಗಿ ನಿಂತಿದ್ದ. ಅವಳ ಮುಖದಲ್ಲಿ ಕರುಣೆ? ಅನುಕಂಪ? ದಯೆ? ವಾತ್ಸಲ್ಯ? ಮಮತೆ? ಪ್ರೀ...? ತೂತು ಬಿದ್ದಿದ್ದ ನೋಟನ್ನು ಒಳಗಿರಿಸಿ ಮತ್ತೊಂದು ನೋಟು ಎತ್ತಿಕೊಂಡಳು... ಅರೇ!

ಅವಳ ಮುಖದಲ್ಲಿ ನೋಡಿ, ಎಂಥಾ ಸಂತಸ ಚಿಮ್ಮಿದೆ! ಇದ್ದಕ್ಕಿದ್ದ ಹಾಗೆಯೇ ಉತ್ಸುಕಳಾಗಿದ್ದಾಳೆ. ಆಕೆ, ಪಡ್ಡಾ ಕಟ್ಟಿದರೂ ಈ ಸ್ವಲ್ಪ ಮುಂಚೆ ಅವಳ ಮುಖದಲ್ಲಿ ಬೇಸರವಿತ್ತು ಎಂದು ಸಾಧಿಸಲು ಸಾಧ್ಯವಾಗದು. ಸ್ಪ್ರಿಂಗ್... ಸ್ಪ್ರಿಂಗ್‌ನಂತೆ ಸೆಟೆದು ನಿಂತಳು. ಕೌಂಟರಿನತ್ತ ಬಾಗಿ, ಅವನನ್ನು ಆಪ್ತ, ಆತ್ಮೀಯ ದೃಷ್ಟಿಯಿಂದ ನೋಡುತ್ತಿದ್ದಾಳೆ. ಏನನ್ನೋ ಪ್ರಶ್ನಿಸುವ ಹಂಬಲ, ಆಸೆ... ಆಸೆಗಣ್ಣುಗಳು !

ಬದಲಾವಣೆ ಸಾಧ್ಯವಾದೀತೆ ಎಂದು ಯೋಚಿಸುತ್ತಾ ಕೌಂಟರಿನ ಹೊರಗೆ ಅವನು ನಿಂತಿದ್ದಾನೆ.

"ಈ ನೋಟು ನಿಮಗೆ ಎಲ್ಲಿ ಸಿಕ್ಕಿತು?" ಜೇನ ಹನಿಯ ಧ್ವನಿ ಅವಳಿಂದ.

ಅವನ ಕಣ್ಣು ಅರಳಿದವು. ಹೇಳಿದ: "ಪಾರ್ಕಿನಲ್ಲಿ,"

"ಓಹ್..." ಅವಳ ಉದ್ಗಾರ, ಮುಖಕ್ಕೆ ರಕ್ತ ಚಿಮ್ಮಿ, ಅವಳು ಬಹಳ... ಬಹಳ ಚೆಂದವಾಗಿ ಕಂಡಳು ಅವನಿಗೆ. "ಬ್ಯಾಂಕಿನ ಮಧ್ಯಾಹ್ನದ ಬಿಡುವಿನ ವೇಳೆ ದಿನವೂ ನಾನು ಆ ಪಾರ್ಕಿನಲ್ಲಿ... ಆ ಕಲ್ಲು ಬೆಂಚಿನ ಬಳಿ ಹೋಗಿ ಕುಳಿತುಕೊಳ್ಳುತ್ತೇನೆ. ಒಬ್ಬಳೇ, ಅಂತ ತಿಂಡಿ ತಿನ್ನುತ್ತೇನೆ, ಆ ನೋಟು..."

ಮುಂದೆ ಹೇಳಲು ಅವಳು ನಾಚಿದಳು. ★

ನಿಮ್ಮ ಕಣ್ಣುಗಳು ನಿಮ್ಮ ಮನಸ್ಸಿನ ಕಿಟಿಕಿಗಳು...

ಚಂಡಮಾರುತದ ಚಿಹ್ನೆಗಳನ್ನು ನೋಡುತ್ತಿದ್ದೀರಾ? ಅಥವಾ ಕ್ಷುಬ್ಧ ವಾತಾವರಣದಲ್ಲಿ ಪ್ರೇಮ ಪ್ರಕಾಶವನ್ನು, ಇಲ್ಲವೆ ಕಾರ್ಮೋಡಗಳ ಮಳೆಯ ಬಿಂದುಗಳು ಅಪಾಯಕರವಾಗಿ ಒಂದುಗೂಡುವುದನ್ನು ಕಾಣುತ್ತಿದ್ದೀರಾ?
ಶಿಂಗಾರ್ ಡಿಲಕ್ಸ್ ಕಾಜಲ್ (ಕಾಡಿಗೆ) ಎಂದೆಂದೂ ಸುಂದರವಾಗಿಯೇ ಉಳಿಯುತ್ತದೆ... ನಿಮ್ಮ ಕಣ್ಣುಗಳು ಯಾವುದೇ ಮನೋಭಾವದ ಸನ್ನೆಯನ್ನು ತೋರಿಸುವುದಾದರೂ ಕೂಡ. ಅತ್ಯಂತ ಸೌಮ್ಯವಾಗಿದೆ (ಶುದ್ಧ ಸಸ್ಯೋತ್ಪನ್ನ). ಇದನ್ನು ಸುಲಭವಾಗಿ ಹಚ್ಚಬಹುದು, ಸುಲಭವಾಗಿ ತೊಳೆದು ತೆಗೆಯಬಹುದು. ಅಲ್ಲದೆ ಎಷ್ಟೊಂದು ವಿಶ್ವಸನೀಯ!
ಇದರ ಪ್ಯಾಕ್ ಕೂಡ 'ಸ್ಟೆರಿಲೈಜ್' (ಕ್ರಿಮಿಶುದ್ಧಿ)ಗೊಳಿಸಲ್ಪಡುತ್ತದೆ! ಹರಡಿ ಕಲೆ ಮಾಡದ, ಎದ್ದು ಹೋಗದ ಶಿಂಗಾರ್ ಡಿಲಕ್ಸ್ ಕಾಜಲ್ ಬಳಸಿರಿ. 'ಅವನಿಗೂ' ಅದು ಪ್ರಿಯವಾಗುವುದು.



ಈಗ ಎಲ್ಲಿದ್ದಾರೆ ಇಂಥ ಅಪ್ರಿಯ ಸತ್ಯವಾದಿಗಳು?

ಗೌರೀಶ ಕಾಯ್ಕಿಣಿ

ನಮ್ಮ ಈ ದೇಶದಲ್ಲಿ ಪುರಾಣೇತಿಹಾಸಗಳ ಕಾಲದಿಂದಲೂ ಹಾಲುಬಡಕರಿಗೆ ಯಾವ ಕೊರತೆಯೂ ಇಲ್ಲ. ವಂದಿಮಾಗಧರು, ಸ್ತುತಿಪಾಠಕರು, ಭಟ್ಟಂಗಿಗಳು, ಆಸ್ಥಾನ ವಿದ್ವಾಂಸರು, ವಜೀರರು, ರಾಜನ 'ಚಮಚಾ'ಗಳು—ಇವರೆಲ್ಲ ಹಾಲುಬಡಕತನದ್ದೇ ಅವತಾರಗಳು. ಇಂದಿನ ಮಂತ್ರಿ ಸಪ್ತಮರ ಸುತ್ತಲೂ ಅವರ ವಲಯಗಳಿವೆ—ಶನಿಯ ಸುತ್ತೂ ಇರುವ ಉಪಗ್ರಹಗಳ ಬಲೆಗಳಂತೆ. ಬ್ರಿಟಿಶರ ಕಾಲದಲ್ಲಿಯೂ ಅವರಿದ್ದರು. (ಮೊಗಲರ ಕಾಲದಲ್ಲಿಯೂ 'ದಿಲ್ಲೀಶ್ವರೋವಾ ಜಗದೀಶ್ವರೋವಾ' ಎಂದು ಕೊಂಡಾಡುವ ಸಂಸ್ಕೃತ ಕವಿಗಳು ಇದ್ದೇ ಇದ್ದರು!)

ಒಬ್ಬಿಬ್ಬರು ತೇಜಸ್ವಿಯಾದ ತಾರೆಗಳು ಇರುತ್ತಿದ್ದರು. ಅವರು ಎಂಥ ಪ್ರಭಾವಶಾಲಿ ವೈಸರಾಯನೇ ಇರಲಿ ಅವನಿಗೆ ಇದಿರು ನಿಂತು ಒಂದೆರಡು ಚುಚ್ಚುಮಾತುಗಳನ್ನು ಏನೇ ಹಂಗು ಹದರಿಕೆ ಇಲ್ಲದೆ ಕೇಳಿಸುವ ಗಟ್ಟಿ ಮನೋಬಲದ ಜಟ್ಟಿಗಳಿದ್ದರು. ಅಂಥವರಲ್ಲಿ ಒಬ್ಬರು ಸರ್ ಚೆಟ್ಟೂರ್ ಶಂಕರನ್ ನಾಯರ್.

ಎಲ್ಲ ಜಾತಿವಂತ ನಾಯರರಂತೆಯೇ ಸರ್ ಶಂಕರನ್ನರೂ ರೇಗಿಬಿಟ್ಟರೆ ಚೆನ್ನಾಗಿಯೇ ಪೆಟ್ಟು ಹಾಕುವಂಥವರು. ಅವರ ಹೊಡೆತ ಹುಸಿಯಾಗುತ್ತಿದ್ದಿಲ್ಲ. ಅದೂ ಸ್ವಾಭಿಮಾನಕ್ಕೆ ನೋವಾದಾಗ ಅಥವಾ ಅನ್ಯಾಯಕ್ಕೆ ಸಿಡಿದೆದ್ದಾಗ. ಸರ್ ಶಂಕರನ್ ನಾಯರ್ ವೈಸರಾಯರ ಕೌನ್ಸಿಲ್ಲಿನ ಸದಸ್ಯರಿದ್ದರು. ಅವರ ಸಹ–ಸದಸ್ಯರು ಹೆಚ್ಚಾಗಿ ಆಂಗ್ಲರೇ. ಆದರೆ ಅವರಿಗೂ ಶಂಕರನ್ ನಾಯರರ ಪೆಟ್ಟಿನ ಉರಿಯೂ ನೋವೂ ಗೊತ್ತಿತ್ತು. ಈ ಬ್ರಿಟಿಶ್ ಸದಸ್ಯರಿಗೆ ಅವರು ಬಗಲಲ್ಲಿ ಮುಳ್ಳಾಗಿದ್ದರು.

ಕೊನೆಗೂ ಬ್ರಿಟಿಶ್ ಸಾಮ್ರಾಜ್ಯಶಾಹಿಯ ಉದ್ದಾಮ ದಬ್ಬಾಳಿಕೆಯನ್ನು ಸಹಿಸಲಾರದೆ ಅಂದಿನ ವೈಸರಾಯ್ ಲಾರ್ಡ್ ಚೇಮ್ಸ್‌ಫೋರ್ಡರ ಕೌನ್ಸಿಲ್ಲಿನಿಂದ ರಾಜೀನಾಮೆ ಕೊಟ್ಟು ಹೊರಬಿದ್ದರು. ಅಂದು ಸರಕಾರವು ಪಂಜಾಬದಲ್ಲಿ ಲಷ್ಕರಿ ಕಾಯಿದೆಯ ಅಮಲು ಜಾರಿಮಾಡಿತ್ತು. ಆದರೆ ಅದರ ಉಗ್ರ ಅತಿರೇಕ ಜಾಲಿಯನ್ ವಾಲಾಬಾಗಿನ ಘೋರ ಹತ್ಯಾಕಾಂಡದಲ್ಲಿ ಸ್ಫೋಟಗೊಂಡಿತು. ಅದನ್ನು ಸರ್ ಶಂಕರ ಸಹಿಸಲಾರದಾದರು.

ರಾಜೀನಾಮೆಯಿತ್ತು ಹೊರಬಂದ ಮೇಲೆ ಸೌಜನ್ಯಕ್ಕೋಸ್ಕರ ವೈಸರಾಯರನ್ನು ಕೊನೆಯದಾಗಿ ಭೆಟ್ಟಿಯಾಗಲು ಹೋದರು. ಆಗ ಲಾರ್ಡ್ ಸಾಹೇಬರು ಲೋಕಾಭಿರಾಮವಾಗಿ ಶಂಕರನ್ನರನ್ನು ಕೇಳಿದರು: "ನಿಮ್ಮ ಸ್ಥಾನಕ್ಕೆ ಉತ್ತರಾಧಿಕಾರಿ ಯಾರನ್ನಾದರೂ ನೀವು ಸೂಚಿಸುವಿರಾ?"

"ಓ ಯೆಸ್, ಆ ಗೃಹಸ್ಥ, ಅಲ್ಲಿ ನಿಂತಿದ್ದಾನಲ್ಲ ರಾಮಪ್ರಸಾದ." ರಾಮಪ್ರಸಾದ ವೈಸರಾಯರ ಅರಮನೆಯ ಒಬ್ಬ ಚಪರಾಸಿ.

"ಏನೆಂದಿರಿ?" ಚೇಮ್ಸ್‌ಫೋರ್ಡರು ಚಕಿತರಾಗಿ

ಉದ್ಗರಿಸಿದರು.

"ಹೌದು, ಅವನೇ" ಸರ್ ಶಂಕರನ್ ಗಡುಸಾಗಿಯೇ ಉತ್ತರಿಸಿದರು. "ನಾನು ತಿಳಿದೇ ಹೇಳುತ್ತಿದ್ದೇನೆ. ರಾಮಪ್ರಸಾದ ನಿಲುವಿಕೆಯಲ್ಲಿ ಎತ್ತರನಿದ್ದಾನೆ. ನೋಡಲು ಸುಂದರನಾಗಿದ್ದಾನೆ. ಅವನ ಅಧಿಕಾರದ ಸಮಸ್ತ ಬಿಲ್ಲಾ ಪಟ್ಟಿ ಎಲ್ಲ ಅವನಿಗೆ ಚನ್ನಾಗಿಯೇ ಒಪ್ಪುತ್ತದೆ. ಅಲ್ಲದೆ ಈತ ನೀವು ಅಂದದ್ದಕ್ಕೆಲ್ಲ ಹೌದೆನ್ನಬಲ್ಲ. ನಿಮಗೆ ಬೇಕಾದವರು ಅಂಥ ಮಾದರಿಯ ಜನ!"

ಈ ಮಾತಿಗೆ ವೈಸರಾಯರು ಪೂರ್ತಿ ತಬ್ಬಿಬ್ಬಾದರು. ಮುಂದೆ ಮಾತುಕತೆ ಮುಗಿದೇ ಹೋಯಿತು. ಸರ್ ಶಂಕರನ್ ನಾಯರ್ ಅವರನ್ನು ಬೀಳ್ಕೊಂಡು ಬಂದರು. ಅವರು ಆಡತಕ್ಕದ್ದನ್ನು ಹರಳಿಟ್ಟಂತೆ ಅಂದೇಬಿಟ್ಟರು. ಮಾತಿನಲ್ಲಿ ಅವರು ಎಂದೂ ಹಿಂದೆ ಮುಂದೆ ನೋಡುತ್ತಿದ್ದಿಲ್ಲ.

ಇಂದು ನಮ್ಮ ಸರಕಾರಿ ಸಲಹೆಗಾರರಲ್ಲಿ ಸರ್ ಶಂಕರನ್ ನಾಯರರಂಥ ಖಂಡಿತವಾದಿಗಳು ಎಷ್ಟು ಮಂದಿ? ಹೀಗೆ ಅಪ್ರಿಯ ಸತ್ಯವನ್ನು ಹೇಳುವವರೂ ಕೇಳುವವರೂ ಬಹುಕಾಲ ಬದುಕುವ ಹವಾಮಾನವಲ್ಲ ಈಗಿನ ಕಾಲಮಾನ.



ಎಷ್ಟಿದ್ದವು ?

ಕಾಲೇಜಿನಲ್ಲಿ ಬೋಧಕರ ಜಾಗಕ್ಕಾಗಿ ಕರೆದ ಸಂದರ್ಶನದಲ್ಲಿ ಒಬ್ಬ ಅಭ್ಯರ್ಥಿಯನ್ನು ಸಂದರ್ಶಕರೊಬ್ಬರು ಕೇಳಿದರು: "ನೀವು ಈ ಕಟ್ಟಡದ ಮೆಟ್ಟಲನ್ನು ಹತ್ತಿ ಬರುವಾಗ ಮೆಟ್ಟಲುಗಳು ಎಷ್ಟು ಇದ್ದವೆಂಬುದನ್ನು ಹೇಳಬಲ್ಲಿರಾ?"

ಇಂಥ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕೆಂದು ಗೊತ್ತಿದ್ದ ಆ ಅಭ್ಯರ್ಥಿ, "ಸರ್, ನಾನೊಂದು ಪ್ರಶ್ನೆ ಕೇಳುವೆ, ಆ ಪ್ರಶ್ನೆಯನ್ನು ನೀವು ಉತ್ತರಿಸಿದರೆ, ನಿಮ್ಮ ಪ್ರಶ್ನೆಗೆ ಉತ್ತರ ಹೇಳಬಲ್ಲೆ," ಎಂದ.

ಸಂದರ್ಶಕರ ಸಮ್ಮತಿ ದೊರೆತಿದ್ದರಿಂದ, "ಸರ್, ನಿಮ್ಮ ಮದುವೆಯ ನಂತರ ಪ್ರಥಮ ರಾತ್ರಿ ನಿಮ್ಮ ಹೆಂಡತಿಯ ಕೈಯಲ್ಲಿ ಬಳೆಗಳೆಷ್ಟಿದ್ದುವೆಂಬುದನ್ನು ಹೇಳಬಲ್ಲಿರಾ?" ಎಂದು ಕೇಳಿದ.

* * *

ಒಬ್ಬ ವಿದ್ಯಾರ್ಥಿ ತನ್ನ ಸಹಪಾಠಿಗಳಿಗೆ ಹೇಳುತಿದ್ದ: "ಈಗ ಟಾಸ್ ತೂರೋಣ, 'ರಾಜಾ' ಬಿದ್ದರೆ ಕ್ಲಬ್ ಡ್ಯಾನ್ಸ್‌ಗೆ ಹೋಗೋಣ, 'ರಾಣಿ' ಬಿದ್ದರೆ ಪಿಕ್ಚರಗೆ ಹೋಗೋಣ, ಎರಡೂ ಬೀಳದೇ ಹಾಗೇ ನಿಂತರೆ 'ಸ್ಟಡಿ' ಮಾಡೋಣ."

— ಶ್ರೀಕಾಂತ ಜೋಶಿ

21ಲಕ್ಷ ಹೊಸ ಜನರು ಕಳೆದ ವರ್ಷ ಡೆಟ್ ಬಿಲ್ಲೆಯನ್ನು ಉಪಯೋಗಿಸಿದರು

ಇದಕ್ಕೆ ಒಂದು ಪ್ರಬಲ ಕಾರಣವಿದೆ– ಡೆಟ್‌ನ ಉಜ್ವಲ ಒಗೆತ

ಇಂದು ಮೊದಲಿಗಿಂತಲೂ ಹೆಚ್ಚು ಮಂದಿ ಜನರು ಡೆಟ್ ಬಿಲ್ಲೆಯ ಉಜ್ವಲ ಒಗೆತವನ್ನು ಮೆಚ್ಚುತ್ತಾರೆ ಮತ್ತು ಹೇಳುತ್ತಾರೆ: ಇದು ಕೋರೈಸುವ ಬಿಳುಪನ್ನು ನೀಡುತ್ತದೆ ಮತ್ತು ಎಷ್ಟೋ ಅಧಿಕ ಮಿತವ್ಯಯಕರವಾಗಿದೆ.

ಉತ್ತಮ ಡಿಟರ್ಜೆಂಟ್ ಬಿಲ್ಲೆಗಳ ವಿಕ್ರಯ	
	ಹೊಸ ಗ್ರಾಹಕರು
ಡೆಟ್ ಬಿಲ್ಲೆ	21,00,000
ಎರಡನೆಯ ಉತ್ತಮ ಬಿಲ್ಲೆ	14,00,000
ಒಟ್ಟು 49,00,000 ಹೊಸ ಗ್ರಾಹಕರು	
ಮೂಲ: ಓರಿಯೆಂಟ್ ಸ್ಪ್ರೇಡ್ ಅಡಿಟ್ ರಿಪೋರ್ಟ್: ಜನವರಿ-ಡಿಸೆಂಬರ್, 1979 [illegible]	

21,00,000 ಹೊಸ ಜನರೇತಕೆ ಡೆಟ್ ಬಿಲ್ಲೆ ಉಪಯೋಗಿಸತೊಡಗಿದರು
ನೀವು?



ಡೆಟ್ ಬಿಲ್ಲೆ


ಉಪಯೋಗಿಸಿರಿ
ಬಿಳುಪನ್ನು ಪಡೆಯಿರಿ

Shilpi-DM-14A/80 Kan

ಚಿರತೆಯ ದೃಷ್ಟಿ ಸಮ್ಮೋಹಿನಿ

ಡಿ. ಆರ್. ಕುಲಕರ್ಣಿ

ನೆಲದ ಮೇಲೆ ನಿಂತು ಕಾಡುಪ್ರಾಣಿಗೆ ಹೊಡೆಯಬೇಡಿರಿ, ಆ ಪ್ರಾಣಿ ನಿಮ್ಮನ್ನು ನೋಡಿದ್ದರಂತೂ ಮೊದಲು ಹೊಡೆಯಬೇಡಿರಿ. ಗಾಯಗೊಂಡ ಹುಲಿ ಚಿರತೆಯನ್ನು ಬೆನ್ನಟ್ಟಬೇಡಿರಿ" ಇವು ನನಗೆ ಶಿಕಾರಿಯಲ್ಲಿ ನುರಿತ ಹಿರಿಯರ ಉಪದೇಶ. ನಾನು ವಿಭಾಗ ಅರಣ್ಯಾಧಿಕಾರಿಯಾಗಿ ಸೂಪಾದಲ್ಲಿದ್ದಾಗ ಒಂದು ರೋಮಾಂಚಕ ಅನುಭವವಾಯಿತು. ಡಿಸೆಂಬರ್ ತಿಂಗಳ ಕ್ರಿಸಮಸ್ ರಜೆಯ ದಿನಗಳು. ನನ್ನ ಮೇಲಾಧಿಕಾರಿಗಳು ತಪಾಸಣೆಗೆ ಬರುವವರಿದ್ದರು. ನನಗೂ ಅಗತ್ಯದ ಕೆಲಸಕ್ಕಾಗಿ ಹಗಲು ರಾತ್ರಿ ತಿರುಗಾಡಬೇಕಾಗಿತ್ತು; ಕೆಲವು ಗಿಡಗಳನ್ನು ಗುರುತು ಮಾಡಿಬರಲು ಜೋಯಿಡಾಕ್ಕೆ ಹೋಗಿದ್ದೆ. ಸುಮಾರು ೧೦ ಗಂಟೆಯ ವೇಳೆಗೆ ತಿರುಗಿ ಬರುವಾಗ ದಾರಿಗೆ ಅಡ್ಡಲಾಗಿ ಯಾವುದೋ ಒಂದು ಪ್ರಾಣಿಯನ್ನು ಎಳೆದೊಯ್ದ ಗುರುತು ಕಂಡುಬಂದಿತು. ಆ ಗುರುತು ಹೊಸದೇ ಇದ್ದುದರಿಂದ ಆ ಪ್ರಾಣಿ ಇದನ್ನು ಎಳೆದೊಯ್ದು ಬಹಳ ವೇಳೆಯಾಗಿಲ್ಲ ಎಂದು ತಿಳಿಯಿತು. ಅಡವಿಯು ಮಗ್ಗುಲಲ್ಲಿಯೇ ಇದ್ದುದರಿಂದ ಚಿರ್ತಾಗಲೀ ಹುಲಿಯಾಗಲೀ ಇದನ್ನು ಮಾಡಿರಬೇಕೆಂದು ತರ್ಕ ಮಾಡಿದೆ. ಆ ಎಳೆತದ ಗುರುತು ಅನುಸರಿಸಿ ಹಾಗೇ ಸ್ವಲ್ಪ ಮುಂದೆ ಹೋಗಿ ನೋಡಿದೆ. ಆದರೆ ಜನರು ಅಡ್ಡಾಡಿದ ಗುರುತುಗಳೂ ಹುಲ್ಲೂ ಇದ್ದದ್ದರಿಂದ ಅದು ಯಾವ ಪ್ರಾಣಿ ಎನ್ನುವದು ಸ್ಪಷ್ಟವಾಗಿ ತಿಳಿಯುವಂತಿದ್ದಿಲ್ಲ. ಆದರೆ ಚಿರತೆಯೋ ಹುಲಿಯೋ ಹೋಗಿರಬಹುದೆಂದು ಮಸುಕು ಹೆಜ್ಜೆ ಗುರುತುಗಳು ತೋರಿಸುತ್ತಿದ್ದವು. ಎಳೆದೊಯ್ದ ಪ್ರಾಣಿಯ ಗುರುತೂ ದೊಡ್ಡದಿದ್ದು ಒಂದು ಆಕಳ ಕರುವೋ ಎಮ್ಮೆ ಕರುವೋ ಚಿರತೆಗೆ ಬಲಿಯಾಗಿರಬಹುದೆಂದು ಊಹಿಸಿದೆ. ಏಕೆಂದರೆ ಹಗಲು ಹೊತ್ತಿನಲ್ಲಿ ಹುಲಿ ಬೇಟೆಯಾಡುವದು ವಿರಳ. ಕೆಲಸ ಮುಗಿಸಿ ತಿರುಗಿ ಬರುವಾಗ ನನ್ನ ಜೊತೆಗೆ ಒಬ್ಬ ಗಾರ್ಡ್ ಕೂಡ ಇದ್ದ. ನಾನು ಅವನಿಗೆ ಇದನ್ನು ತೋರಿಸಿ "ಈ ಎಳೆತವನ್ನು ನೋಡಿದರೆ ಬಲಿಯಾದ ಪಶು ದೊಡ್ಡದಿರಬೇಕು. ಅದನ್ನು ಬಹಳ ದೂರ ಎಳೆದುಕೊಂಡು ಹೋಗದೆ ಇಲ್ಲಿಯೇ ಸಮೀಪದಲ್ಲಿಯೇ ಬಿಟ್ಟಿರಬೇಕೆನಿಸುತ್ತದೆ. ಸ್ವಲ್ಪ ಹೋಗಿ ನೋಡೋಣ ಬಾ" ಎಂದು ಕರೆದೊಯ್ದ



ಆ ಗುರುತು ಸುಪಾ ಊರಿನಿಂದ ವಿರುದ್ಧ ದಿಕ್ಕಿನಲ್ಲಿ ಒಂದು ಗುಡ್ಡದ ಕಡೆಗೆ ಹೋಗಿತ್ತು. ಕೆಲವು ಸಾಗವಾನಿ ಗಿಡಗಳೂ, ಬಿದಿರು ಮೆಳೆಗಳೂ ಸೇರಿ ಒತ್ತೊತ್ತಾಗಿ ಬೆಳೆದಿದ್ದವು. ನಾವು ಹಾಗೆಯೇ ಮುಂದುವರಿದು ಸುಮಾರು ಸೂರೈವತ್ತು ಯಾರ್ಡ್ ಹೋದಾಗ ದೊಡ್ಡ ಎಮ್ಮೆ ಕರುವೊಂದು ಸತ್ತುಬಿದ್ದದ್ದು ಕಂಡುಬಂತು. ಅದನ್ನು ಅರ್ಧ ಮರ್ಧ ತಿಂದ ಗುರುತು ಕಂಡವು. ಆದ್ದರಿಂದ ಕೆಲವೇ ನಿಮಿಷಗಳ ಹಿಂದೆ ಅದನ್ನು ತಿನ್ನುತ್ತಿದ್ದ ಚಿರತೆ ನಮ್ಮ ಮಾತು ಗದ್ದಲ ಕೇಳಿ ದೂರ ಹೋಗಿರಬೇಕೆಂದು ಅನಿಸಿತು. ಅದು ಸಮೀಪದಲ್ಲಿಯೇ ಅಡಗಿ ಕುಳಿತು ನಮ್ಮನ್ನು ನೋಡುತ್ತಿರಬಹುದೆಂದೂ ಎಣಿಸಿದೆ. ಆದರೆ ಕರುವನ್ನು ಮಾತ್ರ ಎಳೆದೊಯ್ಯಲಿಲ್ಲವೇಕೆ? ಎಂಬುದು ತಿಳಿಯದಾಯಿತು. ಸಾಮಾನ್ಯವಾಗಿ ಯಾರಾದರೂ ಇರುವವರೆಗೆ ಸುಮ್ಮನೆ ಅಡಗಿ ಕುಳಿತು ಅವರು ಹೊರಟು ಹೋಗಿ ನಿರಾತಂಕವಾದ ಮೇಲೆ ಮತ್ತೆ ತಿನ್ನಲು ಬರಬಹುದು ಎಂದುಕೊಂಡೆ. ಆದ್ದರಿಂದ ನನ್ನ ಜೊತೆಗಿದ್ದ ಅರಣ್ಯರಕ್ಷಕನಿಗೆ ಅದನ್ನು ನೋಡುತ್ತ ಅಲ್ಲಿಯೇ ಇರಲು ತಿಳಿಸಿದೆ. "ನಾನು ಸುಪಾಕ್ಕೆ ಹೋಗಿ ಬೇಗನೇ ಬರುತ್ತೇನೆ, ನೀನು ಸುಮ್ಮನೆ ಏನಾದರೂ ಶಬ್ದ ಮಾಡುತ್ತ ಕುಳಿತಿರು" ಎಂದು ಹೇಳಿದೆ.

ಬೇಗನೆ ಸುಪಾಕ್ಕೆ ಹೋಗಿ ನನ್ನ ಬಂಗಲೆ ತಲುಪಿದೆ. ಅಷ್ಟರಲ್ಲಿ ಒಬ್ಬ ಮನುಷ್ಯ ನನ್ನ ಬರವನ್ನೇ ಕಾದು ಕುಳಿತಿದ್ದ. ಅವನನ್ನು ವಿಚಾರಿಸಿದಾಗ ತನ್ನದೊಂದು ಎಮ್ಮೆಕರು ಹೋಗಿದೆ ಎಂದ. "ನಿನ್ನೆ ರಾತ್ರಿ ನಮ್ಮ ಹಟ್ಟಿಯಲ್ಲಿ ಚಿರತೆ ನುಗ್ಗಿ ಅದನ್ನು ಎತ್ತಿಕೊಂಡು ಹೋಯಿತು." ಎಂದು ದುಗುಡ ತುಂಬಿದ ಧ್ವನಿಯಲ್ಲಿ ಹೇಳಿದ. ಹಾಗಾದರೆ ನಾನು ನೋಡಿದ ಎಮ್ಮೆಕರು ಅವನದೇ ಇರಬಹುದೆಂದು ಊಹಿಸಿದೆ. ಅವನನ್ನು ಸಮಾಧಾನಪಡಿಸಿ ಕಳಿಸಿದೆ. ಊರಲ್ಲಿ ಈ ರೀತಿ ನುಗ್ಗಿ ಪ್ರಾಣಿಗಳನ್ನು ಎತ್ತಿಕೊಂಡು ಹೋಗುವ ಅಪಾಯವನ್ನು ತಪ್ಪಿಸುವುದು ಅಗತ್ಯವಾದದ್ದು ಎಂದು ತಿಳಿದು ಗಡಿಬಿಡಿಯಿಂದ ಊಟಮಾಡಿ ನನ್ನ ಬಂದೂಕನ್ನೆತ್ತಿಕೊಂಡು ಐದಾರು ಗುಂಡುಗಳನ್ನು ಜೇಬಿನಲ್ಲಿಟ್ಟುಕೊಂಡು ಕರು ಸತ್ತಲ್ಲಿಗೆ ಬಂದೆ. ಏನಾದರೂ ವಿಶೇಷವಾಯಿತೇ ಎಂದು ಅರಣ್ಯರಕ್ಷಕನನ್ನು ವಿಚಾರಿಸಿದೆ. ಸುಮಾರು ಒಂದು ಒಂದೂವರೆ ತಾಸು ಯಾವ ಪ್ರಾಣಿಯೂ ಹತ್ತಿರ ಬಂದಿಲ್ಲವೆಂದು ಅವನು ಹೇಳಿದ. ಅರ್ಧ-ಮರ್ಧ ತಿಂದ ಬೇಟೆಯನ್ನು ಬಿಟ್ಟು ದೂರ ಹೋಗಿರಲಾರದೆಂದೂ ನಾವು ಅಡಗಿ ಕುಳಿತರೆ ಅದು ಹೊರಗೆ ಬರಬಹುದೆಂದೂ

ಸಿತು. ಆದ್ದರಿಂದ ಮಂಚಿಕೆ ಕಟ್ಟುವದಕ್ಕೆ ಬೇಕಾಗುವಷ್ಟು ವೇಳೆ ಇಲ್ಲದ್ದರಿಂದ ಆ ವಿಚಾರ ಬಿಟ್ಟು ನೆಲದ ಮೇಲಿಂದಲೇ ಅದನ್ನು ಹೊಡೆಯಬೇಕೆಂದು ನಿಶ್ಚಯಿಸಿಕೊಂಡೆ. ಸಮೀಪದಲ್ಲಿಯೇ ಒತ್ತೊತ್ತಾಗಿ ಬೆಳೆದ ಬಿದಿರಮೆಳೆಗಳ ನಡುವೆ ಒಂದು ಮರೆಯಾದ ಸ್ಥಳ ಆರಿಸಿಕೊಂಡೆ. ಕರುವಿನ ದೇಹದಿಂದ ಸುಮಾರು ಅರವತ್ತು ಅಡಿ ದೂರದಲ್ಲಿ ಈ ಸ್ಥಳವಿತ್ತು. ನನ್ನನ್ನು ಮರೆಮಾಡಲು ಕೆಲವು ಗಿಡಗಳ ಟೊಂಗೆಗಳನ್ನು ಕಡಿದು ತಂದು ಬಿದಿರ ಮೆಳೆಯ ಸುತ್ತಲೂ ಹಚ್ಚಿ ನನ್ನನ್ನು ಮುಚ್ಚುವಂತೆ ಅವನಿಗೆ ಹೇಳಿದೆ. ಅದಾದ ಮೇಲೆ ನನಗೆ ಅವುಗಳ ಕಿಂಡಿಗಳ ನಡುವಿನಿಂದ ಮಾತ್ರ ಕರುವಿನೆಡೆಗೆ ನೋಡಲು ಸಾಧ್ಯವಾಗುವಂತಾಯಿತು. ಅವನಿಗೆ ಬೇಗನೆ ಮಾತಾಡುತ್ತ ದೂರ ಹೋಗಲು ಹೇಳಿದೆ.



"ಮೇಲಿನ ಹಲ್ಲು ಮುರಿದಿತ್ತು. ಹಣ ಯಾಕೆ ದಂಡ ಮಾಡಬೇಕಂತ ಕೆಳಗಿನ ಹಲ್ಲು ಕಿತ್ತಿಸಿ ಕಟ್ಟಿಸಿಬಿಟ್ಟೆ."

ಇದರಿಂದ ಚಿರತೆಗೆ ಆತಂಕ ದೂರವಾಗಿ ಅದು ಬೇಟೆಯ ಹತ್ತಿರ ಬರಬಹುದು ಎಂದು ತಿಳಿದು ಹೀಗೆ ಮಾಡಿದೆ. ಗುಂಡಿನ ಸಪ್ಪಳ ಕೇಳುವವರೆಗೆ ಹತ್ತಿರ ಬರಬೇಡ ಎಂದೂ ಅವನಿಗೆ ಹೇಳಿ ಕಳಿಸಿದೆ.

ಈ ನನ್ನ ತಾಳ್ಮೆಯ ಪರೀಕ್ಷೆ ಆರಂಭವಾಯಿತು. ಆ ಇಕ್ಕಟ್ಟಿನ ಸ್ಥಳದಲ್ಲಿ ಹೆಚ್ಚುಹೊತ್ತು ಕದಲದೆ ಕೂಡುವದು ಕಷ್ಟದಾಯಕವಾಗಿತ್ತು. ಆದರೂ ಸಹಿಸಿದೆ. ಹೀಗೆ ಸುಮಾರು ಅರ್ಧ ಗಂಟೆ ಕಳೆದ ಮೇಲೆ ಎನ್ನ ಎದುರಿಗೆ ತರಗೆಲೆಗಳ ಸಪ್ಪಳ ಕೇಳಿ ಆ ಕಡೆ ನೆಟ್ಟ ದೃಷ್ಟಿಯಿಂದ ನೋಡತೊಡಗಿದೆ. ನನಗೂ ಆ ಶಬ್ದ ಬರುವ ಸ್ಥಳಕ್ಕೂ ಸುಮಾರು ೨೦೦ ಅಡಿ ಅಂತರವಿರಬಹುದು. ಸ್ವಲ್ಪ ಹೊತ್ತಿನಲ್ಲಿಯೇ ಗಿಡಗಳ ಮಧ್ಯದಿಂದ ಕೇಳಿಯೂ ಕೇಳದಂತೆ ನಿಶ್ಶಬ್ದವಾಗಿ ಒಂದೊಂದೇ ಹೆಜ್ಜೆಯನ್ನಿಡುತ್ತ ನಾನು ಎಣಿಸಿದ್ದಕ್ಕಿಂತ ದೊಡ್ಡದಾದ ಚಿರತೆಯೊಂದು ಆ ಸತ್ತ ಕರುವಿನತ್ತ ಬರುತ್ತಿತ್ತು. ಬೇಟೆಯನ್ನು ಸಮೀಪಿಸುತ್ತಿದ್ದ ಅದರ ರೀತಿ ಚಿತ್ತಾಕರ್ಷಕವಾಗಿತ್ತು. ನನ್ನ ಜೀವಮಾನದಲ್ಲಿಯೇ ಕಂಡಿರದಷ್ಟು ದೊಡ್ಡ ಚಿರತೆ ಅದು. ನಡು ಮಧ್ಯಾಹ್ನದ ಬಿಸಿಲಿನಲ್ಲಿ ಬಂಗಾರದಂತೆ ಹೊಳೆಯುವ ಅದರ ಮೈಗೂದಲು, ಅದರ ಮೇಲೆ ಅಸಂಖ್ಯ ದೃಷ್ಟಿಬೊಟ್ಟುಗಳಂತಿದ್ದ ಕಪ್ಪು ಚುಕ್ಕೆಗಳು, ಅದು ಎಡಕ್ಕೂ ಬಲಕ್ಕೂ ತನ್ನ ಬಾಲವನ್ನು ಸಾವಕಾಶವಾಗಿ ಮಣಿಸಿ ಸೆಟೆಸುತ್ತಿದ್ದ ರೀತಿ ವರ್ಣಿಸಲಸಾಧ್ಯ. ಸುತ್ತಮುತ್ತ ನಿರೀಕ್ಷಿಸುತ್ತ ಸಾವಕಾಶವಾಗಿ ಮುಂದೆ ಬಂದು ತನ್ನ ಬೇಟೆಯಿಂದ ಸುಮಾರು ಮೂವತ್ತು ಅಡಿ ದೂರದಲ್ಲಿ ಅದು ಒಂದು ದೊಡ್ಡ ಗಿಡದ ಬೊಡ್ಡೆಯ ಹಿಂದೆ ನಿಂತಿತು. ಬಿದಿರಮೆಳೆಗಳ ಮತ್ತು ಟೊಂಗೆಯ ಎಲೆಗಳ ನಡುವಿನಿಂದ ನನಗೆ ಅದರ ಅಲುಗಾಡುತ್ತಿದ್ದ ಬಾಲ ಮಾತ್ರ ಕಾಣುತ್ತಿತ್ತು. ಹೀಗೆ ಮತ್ತೆ ಸ್ವಲ್ಪ ಕಾಲ ಕಳೆಯಿತು. ಅದು ಇನ್ನೂ ಏಕೆ ಮುಂದೆ ಬರಲ್ಲೊಲ್ಲದು? ಎಂದು ವಿಸ್ಮಯದಿಂದ ಯೋಚಿಸುತ್ತಿದ್ದೆ. ಮತ್ತೆ ಸ್ವಲ್ಪ ಕಾಲ ಕಳೆಯಿತು. ಆಮೇಲೆ ಬಹಳ ನಿಧಾನವಾಗಿ ಅದು ತನ್ನ ತಲೆಯನ್ನು ಗಿಡದ ಮರೆಯಿಂದ ಹೊರತಂದಿತು. ಆಗ ನಾನು ಅಡಗಿ ಕುಳಿತಿದ್ದ ಬಿದಿರ ಮೆಳೆಗಳೆಡೆಗೆ ಅದರ ದೃಷ್ಟಿ ನೆಟ್ಟದ್ದು ಕಂಡುಬಂತು.

ಅದಕ್ಕೆ ನಾನಿದ್ದ ಬಿದಿರು ಮೆಳೆಯಲ್ಲಿ ಅಪಾಯ ಕಾಣಿಸುತ್ತಿದೆಯೇ? ಎಂದುಕೊಂಡೆ. ಆದರೆ ಗಿಡದ ಟೊಂಗೆಗಳು ನನ್ನನ್ನು ಸಂಪೂರ್ಣವಾಗಿ ಮುಚ್ಚಿದ್ದರಿಂದಲೂ ನನ್ನ ಅರಿವೆಗಳೂ ಅದೇ ಬಣ್ಣದವಿದ್ದುದರಿಂದ ಈ ಸಂಶಯಕ್ಕೆ ಆಸ್ಪದ ಕೊಡಲಾರವೆಂದು ಅನಿಸಿ ಸ್ವಲ್ಪ ಸಮಾಧಾನಪಟ್ಟುಕೊಂಡೆ. ಅದರ ಎದೆಗೆ ಗುಂಡು ಹೊಡೆದರೆ ಮಾತ್ರ ಅದು ಸಾಯಬಹುದು. ಆದರೆ ಆ ಚಿರತೆಯ ನಿಲುವು ನನಗೆ ದೂರಾಗಿ ಇದ್ದು ಅದರ ತಲೆ ಮಾತ್ರ ನನಗೆ ಕಾಣಿಸುತ್ತಿತ್ತು. ಆದ್ದರಿಂದ ಗುಂಡು ಹೊಡೆಯಲಿಲ್ಲ. ಅದರ ಆ ರೀತಿಯ ನೋಟಕ್ಕೆ ಏನೋ ಕಾರಣವಿದೆಯೆಂಬುದು ಸ್ಪಷ್ಟವಾಗಿತ್ತು. ಸ್ವಲ್ಪ ಯೋಚಿಸಿ ನೋಡಿದಾಗ ನನ್ನನ್ನು ಮರೆ ಮಾಡುವದಕ್ಕೆ ಇಟ್ಟ ಗಿಡದ ಟೊಂಗೆಗಳು ತಲೆ ಕೆಳಗಾದದ್ದು ಲಕ್ಷ್ಯಕ್ಕೆ ಬಂತು. ಅದು ಆ ಚಿರತೆಗೆ ವಿಚಿತ್ರವೆನಿಸಿ ಸಂಶಯ ಬಂದಿರಬೇಕು. ಅಂತೂ ವನ್ಯಪ್ರಾಣಿಗಳ ಬುದ್ಧಿಯೂ ಬಹಳ ಚುರುಕು. ಸೃಷ್ಟಿಕ್ರಮದ ವಿರುದ್ಧವಾಗಿ ಬುಡಮೇಲಾಗಿ ನಿಂತಿರುವ ಟೊಂಗೆಗಳು ಮಾನವ ಕುತಂತ್ರದ ದ್ಯೋತಕ ಎನಿಸಿರಬೇಕು ಆ ಚಿರತೆಗೆ. ಈಗ ಚಿರತೆಯನ್ನು ಹೆದರಿಸಿ ಓಡಿಸುವುದೊಂದೇ ಉಪಾಯವೆಂದುಕೊಂಡೆ. ಆದರೆ ಗುಂಡು ಹಾರಿಸಿದರೆ ಅದು ನೇರವಾಗಿ ನನ್ನ ಮೇಲೆಯೇ ಎರಗಬಹುದಿತ್ತು. ಅದಕ್ಕೆ ನಾನು ಕಂಡಿರಬೇಕು. ನಾನೂ ಅದರ ಹೊಳೆಯುವ ಕಣ್ಣುಗಳತ್ತ ದಿಟ್ಟಿಸಿ ನೋಡತೊಡಗಿದೆ. ಇಷ್ಟರಲ್ಲಿ ಒಬ್ಬ ಹಿರಿಯ ಅನುಭವಿಕ ಬೇಟೆಗಾರನ ಮಾತುಗಳು ನೆನಪಿಗೆ ಬಂದವು. 'ಹುಲಿ ಚಿರತೆ ಮುಂತಾದವು ನಿಮ್ಮಡೆಗೆ ನೋಡುತ್ತಿದ್ದರೆ ಹೊಡೆಯಬೇಡಿರಿ, ನೆಲದ ಮೇಲಿದ್ದಾಗಲಂತೂ ಗುಂಡು ಹಾರಿಸಲೇಬಾರದು ... ಗಾಯಗೊಂಡ ಪ್ರಾಣಿಯನ್ನು. ವಿಶೇಷ ತಯಾರಿ ಇಲ್ಲದೆ ಒಬ್ಬರೆ ಬೆನ್ನಟ್ಟಬೇಡಿ.

ಈ ಬಗ್ಗೆ ನಾನು ಯೋಚಿಸುವಾಗಲೆಲ್ಲ ಚಿರತೆಯ ತೀಕ್ಷ್ಣ ನೋಟ ನನ್ನ ಕಡೆಗೇ ಇತ್ತು. ಬಹುಶಃ ಮೊದಲು ಬರುವಾಗ ತಾನು ಕೊಂದ ಪ್ರಾಣಿಯ ಹತ್ತಿರ ಹೋಗುವ ಬಗ್ಗೆ ವಿಚಾರಿಸುತ್ತಿತ್ತೇನೋ. ನಾನು ಇರುವದು ತಿಳಿದ ಮೇಲೆ ನನ್ನನ್ನು ಏನು ಮಾಡುವದೆಂದು ಅದು ನಿರ್ಧರಿಸಿದಂತಿರಲಿಲ್ಲ. ಹೀಗೆ ನೆಟ್ಟ ದೃಷ್ಟಿಯಿಂದ ನೋಡಿದಾಗ ಬೇಟೆಯ ಪ್ರಾಣಿಯು ಸಮ್ಮೋಹಿನಿಗೊಳಗಾಗಿ ಕೈಕಾಲು ಕಳೆದುಕೊಂಡು ಪ್ರಾಣಕ್ಕೆ ಎರಗಾಗುವದೂ ಉಂಟು. ಬೇಟೆಯನ್ನು ಭಯಂಕರ ಗರ್ಜನೆಯಿಂದ ಭಯ ವಿಹ್ವಲಗೊಳಿಸಿ ಚಂಗನೇ ನೆಗೆದು ಅದನ್ನು ಕೊಲ್ಲುವದು ಚಿರತೆಯ ವೈಶಿಷ್ಟ್ಯ.

ಮೇಲಿನ ಪ್ರಸಂಗದಲ್ಲಿ ನಾನೂ ನಿಜವಾಗಿ ಆ ಚಿರತೆಯ ಸಮ್ಮೋಹಿನಿಗೊಳಗಾದೆ. ಎಷ್ಟು ವೇಳೆಕಾದರೂ ಅದನ್ನು ಹೊಡೆಯಲಾಗಲಿಲ್ಲ. ಹೀಗೆ ಕೆಲವು ವೇಳೆ ಕಳೆದ ಮೇಲೆ ಸ್ವಲ್ಪ ಧೈರ್ಯಗೊಂಡು ಸಣ್ಣಗೆ ಕೆಮ್ಮಿದೆ. ತನಗೇನೂ ಭಯವಿಲ್ಲವೆಂದೋ, ಇನ್ನು ಅಲ್ಲಿರುವದು ಬೇಡವೆಂದೋ ಚಿರತೆ ಸಾವಕಾಶವಾಗಿ ಹೊರಟು ಹೋಯಿತು. ಅದರ ಸಮ್ಮೋಹಿನಿಯಿಂದ ಹೊರಬಂದ ಮೇಲೆ ನಾನು ಕೂಡ ಮರಳಿ ಮನೆಗೆ ಹೋದೆ. ನನ್ನ ಜೀವನದಲ್ಲಿಯೇ ಅತಿ ದೊಡ್ಡ ಚಿರತೆಯನ್ನು ಹೊಡೆಯುವ ಅವಕಾಶ ಕೈಜಾರಿತ್ತಾದರೂ ಬೇಟೆಯಾಡಬೇಕಾಗುವ ಕೌಶಲ ನೈಪುಣ್ಯಗಳು ಒಂದು ಪಾಲು ಹೆಚ್ಚಾಗಿದ್ದವು. ●

ಈಶ್ವರಚಂದ್ರ ವಿದ್ಯಾಸಾಗರರು ವ್ಯಾಸಂಗ ಮಾಡುತ್ತಿದ್ದ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಪ್ರಾಧ್ಯಾಪಕರ ಜಾಗ ತೆರವಾದಾಗ ಅದಕ್ಕೆ ಈಶ್ವರಚಂದ್ರರೇ ಅರ್ಹರೆಂದು ಕಾಲೇಜಿನ ವ್ಯವಸ್ಥಾಪಕರು ತೀರ್ಮಾನಿಸಿದರು. ಆದರೆ ಈಶ್ವರಚಂದ್ರರು ಈ ಹುದ್ದೆಗೆ ತಮಗಿಂತಲೂ ತಾರಾನಾಥ ತರ್ಕವಾಚಸ್ಪತಿಯವರೇ ಹೆಚ್ಚು ಅರ್ಹರೆಂದು ಬಗೆದು, ನೂರು ಮೈಲು ದೂರದೂರಲ್ಲಿದ್ದ ಅವರ ಬಳಿಗೆ ಕಾಲುನಡಿಗೆಯಿಂದ ಹೋಗಿ ಒಪ್ಪಿಸಿದರು.



ಇದೋ! ಕಡು ಮತ್ತು ತೃಪ್ತಿಕರ ಟೀ!
ಲಿಪ್ಟನ್ ಟಾಪ್ ಸ್ಟಾರ್ ಟೀ
ಕಡುವಾದ ಮತ್ತು ರುಚಿಕರವಾದ ಟೀ ಬೇಕೆಂದು ನೀವು ನಿರೀಕ್ಷಿಸುತ್ತಿದ್ದರೆ ಈಗ ಇದೋ ಅದು ಇಲ್ಲಿದೆ. ಹೊಸ ಲಿಪ್ಟನ್ ಟಾಪ್ ಸ್ಟಾರ್ ಟೀ ಬಹಳ ಕಡುವಾದ ಟೀಯನ್ನೇ ಮೆಚ್ಚುವ ನಿಮ್ಮಂತಹವರಿಗಾಗಿ ಕಪ್ಪು ಮಾಡುವ ಅತ್ಯುತ್ತಮ ಗುಣ ಮಟ್ಟದ ದಸ್ಟ್ ಟೀಗಳಿಂದ ಮಿಶ್ರಣ ಮಾಡಲಾಗಿದೆ. ಇಂದೇ ಲಿಪ್ಟನ್ ಟಾಪ್ ಸ್ಟಾರ್ ಟೀಯನ್ನು ಪಡೆಯಿರಿ. ಪೂರ್ಣವಾಗಿ ಫಾಯಿಲ್ ಪ್ಯಾಕ್‌ನಲ್ಲಿರುವುದರಿಂದ ಸದಾ ತಾಜಾತನವಿದ್ದು ನಿಮಗೆ ಕಡುವಾದ ಚಹವನ್ನು ನೀಡುವುದು.
LIPTON
TOP STAR
ಕಡು ಮತ್ತು ತೃಪ್ತಿಕರ
ಲಿಂಟಾಸ್-LTS.P.I-1611 KN

-೨೩-

ಆಧುನಿಕ ಡಿನ್ನರ್ ಪಾರ್ಟಿಗಳಲ್ಲಿ **ಸೂಪ್** (Soup) ಎಂಬೊಂದು ವ್ಯಂಜನ ಜನಪ್ರಿಯವಾಗಿದೆ. ಕನ್ನಡದಲ್ಲಿ ಇದಕ್ಕೆ ಸಾರು ಅಥವಾ **ತೋವೆ**ಯೆನ್ನಬಹುದು. **ಸೂಪ್** ಮಾಂಸದಾಗಲಿ ಶಾಕಗಳದಾಗಲಿ ಇರಬಹುದು.

ಈ ಸೂಪು ಭಾರೋಪ್ಯ (ಭಾರತೀಯ-ಯೌರೋಪ್ಯ) ಕುಲಗಳ ಪ್ರಾಚೀನ ವ್ಯಂಜನಗಳಲ್ಲಿ ಒಂದಾಗಿದೆ. ಇಂಗ್ಲೀಷಿಗೆ ಫ್ರೆಂಚಿನಿಂದ ಒಂದ ಈ ಪದಕ್ಕೆ ಸಂಸ್ಕೃತದಲ್ಲಿ ಸೂಪ ಎಂಬ ಜ್ಞಾತಿ ಪದವೇ ಸಿಗುತ್ತದೆ. ಈ ಮೇಲೋಗರ ಭಾರತೀಯಾರ್ಯರ ಊಟದಲ್ಲಿ ಎಷ್ಟು ಮಹತ್ವದ್ದೆಂದರೆ ಅಡಿಗೆಯ ಶಾಸ್ತ್ರಕ್ಕೆ ಸೂಪಶಾಸ್ತ್ರವೆಂದೇ ಹೆಸರಿದೆ. ಅದರ ಶುದ್ಧ ಶಾಕಾಹಾರಿ ಪ್ರತಿರೂಪವಾದ **ತೋವೆ** (ಹೆಸರು ಅಥವಾ ತೊಗರಿ ಬೇಳೆಯದು) ನೈವೇದ್ಯಕ್ಕೆ ಅತ್ಯವಶ್ಯವೆಂದು ಭಾವಿಸಲ್ಪಡುತ್ತದೆ.

ಯುರೋಪಿನಲ್ಲಿ **ಸೂಪಕ್ಕೆ** ಫ್ರೆಂಚ್ ಸ್ಪಾನಿಶ್, ಇಟಾಲಿಯನ್, ಫ್ಲೆಮಿಷ್, ಡಚ್ ಭಾಷೆಗಳಲ್ಲಿ ಹೋಲಿಕೆಯ ಪದಗಳಿವೆ. ಹಳೇ ಫ್ರೆಂಚಿನಲ್ಲಿಯೂ ಈ ಶಬ್ದ ಸಿಗುವುದರಿಂದ ಅಲ್ಲಿಯೂ ಈ ಮೇಲೋಗರ ಪ್ರಾಚೀನವೇ ಸೈ.

ಸೂಪ ದ್ರವಪದಾರ್ಥವೆಂದ ಮೇಲೆ ಅದನ್ನು ಬಡಿಸಲು ಅಥವಾ ಎತ್ತಿ ಸುರಿಯಲು ಏನಾದರೂ ಸಾಧನ ಬೇಕಲ್ಲ. ಅದಕ್ಕೂ ಭಾರೋಪ್ಯ ಭಾಷೆಗಳಲ್ಲಿ ಒಂದು ಪ್ರಾಚೀನ ಪದವಿದೆ. ಅದೇ **ಚಮಚೆ. ಚಮಚಾ** ಎಂಬುದು ಭಾರೋಪ್ಯ ಭಾಷಾವರ್ಗಕ್ಕೆ ಸೇರಿದ ಫಾರಸಿ (ಇರಾಣಿ) ಭಾಷೆಯಿಂದ ಬಂದದ್ದು. ಸಂಸ್ಕೃತದಲ್ಲಿ ಅದೇ **ಚಮಸ**ವಾಗಿದೆ. ಇದೂ ಪ್ರಾಚೀನ ಶಬ್ದ. ಯಜ್ಞಗಳಲ್ಲಿ ಸೋಮರಸ ಕುಡಿಯುವ **ಸವುಟು** ಇದು. ಸಂಸ್ಕೃತ ಕೋಶಗಳ ಪ್ರಕಾರ **ಚಮಿಸು** (= ಸುರಿಯುವುದು)ವುದಕ್ಕೆ ಬಳಸುವ ಉಪಕರಣ **ಚಮಸ.** ಸಾಮಾನ್ಯವಾಗಿ ಇದನ್ನು ಮರದಿಂದ ಮಾಡುತ್ತಿದ್ದರು. ಯಜ್ಞಗಳಲ್ಲಿ **ಚಮಸ**ಗಳ ವ್ಯವಸ್ಥೆ ನೋಡಿಕೊಳ್ಳುವುದಕ್ಕೆ **ಚಮಸಾಧ್ವರ್ಯು** ಎಂಬವನು ಇರುತ್ತಿದ್ದನು. ಋಗ್, ಅಥರ್ವ ವೇದಗಳಲ್ಲಿಯೇ ಈ ಶಬ್ದ ಸಿಗುವುದರಿಂದ **ಚಮಸ** ಬಹು ಪುರಾತನ ಉಪಕರಣ. ಈಗ ನಾವು ಬಳಸುವ **ಚಮಚಾ** ವಿದೇಶದಿಂದ ಬಂದದ್ದಾದರೂ ಅದರ ಪ್ರಾಚೀನತಮ ಬಳಕೆ ಭಾರತದಲ್ಲೇ ಇತ್ತು.

ಪ್ರಾಚೀನದಿಂದ ಅರ್ವಾಚೀನಕ್ಕೆ ಬರುವುದಾದರೆ ಈಗರ್ಧ ಶತಮಾನದ ಹೋಟೇಲುಗಳ ವಿಸ್ತರಣೆಯಿಂದಾಗಿ ಎಲ್ಲರಿಗೂ ಪರಿಚಿತವಾಗಿರುವ **ಶಿರಾ** ಎಂಬ ಸಿಹಿ ಸಜ್ಜಿಗೆಯನ್ನು ವಿಚಾರಿಸಬಹುದು. ನಾನು ಹುಡುಕಿದ ಮಟ್ಟಿಗೆ ಇದರ ಪ್ರಾಚೀನ ಉಲ್ಲೇಖಗಳು ಸಿಗುವುದಿಲ್ಲ. ೧೯೫೦ರಲ್ಲಿ ತಿದ್ದಿ ಬೆಳಸಿ ಪ್ರಕಟವಾದ ಹಿಂದೀಕೋಶದಲ್ಲಿ ಅದು ಇಲ್ಲ. ಶಬ್ದ ಸಂಶೋಧಕರಾದ ನನ್ನ ಒಬ್ಬ ಮಿತ್ರರ ಪ್ರಕಾರ ಅದು ಮರಾಠಿಯಿಂದ ಕನ್ನಡಕ್ಕೆ ಬಂದಿದೆ. ಮರಾಠಿ ವ್ಯುತ್ಪತ್ತಿಕಾರರು ಕೆಲವರು ಅದನ್ನು 'ಶ್ರೀ' ಧಾತುವಿಗೆ ಗಂಟುಹಾಕಲು ಯತ್ನಿಸಿದ್ದಾರಂತೆ. ಇದನ್ನು ಒಪ್ಪುವುದಕ್ಕಿಂತ ಕನ್ನಡದ ಸಿಹಿ ರವಾ ಎಂಬುದೇ ಶಿರಾ ಆಯಿತೆಂದೊಪ್ಪುವುದು ಸುಲಭ. ಆದರೆ ಉರ್ದು ಕೋಶಗಳಲ್ಲಿ **ಶೀರ್, ಶೀರೀಂ, ಶೀರೀನೀ** ಎಂಬ ಫಾರಸಿ ಪದಗಳು ಸಿಗುತ್ತವೆ ಇವುಗಳ ಅರ್ಥಗಳು ಕ್ರಮವಾಗಿ ಹಾಲು (ಸಂ ಕ್ಷೀರ), ಮಧುರ, ಮಾಧುರ್ಯವುಳ್ಳದ್ದು ಎಂದಿವೆ. **ಶೀರಾ** ಅಂದರೆ ಸಕ್ಕರೆ ಪಾಕವೂ ಹೌದು. ಹೀಗೆ **ಶೀರಾ** ರವಾ ಅಥವಾ **ಶೀರೀನೀ** ರವಾ ಎಂದು ಪ್ರಾರಂಭವಾಗಿ ಉತ್ತರಪದ ಲೋಪದಿಂದ **ಶೀರಾ** ಅಷ್ಟೇ ಉಳಿದಿದೆಯೆಂದು ಕಾಣುತ್ತದೆ.

—ಪಾನೆಂ.

ಸೈ-ಥಾವ್

ಅನುವಾದ:

ಎಚ್. ಎಸ್. ಶ್ರೀಪಾದಭಟ್ಟ

ಚೀನದ ಅತ್ಯುತ್ತಮ ಕಥೆಗಳಲ್ಲೊಂದು 'ಸೈ-ಥಾವ್.' ಪಾಶ್ಚಿಮಾತ್ಯರಲ್ಲಿ ಇದರ ಖ್ಯಾತಿ ಹಬ್ಬಿರುವುದಕ್ಕೆ ಇದರಲ್ಲಿನ ಕಲ್ಪನಾವಿಲಾಸ, ನೀತಿಬೋಧ ಕಥಾವೈಖರಿಗಳೇ ಕಾರಣ. ಚೀನೀ ಸಾಹಿತ್ಯದಲ್ಲಿ ಇದಕ್ಕೊಂದು ವಿಶಿಷ್ಟವಾದ ಸ್ಥಾನವಿದೆ. ಈ ಕಥೆಯ ಲೇಖಕ ಯಾರು ಎಂಬುದಿನ್ನೂ ಸ್ಪಷ್ಟವಾಗಿಲ್ಲ. ೧೯೦೬ರಲ್ಲಿ ಲಾಫಾಡಿಯೋ ಹರ್ನ್ ಎಂಬುವರಿಂದ ಇಂಗ್ಲೀಷಿಗೆ ಭಾಷಾಂತರಿಸಲ್ಪಟ್ಟ ಈ ಕಥೆ ಇಂದು ಜಗತ್ತಿನ ಜನಪ್ರಿಯ ಕಥೆಗಳಲ್ಲಿ ಒಂದು.

ಐದುನೂರು ವರ್ಷಗಳ ಹಿಂದೆ ಮಿಂಗ್ ರಾಜ ವಂಶದ ದೊರೆ ಹಾಂಗ್-ವೊನ ಆಳ್ವಿಕೆಯ ಕಾಲದಲ್ಲಿ ಕಾಂಗ್-ಚೌ-ಫೂ ಎಂಬ ಪಟ್ಟಣವಿತ್ತು. ಅಲ್ಲಿ ವಾಸಿಸುತ್ತಿದ್ದ ಟಿಯೆನ್-ಪೀಲೂ ಎಂಬುವವನನ್ನು ಅವನ ಧರ್ಮಶ್ರದ್ಧೆ ಮತ್ತು ಬುದ್ಧಿವಂತಿಕೆಗಾಗಿ ಸನ್ಮಾನಿಸಲಾಯಿತು. ಪೀಲೂಗೆ ಮಿಂಗ್-ವೈ ಎಂಬ ಪ್ರತಿಭಾವಂತ ಮಗನಿದ್ದ. ಚೆಲುವಿನಿಂದ ಶೋಭಿಸುತ್ತಿದ್ದ ಸದೃಢ ಮೈಕಟ್ಟು ಮತ್ತು ಸಭ್ಯ ನಡೆ ನುಡಿಯ ಅವನಿಗೆ ಸರಿಸಾಟಿ ಯುವಕರೇ ವಿರಳ ಎಂದರೆ ತಪ್ಪಿಲ್ಲ.

ಆಗತಾನೇ ಹದಿನೆಂಟರ ಹೊಸಿಲಲ್ಲಿ ಕಾಲಿಟ್ಟಿದ್ದ ಮಿಂಗ್-ವೈಗೆ ಹರೆಯದ ಉತ್ಸಾಹ; ಅಷ್ಟರಲ್ಲಿ ಮಿಂಗ್-ವೈನ ತಂದೆ ಪೀಲೂ ಸಾರ್ವಜನಿಕ ಶಿಕ್ಷಣ ಮೇಲ್ವಿಚಾರಕನಾಗಿ ಚೆಂಗ್-ಚೌ ಪಟ್ಟಣಕ್ಕೆ ಹೋಗಬೇಕಾಯಿತು. ಪೀಲೂನ ಸಂಸಾರ ವಾಸ ಮಾಡುತ್ತಿದ್ದ ಚೆಂಗ್-ಚೌ ಪಟ್ಟಣಕ್ಕೆ ಹತ್ತಿರವಾಗಿ ಚಾಂಗ್ ಎಂಬ ಶ್ರೀಮಂತ ಸರ್ಕಾರದ ರಾಯಭಾರಿ ಆಗಿ ಸೇವೆ ಸಲ್ಲಿಸುತ್ತ ವಾಸಿಸಿದ್ದ. ತನ್ನ ಮಕ್ಕಳಿಗಾಗಿ ಒಬ್ಬ ತೀಕ್ಷ್ಣಮತಿ ಶಿಕ್ಷಕನನ್ನು ಹುಡುಕುತ್ತಿದ್ದ ಶ್ರೀಮಂತನಿಗೆ ಆಗಷ್ಟೇ ಶಿಕ್ಷಣ ಇಲಾಖೆಗೆ ಬಂದ ಪೀಲೂನನ್ನು ಕಾರ್ಯನಿಮಿತ್ತ ಭೇಟಿ ಮಾಡಬೇಕಾಗಿ ಬಂತು. ಆಗ ಚುರುಕು ಸ್ವಭಾವದ ಮಿಂಗ್-ವೈ ಶ್ರೀಮಂತನ ಗಮನ ಸೆಳೆದ. ಪರಿಣಾಮವಾಗಿ ಚಾಂಗ್ ಸಂಸಾರಕ್ಕೆ ಮಿಂಗ್-ವೈ ಖಾಸಗಿ ಶಿಕ್ಷಕನಾಗಿ ನೇಮಿಸಲ್ಪಟ್ಟ.



ಚಿಂಗ್–ಚೌ ಪಟ್ಟಣಕ್ಕೆ ಕೆಲವು ಮೈಲಿಗಳ ದೂರದಲ್ಲಿ ಚಾಂಗ್‌ನ ಮನೆಯಿತ್ತು. ಸ್ನೇಹಮಯಿಯಾದ ಮಿಂಗ್–ವೈ ತನ್ನ ಯಜಮಾನನ ಮನೆಯ ಸದಸ್ಯರಲ್ಲೊಬ್ಬನಾಗಿ ಗೌರವಿಸಲ್ಪಡತೊಡಗಿದ. ಮಿಂಗ್–ವೈ ಹೊಸ ಜನ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವಲ್ಲಿ ಅವನ ತಂದೆತಾಯಿಯರ ಹಿತೋಪದೇಶ ಶುಭ ಹಾರೈಕೆಗಳು ಮಾರ್ಗದರ್ಶಿಯಾದವು. ಪುರಾತನ ಕಾಲದ ಪ್ರಾಜ್ಞ ಲಾವ್–ಸಿಯೂನ ಉಕ್ತಿಗಳನ್ನು ತಂದೆತಾಯಿಗಳು ಅವನಿಗೆ ಉಪದೇಶಿಸಿದರು:

"ಸುಂದರ ಮುಖ ಪ್ರಪಂಚವನ್ನೆಲ್ಲ ಪ್ರೀತಿಯ ಒರತೆಯಿಂದ ತುಂಬಿಸಿದೆ. ಆದರೆ ಸ್ವರ್ಗವೊಂದು ವಂಚಿಸಲ್ಪಡುತ್ತದೆ. ಇದೋ ಪೂರ್ವದಿಂದ ಒಂದು ಹುಡುಗಿ ಎದುರಾದರೆ, ಪಶ್ಚಿಮಕ್ಕೆ ತಿರುಗು. ಪಶ್ಚಿಮದಿಂದ ಕನ್ಯೆಯೊಬ್ಬಳು ಎದುರಾದಂತೆ ಕಂಡರೆ ನಿನ್ನ ಕಣ್ಣುಗಳನ್ನು ಪೂರ್ವಕ್ಕೆ ತಿರುಗಿಸು"

ಈ ಉಪದೇಶಾಮೃತವನ್ನು ಮಿಂಗ್–ವೈ ಬರುವ ದಿನಗಳಲ್ಲಿ ಗಮನಿಸದಿದ್ದರೆ ಪಂಜರದಿಂದ ಬಿಡುಗಡೆ ಹೊಂದಿದ ಗಿಣಿಯಂತೆ ಅವನ ಹದಿಹರೆಯದ ಮನಸ್ಸಿನ ಪ್ರಫುಲ್ಲತೆಯೇ ಅದಕ್ಕೆ ಕಾರಣ. ಚಾಂಗ್‌ನ ಮನೆಬಿಟ್ಟು ಬೇರೊಂದು ಕಡೆ ವಾಸಿಸಬೇಕೆಂದು ಅವನು ಯೋಚಿಸುತ್ತಿರುವಂತೆಯೇ ಶರತ್ಕಾಲ ಕರಗಿ ಚಳಿಗಾಲ ಕಾಲಿಟ್ಟಿತು.

ಚಳಿಗಾಲದ ಎರಡನೆಯ ಹುಣ್ಣಿಮೆ ಚೀನೀಯರು ಆಚರಿಸುವ ಅತ್ಯಂತ ಹರ್ಷದ ದಿನ. ಆ ದಿನವನ್ನು ಹುವಾ–ಚಾವ್ ಅಥವಾ ನೂರು

ಹೂಗಳ ಜನ್ಮ ದಿನೋತ್ಸವ, ಎಂದು ಚೀನೀಯರು ಕರೆಯುತ್ತಾರೆ. ಈಗ ಮಿಂಗ್–ವೈ ಪಾಲಿಗೆ ಅದು ಬಹಳ ಹರ್ಷದ ಉತ್ಸವ ಆಗಿತ್ತು. ಜೊತೆಗೆ ಅವನಿಗೆ ತಂದೆ ತಾಯಿಗಳನ್ನು ಕಾಣುವ ಹೆಬ್ಬಯಕೆಯೂ ಮೂಡಿತು. ಯಜಮಾನ ಚಾಂಗ್‌ನೊಂದಿಗೆ ಬಯಕೆಯನ್ನು ತೋಡಿಕೊಂಡ ಕೂಡಲೇ ಈಡೇರಿತು. ಎರಡು ಔನ್ಸ್ ಬೆಲೆಯ ಒಂದು ಬೆಳ್ಳಿಯ ವಸ್ತು ಅವನ ಕೈಸೇರಿತು. ಚಾಕರಿಯಲ್ಲಿರುವ ಹುಡುಗರು ತಂದೆತಾಯಿಗಳನ್ನು ಅಪರೂಪವಾಗಿ ಭೆಟ್ಟಿಯಾಗುವಾಗ ಏನಾದರೂ ತೆಗೆದುಕೊಂಡು ಹೋಗುವ ಬಯಕೆಯಿಂದಿರುತ್ತಾರೆಂದು ಲಾರ್ಡ ಚಾಂಗ್ ಬಲ್ಲ. ಅಲ್ಲದೇ ವರ್ಷಕ್ಕೊಮ್ಮೆ ಬರುವ ಹುವಾ ಚಾವ್ ಹಬ್ಬದಲ್ಲಿ ತಂದೆತಾಯಿಗಳಿಗೆ ಅಥವಾ ಸಂಬಂಧಿಗಳಿಗೆ ಅಪೂರ್ವ ವಸ್ತುಗಳನ್ನು ಉಡುಗೊರೆ ಕೊಡುವುದು ಚೀನೀಯರ ಪದ್ಧತಿ.

ಅರಳುತ್ತಿರುವ ಮೊಗ್ಗುಗಳ ಸುವಾಸನೆಯೊಂದಿಗೆ ಗಾಳಿ ಹಿತವಾಗಿ ಬೀಸುತ್ತಿರುವುದರಿಂದ ವಾತಾವರಣ ಮೋಹಗೊಳಿಸುವಂತಿದೆ. ಈ ಪರಿಮಳಕ್ಕಾಗಿ ಹಾರಾಡುವ ಜೇನ್ನೊಣಗಳ ಝೇಂಕಾರ ತಂಬೂರಿ ಮೀಟಿದಂತಿತ್ತು. ಮಿಂಗ್–ವೈ ತುಳಿಯುತ್ತಿರುವ ದಾರಿಯನ್ನು ಇದುವರೆಗೂ ಯಾರೂ ಬಹಳ ವರ್ಷಗಳಿಂದ ತುಳಿದಂತೆ ಕಾಣುತ್ತಿರಲಿಲ್ಲ. ದಾರಿಯಲ್ಲಿ ಮೊಣಕಾಲೆತ್ತರ ಹುಲ್ಲು ಬೆಳೆದಿತ್ತು. ಗಗನಚುಂಬಿ ಮರಗಳು ಇಕ್ಕೆಲಗಳಲ್ಲಿ ತಮ್ಮ ಗಡುತರ ಪಾಚಿಗಟ್ಟಿದ ಟೊಂಗೆಗಳನ್ನು ಚಾಚಿ, ದಾರಿಯಲ್ಲಿ ನಡೆದು ಹೋಗುವವರಿಗೆ ನೆರಳು ಕೊಡುತ್ತಿದ್ದವು. ಹಕ್ಕಿಗಳ ಚಿಲಿಪಿಲಿ ರಾಗಕ್ಕೆ ಎಲೆಗಳು ಸ್ಪಂದಿಸುತ್ತಿದ್ದವು. ಮರಗಳ ದೀರ್ಘ ಬಿಕ್ಕಾಪತಗಳು ಹೊಂಬಣ್ಣದ ಹಬೆಯಿಂದಾಗಿ ಕಂಗೊಳಿಸುತ್ತಿದ್ದವು. ಕಾಡುಹೂವುಗಳ ಬಿರಿದ ಮೊಗ್ಗುಗಳ ಸುವಾಸನೆಯು ದೇವಾಲಯದಲ್ಲಿ ಹಬ್ಬದ ಹಾಲುಮಡ್ಡಿಯ ಪರಿಮಳದಂತೆ ಬೀರಿತ್ತು. ಕನಸಿನ ಲೋಕದಲ್ಲಿ ಮಿಂಗ್–ವೈನ ಹೃದಯ ಸಂಚರಿಸತೊಡಗಿತು. ತಿಳಿಗೆಂಪು ಆಕಾಶಕ್ಕೆ ಎದುರಾಗಿ ಕೆಳಕ್ಕೆ ಚಾಚಿದ ಕೊಂಬೆಗಳ ಅಡಿಗೆ, ಅರಳುತ್ತಿರುವ ಮೊಗ್ಗುಗಳ ಎದುರಾಗಿ ಕುಳಿತ ಮಿಂಗ್ ವೈ; ಮಂದ ಬೆಳಕಿನಲ್ಲಿ ಶಾಂತ ವಾತಾವರಣವನ್ನು ಸವಿಯತೊಡಗಿದ. ದಿನವೂ ಪಟ್ಟಣದ ಗದ್ದಲಗಳಿಂದ ರೋಸಿಹೋದ ಅವನಿಗೆ ಆ ಸ್ಥಳ ಸ್ವರ್ಗಲೋಕದಂತೆ ಕಂಡಿತು. ತನ್ಮಯನಾಗಿದ್ದ ಅವನನ್ನು ಇದ್ದಕ್ಕಿದ್ದಂತೆ ಒಂದು ಶಬ್ದ ಅವನ ದೃಷ್ಟಿಯನ್ನು ಒಂದು ದಟ್ಟ ನೆರಳಿನ ಭಾಗಕ್ಕೆ ತಿರುಗಿಸಿತು. ಅದು ಒಂದು ಪೀಚ್ ಟ್ರೀ ಬುಡಭಾಗ. ಅಲ್ಲಿ ಪ್ರಾಯದ ಹೆಂಗಸೊಬ್ಬಳು ಗೋಚರಿಸಿದಳು. ಅವಳ ಸುತ್ತಲೂ ಎಳೆಗೆಂಪು ಕಾಡುಹೂ ಮೊಗ್ಗುಗಳು ಸೌಂದರ್ಯದಲ್ಲಿ ಪರಿಮಳದಲ್ಲಿ ತಾಮುಂದು, ತಾಮುಂದು ಎಂದು ಅವಳೊಂದಿಗೆ ಸ್ಪರ್ಧೆಗಿಳಿದಂತಿದ್ದವು. ಸುಂದರಿ ಮೇಲಾಗಿ ಏಕಾಕಿನಿ. ಒಂದೆರಡು ಕ್ಷಣಗಳು ಅಲ್ಲಿಂದ ಕಣ್ಣು ಕೀಲಿಸಲಾಗಲಿಲ್ಲ ಮಿಂಗ್–ವೈಗೆ. ಕೋರೈಸುತ್ತಿರುವ ಹೊಂಬಣ್ಣದ ಅವಳ ಮೈಕಾಂತಿ ಮುಖದ ತುಂಬ ಪ್ರಜ್ವಲಿಸುತ್ತಿರುವ ಪ್ರೀತಿಯ ಶಾಂತ ಕಳೆ. ಅವನ ದೃಷ್ಟಿಯನ್ನು ಅಲ್ಲಿಯೇ ತಳವೂರುವಂತೆ ಮಾಡಿತು. ಅಗಲ ಹಣೆಯ ಕೆಳಗೆ ಎರಡು ಬಟ್ಟಲು ಕಣ್ಣುಗಳು ಮಿಂಚಿನಂತೆ ಹೊಳೆಯುತ್ತಿದ್ದವು. ಹಲವಾರು ಕ್ಷಣಗಳು ಈ ಸೌಂದರ್ಯ ರಾಶಿಯನ್ನು ಎವೆಯಿಕ್ಕದೇ ನೋಡಿ ಮಿಂಗ್–ವೈ ದೃಷ್ಟಿ ಬದಲಿಸಿ, ಎದ್ದು ತನ್ನ ಪ್ರಯಾಣ ಆರಂಭಿಸಿದ. ಆದರೆ ನಿಶ್ಚಯವಾಗಿಯೂ ತಾನು ಪೇಚಿನಲ್ಲಿ ಸಿಕ್ಕಿದಂತೆ ಅವನಿಗೆ ಅನ್ನಿಸಿತು. ಎರಡು ಬಟ್ಟಲು ಕಣ್ಣುಗಳು ಎಲೆಗಳ ಮರೆಯಿಂದ ತನ್ನನ್ನೇ ಕದ್ದು ನೋಡುತ್ತಿರುವವೆಂಬ ಭಾವನೆಯಿಂದ ಮಿಂಗ್–ವೈ ಗಲಿಬಿಲಿಗೊಂಡ ಇದೆಂಥ ಆಕರ್ಷಣೆಯಪ್ಪ! ಎಂದು ತಟ್ಟನೆ ಅಂಗಿಯ ತೋಳಿನಲ್ಲಿ ಬಚ್ಚಿಟ್ಟಿದ್ದ ಹಣವನ್ನು ಅರಿವಿಲ್ಲದವನಂತೆ ಕೆಳಗೆ ಕೆಡವಿದ. ಒಂದೆರಡು ಮಾರು ಮುಂದೆ ಹೋಗಿದ್ದಿರಬಹುದು. ತಟ್ಟನೆ ಹಿಂದಿನಿಂದ ಯಾರೋ ಸರಸರನೆ ನಡೆದು ಯಾರೋ ಸಣ್ಣ ದನಿಯಿಂದ ತನ್ನನ್ನೇ ಕರೆದಂತೆ ಅನ್ನಿಸಿತು ಅವನಿಗೆ. ಹೌದು, ಅವನು ಊಹಿಸಿಕೊಂಡಿದ್ದು ಸರಿಯಾಗಿಯೇ ಇತ್ತು. ಆಶ್ಚರ್ಯದಿಂದ ಸರ್ರನೆ ತಿರುಗಿ ನೋಡಿದರೆ ಅದೇ ಹುಡುಗಿ. ಕೆಲಸದಾಕೆಯಂತೆ ತೋರುತ್ತಿದ್ದ ಆಕೆ ದಿಗ್ಭ್ರಮೆ ಹಿಡಿಸುವಂತೆ ಅವನನ್ನೇ ಕುರಿತು ಹೇಳುತ್ತಿದ್ದಳು.

"ಆಗಂತುಕನೇ, ಕೆಳಗೆ ಬಿದ್ದ ನಿಮ್ಮ ಹಣವನ್ನು

ನಿಮಗೆ ಹಿಂತಿರುಗಿಸುವಂತೆ ನನ್ನ ಒಡತಿ ಆಜ್ಞಾಪಿಸಿದಳು." ಮಿಂಗ್ ವೈ ಅವಳಿಗೆ ವಂದನೆ ಸಲ್ಲಿಸಿ, ಅವಳ ಒಡತಿ ('ಸೇವಕಿಯೇ ಇಷ್ಟು ಸುಂದರಳಾಗಿರುವಾಗ ಅವಳ ಒಡತಿ ಇನ್ನೆಷ್ಟು ಸುಂದರಿಯಾಗಿರಬಹುದು') ಗೂ ತನ್ನ ಕೃತಜ್ಞತೆಗಳನ್ನು ಅರ್ಪಿಸುವಂತೆ ಕೇಳಿಕೊಂಡನು. ನಂತರ ಸೂಜಿ ಬಿದ್ದರೂ ಕೇಳುವಷ್ಟು ನಿಸ್ತಬ್ಧ ಶಾಂತತೆಯಲ್ಲಿ ಮಿಂಗ್‌ವೈ ತನ್ನ ದಾರಿ ಹಿಡಿದು ಮುಂದೆ ಸಾಗಿದ. ದಾರಿಗಡ್ಡವಾಗಿ ಮಲಗಿದ್ದ ಉದ್ದುದ್ದ ನೆರಳುಗಳನ್ನು ಮೆಟ್ಟಿ ಹಿಂದಾಗಿಸುತ್ತ ದಾರಿಯಲ್ಲಿ ಆಗತಾನೆ ಕಂಡ ಸುಂದರ ದೃಶ್ಯವನ್ನು ನೆನಪಿಸಿಕೊಳ್ಳುತ್ತಿದ್ದಂತೆ ಅವನ ಮನ ಕನಸಿನಲೋಕದಲ್ಲಿ ವಿಹರಿಸುತ್ತಿತ್ತು. ಆ ಸುಂದರಿ ಯಾರಿರಬಹುದು? ಭಯಂಕರ ಅರಣ್ಯದಲ್ಲಿ ಏಕಾಂಗಿಯಾಗಿ ತನ್ನ ಗಮನಸೆಳೆದ ರೂಪರಾಶಿ ಎಲ್ಲಿಂದ ಬಂದಳು? ತನ್ನ ಒಡತಿಯೊಬ್ಬಳಿದ್ದಾಳೆಂದು ಬೇರೆ ಹೇಳಿಕೊಂಡಳಲ್ಲವೆ? ಅವಳ ಒಡತಿಯನ್ನೇ ಕಾಣುವ ಅವಕಾಶ ತನಗೊದಗಿದ್ದರೆ, ಆಗ...ಮುಂದೆ ಅವನಿಂದ ಯೋಚಿಸಲಾಗಲಿಲ್ಲ. ಅವನಹೃದಯ ಬಡಿತ ಬೀಸು ಹೆಜ್ಜೆಯ ಶಬ್ದವನ್ನೂ ಮೀರಿಸುತ್ತಿತ್ತು ಎಂದೆನ್ನಿಸತೊಡಗಿತು ಅವನಿಗೆ.

ಮತ್ತೊಂದು ದಿನ ಮಿಂಗ್-ವೈ ಅದೇ ದುರ್ಗಮ ದಾರಿಯಲ್ಲಿ ಬರುತ್ತಿದ್ದ. ಅಷ್ಟರಲ್ಲಿ ಹುವಾ-ಚಾವ್ ಹಬ್ಬದ ದಿನವಂದು ಅನಿರೀಕ್ಷಿತವಾಗಿ ತನಗೊದಗಿದ ಸುಂದರ ದೃಶ್ಯದ ನೆನಪಾಗಿ ಆ ದಿನ ಕುಳಿತ ಸ್ಥಳದಲ್ಲೇ ಸ್ವಲ್ಪ ಹೊತ್ತು ಕುಳಿತು ವಿಶ್ರಾಂತಿ ತೆಗೆದುಕೊಂಡ. ಮಧುರ ನೆನಪಿನ ಗುಂಗಿನಿಂದ ಎಚ್ಚೆತ್ತಾಗ ಅದೇ ಸ್ಥಳ ಈಗ ಸುಮಾರು ಬದಲಾವಣೆಯಾಗಿದ್ದು ಅವನಿಗೆ ದಿಗ್ಭ್ರಮೆ ತರಿಸಿತು. ಕಣ್ಣು ತಿಕ್ಕಿಕೊಂಡು ಮತ್ತೊಮ್ಮೆ ನೋಡಿದ. ಖಂಡಿತ ಅದೇ ಜಾಗ. ಅದೇ ಗಗನ ಚುಂಬಿ ವೃಕ್ಷಗಳ ದೀರ್ಘ ದಿಕ್ಪಾತ ಕೊಂಬೆಗಳ ಸಂದಿಯಲ್ಲಿ ಕಣ್ಣು ತೂರಿಸಿ ನೋಡಿದಾಗ ಅವನಿಗೆ ಕಂಡಿದ್ದೇನು?

ಮನುಷ್ಯರು ವಾಸಿಸಬಲ್ಲಂತಹ ಸುಂದರ ಸ್ಥಳ; ಅಲ್ಲೊಂದು ಅಷ್ಟೇನೂ ದೊಡ್ಡದಲ್ಲದ ನಾಜೂಕಾದ ನೀಲಿ ಹಂಚಿನ ಮನೆ. ಇನ್ನೂ ಸ್ವಲ್ಪ ಪಕ್ಕಕ್ಕೆ ದೃಷ್ಟಿ ಚಲ್ಲಿದರೆ ಅಷ್ಟೇನೂ ವಿಶಾಲವಲ್ಲದ ಅರಮನೆಯಲ್ಲಿರುವಂಥ ಸುಂದರ ಹೊರಾಂಗಣ. ಹಿಂದೆ ಈ ಹೊರಾಂಗಣ ಇರಲಿಲ್ಲವೋ ಅಥವಾ ಇದ್ದರೂ ಕಂಡಿರಲಿಲ್ಲವೋ ಅಥವಾ ಆ ಸುಂದರ ರೂಪರಾಶಿಯ ಆಕರ್ಷಣೆಯೊಳಗೆ ಸಿಕ್ಕು ಅಷ್ಟಕ್ಕೆ ಸೀಮಿತಗೊಂಡಿದ್ದನೋ ಅಂತೂ ಅವನು ಈಗ ಕಾಣುತ್ತಿರುವುದು ಸತ್ಯ. ಸೂರ್ಯ ಪ್ರಕಾಶದಷ್ಟೇ ಸತ್ಯ. ತಿಳಿ ನೀಲವರ್ಣದ ಹೆಂಚುಗಳು ಒಂದನ್ನೊಂದು ಬೆಸೆದುಕೊಂಡು ಶಿಲ್ಪಿಯ ಕೆತ್ತನೆಯನ್ನೂ ಮೀರಿಸುವಂತಿದ್ದವು. ನೀಳಮರಗಳ ಕೊಂಬೆಗಳು ಹಸಿರುವರ್ಣದ ಎಲೆಗಳೊಂದಿಗೆ ಅವನ್ನು ಬಾಗಿ ಚುಂಬಿಸುತ್ತಿತ್ತು. ಜೊತೆಗೆ ಹಗಲಿನ ಉಜ್ವಲ ಮೇಘಶ್ಯಾಮ ವರ್ಣಗಳ ಮಿಳಿತದೊಂದಿಗೆ, ಅಲ್ಲಿಯ ದೃಶ್ಯ ಓಕುಳಿಯಾಟದಂತೆ ಕಂಡಿತು. ಮನೆಗೆ ತಾಗಿಕೊಂಡು ಹಸಿರು ಮಿಶ್ರಿತ ಹೊಂಬಣ್ಣ ಚಿತ್ತಾರದ ಮೊಗಸಾಲೆಗಳು, ಅಲ್ಲಲ್ಲಿ ಹರಡಿದ್ದ ಎಲೆಗಳು ಹೂವುಗಳು ಸೂರ್ಯ ಪ್ರಕಾಶದೊಂದಿಗೆ ಓಕುಳಿಯಾಡುತ್ತಿರುವ ದೃಶ್ಯ ಅದ್ಭುತ ಶಿಲ್ಪ ರಚನಾ ಕೌಶಲವನ್ನೂ ಪರಿಹಾಸ್ಯ ಮಾಡುವಂತಿತ್ತು. ಥಾರಸಿಗೆ ಹೋಗಲು ಇದ್ದ ಮೆಟ್ಟಲುಗಳ ಆದಿಭಾಗದಲ್ಲಿ ಎರಡು ದೊಡ್ಡ ಚಿತ್ತಾರದ ಪಿಂಗಾಣಿ ಆನೆಗಳು ಅತಿಥಿಗಳನ್ನು ಸ್ವಾಗತಿಸಲು ಎರಡು ಸ್ತಂಭಗಳ ಮೇಲೆ ಕುಳಿತಿದ್ದವು. ಅವುಗಳ ಹಿಂದೆ ಮಿಂಗ್ ವೈ ಗೆ ಹುವಾ ಚುವ್ ಹಬ್ಬದ ದಿನ ಕಂಡ ಹುಡುಗಿ, ಮತ್ತು ಅವಳ ಪಕ್ಕದಲ್ಲಿ ಅವಳಿಗೂ ಮಿಗಿಲಾದ ಸುಂದರಿ (ಬಹುಶಃ ಆ ಸೌಧದ ಒಡತಿ ಇರಬಹುದು!) ಜೊತೆಯಲ್ಲಿ ನಿಂತಿರುವ ದೃಶ್ಯ ಸ್ವರ್ಗಲೋಕದಲ್ಲಿ ಅಪ್ಸರೆಯರು ಸ್ವಾಗತಿಸುತ್ತಿರುವಂತಿತ್ತು. ಒಮ್ಮೆಲೇ ಮಿಂಗ್ ವೈ ದಿಗ್ಭ್ರಮೆಗೊಂಡ. ಅದು ಕನಸೋ ನನಸೊ ತಿಳಿಯಲಿಲ್ಲ. ಒಮ್ಮೆ ಮೈಯನ್ನು ಚಿಗುಟಿಕೊಂಡು ತಾನು ಕಾಣುತ್ತಿರುವುದು ಕನಸಲ್ಲ ಎಂದುಕೊಂಡ. ಏನು ಬಯಸಿದ್ದನೋ ಅದು ಅಪ್ರಯತ್ನಪೂರ್ವಕವಾಗಿ ಕೈಗೆಟುಕಿದಂತಾಯಿತು. ವಾಸ್ತವ ಲೋಕಕ್ಕಿಳಿಯುತ್ತಿದ್ದಂತೆ, ಎರಡು ಜೊತೆ ಕಣ್ಣುಗಳು ತನ್ನನ್ನೇ ನೋಡುತ್ತಿರುವುದು ಅರಿವಾಯಿತು ಅವನಿಗೆ. ಅವರು ತಮ್ಮೊಳಗೇ ಸಂಭಾಷಿಸಿಕೊಳ್ಳುತ್ತ, ಕಣ್ಣುಗಳನ್ನು ಹೊರಳಿಸಿ ಮುಗುಳ್ನಗುತ್ತಿರುವುದನ್ನು

ನೋಡಿದ ಮಿಂಗ್ ವೈಗೆ ಅವರು ತನ್ನನ್ನೇ ಕುರಿತು ಮಾತಾಡಿಕೊಳ್ಳುತ್ತಿರುವಂತೆ ತೋರಿತು. ಪರಿಸರದಿಂದ ಆತಂಕಗೊಂಡನಾದರೂ ಅವನಲ್ಲಿದ್ದ ಯುವರಕ್ತ ಅದರಲ್ಲಿ ಅತ್ಯಂತ ಸುಂದರಿಗೆ ನಮಸ್ಕಾರ ಮಾಡಿಸಿತು. ಆದಿನ ಕಂಡ ಯುವತಿ ಅವನಿಗೆ ಹತ್ತಿರ ಬರುವಂತೆ ಸಂಜ್ಞೆ ಮಾಡಿದಳು, ಮಿಂಗ್ ವೈ ತುಕ್ಕು ಹಿಡಿದು ಬಣ್ಣ ಕಳೆದುಕೊಂಡಿದ್ದ ಗೇಟನ್ನು ಒಳಕ್ಕೆ ತಳ್ಳಿದ. ರಕ್ತವರ್ಣದ ಹೂಗಳಿದ್ದ ಟ್ರೈಲ್ ಗಿಡಗಳು ಗೇಟಿನ ಅರ್ಧ ಭಾಗವನ್ನು ಮುಚ್ಚಿದ್ದವು. ಯಾಂತ್ರಿಕವಾಗಿ ಮಹಲಿನ ಕಡೆ ಹೆಜ್ಜೆಹಾಕಿದ. ಅವನಲ್ಲೀಗ ದ್ವಂದ್ವ ಭಾವನೆ ಭಯದ ಚಿಪ್ಪು ಮೂಡತೊಡಗಿತ್ತು. ಆದರೂ ಏನೋ ಅವ್ಯಕ್ತ ಆನಂದ. ಸುಂದರ ಕಣ್ಣುಗಳ ಒಡತಿಯನ್ನು ಹತ್ತಿರದಿಂದ ನೋಡುವ ಮಾತಾಡಿಸುವ ಅವಕಾಶ ಸಿಕ್ಕಿತೆಂದೊ ಏನೊ... ಹತ್ತಿರ ಬರುವಷ್ಟರಲ್ಲಿ ಸುಂದರಿ ಅಲ್ಲಿಂದ ಮಾಯವಾಗಿದ್ದಳು. ಆದರೆ ಜೊತೆಗಿದ್ದ ಸೇವಕಿ ಮೆಟ್ಟಲುಗಳ ಅಗಲ ಭಾಗದಲ್ಲಿ ನಿಂತು ಸಮೀಪಿಸಿದ ಮಿಂಗ್ ವೈನನ್ನು ಕುರಿತು, "ಆ ದಿನ ನಾವು ಏನೋ ಒಂದು ಯಕಃಶ್ಚಿತ್ ಉಪಕಾರ ಮಾಡಿದ್ದಕ್ಕೆ ನೀವು ನಮಗೆ ಪ್ರತಿವಂದನೆಗಳನ್ನು ಸಲ್ಲಿಸಿ, ಕಾತರನಾಗಿರುವಿಯೆಂದು ನನ್ನ ಒಡತಿ ಅರ್ಥಮಾಡಿಕೊಂಡಿದ್ದಾಳೆ. ಅವಳು ನಿನಗೆ ಭವ್ಯ ಸ್ವಾಗತ ಕೋರುತ್ತಾಳೆ. ಅವಳು ನಿನ್ನನ್ನು ಬಲ್ಲಳು ನಿನ್ನ ಕೀರ್ತಿ, ಬುದ್ಧಿ ಮತ್ತೆಯನ್ನೂ ಬಲ್ಲಳು. ಈ ಒಳ್ಳೆಯ ದಿವಸ ನಿನ್ನೊಂದಿಗೆ ಆತ್ಮೀಯಂತೆಯಿಂದ ಕಳೆಯಲು ಅವಳು ಬಯಸುತ್ತಾಳೆ."



"ಸೀರೆ ಎಲ್ಲಿ ಕೊಂಡುಕೊಂಡೆ?"

ಮಿಂಗ್–ವೈ ಅತೀವ ನಾಚಿಕೆಯಿಂದ ಒಳಗಡಿಯಿಟ್ಟ. ನೆಲದ ಮೇಲಿದ್ದ ಮೆತ್ತನೆಯ ಹಾಸಿನ ಮೇಲೆ ನಡೆಯುವಾಗ ಅವನ ಪಾದಗಳು ಏನೊಂದೂ ಸಪ್ಪಳ ಮಾಡಲಿಲ್ಲ. ಕಾಡಿನಲ್ಲಿ ಹಾಚಿಗಟ್ಟಿದ ಹುಲ್ಲಿನ ಮೇಲೆ ನಡೆಯುತ್ತಿರುವ ಮೃದು ಅನುಭವ. ಅಷ್ಟೇನೂ ದೊಡ್ಡದಲ್ಲದ ತಂಪು ಹವೆಯಿಂದ ಕೂಡಿದ ಒಂದು ಸುಂದರ ಸಭಾಂಗಣ ಮಿಂಗ–ವೈನನ್ನು ಎದುರುಗೊಂಡಿತು. ಆಗ ತಾನೆ ನೆಲದ ಮೇಲೆ ಹರಡಿದ ಬಿರಿದ ಮೊಗ್ಗುಗಳು ಸುವಾಸನೆ ಅಲ್ಲೆಲ್ಲ ಹರಡಿತ್ತು. ಅಹ್ಲಾದಕರವಾದ ವಾತಾವರಣ ಇಡೀ ಸೌಧವನ್ನು ವ್ಯಾಪಿಸಿತ್ತು. ಬಿದರಿನ ಮೆಳೆಗಳ ಮಧ್ಯ ತೂರಿಬರುತ್ತಿರುವ ಬಿಸಿಲನ್ನು ಭೇದಿಸಿಕೊಂಡು ಹಾರುತ್ತಿದ್ದ ಗುಂಪು ಹಕ್ಕಿಗಳ ನೆರಳು ಮಹಲಿನ ಮೇಲೆ ಬೀಳುತ್ತಿತ್ತು. ದೊಡ್ಡ ಪುಟ್ಟ ಬಣ್ಣದ ಚಿಟ್ಟೆಗಳು ತಮ್ಮ ರೆಕ್ಕೆಗಳನ್ನು ಬೀಸುತ್ತ ಅಲ್ಲಲ್ಲಿದ್ದ ಪುಷ್ಪಕುಂಭಗಳ ಸುತ್ತ ಹಾರಾಡುತ್ತಿದ್ದವು ಮತ್ತು ಒಂದನ್ನೊಂದು ಅಟ್ಟಿಸಿಕೊಂಡು ಹೋಗುತ್ತಿದ್ದವು. ಇಷ್ಟೆಲ್ಲ ಕಾರ್ಯಚಟುವಟಿಕೆಗಳಿಂದ ಸೌಧ ತುಂಬಿದ್ದರೂ ನಿಶ್ಶಬ್ದವಾಗಿತ್ತು. ಇನ್ನೊಂದು ಬಾಗಿಲಿನ ಬಳಿ ಬಂದ ಸುಂದರ ಯುವತಿಯೊಬ್ಬಳು ಅವನನ್ನು ಸ್ವಾಗತಿಸಿದಳು. ಉತ್ತರವಾಗಿ ಎರಡು ಕೈಗಳನ್ನು ಎದೆಯ ಮಟ್ಟಕ್ಕೆ ತಂದು ಬಗ್ಗಿ ವಂದನೆ ಸಲ್ಲಿಸಿದ ಮಿಂಗ್–ವೈ. ನೀಳಕಾಯದ ಆಕರ್ಷಕ ಮೈಕಟ್ಟು. ಸುಂದರವಾದ ಗೊಂಬೆಯಂತೆ ಕಾಣುವ ತೆಳ್ಳನೆಯ ದೇಹ. ಹೊಳೆಯುವ ಮೈಕಾಂತಿ ಸುರುಳಿಸುರುಳಿಯಾಗಿ ಸುತ್ತಿಕೊಂಡಿದ್ದ ಅವಳ ಕಪ್ಪನೆಯ ಗುಂಗುರು ಕೂದಲುಗಳ ಅರಳುತ್ತಿರುವ ಚು–ಹಾ–ಶಿಯ್ ಮೊಗ್ಗುಗಳನ್ನು ಸೆಳೆದಪ್ಪಿತ್ತು. ತೊಟ್ಟಿದ್ದ ರೇಶ್ಮೆಯ ನಿಲುವಂಗಿ ನಡೆಯುವಾಗ ನಾನಾತರದ ಬಣ್ಣ ಕಟ್ಟುತ್ತಿತ್ತು. ಬೆಳಕು ಬದಲಾದಂತೆ ಬಣ್ಣ

ಬದಲಾಯಿಸುವ ಹಬೆಯಂತೆ.

ಸಭ್ಯತೆಯ ಸಂಪ್ರದಾಯಗಳನ್ನು ವಿನಿಮಯ ಮಾಡಿಕೊಂಡು ಇಬ್ಬರು ಕುಳಿತುಕೊಂಡರು. ನಾನು ಊಹಿಸಿರುವುದು ನನ್ನ ಗೌರವಾನ್ವಿತ ಅತಿಥಿ ಬೇರೆ ಯಾರೂ ಆಗಿರದೆ ಮಿಂಗ್–ವೈ ಎಂಬ ಅನ್ವರ್ಥನಾಮ ಹೊಂದಿರುವ ಟಿನ್ ಚೌ ಆಗಿದ್ದಾನೆಂದು, ನನ್ನ ಹತ್ತಿರ ಸಂಬಂಧಿ ಚಾಂಗನ ಮಕ್ಕಳಿಗೆ ಪಾಠ ಹೇಳುವ ಶಿಕ್ಷಕನಾಗಿದ್ದಾನೆಂದು, ಲಾರ್ಡ ಚಾಂಗನ ಸುಸಂಸ್ಕೃತ ಮನೆತನ ನನ್ನ ಮನೆತನವೇ ಚಾಂಗನ ಮಕ್ಕಳ ಶಿಕ್ಷಕನನ್ನು ವಂಶದ ಕುಡಿಯೆಂದೇ ನಾನು ಗೌರವಿಸುತ್ತೇನೆ.” ಯುವತಿ ಹೇಳುತ್ತಿದ್ದಳು.

ಆಶ್ಚರ್ಯದ ಪರಮಾವಧಿಯಲ್ಲಿ ಮಿಂಗವೈ ಕೇಳಿದ, “ನಿಮ್ಮ ಗೌರವಾನ್ವಿತ ಮನೆತನದ ಹೆಸರು ಏನೆಂದು ತಿಳಿಯಬಹುದೇ? ಚಾಂಗ್‌ರಿಗೆ ನಿಮ್ಮ ಸಂಬಂಧ ಯಾವ ರೀತಿಯದು ಎಂದು ತಿಳಿಯಬಹುದೇ?”

ಯುವತಿ ಶಾಂತ ಸ್ವರದಿಂದ “ನನ್ನ ಬಡಮನೆತನದ ಹೆಸರು ಪಿಂಗ್ ಎಂದು. ಈ ಮನೆತನದವರು ಪುರಾತನಕಾಲದಿಂದಲೂ ಚಿಂಗ್‌ಚೌ ಪಟ್ಟಣದಲ್ಲಿದ್ದರು. ಈಗಲೂ ಅಲ್ಲಿಯೇ ಇದ್ದಾರೆ. ನಾನು ಮೌನ–ಹಾವ್ ದಂಪತಿಗಳ ಒಬ್ಬಳೇ ಮಗಳು. ‘ಸೈ’ ತಂದೆತಾಯಿಗಳು ನನಗೆ ಇಟ್ಟ ಪ್ರೀತಿಯ ಹೆಸರು. ನಮ್ಮ ಮನೆತನದ ಖಾಂಗ್ ಎಂಬ ಸ್ಫುರದ್ರೂಪಿ ಯುವಕನೊಂದಿಗೆ ನನ್ನ ಮದುವೆ ಮಾಡಿದರು. ಆ ಮದುವೆಯಿಂದ ನಾನು ನಿನ್ನ ಹಿರಿಯರಿಗೆ ಹತ್ತಿರ ಸಂಬಂಧಿಯಾದೆ. ಆದರೆ ನನ್ನ ದುರದೃಷ್ಟಕ್ಕೆ ಮದುವೆಯಾದ ಸ್ವಲ್ಪ ದಿನಗಳಲ್ಲಿಯೇ ಗಂಡ ಸತ್ತುಹೋದ. ಮೊಗ್ಗು ಅರಳುವ ಮೊದಲೇ ಬಾಡಿಹೋಯಿತು. ಸಮಾಜದಿಂದ ಗಂಡ ಸತ್ತವಳು ಅನ್ನಿಸಿಕೊಂಡೆ. ಯೌವನದ ಸಹಜ ಕಾಮನೆಯನ್ನು ತೀರಿಸಿಕೊಳ್ಳಲು ಅನ್ಯದಾರಿ ಹಿಡಿಯದೆ ಜೀವನದಲ್ಲಿ ಜಿಗುಪ್ಸೆಗೊಂಡು ಉಳಿದ ನನ್ನ ಜೀವಿತ ಕಾಲವನ್ನು ಈ ಏಕಾಂತ ಸ್ಥಳದಲ್ಲಿ ಕಳೆಯಲು ನಿರ್ಧರಿಸಿದೆ…”

ಹರಿಯುವ ತೊರೆಯ ಜುಳು ಜುಳು ನಾದದಂತೆ ಅವಳ ಧ್ವನಿ ಲಘುಸಂಗೀತದಂತಿತ್ತು. ತಂತಿ ಮೀಟಿದಂತೆ ಕೋಗಿಲೆ ಉಲಿದಂತೆ ಇಂಥ ಇಂಪಾದ ಮೃದು ಸ್ವರವನ್ನು ಹಿಂದೆಂದೂ ಕೇಳಿರಲಿಲ್ಲ. ಮಿಂಗ್ ವೈ ಅವಳ ಧ್ವನಿಯಲ್ಲಿನ ಶಾಂತತೆ ಆದರೂ ಸ್ಥಿರತೆ ಅವನನ್ನು ನಂಬುವಂತೆ ಮಾಡಿತ್ತು. ಆದರೇನು, ವಿಧವೆಯಲ್ಲವೇ? ಮೇಲಾಗಿ ಸಾಂಪ್ರದಾಯಿಕವಾದ ಪೂರ್ವಭಾವಿ ಆಮಂತ್ರಣವೂ ಇಲ್ಲದೇ ಹೆಚ್ಚುಕಾಲ ಅಲ್ಲಿರಲು ಅವನಿಗೆ ಮನಸ್ಸಿರಲಿಲ್ಲ…ಕೊಟ್ಟ ಉತ್ಕೃಷ್ಟ ಚಹವನ್ನು ನಿಧಾನವಾಗಿ ಗುಟುಕರಿಸಿ ಅಲ್ಲಿಂದ ಹೊರಡುವ ಆತುರ ತೋರಿದ. ಅಷ್ಟು ಬೇಗ ಅವನನ್ನು ಬೀಳ್ಕೊಡಲು ಮನಸ್ಸಿಲ್ಲದ ‘ಸೈ’–“ತಾವು ಮಿಂಗವೈ ಕೆಲ ಸಮಯ ನನ್ನ ಮನೆಯಲ್ಲಿ ವಿಶ್ರಮಿಸಿಕೊಳ್ಳುವುದಿಲ್ಲವೇ? ನೀನು ಸ್ವಲ್ಪ ಹೊತ್ತು ಇಲ್ಲಿ ಇದ್ದೆಯೆಂದಾಗಲಿ, ಸ್ವಲ್ಪ ಹೊತ್ತು ನಾನು ನಿನ್ನನ್ನು ಅತಿಥಿಯಾಗಿ ಸತ್ಕರಿಸಿದೆನೆಂದಾಗಲಿ, ನಿನ್ನ ಹಿರಿಯರಿಗೆ ತಿಳಿಯುವುದೆಂಬ ಭಯ ಇಟ್ಟುಕೊಳ್ಳಬೇಡ. ಚಾಂಗ್ ವಿಪರೀತ ಕೋಪಿಸಿಕೊಳ್ಳುವನೆಂದು ನನಗೆ ಗೊತ್ತು, ಒಂದು ಪಕ್ಷ ಅವನೇ ಹೀಗೆ ಬಂದಿದ್ದರೂ ಈ ಬಡಪಾಯಿ ಔತಣವಿಕ್ಕದೇ ಕಳಿಸುತ್ತಿರಲಿಲ್ಲ. ಊಟಕ್ಕಾದರೂ ನಿಲ್ಲು.”

ಈ ಪ್ರಾರ್ಥನೆಯಿಂದ ಕಸಿವಿಸಿಗೊಂಡರೂ ಮಿಂಗ್–ವೈನ ಹೃದಯ ಒಳಗೊಳಗೇ ಮುದಗೊಳ್ಳುತ್ತಿತ್ತು. ಕಾರಣ ‘ಸೈ’ ಅವನಿಗೆ ಕಂಡ ರೀತಿ; ಉಪಚರಿಸಿದ ರೀತಿ; ಅತಿಥಿ ಸತ್ಕಾರದಲ್ಲಿ ಎಷ್ಟೊಂದು ಪ್ರೀತಿವಾತ್ಸಲ್ಯ! ಅವಳಾಡಿದ ಮಾತಿನಿಂದಲೇ ಅವನಿಗೆ ಹೊಟ್ಟೆ ತುಂಬಿದಂತೆ ಕಂಡಿತು. ಅವನಿಗರಿವಾಗದಂತೆ ಪ್ರೀತಿಯ ಭಾವ ಮೂಡತೊಡಗಿತು. ಅವ್ಯಕ್ತ ಪ್ರೀತಿಯ ಭಾವದ ಮುಂದೆ, ವಯಸ್ಸಿನ ಅಂತರ ವಿಧವೆ ಎಂಬ ಕ್ಷುಲ್ಲಕ ವಿಷಯಗಳೆಲ್ಲ ಗೌಣ ಎನಿಸಿದವು. ಅವರಿಬ್ಬರೂ ಮಾತಾಡುತ್ತಿದ್ದರೆ ಸಮಯ ಕಳೆದುದರ ಪರಿವೆಯೇ ಅವರಿಗಾಗಲಿಲ್ಲ. ಸಂಜೆಯ ಉದ್ದುದ್ದ ನೆರಳುಗಳು ನಿಧಾನವಾಗಿ ದಟ್ಟ ನೀರಳೇ ಬಣ್ಣಕ್ಕೆ ತಿರುಗತೊಡಗಿದವು. ಸೂರ್ಯ ಮುಳುಗತೊಡಗಿದ. ನೀಲಿ ಆಕಾಶದ ಉತ್ತರ ದಿಕ್ಕಿನಲ್ಲಿ ಕೌನ್ಸಿಲರ್ಸ್ ಎಂದು ಕರೆಯಲ್ಪಡುವ, ಮಾನವನ ಬದುಕು ಸಾವು, ಭವಿಷ್ಯ ಇವುಗಳ ನಿರ್ದೇಶಕರೆಂದು ಕರೆಯಲ್ಪಡುವ ಆ ಮೂರು ನಕ್ಷತ್ರಗಳ ತಮ್ಮ ತಣ್ಣನೆಯ ಮಂದ ಪ್ರಕಾಶದ

ಕಣ್ಣುಗಳನ್ನು ತೆರೆದವು. ಬಣ್ಣ ಬಣ್ಣದ ಲಾಂದ್ರಗಳು ಮಹಲಿನ ಒಳಗೆ ಬೆಳಕು ಬೀರುತ್ತಿದ್ದವು. ರಾತ್ರಿ ಊಟವು ಮೇಜಿನಲ್ಲಿ ಸಿದ್ಧವಾಗಿತ್ತು. ತನಗೆಂದು ತೋರಿಸಿದ ಜಾಗದಲ್ಲಿ ಕುಳಿತು, ಎದುರಿಗಿದ್ದ ಸುಂದರ ಮುಖವನ್ನೇ ನೋಡುತ್ತಾ ತಟ್ಟೆಗೆ ಕೈಹಾಕಿದ. ತಟ್ಟೆಯಲ್ಲಿರುವ ಭಕ್ಷ್ಯ ಭೋಜ್ಯಗಳು ಅವನಿಗೆ ವರ್ಷಕ್ಕೊಮ್ಮೆಯೂ ಸಿಗುತ್ತಿರಲಿಲ್ಲ. ಆದರೂ ಅವನು ಸ್ವಲ್ಪವೇ ತಿಂದಿದ್ದನ್ನು ಗಮನಿಸಿದ 'ಸೈ' ಅವನನ್ನು ಮದ್ಯ ಪಾನಕ್ಕೆ ಕರೆದಳು. ಆದರೂ ಅದನ್ನು ಕುಡಿದರೆ ನರನಾಡಿಗಳು ಬೆಂಕಿಯಾಗುತ್ತಿತ್ತು. ಮಿಂಗ್–ವೈಗೆ ಅಲ್ಲಿದ್ದ ವಸ್ತುಗಳೆಲ್ಲಾ ವಿಚಿತ್ರವಾಗಿ ಮೋಹಕವಾಗಿ ಕಂಡವು. ಗೋಡೆಗಳು ಹಿಂದೆ ಹಿಂದಕ್ಕೆ ಸರಿಯುತ್ತಿದ್ದಂತೆ ಕಂಡವು. ಮಾಳಿಗೆಗಳು ಮೇಲೆ ಮೇಲೆ ಹೋಗುತ್ತಿದ್ದವು. ಲಾಂದ್ರಗಳು ಸಾಲು ನಕ್ಷತ್ರಗಳಂತೆ ಪ್ರಕಾಶಿಸುತ್ತಿದ್ದವು. ಮಾದಕ ರಾತ್ರಿ. ದೂರದಿಂದ ಗಾಳಿಯಲ್ಲಿ ತೇಲಿ ಬಂದ ಮಧುರ ನಿನಾದದಂತೆ ಯುವತಿಯ ಧ್ವನಿ ಮಿಂಗ್–ವೈನ ಕಿವಿಗೆ ಬಡಿಯುತ್ತಿತ್ತು. ಅವನ ಹೃದಯ ಬಲೂನಿನಂತೆ ಉಬ್ಬಿತು. ನಾಲಿಗೆ ಸಡಿಲಗೊಂಡಿತು. ಉಚ್ಚರಿಸಲು ಧೈರ್ಯ ಸಾಲದೆಂಬ ಭ್ರಾಂತಿ ಉನ್ಮತ್ತ ಪದಗಳನ್ನು ಅವನ ತುಟಿಯೊಳಗೇ ಬಂಧಿಸಿತ್ತು. ಅವನು ಇನ್ನಷ್ಟು ಉನ್ಮಾದಗೊಳ್ಳುವಂತೆ ಅವಳ ಕೆಂದುಟಿಗಳು ಜರಿಯಲಿಲ್ಲ. ಆದರೆ ಅವಳ ಹೊಳೆಯುವ ಕಣ್ಣುಗಳು ಅವನತ್ತ ಮೆಚ್ಚಿಗೆಯ ನೋಟ ಬೀರಿ ನಗುತ್ತಿದ್ದರೆ ವಿಶಿಷ್ಟ ರೀತಿಯಲ್ಲಿ ಅವಳನ್ನೇ ದಿಟ್ಟಿಸುತ್ತಿದ್ದ ಅವನ ಪ್ರೀತಿಯ ನೋಟವನ್ನು ಹಿಂತಿರುಗಿಸುತ್ತಿರುವಂತೆ ಕಂಡವು.

"ನಿನ್ನ ಅದ್ಭುತ ಪ್ರತಿಭೆ, ಎಣೆಯಿಲ್ಲದ ನೈಪುಣ್ಯದ ಬಗ್ಗೆ ಕೇಳಿದ್ದೇನೆ. ಬದುಕಿನಲ್ಲಿ ಸಂಗೀತ ಅನೇಕ ವೈವಿಧ್ಯಗಳ ಅನುಕ್ರಮಣಿಕೆಗೆ ಬುನಾದಿ. ಸಂಗೀತ ಸಮಾಜದಲ್ಲಿ ನಾನೂ ಅಲ್ಪ ಸ್ವಲ್ಪ ಗೌರವಿಸಲ್ಪಟ್ಟಿದ್ದೇನೆ. ಆದರೆ ಅತ್ಯಂತ ಗಂಭೀರ ಪ್ರವೃತ್ತಿಯವಳು ನಾನು. ಅಲ್ಪ ಸ್ವಲ್ಪ ಹಾಡಬಲ್ಲ ನನ್ನೊಂದಿಗೆ ಕೂಡಿ ಹಾಡುವೆಯಾ? ಎಷ್ಟೋ ದಿನಗಳಿಂದ ಅದುಮಿಟ್ಟ ಬಯಕೆ ಇದು. ...ತೃಪ್ತಿಕಾಣದ ವಿಚಿತ್ರ ಬಯಕೆ! ನನ್ನ ಸಂಯೋಜನೆಗಳನ್ನು ಪರೀಕ್ಷಿಸಿಯೂ ನೋಡು!"

"ಆತ್ಮೀಯಳೇ, ಹೆಮ್ಮೆಯಿಂದ ತೃಪ್ತಿಪಡುವುದು ಈಗ ನನ್ನ ಸರದಿ. ನನಗಿಲ್ಲದ ಅರ್ಹತೆಯನ್ನು ಗುರುತಿಸಿ ಎತ್ತಿಹೇಳಿದ ಮೊದಲನೆಯವಳು ನೀನು. ಅದಕ್ಕಾಗಿ ನನ್ನಲ್ಲುಂಟಾದ ಸಂತೋಷವನ್ನು ವ್ಯಕ್ತಪಡಿಸಲು ನಾನು ಅಸಮರ್ಥ" ಮಿಂಗ್–ವೈ ಉತ್ತರಿಸಿದ. ಸೇವಕಿ ಒಡತಿಯ ಆಜ್ಞೆಗೆ ವಿಧೇಯಳಂತೆ ಒಂದು ಬೆಳ್ಳಿಯ ಜಾಗಟೆಯನ್ನು ತಂದಿಟ್ಟು ಮರೆಯಾದಳು. ಮಿಂಗ್–ವೈ ಅವಳ ಹಸ್ತಪ್ರತಿಗಳನ್ನು ಕೈಗೆತ್ತಿಕೊಂಡು ಕುತೂಹಲದಿಂದ ಪರೀಕ್ಷಿಸತೊಡಗಿದ. ಪುರಾತನ ಕಾಲದ ಲಿಪಿಗಳು. ಕಾಗದಗಳು ನಸುಹಳದಿ ಬಣ್ಣಕ್ಕೆ ತಿರುಗಿದ್ದವು. ಒಣಗಿದ ದೇವರ ಪ್ರಸಾದ (ಹೂವು) ದಷ್ಟು ಭಾರವಾಗಿತ್ತು ಅದು. ಆದರೆ ಅಕ್ಷರಗಳು ಓದುವಷ್ಟು ಸ್ಪಷ್ಟವಾಗಿದ್ದವು. ಅವುಗಳ ಕೆಳತುದಿಯಲ್ಲಿ 'ಓಯನ್ ಚಿನ್' 'ಶಾ ಪಿಯೆನ್' ಮತ್ತು 'ದೌ ಮೌ' ಎನ್ನುವ ಸಹಿಗಳಿದ್ದವು. ಅಲ್ಲದೇ ಅವರು ಥ್ಯಾಂಗ್ ರಾಜವಂಶದ ಹೆಸರಾಂತ ಸಂಗೀತ ವಿದ್ವಾಂಸರೆಂದೂ ಕವಿಗಳೆಂದೂ ಉಲ್ಲೇಖಿಸಲ್ಪಟ್ಟಿತ್ತು! ನಿಗೂಢ ನಿಕ್ಷೇಪವೊಂದನ್ನು ಪತ್ತೆ ಹಚ್ಚಿದಂಥ ಸಂಭ್ರಮಾಶ್ಚರ್ಯಗಳಿಂದ ಮಿಂಗ್ ವೈ ಬಾಯಿಂದ ಉದ್ಗಾರ ಹೊರಟಿತು. ಅದ್ಭುತನ ಸ್ವರ ಪ್ರಸಾರದ ಹಸ್ತಪ್ರತಿಗಳು! ಅವು ಆತನ ಕೈಯಲ್ಲಿದ್ದಷ್ಟು ಹೊತ್ತು ಮೈಯಲ್ಲಿ ವಿದ್ಯುತ್ ಸಂಚಾರವಾಗುತ್ತಿರುವ ಅನುಭವವಾಯಿತವನಿಗೆ.

"... ಇವು ಬೆಲೆಕಟ್ಟಲಾರದಂಥ ವಸ್ತುಗಳು! ಹಲವು ರಾಜರ ಬೊಕ್ಕಸಗಳು ಸೇರಿದರೂ ಇವುಗಳಿಗೆ ಸರಿ ತೂಗಲಾರದವು! ಅಬ್ಬಾ ಐನೂರು ವರ್ಷಗಳ ಹಿಂದಿನ ಲಿಪಿಗಳು! ಮಹಾ ಮಹಾ ಕವಿಶ್ರೇಷ್ಠರು ನಮ್ಮ ಹುಟ್ಟಿಗೂ ಮುಂಚೆ ಹಾಡಿದ ಕವನಗಳು. ಇಷ್ಟುಕಾಲ ಸುರಕ್ಷಿತವಾಗಿ ಕಾದಿರಿಸಿರುವದು ಆಶ್ಚರ್ಯ, ಚಮತ್ಕಾರವಾದ ಬರಹಗಳಿವು. ಶತಮಾನಗಳ ನಂತರ ನಾನು ಕಲ್ಲಾಗಿ ಉಳಿದೆ. ಹೊಂಬಣ್ಣದ ಗಟ್ಟಿ ಎಣ್ಣೆಯಲ್ಲಿ ಅದ್ದಿದಂತಿರುವ ಪದಃಪುಂಜಗಳು. ಈ ಸರಳ ಸಂಯೋಜನೆಗಳನ್ನು ಎಷ್ಟು ದೈವಿಕವಾಗಿವೆ. "ಇವರ ಕರ್ತೃ ಕವಿಶ್ರೇಷ್ಠ 'ಕಾ ಪಿನ್' ಸೆಚೋಯನ್ ಪ್ರಾಂತ್ಯದ ಐನೂರು ವರ್ಷಗಳ ಹಿಂದಿನ

ಪ್ರಾಂತಾಧಿಕಾರಿ" ಮಿಂಗ್ ವೈ ಅರಚಿದ.

"ಓ ಕಾ–ಪಿನ್... ಪ್ರೀತಿಯ ಕಾ ಪಿನ್!... ನನ್ನ ಆರಾಧ್ಯ ದೈವ 'ಚಾಪಿನ್' ಪ್ರಿಯ ಮಿಂಗ ವೈ. ಅವನ ಕಂಪನಸ್ವನಗಳನ್ನು ನಾವು ಕೂಡಿಪಾಡೋಣ. ನಶಿಸಿಹೋದ ಸಂಗೀತವನ್ನು ಮತ್ತೆ ಹಾಡಿ ಆನಂದಪಡೋಣ. ಶತಮಾನಗಳ ಹಿಂದಿನ ಭವ್ಯ ಸಂಗೀತ!" 'ಸೈ' ಬಡಬಡಿಸಿದಳು. ಅವಳ ಕಣ್ಣುಗಳ ಕಾಂತಿ ಕುಗ್ಗುತ್ತಿತ್ತು.

ಮೋಹಕವಾದ ಪ್ರಶಾಂತ ರಾತ್ರಿಯಲ್ಲಿ ಅವರ ಧ್ವನಿ ತಾರಕಕ್ಕೇರಿತು. ಪ್ರಖ್ಯಾತ 'ಪುಂಗ್–ಹುವಾಂಗ್ ಅಲೆಯುವ ಹಕ್ಕಿಗಳ ಮಧುರ ಸಮೂಹ ನಾದದಂತೆ. ಒಂದುಕ್ಷಣ ಮಿಂಗ್‌ವೈ ತಾನು ಹಾಡುವುದನ್ನು ನಿಲ್ಲಿಸಿ ಭಾವಪರವಶನಾಗಿ ಅವಳ ಧ್ವನಿಯನ್ನು ಆಲಿಸಿದ. ಸುತ್ತೆಲ್ಲ ಬೆಳಕು ಕ್ಷೀಣಿಸುತ್ತಿತ್ತು. ಕಣ್ಣುಗಳಿಂದಿಳಿದ ಆನಂದಬಾಷ್ಪಗಳು ಅವನ ಕಪೋಲಗಳನ್ನು ಕಚಗುಳಿಟ್ಟವು.

ಒಂಭತ್ತನೆಯ ಘಳಿಗೆ ಕಳೆಯಿತು. ತನ್ಮಯತೆಯಿಂದ ಹಾಡುತ್ತಾ, ಕೆನ್ನೀಲಿಯ ತಂಪಾದ ದ್ರವವನ್ನು ಮತ್ತೆ ಮತ್ತೆ ಹೀರಿದರು. ಥಾಂಗ್‌ನ ಪ್ರೇಮಗೀತೆಗಳನ್ನು ಹಾಡಿ ಉದ್ರೇಕಗೊಂಡವರು ಹೀಗೆ ಮಧ್ಯರಾತ್ರಿಯವರೆಗೂ ಸಾಗಿತು. ಅವರ ಕೂಟ. ಈ ಮಧ್ಯೆ ಮಿಂಗ್ ವೈ ಅನೇಕ ಬಾರಿ ಅಲ್ಲಿಂದ ಹೊರಡಲು ಎದ್ದಿದ್ದ. ಆಗೆಲ್ಲ ಸೈ ತನ್ನ ಕಂಚಿನ ಕಂಠದಿಂದ ಗತಕಾಲದ ಕವಿಗಳ ತುಂಬು ಜೀವನವನ್ನು ಮನಮೋಹಕವಾಗಿ ಹಾಡುತ್ತಲೋ ಅವರ ಪ್ರೇಯಸಿಯರ ಕುರಿತು ಹಾಡುತ್ತಲೋ ಅವನನ್ನು ವಶೀಕರಿಸಿಕೊಂಡುಬಿಡುತ್ತಿದ್ದಳು ಅಥವಾ ಅವನ ಕಿವಿ ಮಾತ್ರ ತನ್ನ ಗಾನಕ್ಕೆ ಸೋಲುವಂತೆ, ಉಳಿದ ಇಂದ್ರಿಯಗಳು ಸತ್ತಂತೆ ಹಾಡಿಬಿಡುತ್ತಿದ್ದಳು. ಕೊನೆಯ ಗುಟುಕು ಮುಗಿಯುತ್ತಿದ್ದಂತೆ, ಅವನ ಇಂದ್ರಿಯಗಳು ಅವನ ಹಿಡಿತದಿಂದ ಸ್ವತಂತ್ರವಾಗಿದ್ದವು. ಅವಳ ಬಿಳಿಯ ಕತ್ತಿನ ಸುತ್ತ ತನ್ನ ತೋಳುಗಳನ್ನು ಬಳಸಿ ಬಾಗಿ ಕಂಪಿಸುತ್ತಿದ್ದ ಅವಳ ಕೆಂದುಟಿಗಳನ್ನು ತನ್ನ ತುಟಿಗಳಿಂದ ಬಂಧಿಸಿದ. ಕುಡಿದ ಕೆನ್ನೀಲಿ ದ್ರವಕ್ಕಿಂತ ಅದು ನೂರು ಪಟ್ಟು ಸಿಹಿ ಎನಿಸಿತು ಅವನಿಗೆ. ಬೆಸೆದುಕೊಂಡ ಉನ್ಮತ್ತ ತುಟಿಗಳು ಬೇರ್ಪಡಲೇ ಇಲ್ಲ. ಅವರಿಗರಿವಿಲ್ಲದಂತೆ ರಾತ್ರಿಯ ಕ್ಷಣಗಳು ಹಳತಾಗುತ್ತಿದ್ದವು.

ಹಕ್ಕಿಗಳು ಚಿಲಿಪಿಲಿಗುಟ್ಟಿದವು. ಹೊಂಬಣ್ಣದ ನೇಸರ ಕಿರಣಗಳಿಗೆ ಪುಷ್ಪಗಳು ಕಣ್ತೆರೆದವು. ಉನ್ಮತ್ತ ವಾತಾವರಣದಿಂದ ಬೀಳ್ಕೊಳ್ಳಲು ಮಿಂಗ್ ವೈ ತಾನೇ ಮನಸ್ಸು ಮಾಡುವುದು ಅನಿವಾರ್ಯವಾಗಿತ್ತು. ತಾರಸಿಯ ಮೆಟ್ಟಿಲುಗಳವರೆಗೆ ಬೀಳ್ಕೊಳ್ಳಲು ಬಂದ ಸೈ ಅವನನ್ನು ಅಪ್ಪಿ ಮುದ್ದಿಸಿ, "ಮಿಂಗ ವೈ, ನಿನಗೆ ಸಾಧ್ಯವಾದಾಗಲೆಲ್ಲ ಇಲ್ಲಿಗೆ ಬಾ. ನಿನ್ನ ಹೃದಯ ಈ ಬಡಪಾಯಿಯನ್ನು ಬಯಸಿದಾಗಲೆಲ್ಲಾ ಬಾ. ನೀನು ಪ್ರಾಮಾಣಿಕ, ನಿಷ್ಠಾವಂತ ಎಂದು ನನಗೆ ಗೊತ್ತು. ಈ ಘಟನೆಯನ್ನು ನೀನು ಯಾವತ್ತೂ ಯಾರಿಗೂ ಬಹಿರಂಗ ಪಡಿಸುವದಿಲ್ಲ ಎಂದೂ ನನಗೆ ಗೊತ್ತು. ಆದರೂ ಹುಡುಗು ಬುದ್ಧಿಯಿಂದಾಗಿ ನೀನು ಆಗಾಗ ಮನಸ್ಸಿನ ಸ್ತಿಮಿತ ಕಳೆದುಕೊಳ್ಳುತ್ತೀಯೆ. ಮಿನುಗುವ ನಕ್ಷತ್ರಗಳು ಮಾತ್ರ ನಮ್ಮ ಪ್ರೇಮಕ್ಕೆ ಸಾಕ್ಷಿ ಎನ್ನುವುದನ್ನು ಮರೆಯಬೇಡ ಎಂದು ನಿನ್ನನ್ನು ಪ್ರಾರ್ಥಿಸಿ



"ಬಾಸ್ ಕುಡಿದು ಬಂದಾನೆಂದು ನೀನು ಯಾವ ಆಧಾರದ ಮೇಲೆ ಹೇಳುತ್ತೀ." "ಬಾಸನೇ ಮೊದಲು ನಮಸ್ಕಾರ ಮಾಡಿದ ಅದಕ್ಕೆ."

ಕೊಳ್ಳುತ್ತೇನೆ. ಈ ಸುಂದರ ರಾತ್ರಿಯ ಸವಿನೆನ ಪಿಗಾಗಿ ಇದೊ ನಿನಗೆ ಈ ಚಿಕ್ಕ ಉಡುಗೊರೆ."

ವಿಚಿತ್ರವಾದ ಆಕರ್ಷಕವಸ್ತುವೊಂದು ಮಿಂಗ ವೈನ ಕೈಸೇರಿತು. ಅದು ಒಂದು ಗಾಜಿನ ಬೊಂಬೆ. ಮಲಗಿರುವ ಸಿಂಹವನ್ನು ಹಳದಿಬಣ್ಣದ ಕುದುರೆ ಯೊಂದು ಎಳೆಯುತ್ತಿರುವ ಆಕೃತಿಯದು. ಶಾಂಗ್ ಪ್ಯೂ-ಜೆಯ ಗೌರವಾರ್ಥವಾಗಿ ರಚಿಸಿರು ವದಾಗಿ ಅದರಲ್ಲಿ ನಮೂದಿಸಿತ್ತು. ಕೈಸೇರಿದ ಸುಂದರ ವಸ್ತುವನ್ನು ಅದನ್ನು ಕೊಟ್ಟ ಕೋಮಲ ಹಸ್ತವನ್ನು ಚುಂಬಿಸಿದ ಮಿಂಗ್‌ವೈ.

"ದೇವತೆಗಳು ಬೇಕಾದರೆ ನನ್ನನ್ನು ಶಿಕ್ಷಿಸಲಿ, ನಿಂದಿಸಲಿ, ಆದರ ನಿನ್ನನ್ನು ಮರೆಯುವುದಿಲ್ಲ ಪ್ರೇಯಸಿ" ಎಂದು ಮಿಂಗ್-ವೈ ಮಾತುಕೊಟ್ಟ. ನಂತರ ಇಬ್ಬರೂ ಬೀಳ್ಕೊಂಡರು.

ಚಾಂಗ್‌ನ ಮನೆಗೆ ಮಿಂಗ್ ವೈ ಬರುವಷ್ಟರಲ್ಲಿ ಬೆಳಕುಹರಿದಿತ್ತು. ಅಂದು ಮಿಂಗ್ ವೈ ತನ್ನ ಮೊಟ್ಟ ಮೊದಲ ಸುಳ್ಳೆಂಬ ಪದವನ್ನು ತುಟಿ ಗಳಿಂದಾಚೆಗೆ ಹೊರಡಿಸಿದ. ಹಿಂದಿನಿಂದ ಬರುವ ರಾತ್ರಿಗಳನ್ನು ತಮ್ಮ ಮನೆಯಲ್ಲೇ ಕಳೆಯಬೇ ಕೆಂದು ತಂದೆ ತಾಯಿ ಬೇಡಿಕೊಂಡರೆಂದು ಒತ್ತಿ ಹೇಳಿದ. ಈಗ ಮನೆಯ ವಾತಾವರಣ ತುಂಬ ಚೆನ್ನಾಗಿದೆಯೆಂದು ಆರೋಗ್ಯಕರವಾದ ಬೆಳವಣಿಗೆ ಹೊಂದಲು ನಿತ್ಯ ರಾತ್ರಿ ಅಲ್ಲಿಗೆ ಬರಬೇಕೆಂದು ಅವರು ಕೊಟ್ಟ ಕಾರಣವೆಂದೂ ಸೇರಿಸಿದ. ಮನೆ ಸಾಕಷ್ಟು ದೂರವಿದ್ದರೂ ಮಿಂಗ್-ವೈ ಬಲಿಷ್ಠ ಯುವಕನಾಗಿದ್ದರಿಂದ ಹುಡುಗನ ಬಗ್ಗೆ ಯಾರೂ ಹೆದರುವ ಕಾರಣವಿರಲಿಲ್ಲ. ಮಿಂಗ್-ವೈ ಹೇಳಿ ದ್ದೆಲ್ಲವನ್ನೂ ಚಾಂಗ್ ಸತ್ಯವೆಂದೇ ನಂಬಿದ. ಅವನ ತಂದೆತಾಯಿಗಳ ಬಯಕೆಯನ್ನು ತಿರಸ್ಕರಿಸುವ ಗೋಜಿಗೆ ಹೋಗಲಿಲ್ಲ ಚಾಂಗ್. ಈ ರೀತಿಯಲ್ಲಿ ಮಿಂಗ್-ವೈಗೆ ಮುಂದಿನ ರಾತ್ರಿಗಳನ್ನು ಸೈ ಮನೆಯಲ್ಲಿ ಕಳೆಯಲು ಯಾರೂ ಅಡ್ಡಿ ಬರಲಿಲ್ಲ. ಮೊದಲ ಸಮಾಗಮದ ಅಪೂರ್ವ ಅನುಭವದ ದ್ಯೋತಕವಾಗಿ ಪ್ರತಿ ರಾತ್ರಿಯನ್ನೂ ಅವರು ಹಾಗೆಯೇ ಕಳೆಯತೊಡಗಿದರು. ಎಷ್ಟು ರಾತ್ರಿ ಗಳು ಕಳೆದರೂ ಅವರ ಮಾತೇ ಮುಗಿಯಲಿಲ್ಲ. ಹಾಡೇ ಮುಗಿಯಲಿಲ್ಲ. ಚದುರಂಗದಾಟವೇ ಮುಗಿ ಯಲಿಲ್ಲ. ಮಹಾಯುದ್ಧ ಸಂಕೇತದ, ಪ್ಯೂ ವಾಂಗ್, ನಿಂದ ಕೂಡು ಹಿಡಿಯಲ್ಪಟ್ಟ ಬುದ್ಧಿವಂತಿಕೆಯ ಚದುರಂಗದಾಟವಾಡಿದರು. ಹೂವು, ಮರ, ಮೋಡ, ಪ್ರವಾಹ, ಹಕ್ಕಿ ಪಕ್ಷಿ, ನಕ್ಷತ್ರಗಳನ್ನು ಕುರಿತು ಅಂತ್ಯ ಪ್ರಾಸದ ಯಮಕ-ಪದಗಳನ್ನು ಸಂಯೋಜಿಸಿ, ಹಾಡಿದರು. ಈ ಎಲ್ಲ ಉತ್ಕೃಷ್ಟ ಕಾರ್ಯಕ್ರಮಗಳಿಂದ ಸೈಯ ಪುಟ್ಟ ಹೃದಯ ಉಬ್ಬತೊಡಗಿತ್ತು. ಆಟದಲ್ಲಿ ಮೋಹಜಾಲ ಬೀಸಿ, ಪದ್ಯಗಳನ್ನು ಸಂಯೋಜಿಸುವಾಗ, ಪದ ಜೋಡಣೆ ಗಳ ನಿರೂಪಣಾ ಶೈಲಿಯಿಂದ, ಶಾಸ್ತ್ರೀಯ ಪ್ರಜ್ಞೆಯ ಚಿಂತನೆಯಿಂದ ಅವನಿಗಿಂತ ಮೇಲ್ಮಟ್ಟ ದಲ್ಲಿರುತ್ತಿದ್ದಳು. ಥ್ಯಾಂಗ್ ರಾಜ ವಂಶದ ಕವಿ ಶ್ರೇಷ್ಠರ ಕವನಗಳನ್ನೇ ಅವರು ಹಾಡಿದರು. ಐದು ನೂರು ವರ್ಷಗಳ ಹಿಂದಿನ, ಸ್ವತಃ ಕವಿಯಾದ, ಸೆಚೊಯೆನ್ ಸಂಸ್ಥಾನದ ವೊಯೆನ್-ಚಿನ್, ದೌ-ವೌ, ಕಾ-ಪಿನ್, ಮುಂತಾದವರ ಪ್ರಸಿದ್ಧ ಪದ್ಯಗಳನ್ನು ಅವರು ಹಾಡುತ್ತಿದ್ದುದು.

ಬಿಸಿಲಿನ ಬೇಗೆ ಉಲ್ಬಣಿಸಿ, ಕ್ರಮೇಣ ಅಸ್ತಿತ್ವ ಕಳೆದುಕೊಳ್ಳುತ್ತಿದ್ದಂತೆ ಶರತ್ಕಾಲ ಕಾಲಿಟ್ಟಿತು. ತನ್ನ ಹಸಿರನ್ನು ಹೊಂಬಣ್ಣದ ಛಾಯೆಯನ್ನಾಗಿ ಪರಿವರ್ತಿಸಿಕೊಳ್ಳುತ್ತಾ ಕಿನ್ನೀಲಿಯ ಮಾಯಾ ಪ್ರಪಂಚಕ್ಕೆ.

ಒಂದು ದಿನ ಅನಿರೀಕ್ಷಿತವಾಗಿ ಮಿಂಗ್-ವೈನ ತಂದೆ ಲಾರ್ಡ್‌ಚಾಂಗ್‌ನನ್ನು ಚಿಂಗ್ ಚೌ ಪಟ್ಟ ಣದಲ್ಲಿ ಭೇಟಿಯಾದ. ಅದೂ ಇದೂ ವ್ಯವಹಾರದ ಮಾತಾದ ಮೇಲೆ, ಮಾತುಕತೆ ಮಿಂಗ್-ವೈನ ಆರೋಗ್ಯದ ಕಡೆಗೆ ಬಂತು. ಚಾಂಗ್ ಕೇಳಿದ- "ನಿಮ್ಮ ಹುಡುಗ ಪ್ರತಿ ರಾತ್ರಿಯೂ ಏಕೆ ನಿಮ್ಮ ಮನೆಗೆ ಬರಬೇಕು? ಅದೂ ಇಂಥ ಚಳಿಗಾಲದಲ್ಲಿ! ದಿನವೂ ಇಷ್ಟು ದೂರ ನಡೆದರೆ ಅವನು ಆರೋ ಗ್ಯದ ಕಡೆಗೆ ಲಕ್ಷ್ಯಗೊಟ್ಟಂತೆಯೇ ಸರಿ. ಮುಂಜಾನೆ ಹಿಂತಿರುಗಿದಾಗ ಅವನ ಮುಖ ನೋಡಬೇಕು! ದಿನವಿಡೀ ದುಡಿದು ದಣಿದ ಕೂಲಿಯ ಥರ! ಛೇ... ಛೇ...ಈ ಚಳಿಗಾಲ ಕಳೆಯುವವರೆಗಾದರೂ ನಮ್ಮ ಲ್ಲೇಕೆ ಅವನನ್ನು ಮಲಗಗೊಡಬಾರದು ನೀವು?" ಪೀಲೂ ಆಶ್ಚರ್ಯದಿಂದ, "ನನ್ನ ಮಗ ಕಳೆದ ಇಡೀ ಬೇಸಿಗೆಯಲ್ಲಿ ಒಮ್ಮೆಯೂ ನನ್ನ ಮನೆಗೆ ಬರಲಿಲ್ಲವಲ್ಲ! ಈಗ ತಿಳಿಯಿತು. ದುಷ್ಟರ ಸಹವಾಸದಲ್ಲಿ ರಾತ್ರಿ ಕಳೆಯುತ್ತಿರಬಹುದೇ?

ಬಹುಶಃ ಜೂಜಾಟದಲ್ಲಿ ಅಥವಾ ಹೆಂಗಸರ ಜೊತೆಗೆ ಕುಡಿದು, ರಾತ್ರಿ... "ಮುಂದೆ ಮಾತಾಡಲು ತಡವರಿಸಿದ ಎಂದು. ಚಾಂಗ್ ಅಷ್ಟರಲ್ಲೇ ತಡೆದು, "ಛೇ... ಎಂದಿಗೂ ಇಲ್ಲ. ಹಾಗೆ ಯೋಚಿಸಲಾಗದು; ಆ ಹುಡುಗನಲ್ಲಿ ಕೆಟ್ಟದ್ದನ್ನು ನಾನು ಕಂಡೇ ಇಲ್ಲ. ನಮ್ಮ ಮನೆಯ ಆಸುಪಾಸಿನಲ್ಲಿ ಯಾವ ಪಥಿಕಾಶ್ರಮಗಳಂತೂ ಇಲ್ಲ; ಒಬ್ಬರನ್ನು ದುರ್ಮಾರ್ಗಕ್ಕೆಳೆಯುವಂಥ ಯಾವ ಚಟುವಟಿಕೆಗಳೂ ಇಲ್ಲವೇ ಇಲ್ಲ. ಹುಡುಗ ಯೌವನದ ಕಾಯಿಲೆಯಲ್ಲಿ ನರಳುತ್ತಿರಬಹುದೇ? ಹೌದು, ಅನುಮಾನವೇ ಬೇಡ; ಯಾರೊಂದಿಗೋ ಪ್ರೇಮ ಪಾಶಕ್ಕೆ ಸಿಲುಕಿ ರಾತ್ರಿಯನ್ನು ಮಜವಾಗಿ ಕಳೆಯುತ್ತಿರಬೇಕು. ನಾನೆಲ್ಲಿಯಾದರೂ ಅವನ ಸುಖಕ್ಕೆ ಅಡ್ಡಿ ಬರುತ್ತೇನೆಂದು ನನ್ನಲ್ಲಿ ಸತ್ಯವನ್ನು ಬಚ್ಚಿಟ್ಟು, ತನ್ನ ದಾರಿ ಸುಗಮ ಮಾಡಿಕೊಂಡಿದ್ದಾನೆ. ಹರೆಯದ ಹುರುಪಿನಲ್ಲಿ ಬಯಕೆ ಸಹಜ, ತಪ್ಪು ದಾರಿ ಹಿಡಿಯುವುದೂ ಅಸಹಜವೇನಲ್ಲ. ಆದರೆ ನಿಮ್ಮಲ್ಲಿ ನನ್ನ ಒಂದು ಅರಿಕೆ. ದುಡುಕಿ ಇದರ ಕುರಿತು ಅವನೊಂದಿಗೆ ಆ ರಹಸ್ಯವನ್ನು ನಾನು ಭೇದಿಸುವವರೆಗೂ ಏನೂ ಕೇಳಬೇಡಿ, ಅವನನ್ನು ಹಿಂಬಾಲಿಸಲು ಈ ದಿನ ರಾತ್ರಿಯೇ ನನ್ನ ಆಳನ್ನು ಕಳಿಸುತ್ತೇನೆ."

ಪೀಲೂ, ಚಾಂಗ್‌ನ ಸಲಹೆಗೆ ಒಪ್ಪಿಗೆ ಸೂಚಿಸಿ ಕೆಲದಿನಗಳಲ್ಲಿಯೇ ಭೇಟಿಯಾಗುವುದಾಗಿ ಹೇಳಿ ಖಿನ್ನನಾಗಿ ಮನೆಗೆ ಹಿಂತಿರುಗಿದ. ಇತ್ತ ಸಂಜೆಯಾಗುತ್ತಲೇ ಚಾಂಗ್‌ನ ಮನೆಯನ್ನು ಬಿಟ್ಟ ಮಿಂಗ್-ವೈ ಹಿಂದೆ ಒಬ್ಬ ಸೇವಕ ಅರಿವಾಗದಂತೆ ದೂರದಿಂದ ಹಿಂಬಾಲಿಸುತ್ತಿದ್ದ. ಹೀಗೆ ಸ್ವಲ್ಪ ದೂರ ಹೋಗಿರಬಹುದು ಅವನು; ನಾಲ್ಕು ತಿರುವಿನ ಅತ್ಯಂತ ಕತ್ತಲೆಯ ಒಂದು ಭಾಗದಲ್ಲಿ ಭೂಮಿಯೇ ಅವರನ್ನು ಕಬಳಿಸಿತೋ ಅನ್ನುವ ಹಾಗೆ ತಕ್ಷಣ ಮಾಯವಾದ ಮಿಂಗ್-ವೈ. ಕತ್ತಲೆಯಲ್ಲಿ ಬಹಳ ಹೊತ್ತು ಅಲ್ಲಿ-ಇಲ್ಲಿ ಹುಡುಕಾಡಿ ನಿರಾಶೆಯಿಂದ ಮನೆಗೆ ಹಿಂತಿರುಗಿದ ಸೇವಕ. ಕಂಡಿದ್ದಷ್ಟನ್ನು ಸೇವಕನಿಂದ ತಿಳಿದು ಚಾಂಗ್ ಒಬ್ಬ ದೂತನನ್ನು ಪೀಲೂ ಮನೆಗೆ ಅಟ್ಟಿದ.

ಮಿಂಗ್-ವೈಗೆ ಇದಾವುದರ ಬಗ್ಗೆ ಗಮನವಿರಲಿಲ್ಲ. ನಿತ್ಯದಂತೆ ತನ್ನ ಪ್ರೇಯಸಿಯ ಮನೆಯೊಳಗೆ ಕಾಲಿಟ್ಟ. ಒಳಗೆ ಬರುತ್ತಲೇ ಆಶ್ಚರ್ಯಗೊಂಡ. ಪ್ರೇಯಸಿಯ ಕಣ್ಣಲ್ಲಿ ನೀರು! ಎಂದೂ ಇಲ್ಲದ ಕಣ್ಣೀರು. ಅತೀವ ವೇದನೆಯಾಯಿತು ಅವನಿಗೆ. ಅವನ ಕೊರಳ ಸುತ್ತು ತೋಳುಗಳನ್ನು ಬಳಸಿ ಬಿಕ್ಕುತ್ತಿದ್ದ ಸೈ, "ನಾವು ದೂರವಾಗುವ ಕಾಲ ಸಮೀಪಿಸುತ್ತಿದೆ 'ಮಿಂಗ್ ವೈ, ಇನ್ನೆಂದೂ ಸೇರದ ಹಾಗೆ; ಆದರೆ ಕಾರಣವನ್ನು ನಾನು ಹೇಳಲಾರೆ. ಹೀಗಾಗಬಹುದೆಂದು ನಾನು ಮೊದಲೇ ಊಹಿಸಿದ್ದೆ. ಈಗ ಮುಂದೆ ಬರಬಹುದಾದ ಅನಿರೀಕ್ಷಿತ ಆಘಾತವನ್ನು, ಅನಂತ ವಿರಹವನ್ನು ಕಲ್ಪಿಸಿಕೊಂಡರೆ ನನಗೆ ಕಣ್ಣೀರಿನ ಮಹಾಪೂರವನ್ನು ತಡೆಯಲಾಗುವುದಿಲ್ಲ. ಈ ರಾತ್ರಿಯೇ ನಮಗೆ ಕೊನೆಯ ಮಹಾರಾತ್ರಿಯಾಗುವುದು; ಬದುಕಿರುವ ತನಕ ನೀನು ನನ್ನನ್ನು ಮರೆಯಲಾರೆ,ಎಂದು ನನಗೆ ಗೊತ್ತು. ಬದುಕಿನಲ್ಲಿ ನೀನು ಕೀರ್ತಿವಂತನಾಗುತ್ತಿ ಎಂದೂ ನನಗೆ ಗೊತ್ತು ನಿನ್ನ ಮೇಲೆ ವೃಷ್ಟಿಯಾಗುತ್ತದೆ— ಶ್ರೀಮಂತಿಕೆ, ಗೌರವಗಳ ವೃಷ್ಟಿ ನಿನ್ನ ಮೇಲೆ ಆಗುತ್ತದೆ. ಪ್ರೀತಿ ಪಾತ್ರಳಾದ ಸುಂದರ ಹುಡುಗಿಯೊಬ್ಬಳು ನನ್ನ ಸ್ಥಾನವನ್ನು ತುಂಬಿ ನಿನ್ನ ದುಃಖ ಶಮನ ಮಾಡುತ್ತಾಳೆ. ಅಯ್ಯೋ; ಪುರುಷನ ಸ್ಪರ್ಶ, ಪ್ರೇಮಕ್ಕಾಗಿ ನಾನು ಪಟ್ಟ ಕಷ್ಟವನ್ನು ಏನೆಂದು ಬಣ್ಣಿಸಲಿ! ಸಹಜ ಕಾಮವನ್ನು ಬಯಸಿದ ಈ ಹೆಣ್ಣನ್ನು ಸಮಾಜ ಜಾರಿಣಿ ಎಂದಿತು; ಸಮಾಜದ ಕ್ರೂರ ಕಣ್ಣುಗಳು ನನ್ನ ಸುಂದರ ಅಂಗಾಂಗಗಳ ಮೇಲೆ ಹರಿದಾಡಿದವು! ಪುರುಷನ ಪ್ರೇಮ ಎಷ್ಟು ಆಳ, ಎಷ್ಟು ಪವಿತ್ರ, ನಿರ್ವ್ಯಾಜ ಎನ್ನುವುದನ್ನು ನಿನ್ನಿಂದ ಕಂಡುಕೊಂಡೆ! ನೀನು ನಿನ್ನ ಪವಿತ್ರ ಪ್ರೇಮವನ್ನು ಧಾರೆ ಎರೆದು ನನ್ನ ಬದುಕಿನ ಹೆಬ್ಬಯಕೆ ತಲುಪಲು ಕಾರಣವಾದೆ. ನೀನು... ನೀನು...! ...ಅಯ್ಯೋ ನನಗೇನಾಯಿತು? ಈ ಕೊನೆಯ ಘಳಿಗೆಯನ್ನು ವ್ಯಥೆಯೊಂದಿಗೇಕೆ ಕಳೆಯಬೇಕು? ಈ ಕೊನೆಯ ರಾತ್ರಿಯನ್ನು ಜೀವಮಾನದ ಅತ್ಯಂತ ಸಂತೋಷದ ರಾತ್ರಿಯನ್ನಾಗಿ ಕಳೆಯೋಣ! ಬರುವ

ದಿನಗಳಲ್ಲಿ ನಿನ್ನೊಂದಿಗಿನ ನನ್ನ ಚಿರನೆನಪು ನಿನ್ನನ್ನು ಬೇಸರಗೊಳಿಸುವಂಥದ್ದಾಗಿರಬಾರದು. ಮುಂದೆ ನಿನ್ನ ಮನಃ ಪಟಲದಲ್ಲುಳಿಯುವುದು ನನ್ನ ನಗುವಾಗಬೇಕೇ ವಿನಾ ಕಣ್ಣೀರಾಗಿರಕೂಡದು! ಬಾ...ಪ್ರೀತಿಯ ಮಿಂಗ್–ವೈ ಕಣ್ಣಿನಿಂದ ಕಪೋಲಗಳಿಗೆ ಹರಿಯುತ್ತಿದ್ದ ಬಿಸಿ ಕಣ್ಣೀರ ಮಹಾಪೂರವನ್ನು ತಡೆಯುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದಳು. ಸೈ ಒಂದು ಕ್ಷಣ ಸುಧಾರಿಸಿಕೊಂಡು ಒಳಗೆ ಹೋಗಿ ಮದ್ಯದ ಪಾತ್ರೆಯನ್ನು ತಂದಳು. ಅದೇ ಪ್ರಸಿದ್ಧ ಕವಿಗಳ ಕವನಗಳ ಹಸ್ತ ಪ್ರತಿಗಳನ್ನು ತೆರೆದಳು. ಏಳು ರೇಷ್ಮೆಯ ದಾರಗಳ ಮಧುರ ವಾದ್ಯ ನುಡಿಸಿದಳು! ಮುಂದೆ ಬರಬಹುದಾದ ಅಗಲಿಕೆಯ ಕ್ಷಣಗಳ ಕುರಿತು ಮಿಂಗ್–ವೈ ಒಮ್ಮೆಯೂ ವ್ಯಥೆ ಪಡದಂತೆ ಎಚ್ಚರಿಕೆ ವಹಿಸಿದಳು. ವಿರಹ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದಳು. ತಿಳಿನೀಲಿ ಆಕಾಶವನ್ನು ಪ್ರತಿಬಿಂಬಿಸುತ್ತಿರುವ ಬೇಸಿಗೆಯ ತಿಳಿಗೊಳಗಳ ಪ್ರಶಾಂತತೆ ಕುರಿತು, ರೊಚ್ಚಿಗೆದ್ದ ದಣಿದ ಮೋಡಗಳು ತನ್ನ ದೃಷ್ಟಿಗೆ ಬಿದ್ದ ಚಿಕ್ಕ ದುಃಖಿ ಪ್ರಪಂಚವನ್ನು ಕತ್ತಲೆಡೆಗೆ ಒಯ್ಯುತ್ತಿರುವಾಗ ಉಂಟಾಗುವ ಮನುಷ್ಯನ ಹೃದಯ ನಿರ್ಲಿಪ್ತತೆಯನ್ನು ಕುರಿತಾದ ಕವನಗಳಂತೂ ಸತ್ತವರನ್ನು ಎಬ್ಬಿಸುವಂತಿದ್ದವು. ಸ್ವಲ್ಪ ಸಮಯದಲ್ಲೇ ಅವರು ದುಃಖ ಮರೆತು ಸಂತೋಷದಿಂದ ಹಾಡತೊಡಗಿದರು. ಕೊನೆ ಕೊನೆಗೆ ಮಿಂಗ್–ವೈ ಗೆ ಕನಸಿನ ಲೋಕದ ಅನುಭವವಾಗುತ್ತಿರುವಂತೆ, ಮೊದಲ ಸಮಾಗಮದ ರಾತ್ರಿಗಿಂತಲೂ ನೂರು ಪಟ್ಟು ಸ್ವರ್ಗೀಯವಾಗಿ ಅವನಿಗೆ ಈ ರಾತ್ರಿ ಕಂಡಿತು.

ಬೆಳಗಿನ ಸೂರ್ಯನ ಹೊಂಗಿರಣಗಳು ಒಂದಾಗಿ ಮಲಗಿದ್ದ ಪ್ರೇಮಿಗಳ ಮೈ ಮೇಲೆ ಕಚಗುಳಿಯಿಟ್ಟಿದ್ದವು. ಬೆಳಗೇ ಆಗಬಾರದೆಂದು ಹಂಬಲಿಸಿದ್ದ ಅವರಿಗೆ ಸೂರ್ಯನನ್ನು ನೋಡಿ ಅಗಲಿಕೆಯ ದುಃಖ ಮರುಕಳಿಸಿ ಗಳಗಳನೆ ಅತ್ತರು. ತಾರಸಿಯ ಮೆಟ್ಟಲುಗಳವರೆಗೆ ಪ್ರೇಮಿಯನ್ನು ಬೀಳ್ಕೊಡಲು ಬಂದ ಸೈ ಅಲ್ಲಿ ಮತ್ತೆ ಅವನನ್ನು ಹಿಡಿದಪ್ಪಿ, ಕೊನೆಯ ಬಾರಿ ಚುಂಬಿಸಿ, ಅಗಲಿಕೆಯ ಉಡುಗೊರೆಯೊಂದನ್ನು ಅವನ ಕೈಮೇಲಿಟ್ಟಳು. ಅದ್ಭುತವಾಗಿ ಕೆತ್ತಲ್ಪಟ್ಟ ಪುರಾತನ ಕಾಲದ ಒಂದು ಶಿಲೆಯ ಕುಂಚಪೆಟ್ಟಿಗೆ ಅದು. ಒಬ್ಬರನ್ನೊಬ್ಬರು ಭಾರವಾದ ಮನಸ್ಸಿನಿಂದ ಬೀಳ್ಕೊಂಡರು.

ಇದು ತನ್ನ ಮತ್ತು ಅವಳ ಕೊನೆಯ ಭೇಟಿ ಎಂದು ಅವಳು ಹೇಳಿದ್ದನ್ನು ಮಿಂಗ್ ವೈ ನಂಬಲಿಲ್ಲ. ಬರಲು ಕಾರಣವೂ ಇಲ್ಲ. ತಾನು ಅವಳನ್ನು ನಾಳೆ ಸಂಧಿಸಲೇಬೇಕು. ಅವಳಿಲ್ಲದೆ ತಾನು ಬದುಕಲಾರೆ. ಅವಳೆಂದೂ ತನ್ನನ್ನು ತಿರಸ್ಕರಿಸುವುದಿಲ್ಲ. ನನಗಾಗಿ ತನ್ನ ಮನೆಯ ಬಾಗಿಲು ಸದಾ ತೆಗೆದಿರುತ್ತದೆ ಎಂದೂ ಹೇಳಿದ್ದಾಳೆ ಎಂದು ಯೋಚಿಸುತ್ತ ಮಿಂಗ್ ವೈಚಾಂಗ್‌ನ ಮನೆ ಸೇರಿದ. ದ್ವಾರ ಮಂಟಪದಲ್ಲಿ ತನ್ನ ಬರವನ್ನೇ ಕಾಯುತ್ತ ಕುಳಿತಿರುವ ತಂದೆ ಮತ್ತು ಚಾಂಗ್‌ನನ್ನು ನೋಡಿ, ಎಂದೂ ಹೀಗೆ ತನ್ನನ್ನು ಕಾಯದ ಇವರು ಇವತ್ತೇಕೆ ಹೀಗೆ ಕಾದಿದ್ದಾರೆ ಎಂದು ಆಶ್ಚರ್ಯಗೊಂಡ. ಮಿಂಗ್–ವೈ ಗಾಬರಿಯಿಂದ ಬಾಯಿ ತೆರೆಯುವ ಮೊದಲೇ ಪೀಲೂ ಕೇಳಿದ. "ದಿನವೂ ರಾತ್ರಿಗಳನ್ನು ಎಲ್ಲಿ ಕಳೆಯುತ್ತಿದ್ದೀಯೆ?"

"ಓಹೋ... ತನ್ನ ರಹಸ್ಯವೆಲ್ಲಾ ಬಯಲಾದಂತಿದೆ. ತಾನು ಇದುವರೆಗೆ ಸುಳ್ಳು ಹೇಳುತ್ತಿದ್ದದ್ದು ಇವರಿಗೆ ತಿಳಿದುಹೋಗಿರಬೇಕು. ತಾನು ಧೈರ್ಯದಿಂದ ಮುಂದಿನದನ್ನು ಎದುರಿಸಬೇಕು ಎಂದುಕೊಂಡ ಮಿಂಗ್–ವೈ. ತಂದೆಯ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗದೆ ತಲೆ ಬಗ್ಗಿಸಿ ನಿಂತುಕೊಂಡ. ಮಗನಿಂದ ಉತ್ತರ ಬರದಿದ್ದರಿಂದ ಪೀಲೂ ಕೋಪದಿಂದ ನಡುಗತೊಡಗಿದ. ತನ್ನೊಂದಿಗೆ ಕರೆತಂದಿದ್ದ ಸೇವಕರಿಗೆ ಸನ್ನೆ ಮಾಡಿದ ಅವರು ಅವನನ್ನು ದನ ಬಡಿದಂತೆ ಬಡಿಯತೊಡಗಿದರು. ಅವನ ಬಾಯಿಂದ ಸತ್ಯ ಹೊರ ಬೀಳುವವರೆಗೆ ಹೊಡೆದರು. ಹೊಡೆತ ತಾಳಲಾರದೆ ಮಿಂಗ್ ವೈಗೆ ತಂದೆತಾಯಿಗಳ ಭಯ ಒಂದು ಕಡೆ, ರೂಢಿಯಲ್ಲಿದ್ದ ರಾಜನ ಆಜ್ಞೆ, 'ತಂದೆ ತಾಯಿಗಳಿಗೆ ಅವಿಧೇಯರಾಗಿ ಉದ್ಧಟತನದಿಂದ ವರ್ತಿಸುವವರಿಗೆ ಬಿದಿರು ದೊಣ್ಣೆಯಿಂದ ಒಂದು ನೂರು ಹೊಡೆತಗಳ ಶಿಕ್ಷೆ

ವಿಧಿಸಲಾಗುವುದು ಎಂಬುದು ಮತ್ತೊಂದು ಕಡೆ ಬಾಧಿಸಿತು. ಪರಿಣಾಮವಾಗಿ ಮಿಂಗ್-ವೈ ತೊದಲು ನುಡಿಯಿಂದ ತಾನು ಆ ಸುಂದರಿಯ ಪ್ರೇಮ ಪಾಶಕ್ಕೆ ಸಿಲುಕಿದ ಕಥೆಯನ್ನು ಹೇಳಿದ. ಇದು ವರೆಗೆ ಇಂಥ ಹೀನಾಯ ಪ್ರಸಂಗವನ್ನು ಎದು ರಿಸದಿದ್ದ ಮಿಂಗ್-ವೈ ನಡು ನಡುವೆ ಹೆದರಿಕೆ ಯಿಂದ ನಡುಗುತ್ತಿದ್ದ.

ಆದರೆ ಚಾಂಗ್ ಮಾತ್ರ ಶಾಂತಚಿತ್ತನಾಗಿ, ಹುಡುಗನ ಪ್ರೇಮಕಥೆಯನ್ನು ಕೇಳುತ್ತಿದ್ದ. ಮಿಂಗ್-ವೈ ಹೇಳುತ್ತಿರುವುದು ಮುಗಿಯುತ್ತಿದ್ದ ಹಾಗೆ, ಚಾಂಗ್ ಕೇಳಿದ–"ನೀನೇನು ಹೇಳುತ್ತಿದ್ದೀ? 'ಓಂಗ್' ಮನೆತನದವರಲ್ಲಿ ಯಾರೂ ನನಗೆ ಸಂಬಂಧಿಗಳಿಲ್ಲವಲ್ಲ! ನೀನು ವಿವರಿಸಿದ ಚಹರೆ ಯುಳ್ಳ ಹೆಂಗಸನ್ನು ನಾನು ಕಂಡೂ ಇಲ್ಲ, ಕೇಳಿಯೂ ಇಲ್ಲ! ನೀನು ಹೇಳಿದ ಸುಂದರ ಮಹ ಲಿನ ಬಗ್ಗೆಯೂ ನಾನು ಕೇಳಿಲ್ಲ! ನೀನು ಹೇಳು ತ್ತಿರುವುದಾದರೂ ಏನು? ನಿನ್ನ ಚಿತ್ತ ಭ್ರಮಣೆ ಯಾಗಿಲ್ಲವಷ್ಟೆ! ನಿನಗೆ ಸುಳ್ಳು ಹೇಳಲೂ ಧೈರ್ಯ ಸಾಲದೆಂದು ನನಗೆ ಗೊತ್ತು. ಆದೂ ನಿನ್ನ ಪವಿತ್ರ ತಂದೆ ತಾಯಿಗಳಿಮರಿಗೆ ಈ ಎಲ್ಲ ವ್ಯವಹಾರಗಳಲ್ಲಿ ಏನೋ ಬಲವಾದ ರಹಸ್ಯವಿದೆ ಯೆಂದು ತೋರುತ್ತದೆ! ಅಥವಾ ಬರೀ ಭ್ರಾಂತಿ ಯಾಗಿರಲೂ ಸಾಕು..." ಚಾಂಗ್‌ನ ಮಾತು ಇನ್ನೂ ಮುಗಿದಿರಲಿಲ್ಲ. ಮಿಂಗ್ ವೈ ಅವಳು ಕೊಟ್ಟ ಎರಡು ಅಪೂರ್ವ ವಸ್ತುಗಳನ್ನು ಅವ ರಿಗೆ ತಂದು ಕೊಟ್ಟ. ಹಳದಿ ಕುದುರೆಯಿಂದ



"ಭೌತಶಾಸ್ತ್ರದಲ್ಲಿ ಪದವಿಗಳಿಸಿ, 'ಆತ ಈಜುತ್ತಿದ್ದಾನೆ' ಎನ್ನಲು ನಾಚಿಕೆಯಾಗುವುದಿಲ್ಲವೆ?... ಆತ ಆ ದ್ರವದ ಮೇಲೆ ಒಂದು ದಿಕ್ಕಿಗೆ ಬಲ ಪ್ರಯೋಗಿಸುತ್ತಾನೆ... ಅದರ ಪ್ರತಿಕ್ರಿಯೆಯಿಂದಾ ವಿರುದ್ಧ ದಿಕ್ಕಿಗೆ ಚಲಿಸುತ್ತಾನೆ" ಎನ್ನಬೇಕು ತಿಳಿಯಿತೆ ?

ಎಳೆಯಲ್ಪಡುತ್ತಿರುವ 'ಒಂದು ಸಿಂಹ, ಕೆತ್ತಿದ ಶಿಲೆಯ ಕುಂಚ ಪೆಟ್ಟಿಗೆ, ಅವಳಿಂದಲೇ ಸಂಯೋಜಿಸಲ್ಪಟ್ಟ ಕೆಲವು ಕೃತಿಗಳು. ಚಾಂಗ್‌ನೊಂದಿಗೆ ಆಶ್ಚರ್ಯ ಪಡುವ ಸರದಿ ಪೀಲೂಗೂ ಬಂತು. ತಮ್ಮ ಕೈಯಲ್ಲಿದ್ದ ಆಕರ್ಷಕ ವಸ್ತುಗಳನ್ನು ಪರೀಕ್ಷಿಸತೊಡಗಿದರು. ಶತಮಾನಗಳ ಹಿಂದೆ ಭೂಮಿಯಲ್ಲಿ ಹುದುಗಿದ್ದ ಪಳೆಯುಳಿಕೆಗಳಂತೆ ಅವು ಅವರಿಗೆ ಗೋಚರಿಸಿದವು. ಕೇವಲ ಮಾನವರಿಂದ ರಚಿಸಲ್ಪಟ್ಟವುಗಳಂತೆ ಅವು ಕಂಡು ಬರಲಿಲ್ಲ. ಅನುಕರಿಸಿ ತಯಾರಿಸಿದಂತೆಯೂ ಇರಲಿಲ್ಲ. ಒಳ್ಳೊಳ್ಳೆ ಸಾಹಿತ್ಯಗಳಿದ್ದ, ಹಸ್ತಪ್ರತಿಗಳು ಮಾತ್ರ ಉತ್ಕೃಷ್ಟ ಪದ್ಯಗಳಿಂದ ಕೂಡಿದ್ದು ಅವುಗಳು ಥ್ಯಾಂಗ್ ಆಸ್ಥಾನದ ಕಲಿಗಳ ರಚನಾ ಕೌಶಲದ ಧಾಟಿಯಲ್ಲಿದ್ದುದು ಅವರಿಗೆ ಸ್ಪಷ್ಟವಾಗಿ ಕಂಡುಬಂತು.

ಏನೋ ಹೊಳೆದು ಪೀಲೂ ಅರಚಿದ, "ತಕ್ಷಣ ಹೊರಡು ಈ ಅಮಾನುಷ ಅಲೌಕಿಕ ವಸ್ತುಗಳು ದೊರೆತ ಜಾಗಕ್ಕೆ. ಹುಡುಗನನ್ನು ಕರೆದುಕೊಂಡು ಕೂಡಲೇ ಹೊರಡಬೇಕು! ಆ ನಿಗೂಢವಾದುದನ್ನು ಪರಾಂಬರಿಸಿ ನೋಡಿ ರುಜುವಾತುಪಡಿಸಿಕೊಳ್ಳಬೇಕು! ಅನುಮಾನವೇ ಇಲ್ಲ! ಹುಡುಗ ಹೇಳಿದ್ದು ಖಂಡಿತ ನಿಜವಿದೆ! ಥ್ಯಾಂಗ್ ರಾಜವಂಶದಲ್ಲಿ ಆಗಿಹೋದ ಒಂದು ದುರಂತ ಕಥೆ ನನಗೀಗ ನೆನಪಾಗುತ್ತಲಿದೆ!"

ಮೂವರೂ ಸ್ಯೆ ವಾಸಿಸುತ್ತಿದ್ದ ಸ್ಥಳಕ್ಕೆ ಧಾವಿಸಿದರು. ರಸ್ತೆಯ ಒಂದು ಪಾರ್ಶ್ವದಲ್ಲಿ ಭೀಕರ ಕತ್ತಲೆ. ಆ ಭಾಗಕ್ಕೆ ಅವರು ಬಂದು ತಲುಪಿದಾಗ ಅಲ್ಲಿ ಒಂದು ತೆರನಾದ ಮೋಹಕ ಪರಿಮಳ ವ್ಯಾಪಿಸಿತ್ತು. ಹಚ್ಚ ಹಸಿರು ಹುಲ್ಲಿನ ಮೇಲೆ ಅದೇ ಬಣ್ಣದ ಪಾಚಿಗಳು, ದಟ್ಟವಾದ ಕೊಂಬೆಗಳಲ್ಲಿ ಎಳೆಗೆಂಪು ಬಣ್ಣಕ್ಕೇರುತ್ತಿದ್ದ ಹಣ್ಣುಗಳು ಹಸಿರೆಲೆ ಮಧ್ಯೆ ಕಂಗೊಳಿಸುವ ದೃಶ್ಯ ಉದ್ರೇಕ ವಾತಾವರಣವನ್ನು ಕಲ್ಪಿಸಿತ್ತು. ನೋಡುವವರ ಮೈ ಮನಸ್ಸಿಗೆ ಆಹ್ಲಾದಕರವಾಗಿತ್ತು. ಅದು ಮಿಂಗ್–ವೈಗೆ ಪರಿಚಿತ ಹಾದಿ. ಹಲವಾರು ಸಮಾಧಿಗಳ ಮಧ್ಯೆ ಅಂಕುಡೊಂಕಾದ ದಾರಿ. ಗೋರಿಗಳ ನಡುವೆ ದಿಟ್ಟಿಸಿ ನೋಡಿದ ಮಿಂಗ್–ವೈ ಆಶ್ಚರ್ಯ, ಭಯಗಳಿಂದ ಅರಚಿದ. ಅವನು ಏನು ಕೂಗಿದನೆಂದು ಯಾರಿಗೂ ಅರ್ಥವಾಗಲಿಲ್ಲ. ಅಲ್ಲಿ ಅವನಿಗೆ ಕಂಡದ್ದೇನು? ಸ್ವಚ್ಛವಾದ ಗಾಳಿಯಲ್ಲಿ ತಿಳಿನೀಲಿ ವರ್ಣದ ಹಬೆ. ಅವನು ದಿನವೂ ನೋಡುತ್ತಿದ್ದ ಆಕಾಶನೀಲಿ ಹೆಂಚಿನ ಮನೆಯಿದ್ದ ಜಾಗ ಶೂನ್ಯವಾಗಿದೆ! ಹಸಿರು ಮತ್ತು ಹೊಂಬಣ್ಣದ ಮಿಶ್ರ ಬಣ್ಣಗಳಿಂದ ಶೋಭಿಸುತ್ತಿದ್ದ ಕಟ್ಟಡದ ಮುಂಭಾಗದಲ್ಲಿರುವುದು ಸೂರ್ಯನ ಬೆಳಕಿಗೆ ಫಳಫಳ ಹೊಳೆಯುತ್ತಿರುವ ಹಸಿರೆಲೆಗಳು ಮಾತ್ರ. ಅಗಲವಾದ ತಾರಸಿ ಇದ್ದ ಜಾಗದಲ್ಲಿ ಈಗ ಗತಕಾಲದ ಒಂದು ಅವಶೇಷ ಮಾತ್ರ ಗೋಚರಿಸುತ್ತಿದೆ! ಅದು ದಪ್ಪನಾಗಿ ಪಾಚಿಗಟ್ಟಿದ್ದ ಒಂದು ಪುರಾತನವಾದ ಗೋರಿ! ಅದರಲ್ಲಿ ಕೆತ್ತಿದ್ದ ಹೆಸರು ಗುರುತಿಸಲಾಗದಷ್ಟು ಮಾಸಿಹೋಗಿದೆ. ಮಿಂಗ್–ವೈನ ಪ್ರೇಯಸಿ ವಾಸಿಸುತ್ತಿದ್ದ ಮನೆ ಮಾಯವಾಗಿತ್ತು! ಅಲ್ಲಿ ಸ್ಮಶಾನದ ಭಯಾನಕ ವಾತಾವರಣ ಮೂಡಿತ್ತು.

ಇತ್ತ ಚಾಂಗನ ಕೈಗಳು ಹಣೆಯನ್ನು ಗಟ್ಟಿಸಿಕೊಳ್ಳುತ್ತಿದ್ದವು. ಒಡನೆಯೇ ಪೀಲೂನತ್ತ ತಿರುಗಿದ. ಆತ ಪ್ರಸಿದ್ಧ ಕವಿ ಚಿಂಗ್ ಚೌನ ಜನಜನಿತ ಪದ್ಯವೊಂದನ್ನು ಪಠಿಸಿದ "ಸ್ಯೈ–ಥಾವ್ ಸಮಾಧಿಯಮೇಲೆ ಅರಳಿರುವ ಪೀಚ್ ಹೂಗಳು!"

ಚಾಂಗ್ ಮುಂದುವರೆಸಿದ, "ಸ್ನೇಹಿತ, ಪೀಲೂ ನಿನ್ನ ಮಗನನ್ನು ಮರಳುಗೊಳಿಸಿದ ಅದ್ಭುತ ಸೌಂದರ್ಯ, ಈಗ ನಮ್ಮೆದುರಿಗೆ ಅವಶೇಷವಾಗಿ ನಿಂತಿರುವ ಗೋರಿಯಲ್ಲಡಗಿದೆ! ಪಿಂಗ್ ಮನೆತನದ ಖಾಂಗ್ ಎಂಬುವನನ್ನು ತಾನು ಮದುವೆಯಾಗಿದ್ದಾಗಿ ಹೇಳಿದ್ದಳಲ್ಲವೇ ಅವಳು? ಆ ಹೆಸರಿನ ವಂಶ ಯಾವುದೂ ಇಲ್ಲ. ಪಿಂಗ್–ಖಾಂಗ್ ಎಂಬ ಹೆಸರು ಹತ್ತಿರದ ಪಟ್ಟಣದ ಒಂದು ದೊಡ್ಡ ಗಲ್ಲಿಗಿದೆ! ಅವಳು ಹೇಳಿರುವುದೆಲ್ಲ ಒಂದು ದೊಡ್ಡ ಒಗಟಿನಂತಿದೆ! ತನ್ನ ಹೆಸರು ಸ್ಯೈ ಎಂದೂ ತಾನು ಹೌನ್–ಪ್ಯೆಪೋ ಬೀದಿಯಲ್ಲಿದ್ದೇನೆಂದೂ ಹೇಳಿದ್ದಳಲ್ಲವೇ? ಆ ಹೆಸರಿನ ವ್ಯಕ್ತಿಯೇ ಇಲ್ಲ! ಆ ಹೆಸರಿನ ಬೀದಿಯೂ ಇಲ್ಲ! ಆದರೆ ಹೌನ್ ಮತ್ತು ಪ್ಯೆಪೋ ಎಂಬ ಎರಡು ಪದಗಳು ಚೀನೀಯರಲ್ಲಿ ವಾಡಿಕೆಯಲ್ಲಿವೆ. ಅವೆರಡೂ ಸೇರಿದರೆ ಪ್ಯೆಪೋ ಎಂಬ ಪದದ ಅರ್ಥಕೊಡುತ್ತದೆ. ಪ್ಯೆಪೋ!

ಕೇಳು, ಪೀಲೂ. ತಾನು ಮದುವೆಯಾಗಿದ್ದನೆಂದು ಹೇಳುವ ಅವಳ ಗಂಡ ಪಿಂಗ್–ಖಾಂಗ್ ವಾಸಿಸುತ್ತಿದ್ದ ಗಲ್ಲಿಯಲ್ಲಿ ಒಂದು ಬೀದಿಯ ಹೆಸರು ಖೈವೋ!" ಆ ಬೀದಿಯಲ್ಲಿ 'ಥಾಂಗ್' ರಾಜ ವಂಶಜರ ಕುಪ್ರಸಿದ್ಧ ಸೂಳೆಯರು ವಾಸಿಸುತ್ತಿದ್ದರಂತೆ! ಅವಳು ಕಾ–ಪಿನ್ ಎಂಬ ಕವಿಯ ಕೃತಿಗಳನ್ನು ಹಾಡಿದ್ದಳಲ್ಲವೇ? ನಿನ್ನ ಮಗನಿಗೆ ಅವಳು ಅಗಲುವಾಗ ಕೊಟ್ಟ ಎರಡು ಅಪೂರ್ವ ವಸ್ತುಗಳಲ್ಲಿ ಪೋ–ಪೈ ಪಟ್ಟಣದ ಕಾವ್ ಎಂಬುವನಿಂದ ರಚಿಸಲ್ಪಟ್ಟ ಸೈಜ ಕಲಾಕೃತಿ ಎಂದು ಓದಿದ್ದೇವಲ್ಲವೇ? ಆ ಹೆಸರಿನ ಪಟ್ಟಣ ಈಗ ಇಲ್ಲ. ಆದರೆ ಕಾವ್–ಪಿನ್ ಎಂಬ ಹೆಸರು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ! ಕಾರಣ ಅವನೊಬ್ಬ ಅಸಾಧಾರಣ ಪ್ರತಿಭಾವಂತ ಕವಿಯಾಗಿದ್ದ. ಮೇಲಾಗಿ ಸೆ–ಚೊಯೆನ್ ಆ ಸ್ಥಾನದಲ್ಲಿ ಪ್ರಾಂತಾಧಿಕಾರಿಯೂ ಆಗಿದ್ದ! ಚೌ ಎಂಬ ಹೆಸರಿನ ಜಮೀನಿನಲ್ಲಿ ವಾಸವಾಗಿದ್ದ ಕಾವ್–ಪಿನ್‌ನಿಗೆ ಮೆಚ್ಚಿನ ಸೂಳೆ ಅತಿ ಕಾಮಿ ಹೆಣ್ಣು ಸೈ ಆಗಿದ್ದಳಂತೆ! 'ಸೈ–ಥಾವ್'! ಅವಳ ಕಾಲದಲ್ಲಿ ಅವಳಿಗಿದ್ದ ಸೌಂದರ್ಯ, ಆಕರ್ಷಣೆಗಳಿಗೆ ಸರಿಸಾಟಿಯುಳ್ಳವರಾರೂ ಇರಲಿಲ್ಲ. ಪ್ರೀತಿಯ ದ್ಯೋತಕವಾಗಿ ಕಾವ್–ಪಿನ್ ತನ್ನ ಪ್ರೇಯಸಿಗೆ ಕೊಟ್ಟ ಅಪೂರ್ವ ಕಲಾಕೃತಿಗಳೇ ಇವು! ಈ ಪುರಾತನವಾದ ಹಸ್ತಪ್ರತಿಗಳನ್ನು ಅವನು ತನ್ನ ಪ್ರೇಯಸಿಗೆ ಕೊಟ್ಟಿದ್ದನಂತೆ! ಇತರ ಹೆಣ್ಣು (ಸೂಳೆ)ಗಳಂತೆ ಇವಳದು ಸಾಧಾರಣ ಸಾವಲ್ಲ! ಅವಳ ಸುಂದರ ಅಂಗಾಂಗಗಳು ಛಿದ್ರ ಛಿದ್ರವಾಗಿ ಮಣ್ಣಿನಲ್ಲಿ ಸೇರಿಹೋಗಿವೆ! ಈ ದೊಡ್ಡ ಮರದಲ್ಲಿ ಅವಳ ಕೆಲವು ಅಂಶಗಳು ಇನ್ನೂ ಜೀವಂತವಾಗಿವೆ. ಇಲ್ಲಿ ಕಾಣುವ ಆ ನೆರಳಿನ ಭಾಗದಲ್ಲಿ ಅವಳ ಛಾಯೆ ಯಾವಾಗಲೂ ಸುಳಿದಾಡುತ್ತಿರುತ್ತದೆ...... ಒಂದು ಕಾಲದಲ್ಲಿ ಐಹಿಕ ಸುಖಭೋಗಗಳಲ್ಲಿ ಅತೃಪ್ತಿಯಿಂದ ತೊಳಲಾಡಿದ ಜೀವ ಈಗ ನಮ್ಮ ಸುಂದರ, ದೃಢಕಾಯ ಹುಡುಗನನ್ನು ತನ್ನ ಕಾಮತೃಪ್ತಿಗಾಗಿ ಬಲಿ ತೆಗೆದುಕೊಳ್ಳುವಷ್ಟರಲ್ಲಿ ನಾವು ಎಚ್ಚೆತ್ತೆವು. ಆದರೆ ವಿಧಿ ಅವಳನ್ನು ಮತ್ತೊಮ್ಮೆ ವಂಚಿಸಿತು!"

ಚಾಂಗ್ ಹೇಳುವುದನ್ನು ನಿಲ್ಲಿಸಿದ. ಮೂವರಲ್ಲೂ ಅವ್ಯಕ್ತ ಭಯ ವ್ಯಾಪಿಸಿತು. ಬೆಳಗಿನ ತಿಳಿಯಾದ ಮಂಜು ಹಚ್ಚ ಹಸಿರು ವಾತಾವರಣವನ್ನು ಮಬ್ಬುಗೊಳಿಸುತ್ತಿದೆ. ಸಮೂಹ ವೃಕ್ಷಗಳ ಪಿಶಾಚ ಸೌಂದರ್ಯವನ್ನು ಮರೆ ಮಾಚುತ್ತಿವೆ. ಮೂರ್ಛೆ ಹೋಗಿಸುವಂಥ ಪ್ರಖರ ಮಂದಾನಿಲವೊಂದು ಅರಳುತ್ತಿರುವ ಮೊಗ್ಗುಗಳ ಸುವಾಸನೆಯ ಕಂಪನ್ನು ಸುತ್ತು ಮುತ್ತ ಬೀರುತ್ತ–ಮರಣಿಸುತ್ತಿರುವ ಹೂಗಳ ಅಂತ್ಯ ಕಾಲದ ಪರಿಮಳ–ಎಳೆ ಎಳೆಯಾಗಿ, ಧರಿಸಿದ ನಿಲುವಂಗಿಯ ಕೋಮಲ ರೇಶ್ಮೆ ಎಳೆಗಳಿಗಿಂತಲೂ ಮೃದುವಾಗಿ ಸ್ಪರ್ಶಿಸುತ್ತ ಬೀಸುತ್ತಿತ್ತು. ಇದರಿಂದಾಗಿ ಗಗನಚುಂಬಿ ವೃಕ್ಷಗಳು ನೆಲೆಸಿದ್ದ ಗಂಭೀರ ವಾತಾವರಣದಲ್ಲಿ 'ಸೈ–ಥಾವ್', 'ಸೈ–ಥಾವ್' ಎಂದು ಗುಣುಗುಣಿಸುತ್ತಿರುವಂತೆ ಅವರಿಗೆ ಕೇಳುತ್ತಿತ್ತು.

ಮಗನ ಭವಿಷ್ಯವನ್ನು ಕುರಿತು ಹೆದರಿದ ಪೀಲೂ ಮಿಂಗ್–ವೈನನ್ನು ಕ್ವಾಂಗ್–ಚೌ–ವ್ಯಾ ಪಟ್ಟಣಕ್ಕೆ ರವಾನಿಸಿದ. ಅಲ್ಲಿ ತನ್ನ ಸ್ವಂತ ಪ್ರತಿಭೆಯಿಂದ ದೊಡ್ಡ ಪದವಿಗೇರಿ, ಸಮಾಜದಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿ ಎನಿಸಿಕೊಂಡ ಮಿಂಗ್-ವೈ ಹೆಸರಾಂತ ಮನೆತನದ ಹುಡುಗಿಯೊಬ್ಬಳನ್ನು ಮದುವೆಯಾಗಿ, ಬುದ್ಧಿವಂತ ಮಕ್ಕಳ ತಂದೆಯಾದ. ಆದರೆ 'ಸೈ–ಥಾವ್'ಳನ್ನು ಅವನ ನೆನಪಿನಾಳದಿಂದ ಎಂದೂ ಬೇರ್ಪಡಿಸಲಾಗಲಿಲ್ಲ. ಆದರೆ ಅವಳ ಕುರಿತು, ಚಾಂಗ್‌ನ ಮಕ್ಕಳಿಗೆ ತಾನು ಶಿಕ್ಷಕನಾಗಿದ್ದಾಗ ನಡೆದ ಘಟನೆಯ ಕುರಿತು, ಎಂದೂ ಯಾರ ಹತ್ತಿರವೂ ಚಕಾರವೆತ್ತಲಿಲ್ಲ. ಮನೆಯಲ್ಲಿ ಬರೆಯುವ ಮೇಜಿನ ಮೇಲಿರುತ್ತಿದ್ದ ಎರಡು ವಿಚಿತ್ರ ಆಕರ್ಷಕ ವಸ್ತುಗಳನ್ನು ದಿನವೂ ಕಾಣುತ್ತಿದ್ದ ಮಕ್ಕಳು ಕುತೂಹಲಗೊಂಡು, ಅವು ಎಲ್ಲಿ ಸಿಕವು? ಇಲ್ಲಿಗೆ ಹೇಗೆ ಬಂದವು? ಎಂದು ಅಪ್ಪನನ್ನು ಪರಿಪರಿಯಾಗಿ ಕಾಡುತ್ತಿದ್ದರೂ. ಅವನು ಅವುಗಳ ಪೂರ್ವೋತ್ತರವನ್ನು ಮಕ್ಕಳಿಂದಲೂ ಬಚ್ಚಿಟ್ಟ–ಎಳೆಯರ ಉತ್ತಮ ಭವಿಷ್ಯಕ್ಕಾಗಿ. ✿

ಅಬಲೆ ಅಬಲೆಯಾಗಿಯೆ ಇರಬೇಕೆ?

ಮೂಲ: **ಸುಭದ್ರಾ ಬುಕಾಲಿಯ**

ಕನ್ನಡಕ್ಕೆ: **ಯು. ಶ್ರೀ. ಜ್ಯೋಶಿ**

ಎಲ್ಲ ದಿನಂತೆ ಆ ದಿನವೂ ರಾಜಧಾನಿಯ ಅರ್ಧದಷ್ಟು ಜನಸಂಖ್ಯೆಗಿನ್ನೂ ಬೆಳಗಾಗಿರಲಿಲ್ಲ. ಆ ಹೊತ್ತಿನಲ್ಲಿ 'ಮಹಿಳೆಯರು ಏಕಿಷ್ಟು ಅಸಹಾಯಕರಾಗಿದ್ದಾರೆ?' ಎಂಬ ಘೋಷಣೆ ಕೂಗುತ್ತ ಎಂಟುನೂರಕ್ಕೂ ಹೆಚ್ಚು ಜನ ಮಹಿಳಯರು ಲ್ಲಿಯ ಚಾಂದನಿ ಚೌಕದ ರಸ್ತೆಗಳಲ್ಲಿ ಸಾಗುತ್ತಿದ್ದರು. ಅಂದು ಅಂತಾರಾಷ್ಟ್ರೀಯ ಮಹಿಳಾ ದಿನ. ಎಪ್ಪತ್ತು ವರ್ಷಗಳ ಹಿಂದೆ ಶ್ರೀಮತಿ ಕ್ಲಾರಾ ಜೆಟ್ಕಿನ್ ಮಾರ್ಚ್ ಎಂಟನೇ ದಿನಾಂಕವನ್ನು 'ಮಹಿಳಾದಿನ'ವೆಂದು ಘೋಷಿಸಿದಾಗ ಇಂಥದೊಂದು ಪರಿಸ್ಥಿತಿ ಮಹಿಳೆಗೊದಗಬಹುದು ಎಂದು ಆಕೆ ಪ್ರಾಯಶಃ ಕನಸಿನಲ್ಲೂ ನೆನಸಿರಲಿಕ್ಕಿಲ್ಲ. ಮಹಿಳಾ ಸಂಸ್ಥೆಗಳ ಮೂಲಕ ಒಂದುಗೂಡಿದ್ದ ಎಲ್ಲಾ ವಯಸ್ಸಿನವರೂ ಇದ್ದ ಆ ಮಹಿಳೆಯರ ಕಂಠಗಳು ಒಕ್ಕೊರಲಾಗಿದ್ದುವು. ಘೋಷಣೆಗಳನ್ನು ಕೂಗುತ್ತ ಅವರು ರಸ್ತೆಯಲ್ಲಿ ಸಾಗುತ್ತಿದ್ದರೆ ಪಾದಚಾರಿಗಳಿಗೆ, ಇನ್ನಿತರರಿಗೆ ಆಶ್ಚರ್ಯವೋ ಆಶ್ಚರ್ಯ! ಕೆಲವರು ಉಪೇಕ್ಷೆಯಿಂದ ನಡೆದರೆ ಕೆಲವರು ನಿಂತ ಕಡೆ ನಿಂತು ನೋಡುತ್ತಿದ್ದರು. ಮತ್ತೆ ಕೆಲವರು ವ್ಯಂಗ್ಯ ಮಾತುಗಳನ್ನಾಡಿದರು. ಆದರೆ ಈ ಪ್ರತಿಭಟನಾ ಮೆರವಣಿಗೆಯ ಹಿಂದೆ ಅಡಗಿದ್ದ ಮೂಕವೇದನೆಯನ್ನು ಅರ್ಥ ಮಾಡಿಕೊಂಡವರು ಮಾತ್ರ ತಾವೂ ಅವರಲ್ಲಿ ಸೇರಿ ಮುನ್ನಡೆದರು.

ಈಗ ಮನೆಮಾತಾಗಿರುವ ಮಥುರಾ ಅತ್ಯಾಚಾರ ಪ್ರಕರಣವನ್ನು ಮರುವಿಚಾರಣೆಗೊಳಪಡಿಸಬೇಕು ಎಂಬುದು ಈ ಪ್ರತಿಭಟನೆಯ ಮೇಲ್ನೋಟಕ್ಕೆ ತೋರುವ ಉದ್ದೇಶ. ಮಹಿಳೆಯರ ಮೇಲೆ ನಿರಂತರವಾಗಿ ಜರುಗುತ್ತಿರುವ ಅತ್ಯಾಚಾರ ದೌರ್ಜನ್ಯಗಳ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುವುದು ಅವರ ಮೂಲ ಉದ್ದೇಶ. ಮಥುರಾ ಪ್ರಕರಣವನ್ನು ಕುರಿತು ಅವರು ಕೂಗುತ್ತಿದ್ದ ಘೋಷಣೆಗಳು ಮಹಿಳೆಯರ ಹಕ್ಕುಗಳ ವಿರುದ್ಧ ನಡೆಯುತ್ತಿರುವ ಹಲ್ಲೆಯನ್ನು ಸಾಂಕೇತಿಕವಾಗಿ ತೋರುತ್ತಿದ್ದವು. ಶಿಕ್ಷೆ ವಿಧಿಸುವುದರಲ್ಲಿಯೂ ಕಾನೂನು ಪದ್ಧತಿಗಳನ್ನು ಅನುಸರಿಸುವುದರಲ್ಲೂ ಅನವಶ್ಯ ಕಾಲ ವಿಳಂಬವಾಗುತ್ತಿದೆ, ಇದರಿಂದ ಪ್ರಕರಣಗಳು

(ಕೃಪೆ: 'ಸಂಡೇ' ಪತ್ರಿಕೆ)

ಕ್ಲಿಷ್ಟವಾಗುವ ಸಂಭವವಿದ್ದು ಬಹುಮಟ್ಟಿಗೆ ಆಪಾದಿತರಿಗೆ ಅನುಕೂಲವಾಗುವ ರೀತಿಯಲ್ಲಿ ಪೂರ್ವಗ್ರಹಪೀಡಿತ ತೀರ್ಮಾನಗಳು ಬರುತ್ತವೆ.


೧೯೭೮ರಲ್ಲಿ ಮೂವತ್ತೈದು ವರ್ಷದ ವಿವಾಹಿತ ಪುರುಷ ಗಂಗಾ ಎಂಬ ಎಪ್ಪತ್ತು ವರ್ಷದ ವಿಧವೆಯನ್ನು ಮಾನಭಂಗ ಮಾಡಿದ್ದಲ್ಲದೆ ಇರಿದು ಕೊಲೆ ಮಾಡಿದ. ಆಪಾದತನಿಗೆ ಮಾನಭಂಗಕ್ಕಾಗಿ ಮೂರೇ ವರ್ಷ, ಕೊಲೆಮಾಡಿದ್ದಕ್ಕಾಗಿ ಮತ್ತೆ ಮೂರು ವರ್ಷ ಕಠಿಣ ಕಾರಾವಾಸ ಶಿಕ್ಷೆಯನ್ನು ವಿಧಿಸಲಾಯಿತು. ಜಾವ್‌ನಗರದಲ್ಲಿ ಹನ್ನಾ ಎಂಬ ಎಳೆ ವಯಸ್ಸಿನ ಗೃಹಿಣಿಯು ಅತ್ತೆಯ ಮನೆಯಲ್ಲಿ ನಿದ್ರಿಸುತ್ತಿದ್ದಾಗ ಅವಳನ್ನು ಸುಟ್ಟು ಬಿಡಲಾಯಿತು. ಅವಳು ಸಾಯುವ ಮುಂಚೆ ನೀಡಿದ ಹೇಳಿಕೆಯಲ್ಲಿ ತನ್ನ ಮದುವೆಯಾದ ದಿನದಿಂದಲೂ ಅತ್ತೆಮನೆಯಲ್ಲಿ ಸಾಮರಸ್ಯವುಂಟಾಗದೆ ಮನಸ್ತಾಪವುಂಟಾದ್ದರಿಂದ ತನಗೆ ಬೆಂಕಿ ಹಚ್ಚಲಾಯಿತೆಂದು ಉಸುರಿದ್ದಳು. ಅವಳ ಅತ್ತೆಯೇ ದೇಹದ ಮೇಲೆ ಸೀಮೆಯೆಣ್ಣೆ ಸುರಿದುದನ್ನು ಸ್ವತಃ ತಾನು ನೋಡಿದ್ದಳೇ ಎಂದು ಅವಳನ್ನು ಪ್ರಶ್ನಿಸಲಾಯಿತು. ಆದರೆ ತಾನಾಗ ನಿದ್ರಿಸುತ್ತಿದ್ದುದರಿಂದ ತಿಳಿಯಲಿಲ್ಲವೆಂದು ಆಕೆ ಹೇಳಿದಳು. ಸರ್ವೋಚ್ಚ ನ್ಯಾಯಾಲಯವು ಆಪಾದಿತೆಗೆ ಸಂದೇಹದ ಲಾಭ ನೀಡಿ ಆಕೆಯನ್ನು ಖುಲಾಸೆ ಮಾಡಿತು. ಕಲಾವತಿಯ ಕತೆ ಇನ್ನೊಂದು ಬಗೆಯದು. ಅವಳ ಮದುವೆಯ ಮೊದಲ ರಾತ್ರಿಯಿಂದಲೂ ಗಂಡನಿಂದ ಬೈಗುಳ ಹೊಡೆತ ಅವಳಿಗೆ ತಪ್ಪಲಿಲ್ಲ. ಕಾರಣ ಮದುವೆಯಲ್ಲಿ ವರೋಪಚಾರವಾಗಿ ಮೋಟಾರ್ ಸೈಕಲ್ ಸಿಕ್ಕಲಿಲ್ಲವೆಂಬುದು! ಅತ್ತೆಮನೆಯಲ್ಲಿ ಅವಳಿಗೆ ಊಟ ಹಾಕುತ್ತಿರಲಿಲ್ಲ ಮಾತ್ರವಲ್ಲ ಆಕೆಯನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಒಮ್ಮೆ ಅವಳ ತಂದೆ ಮಗಳನ್ನು ಕಾಣಲು ಹೋದಾಗ ಅವಳನ್ನು ಕೋಣೆಯಲ್ಲಿ ಕೂಡಿಹಾಕಲಾಗಿತ್ತು. ಹೊಡೆತದಿಂದಾದ ಗಾಯಗಳಿಂದ ಮೈಯೆಲ್ಲ ರಕ್ತ ಸುರಿಯುತಿತ್ತು, ನೋವು ಹಸಿವೆಯಿಂದ ಕಂಗಾಲಾಗಿದ್ದ ಆ ಅಸಹಾಯಕ ಹೆಣ್ಣು ತನ್ನನ್ನು ತೌರಿಗೆ ಕರೆದೊಯ್ಯುವಂತೆ ತಂದೆಯನ್ನು ಬೇಡಿಕೊಂಡಳು. ಅದರಂತೆಯೇ ತಂದೆಯು ಮನೆಗೆ ಹಿಂದಿರುಗಿದಳು ಕೂಡ. ಆದರೆ ಅವಳ ಗ್ರಹಚಾರ ಇನ್ನೂ ಬಿಟ್ಟಿರಲಿಲ್ಲ. ಒಂದು ವರ್ಷದ ನಂತರ ಕಲಾವತಿಯ ಗಂಡ ಮತ್ತೆ ಬಂದು ಕ್ಷಮೆ ಕೇಳಿ ಇನ್ನು ಮುಂದೆ ತಾನವಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಭಾಷೆ ಕೊಟ್ಟು ಊರಿಗೆ ಕರೆದೊಯ್ದ. ತರುವಾಯ ಒಂದೂವರೆ ತಿಂಗಳಲ್ಲೇ ಕಲಾವತಿಯ ತಂದೆಗೆ ಮಗಳು ಹಾವು ಕಡಿದು ತೀರಿಕೊಂಡಳೆಂದು ಸುದ್ದಿ ಬಂತು. ಎರಡು ವರ್ಷಗಳ ನಂತರ ೧೯೭೮ರಲ್ಲಿ ಸಾಕಷ್ಟು ರುಜುವಾತಿಲ್ಲದ ಕಾರಣ ಕಲಾವತಿಯ ಗಂಡನನ್ನು ಆಪಾದನೆಯಿಂದ ವಿಮುಕ್ತಗೊಳಿಸಲಾಯಿತು.

ಅತ್ಯಾಚಾರ, ಕಿರುಕುಳ ಕೊಡುವುದು, ಸಂಪತ್ತಿಯನ್ನು ಹೊಡೆಯುವುದು, ಕೊಲೆ ಮಾಡುವುದು ಈ ಅಪರಾಧಗಳನ್ನು ಮಾಡುವವರು ಪುರುಷರು ಅಥವಾ ಅವರ ಬೆಂಬಲ ಪಡೆದ ಸ್ತ್ರೀಯರು. ಇಂಥ ಕೃತ್ಯಗಳನ್ನು ನಡೆಸುವ ಘಾತುಕರ ವಿರುದ್ಧ ವಿಚಾರಣೆ ನಡೆಸಿ ತೀರ್ಪು ನೀಡಲು ಪುರುಷರೇ ನ್ಯಾಯಪೀಠಗಳಲ್ಲಿರುವುದು ವಿಪರ್ಯಾಸ! ಸಾಮಾನ್ಯವಾಗಿ, ಸಮಾಜ ಕೂಡ ಅತ್ಯಾಚಾರಕ್ಕೀಡಾಗಿ ದೈಹಿಕ ಮಾನಸಿಕ ವೇದನೆ ಅನುಭವಿಸುವ ಹೆಣ್ಣನ್ನೇ ದೂಷಿಸುತ್ತದೆ. ಒಬ್ಬ ಹೆಂಗಸು ಸುಟ್ಟುಕೊಂಡು ಸತ್ತಳೆಂದರೆ ಸಾವಿನ ಹಿನ್ನೆಲೆಯಲ್ಲಿ "ಏನೋ ಇದೆ" ಎಂದೇ ಅರ್ಥ. ಯಾವನಾದರೂ ಯಾವಳಾದರೂ ಒಬ್ಬ ಹುಡುಗಿಗೆ ಕಿರುಕುಳ ಕೊಟ್ಟನೇ? ಅದಕ್ಕೆ ಕಾರಣ ಅವಳ ಪ್ರಚೋದಕ ಉಡುಪು ಅಥವಾ ಚೆಲ್ಲು ನಡತೆ. ಹುಡುಗಿ ಅತ್ಯಾಚಾರಕ್ಕೀಡಾದಳೆಂದರೆ ಅವಳು ಅನೀತಿವಂತಳೇ ಆಗಿರಬೇಕು. ಆಗ ಅವಳ ಹಿಂದಿನ ಚರಿತ್ರೆಯನ್ನೆಲ್ಲ ಕೆದಕಿ ಬೆದಕಿ ಜಾಲಾಡಿ ಹುಡುಕಲಾಗುತ್ತದೆ. ಅವಳು ಕನ್ಯೆಯಾಗಿರದಿದ್ದರಂತೂ ಅದು ಅತ್ಯಾಚಾರವಾಗುವುದೇ ಇಲ್ಲ; ಅವಳು ಇರಿಸಿಕೊಂಡಿದ್ದ "ಸಂಬಂಧ"ವಾಗುತ್ತದೆ. ಹಿರಿಯ ನ್ಯಾಯವಾದಿಗಳೊಬ್ಬರು ನಾವು ಅತ್ಯಾಚಾರಕ್ಕೆ ಗುರಿಯಾದ ಹುಡುಗಿಯ (ಆರೋಪಕ್ಕೊಳಗಾದ) ಹಿಂದಿನ ಚರಿತ್ರೆಯನ್ನು ಕೆದಕಲು ಕಾರಣವೇನೆಂದರೆ ಒಂದು ವೇಳೆ ಅವಳು ಹಿಂದೆ ಯಾರೊಡನಾದರೂ ಸಂಬಂಧವಿಟ್ಟುಕೊಂಡಿದ್ದರೆ ಆರೋಪಿಗೆ ಅವಳು "ಸಮ್ಮತಿ" ನೀಡಲು

ಹೆಚ್ಚು ಅವಕಾಶಗಳಿರುತ್ತವೆ, ಎಂದು ಹೇಳಿದರು. ಹೆಂಗಸಿಗಿಂತಲೂ ಗಂಡಸು ಅಂಥ ಹೆಚ್ಚು ಸಂಬಂಧಗಳನ್ನು ಇಟ್ಟುಕೊಂಡಿರಲು ಸಾಧ್ಯವೆಂಬ ಅಂಶ ಆ ಮಹನೀಯರಿಗೇಕೆ ಹೊಳೆಯಲಿಲ್ಲವೊ ತಿಳಿಯದು. ಒಬ್ಬ ಪುರುಷ ಪದೇಪದೇ ಹೆಂಗಸರ (ವೇಶ್ಯೆಯರ) ಬಳಿ ಹೋಗುವ ಚಾಳಿಯುಳ್ಳವನಾಗಿದ್ದರೆ ಅವನು ಅತ್ಯಾಚಾರಿಯಾಗಿರಲು ಹೆಚ್ಚಿನ ಸಾಧ್ಯತೆಗಳಿವೆ. ಆದರೆ ಪುರುಷರು ಈ ಅಭಿಪ್ರಾಯವನ್ನು ಸಹಸಾ ಒಪ್ಪಲಾರರು. ತಪ್ಪು ಯಾವಾಗಲೂ ಹೆಣ್ಣಿನ ತಲೆಗೇ ಕಟ್ಟಿಟ್ಟದ್ದು. ಅಲ್ಲದೆ ಮಾನಭಂಗಕ್ಕೀಡಾದ ಹೆಂಗಸು ತನ್ನ ಜೀವಮಾನ ಪೂರಾ ಅಪಮಾನದ ನೆರಳಿನಲ್ಲೇ ಬದುಕಿರಬೇಕಾಗುತ್ತದೆ. ೧೯೭೯ರಲ್ಲಿ ದಿಲ್ಲಿಯ ಕರೋಲ್‌ಬಾಗಿನ ಪೂನಮ್ ಎಂಬ ಹದಿಮೂರು ವರ್ಷದ ಬಾಲೆ ಆತ್ಮಹತ್ಯೆ ಮಾಡಿಕೊಂಡಳು. ಆ ಮುಗ್ಧ ಹುಡುಗಿ ಅತ್ಯಾಚಾರಕ್ಕೀಡಾದ್ದರಿಂದ ಭಯ ಅವಮಾನ ತಾಳಲಾರದೆ ತನ್ನ ಜೀವನವನ್ನೇ ಕೊನೆಗಾಣಿಸಿಕೊಂಡಳು. ೧೯೮೦ರ ಏಪ್ರಿಲ್ ತಿಂಗಳಲ್ಲಿ ಒಬ್ಬ ಯುವಕ ಆತ್ಮಹತ್ಯೆ ಮಾಡಿಕೊಂಡ. ಕಾರಣವೇನೆಂದರೆ ಅವನ ಹೆಂಡತಿಯ ಮೇಲೆ ಅತ್ಯಾಚಾರ ನಡೆದಿತ್ತು. ಅಪಮಾನದಿಂದ ಜಗತ್ತಿಗೆ ಮುಖ ತೋರಿಸಲಾರದೆ ಅವನು ತನ್ನ ಪ್ರಾಣವನ್ನೇ ಆಹುತಿ ನೀಡಿದ್ದ.

ಅತ್ಯಾಚಾರಕ್ಕೆ ಗುರಿಯಾದ ಹೆಣ್ಣು ಕುಲಬಾಹಿರಳಾಗುತ್ತಾಳೆ. ಎಷ್ಟೋ ಸಂದರ್ಭಗಳಲ್ಲಿ ಮಾನಭಂಗಗೊಂಡ ಹುಡುಗಿಯನ್ನು ಅವಳ ಮನೆಯವರೇ ಸೇರಿಸಿಕೊಳ್ಳುವುದಿಲ್ಲ. ಹೀಗಾಗಿ ಅವಳು ಅನಾಥಾಲಯ ಅಥವಾ ವೇಶ್ಯಾವಾಟಿಕೆಯ ಮೊರೆ ಹೋಗುವಂತಾಗುತ್ತದೆ. ಏನೇ ಆದರೂ ಅವಳು ಎಲ್ಲ ವಿಷವನ್ನೂ ನುಂಗಿ ತೆಪ್ಪಗಿರಬೇಕು; ತನ್ನ ಕುಟುಂಬದ ಮಾನ ಮರ್ಯಾದೆಯನ್ನು, ಪ್ರತಿಷ್ಠೆಯನ್ನು ಬೀದಿಗೆಳೆಯಬಾರದು!

ಸ್ತ್ರೀಯರ ಮೇಲೆ ನಡೆಯುವ ಅತ್ಯಾಚಾರ ಅಥವಾ ಇನ್ನಾವುದೇ ಬಗೆಯ ದೌರ್ಜನ್ಯ ಕುರಿತು ಭಾರತದ ಸಾಮಾಜಿಕ ಇತಿಹಾಸ ಯಾವ ಅಂಕಿ ಅಂಶ ಅಥವಾ ವಿವರಗಳನ್ನು ಕೊಡುವುದಿಲ್ಲ. 'ಎಗೆನ್ಸ್ಟ್ ಅವರ್ ವಿಲ್' ಗ್ರಂಥದ ಮೂಲಕ ವಿಖ್ಯಾತರಾಗಿರುವ ಶ್ರೀಮತಿ ಸೂಸಾನ್



ಅತ್ಯಾಚಾರದ ಪ್ರಕರಣಗಳ ಸಂಖ್ಯೆ ಏರಿರುವ ಪ್ರಮಾಣವನ್ನು ನೋಡಿದರೆ ರಾಷ್ಟ್ರದ ಶೇ. ೪೮ರಷ್ಟು ಜನಸಂಖ್ಯೆಯು ಅಭದ್ರತೆಯಿಂದ ಅಪಾಯದಿಂದ ನರಳುತ್ತಿದೆ ಎಂದ ಹಾಗಾಯಿತು. ೧೯೭೨ರಿಂದ ೧೯೭೮ರ ವರೆಗೆ ವರದಿಯಾದ ಮಾನಭಂಗ ಪ್ರಕರಣಗಳ ಸಂಖ್ಯೆ ಈ ಮುಂದಿನಂತಿದೆ:

೧೯೭೨ರಲ್ಲಿ —	೨೫೬೨	ಪ್ರಕರಣಗಳು
೧೯೭೩ರಲ್ಲಿ —	೨೮೬೨	”
೧೯೭೪ರಲ್ಲಿ —	೨೮೬೨	”
೧೯೭೫ರಲ್ಲಿ —	೩೨೮೩	”
೧೯೭೬ರಲ್ಲಿ —	೩೬೧೧	”
೧೯೭೭ರಲ್ಲಿ —	೩೮೨೧	”
೧೯೭೮ರಲ್ಲಿ —	೩೭೮೧	”

ಬ್ರೌನ್‌ಮಿಲರ್ ಕೂಡ ಭಾರತದಲ್ಲಿ ನಡೆಯುವ ಮಹಿಳಾ ಅತ್ಯಾಚಾರ ಪ್ರಕರಣಗಳನ್ನು ಕುರಿತು ಚಕಾರವೆತ್ತಿಲ್ಲ. ಇನ್ನು, ಭಾರತದ ಧರ್ಮಶಾಸ್ತ್ರಗಳನ್ನು ತೆರೆದರೆ, ಮಾನಭಂಗ ಮಾನಭಂಗವೇ ಅಲ್ಲ; ಅದೂ ಒಂದು ಬಗೆಯ ವಿವಾಹ! ಗೃಹ್ಯ ಸೂತ್ರಗಳಲ್ಲಿ ಹೇಳಿರುವ ಎಂಟು ಬಗೆಯ ವಿವಾಹ ವಿಧಾನಗಳಲ್ಲಿ ರಾಕ್ಷಸವಿವಾಹವೂ ಒಂದಾಗಿದ್ದು ವಧುವನ್ನು ಬಲಾತ್ಕಾರವಾಗಿ ಎತ್ತಿಕೊಂಡು ಹೋಗುವುದು ಇದರ ವೈಶಿಷ್ಟ್ಯ (ಸಾಮಾನ್ಯವಾಗಿ ವಧುವಿನ ಪೋಷಕರಿಗೆ ನೋವು ಹಿಂಸೆ ಮಾಡುವುದು, ಹೊಡೆದಾಟ, ಕೊಲೆ ಎಲ್ಲವೂ ಇದರಲ್ಲಿ ಸೇರುತ್ತದೆ). ಇಂಥ ವಿವಾಹಗಳು ಕೇವಲ ಕೆಳ ವರ್ಗಗಳ ಜನರಲ್ಲಿ ಮಾತ್ರ ನಡೆಯುತ್ತಿದ್ದುವೆಂದು ಹೇಳಲಾಗಿದ್ದರೂ “ಗ್ರಂಥ”ಗಳಲ್ಲಿ ಆ ವಿಧಾನವನ್ನು ಎಲ್ಲಿಯೂ ಅಲ್ಲಗಳೆದಿಲ್ಲ! ಅಚ್ಚರಿಯ ಸಂಗತಿಯೆಂದರೆ, ನಮ್ಮ ಈ ಆಧುನಿಕ ಕಾಲದಲ್ಲಿ ಕೂಡ ಉನ್ನತ ಪದವಿಗಳಲ್ಲಿದ್ದು ರಾಷ್ಟ್ರದಲ್ಲಿ ಗಣ್ಯರೆನಿಸಿರುವವರೂ “ಮಾನಭಂಗ ಮಾಡುವುದು [illegible]

ಗಳನ್ನಾಡುತ್ತಿರುವುದು !

ಭಾರತೀಯ ಸಂಸ್ಕೃತಿಯುದ್ದಕ್ಕೂ ಮಹಿಳೆಯನ್ನು ಕೀಳಾಗಿ ಕಾಣುತ್ತ ಬಂದಿರುವುದನ್ನು ನಾವು ಗಮನಿಸಬಹುದು. ಧರ್ಮಸೂತ್ರಗಳ ಪ್ರಕಾರ ಪುರುಷನು ವಿವಾಹಿತನಾಗುವನೆಂದು ಹೇಳಿದರೆ ಸ್ತ್ರೀಯು ಕೇವಲ ವಿವಾಹದ ಮೂಲಕ (ಪುರುಷ ಪಡೆದ ವಸ್ತು) ಪಡೆದು ಬಂದವಳಾಗಿರುತ್ತಾಳೆ ಅಷ್ಟೇ. ಪುರುಷನಿಗಿರುವ ಮೂರು ಮುಖ್ಯ ಋಣಗಳಲ್ಲಿ (ಪಿತೃಋಣ, ದೇವಋಣ, ಗುರುಋಣ) ಪುತ್ರವಂತನಾಗಿ ತನ್ನ ಪಿತೃಗಳಿಗೆ ಸದ್ಗತಿಯುಂಟುಮಾಡುವುದೂ ಒಂದು. ಮನು ಧರ್ಮಶಾಸ್ತ್ರದ ಪ್ರಕಾರ ಮನುಷ್ಯನ ಹತ್ತು ಪವಿತ್ರ ಸಂಸ್ಕಾರಗಳ ಪೈಕಿ ಪುನಃಸಂತಾನಕಾರಕ ವಿವಾಹವು ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಮಾತ್ರ ನೀಡಲಾಗಿರುವ ಸೌಲಭ್ಯ. ಪ್ರಾಚೀನ ಕಾನೂನು ಪಂಡಿತ ಮನು ತನ್ನ ಸಂಹಿತೆಯುದ್ದಕ್ಕೂ ಪುರುಷನು ಕೋಪಿಷ್ಠಳಾದ, ಸಚ್ಚಾರಿತ್ರ್ಯವಿಲ್ಲದ ಹೆಂಡತಿಯನ್ನು ಎಲ್ಲ ಬಗೆಯ ಸುಖ ಸಂತೋಷಗಳಿಂದಲೂ ದೂರವಿರಿಸಿ ಕೇವಲ ಜೀವನಾವಶ್ಯಕ ವಸ್ತುಗಳನ್ನು ಕೊಟ್ಟು ಶಿಕ್ಷಿಸಬೇಕೆಂದು ಸಾರುತ್ತಾನೆ. ಮಕ್ಕಳನ್ನು ಪಡೆಯಲಾರದವಳನ್ನು ಬಂಜೆಯನ್ನು ಅಥವಾ ಮದುವೆಯಾದ ೧೫ ವರ್ಷಗಳಲ್ಲಿ ತನ್ನೆಲ್ಲ ಮಕ್ಕಳನ್ನೂ ಕಳೆದುಕೊಳ್ಳುವ ಹೆಂಡತಿಯನ್ನು ಪುರುಷನು ಪರಿತ್ಯಜಿಸಬಹುದು. ಇನ್ನು ಸ್ತ್ರೀಗೆ ಸಂಬಂಧಿಸಿದಂತೆ, ಅವಳು ಸದಾಕಾಲ ಪತಿಸೇವಾನಿರತಳಾಗಿರಬೇಕು. ಅವಳಿಗಷ್ಟೇ ಸಾಕು. ಈ ಬಗೆಯ ಒಡೆಯ ಮತ್ತು ತೊತ್ತು ಎಂಬ ಕುತರ್ಕದಿಂದಾಗಿ ಮಹಿಳೆಯು ಪುರುಷನ ಅಡಿಯಾಳಾಗುವಂತಾಯಿತು. ತನ್ನ ಅಸಹಾಯಕತೆಯ ದುರುಪಯೋಗವನ್ನು ಮೂಕವಾಗಿಯೇ ಒಪ್ಪಿಕೊಂಡ ಮಹಿಳೆ ಪುರುಷನ ಆಕ್ರಮಣಶೀಲ ಸ್ವಭಾವವನ್ನು, ಅವನು ಕೊಡುವ ಕಿರುಕುಳ ಮಾಡುವ ಅಪಮಾನ ಶೋಷಣೆ ಎಲ್ಲವನ್ನೂ ದುಃಖದಿಂದ ಸಹಿಸಿಕೊಂಡು ತನ್ನ ವಿಧಿಯನ್ನು ಹಳಿಯುತ್ತ ತಾನೇ ಅಪರಾಧಿ ಮನೋಭಾವದಿಂದ ಬದುಕುತ್ತಿದ್ದಾಳೆ.

ಮಹಿಳೆಯನ್ನು ನಾಲ್ಕು ಗೋಡೆಗಳ ನಡುವೆ ಬಂದಿಸಿಟ್ಟು ಬಾಹ್ಯ ಜಗತ್ತನ್ನು ಕಾಣದಂತೆ ಪೋಷ

ಮಾತನ್ನು ಕೇಳದಂತೆ ಮಾಡಿ ಅವಳು ಬದುಕಿನುದ್ದಕ್ಕೂ ಪುರುಷನ ಕೃಪಾಛತ್ರದಡಿಯಲ್ಲೇ ಉಸಿರಾಡುತ್ತಿರುವಂತಾಗಲು ಅವಳು ಸ್ಥೈರ್ಯ ಕುಗ್ಗಿಸುವ ಹಿಂಸಾತ್ಮಕ ಕೃತ್ಯಗಳೇ ಕಾರಣ. ಭಾರತ ರಾಜ್ಯ ಕ್ಷೇತ್ರಗಳಲ್ಲಿ ನಿರ್ಭಯವಾಗಿ ಸ್ವತಂತ್ರವಾಗಿ ಸಂಚಾರ ಮಾಡುವ ಸ್ವಾತಂತ್ರ್ಯ ಮತ್ತು ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳುಂಟು ಎಂಬುದಾಗಿ ಸಂವಿಧಾನದ ೧೯(೧)ನೆಯ ಅನುಚ್ಛೇದದಲ್ಲಿ ಭಾರತದ ಪೌರರಿಗೆ ನೀಡಿರುವ ಆಶ್ವಾಸನ ಕೇವಲ ಪುರುಷರಿಗೆ ಮಾತ್ರ ಅನ್ವಯವಾಗಿದೆ. ಭಾರತ ದಂಡ ಸಂಹಿತೆಯ ೫೦೯ನೆಯ ಪ್ರಕರಣವು ಮಹಿಳೆಯ ಮರ್ಯಾದೆಗೆ ಕುಂದುತರುವಂಥ ನಿಂದನೆ ಮಾಡುವ ಅಥವಾ ಮಾನಭಂಗ ಮಾಡುವ ಅಪರಾಧಿಗೆ ಒಂದು ವರ್ಷ ಅವಧಿಯ ಕಾರಾವಾಸವನ್ನು ನಿಗದಿಗೊಳಿಸಿದೆ. ಆದರೆ ವಾಸ್ತವವಾಗಿ ಮಹಿಳೆಯನ್ನು ನಿಂದಿಸಿದ ಅಥವಾ ಮಾನಭಂಗ ಮಾಡಿದ ಪುರುಷನಿಗೆ ಯಾವುದೇ ಪರಿಣಾಮಕಾರಿಯಾದ ಶಿಕ್ಷೆಯನ್ನೂ ವಿಧಿಸಿಲ್ಲ. ದಿಲ್ಲಿಯಲ್ಲಿ ಮಾನಭಂಗ ಮಾಡಿದ ಅಪರಾಧಿಗೆ ಪೋಲೀಸು ಅಧಿನಿಯಮದ ಮೇರೆಗೆ ಹತ್ತು ಇಪ್ಪತ್ತು ಅಥವಾ ಹೆಚ್ಚೆಂದರೆ ಐವತ್ತು ರೂಪಾಯಿ ಜುಲ್ಮಾನೆ ವಿಧಿಸಿ ಮನೆಗೆ ಕಳುಹಿಸುತ್ತಾರೆ ಅಷ್ಟೆ.

ಅಪರಾಧವನ್ನು ಪ್ರತಿಬಂಧಿಸುವ ಯಾವುದೇ ಉಗ್ರಶಿಕ್ಷೆಯೂ ಇಲ್ಲವಾದ್ದರಿಂದ ಮಹಿಳೆಯರ ಮೇಲೆ ನಡೆಯುವ ಹಲ್ಲೆ ಮುಂತಾದ ಹಿಂಸಾಚಾರಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಮಹಿಳೆಯರಿಗೆ ಕೀಟಲೆ ಮಾಡುವುದು, ಕಿರುಕುಳ ಕೊಡುವುದು, ಭೀತಿ ಹುಟ್ಟಿಸುವದು. ಅತ್ಯಾಚಾರ ಮಾಡುವುದೇ ಮುಂತಾದ ದೂರುಗಳನ್ನು ಪರಿಶೀಲಿಸುವ ಸಲುವಾಗಿ ೧೯೭೮ರ ಏಪ್ರಿಲ್‌ನಲ್ಲಿ ವಿಶೇಷ ಸಮಿತಿಯೊಂದನ್ನು ರಚಿಸಲಾಯಿತು. ಆದರೆ ಅದು ಕಾರ್ಯ ಪ್ರಾರಂಭಿಸಲೇ ಇಲ್ಲ ಆ ಬಗ್ಗೆ ಯಾವುದೇ ಪ್ರಚಾರವನ್ನೂ ಮಾಡಲಿಲ್ಲ. ಅದು ಅಸ್ತಿತ್ವದಲ್ಲಿದೆಯೋ ಇಲ್ಲವೋ ಯಾರಿಗೂ ತಿಳಿದಿಲ್ಲ. ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸಾಚಾರ ದೌರ್ಜನ್ಯವನ್ನು ತಡೆಗಟ್ಟುವಲ್ಲಿ ಅಧಿಕಾರದಲ್ಲಿದ್ದವರು ಎಷ್ಟರ ಮಟ್ಟಿಗೆ ಆಸಕ್ತಿ ತಳೆದಿದ್ದಾರೆಂಬುದು ಇದರಿಂದ ಸ್ಪಷ್ಟವಾಗುವುದಿಲ್ಲವೆ?

ಇನ್ನು, ವರದಕ್ಷಿಣೆ ಸಮಸ್ಯೆಯಂತೂ ತೆರೆಮರೆಯ ಕ್ರೂರ ನಾಟಕವಾಗಿಬಿಟ್ಟಿದೆ. ಇದರ ಪರಿಣಾಮವಾಗಿ ಉಂಟಾಗುವ ಸಾವು ನೋವುಗಳಿಗೆ ಲೆಕ್ಕವಿಲ್ಲ. ಹೆಂಡತಿಯರನ್ನು ಸುಡುವ ಪ್ರಕರಣಗಳು ಎಷ್ಟೊಂದು ನಡೆದಿವೆಯೆಂದರೆ ಒಂದೊಂದು ಘಟನೆಯೂ ಎಂಥವರನ್ನೂ ತಲ್ಲಣಗೊಳಿಸುವಂಥದು. ದಿಲ್ಲಿಯೊಂದರಲ್ಲಿಯೇ ಸರಾಸರಿ ದಿನಕ್ಕೊಂದು ಸಾವು ಎಂಬಂತೆ ಇಂಥ ದುರ್ಘಟನೆಗಳು ಜರುಗುತ್ತಿವೆ.

೧೮೨೯ರಷ್ಟು ಹಿಂದೆಯೇ "ಸತಿ ಹೋಗುವ" ಕೆಟ್ಟ ಪದ್ಧತಿಯನ್ನು ಕಾನೂನು ಬಾಹಿರವೆಂದು ಘೋಷಿಸಿದ್ದರೂ ಸಹಗಮನ ಮಾಡಿದ ಮಹಿಳೆಯರ ಬಗ್ಗೆ ಅನೇಕ ಸಂಗತಿಗಳು ಇಂದಿಗೂ ವರದಿಯಾಗುತ್ತಿವೆ. ೧೯೮೦ ರ ಫೆಬ್ರುವರಿಯಲ್ಲಿ ನಾಗಪುರ ಜಿಲ್ಲೆಯ ನೀಂದಿ ಕೊರಾಡಿಯ ತಾಲೂಕಿನ ಸುಗನ ಕನ್ನಾಲ ಎಂಬಾಕೆ ತನ್ನ ಗಂಡನ ಚಿತೆಯಲ್ಲಿ




"ಭಾರೀ ಮೇಜರ್ ಆಪರೇಷನ್ ಇದೇಂತ ಕಾಣುತ್ತೆ ಇವತ್ತು."

ತಾನೂ ಉರಿದು ಬೂದಿಯಾದಳು. ಅದೇ ರೀತಿ ಇನ್ನೊಂದು ಘಟನೆ. ಮಂತ್ರಘೋಷಣೆ ಮೊಳಗುತಿತ್ತು, ಇಡೀ ಗ್ರಾಮದ ಜನ ಸುತ್ತ ನೆರೆದು ಕುತೂಹಲದಿಂದ ನೋಡುತ್ತಿದ್ದರು. ಶಹಾಪುರ ಜಿಲ್ಲೆಯ ಸರಸ್ವತಿದೇವಿ ಪುರೋಹಿತರು ಗಟ್ಟಿಯಾಗಿ ಹೇಳುತ್ತಿದ್ದ ಆ ವೇದ ಮಂತ್ರಗಳ ನಡುವೆಯೇ ತನ್ನ ಗಂಡನ ಚಿತೆಯೇರಿ ತಾನೂ ಸತ್ತುಹೋದಳು. ಒಂದು ವೇಳೆ ಮೇಲಿನೆರಡು ಘಟನೆಗಳು ಬಲಾತ್ಕಾರದ ಪ್ರಕರಣಗಳೇ ಆಗಿದ್ದರೂ ಈಗಂತೂ ಅವು ಸ್ವಯಿಚ್ಛೆಯಿಂದ ನಡೆದವೆಂದು ಪ್ರಚಾರವಾಗಿದೆ ಎಷ್ಟು ಜನ ಆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ ಹೇಳಿ.

ಮಹಿಳೆಯ ಸಂಕಷ್ಟಗಳನ್ನು ಕಂಡು ಅರ್ಥ ಮಾಡಿಕೊಂಡಿರುವ ಮಹಿಳೆಯೊಬ್ಬರು ಈಗ ಭಾರತದ ಪ್ರಧಾನಿಯಾಗಿದ್ದಾರೆ. ೧೯೮೦ರ ಏಪ್ರಿಲ್ ೨೬ ರಂದು ಅಖಿಲ ಭಾರತ ಮಹಿಳಾ ಸಮ್ಮೇಲನದ ಸಂದರ್ಭದಲ್ಲಿ ಸರೋಜಿನಿ ಭವನವನ್ನು ಉದ್ಘಾಟಿಸುತ್ತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು "ನನಗೆ ಅತ್ಯಂತ ಕಳಕಳಿ ಇರುವ ದುರ್ಬಲ ವರ್ಗಗಳ ಪೈಕಿ ಇತಿಹಾಸ ಪ್ರಾರಂಭದಿಂದಲೂ ಇಂದೂ ಮುಂದೂ ದಬ್ಬಾಳಿಕೆಗೆ ತುತ್ತಾಗಿರುವ ತುತ್ತಾಗುತ್ತಿರುವ ತುತ್ತಾಗಲಿರುವ ಪುರುಷರ ಅಲಕ್ಷ್ಯಕ್ಕೆ ಈಡಾಗಿರುವ ಮಹಿಳೆಯನ್ನು ನಾನು ಹೇಗೆ ತಾನೆ ದೂರವಿಡಲಿ!" ಎಂದು ಉದ್ಗಾರವೆತ್ತಿದರು. ಮಹಿಳೆಯ ಅಪಾರ ನೋವಿಗೆ ಅವರು ಅತ್ಯವಶ್ಯವಾದ ಪರಿಹಾರ ಒದಗಿಸಬಲ್ಲರೆ?

ಈಗ ಮಹಿಳೆ ಪುರುಷರ ಕನಿಕರ ಯಾಚಿಸುವುದಿಲ್ಲ. "ಸನ್ಮಾನ ಮಾಡದಿದ್ದರೆ ಬೇಡ, ಮಾನವಾಗಿರಲು ಬಿಡಿ" ಎಂದು ಎಚ್ಚೆತ್ತ ಮಹಿಳೆಯೀಗ ಸಿಡಿದು ಹೇಳುತ್ತಿದ್ದಾಳೆ. ಸ್ವಾತಂತ್ರ್ಯ ಸಮಾನತೆಗಳು ಆಕೆಯ ಮೂಲಭೂತ ಹಕ್ಕುಗಳು. ಪುರುಷರು ಆ ಹಕ್ಕುಗಳನ್ನೇ ಕಸಿದುಕೊಳ್ಳಬಯಸಿದರೆ ಆಕೆ ಅದಕ್ಕಾಗಿ ಏನನ್ನಾದರೂ ಎದುರಿಸಿ ಶಕ್ತಿ ಮೀರಿ ಹೋರಾಡುತ್ತಾಳೆ, ಕೊನೆತನಕ. ಮಹಿಳೆಯ ವಿನಾಶದಿಂದ ಯಾವ ಸಮಾಜಕ್ಕೆ ಯಾವ ದೇಶಕ್ಕೆ ಕಲ್ಯಾಣವುಂಟಾದೀತು? ಆದರೆ, ಇದನ್ನು ಅರಿತು ನಡೆಯಬೇಕಾದವರು ಯಾರು? ❁



ರಸ್ತೆ ರಿಪೇರಿ ಕೈಗೊಂಡಿದ್ದ ಕಂಟ್ರಾಕ್ಟರೊಬ್ಬನಲ್ಲಿ ಕೆಲಸಮಾಡಲು ಅರ್ಜಿ ಹಾಕಿಕೊಂಡ ಹದಿನೇಳು ವರ್ಷದ ಹುಡುಗನೊಬ್ಬ. ಆ ಹುಡುಗನ ನರಪೇತಲ ಹುಟ್ಟನ್ನು ನೋಡಿದ ಆ ಕಂಟ್ರಾಕ್ಟರ್, ಅಲ್ಲಿದ್ದ ತನ್ನ ಹುಲಿಗಳಂತಿದ್ದ ಆಳುಗಳನ್ನು ತೋರಿಸಿ, "ಲೋ ಇವರು ಮಾಡಬಲ್ಲಷ್ಟು ಕೆಲಸ ಮಾಡುತ್ತೀಯೇನೊ ನೀನು?" ಎಂದು ಕೇಳಿದ.


"ಅವರು ಮಾಡಬಲ್ಲಷ್ಟು ಮಾಡಲಾರೆ ಸ್ವಾಮಿ. ಆದರೆ ಅವರು ಮಾಡುತ್ತಿರುವಷ್ಟು ಮಾಡುತ್ತೇನೆ" ಎಂದ ದೇಹ ಪೀಚಾಗಿದ್ದರೂ ಬುದ್ಧಿ ಮೊನಚಾಗಿದ್ದ ಹುಡುಗ.

೦ ೦ ೦ ೦

ಸರ್ ವಿಲಿಯಮ್ ಆಸ್ಲರ್ ಅವರನ್ನು ಯಾರೋ ಒಮ್ಮೆ, "ಕುಡಿದಾಗ ಕೆಲಸಗಳನ್ನು ಚೆನ್ನಾಗಿ ಮಾಡಲು ಸ್ಫೂರ್ತಿ ದೊರೆಯುತ್ತದಂತೆ ಹೌದೆ?" ಎಂದು ಪ್ರಶ್ನಿಸಿದರು.

"ಹಾಗೇನೂ ಇಲ್ಲ, ಅವರು ತಪ್ಪುಗಳನ್ನು ಮಾಡುವಾಗ ಒಂದಿಷ್ಟೂ ನಾಚಿಕೆಇಲ್ಲದೆ ಮಾಡುವಂತೆ ಪ್ರೇರೇಪಣೆ ಮಾಡುತ್ತದೆ ಅಷ್ಟೆ," ಎಂದರು ಆಸ್ಲರ್.

ಸಂಗ್ರಹ: ಎಂ. ಕೆ. ಬದರೀನಾಥ



M. K. Publicity

ಬರಲಿದೆ ಭೂಮಿಯ ಅಂತ್ಯ?

ಜಿ. ಟಿ. ನಾರಾಯಣರಾವ್

೧೯೮೨ನೆಯ ಇಸವಿಯಲ್ಲಿ ಗುರುಪರಿಣಾಮದಿಂದಾಗಿ (Jupiter effect) ಭೂಮಿ ಒಡೆದು ನುಚ್ಚುನುರಿ ಆಗಲಿದೆಯೆಂದು ವಿಜ್ಞಾನಿಗಳು ಮುನ್ನುಡಿದಿದ್ದಾರೆ. ಇದು ನಿಜವೇ ?

ದಹಿನೇಸಜ್


ಎನ್‌ಸಿಸಿ ಅಥವಾ ಸೇನಾ ಶಿಕ್ಷಣ ಪಡೆದವರಿಗೆ ದಹಿನೇಸಜ್ ಎನ್ನುವ ಹುಕುಮಿನ ಅರ್ಥ ಚೆನ್ನಾಗಿ ತಿಳಿದಿರುತ್ತದೆ: ಮುಂದಾಳುವಿನ ಬಲ ಪಕ್ಕದಲ್ಲಿ ಸಾಲಾಗಿ ನಿಲ್ಲಿ. ಸೌರವ್ಯೂಹದಲ್ಲಿ ಸೂರ್ಯ ಮುಂದಾಳು, ನವಗ್ರಹಗಳು ಹಿಂಬಾಲಕರು, (ಯಾದಿ–೧ನ್ನು ನೋಡಿ). ಇವು ಸೂರ್ಯನಿಂದ ಬೇರೆ ಬೇರೆ ದೂರಗಳಲ್ಲಿ ಬೇರೆ ಬೇರೆ ಕಕ್ಷಾವೇಗಗಳಿಂದ ಸೂರ್ಯನನ್ನು ಒಂದೇ ದಿಶೆಯಲ್ಲಿ (ಭಕ್ತರು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕುವಂತೆ) ಪರಿಭ್ರಮಿಸುತ್ತಿವೆ. ಯಾವುದೋ ಒಂದು ಕ್ಷಣದಲ್ಲಿ ಒಬ್ಬ ದಂಡನಾಯಕ ಸೌರವ್ಯೂಹಕ್ಕೆ ಲಂಬವಾಗಿ ಅತಿ ದೂರ ಸಾಗಿ ಇದನ್ನು ಗಮನಿಸಿದ್ದಾದರೆ ಅವನಿಗೆ ಕಾಣುವ ದೃಶ್ಯವೇನು? ನಡುವಿನಲ್ಲೊಂದು ಬೆಳಕಿನ ಬಿಲ್ಲೆ. ಅದರ ಸುತ್ತ ಚೆಲ್ಲಾಪಿಲ್ಲಿ ಹರಡಿ ಹೋಗಿರುವ ಚುಕ್ಕಿಗಳು. ಈ ಅವ್ಯವಸ್ಥೆಯನ್ನು ನೋಡಲಾಗದೆ ದಹೀನೇಸಜ್ ಹುಕುಮನ್ನು ಚಲಾಯಿಸಿಬಿಡುತ್ತಾನೆಂದು ಭಾವಿಸೋಣ. ಒಡನೆ ಕರಿ ಚುಕ್ಕಿಗಳು ಅತಿ ವಿಧೇಯವಾಗಿ ಬೆಳಕಿನ ಬಿಲ್ಲೆಯ ಬಲ ಪಕ್ಕದಲ್ಲಿ ಸಾಲಾಗಿ ಬಂದು ನಿಂತುಬಿಡುತ್ತವೆ!

ಇಂಥ ಒಂದು ವಿಶೇಷವೂ ಅತ್ಯಪೂರ್ವವೂ ಆಗಿರುವ ಪರಿಸ್ಥಿತಿ ೧೯೮೨ರ ಲ್ಲಿ ತಲೆದೋರಲಿದೆ ಎನ್ನುತ್ತಾರೆ ಡಾ. ಜಾನ್ ಗ್ರಿಬ್ಬಿನ್ ಮತ್ತು ಡಾ. ಸ್ಟೀಫನ್ ಪ್ಲ್ಯಾಜೆಮನ್ ಎನ್ನುವ ಇಬ್ಬರು ಖಭೌತ ವಿಜ್ಞಾನಿಗಳು (astrophysicists). ಗ್ರಿಬ್ಬಿನ್ New Scientist ಎನ್ನುವ ಪ್ರಸಿದ್ಧ ವಿಜ್ಞಾನ ಪತ್ರಿಕೆಗೆ ಭೌತವಿಜ್ಞಾನ ಸಲಹೆಗಾರ ಮತ್ತು ಇಂಗ್ಲೆಂಡಿನ ಸಸೆಕ್ಸ್ ವಿಶ್ವವಿದ್ಯಾಲಯದಲ್ಲಿ ಸಂಶೋಧಕ. ಪ್ಲ್ಯಾಜೆಮನ್ ಅಮೇರಿಕದ National Aeronautics and Space Administration (ಸಂಕ್ಷೇಪವಾಗಿ NASA *) ಎಂಬ ಪ್ರತಿಷ್ಠಿತ ಸಂಸ್ಥೆಯಲ್ಲಿ ವಿಜ್ಞಾನಿ ಆಗಿದ್ದು ಮುಂದೆ ಐರ್ಲೆಂಡಿನ ಡನ್ಸಿಂಕ್ ವೇಧಶಾಲೆಯನ್ನು ಪ್ರಾಯೋಗಿಕ ವಿಜ್ಞಾನಿಯಾಗಿ ಸೇರಿಕೊಂಡ ವ್ಯಕ್ತಿ.

ಗುರುಪರಿಣಾಮ

ಹೀಗೆ ಜ್ಞಾನ ಮತ್ತು ಅಂತಸ್ತು ಎರಡರಲ್ಲಿಯೂ ಹಿರಿಮೆ ಗಳಿಸಿದ ಗ್ರಿಬ್ಬಿನ್ ಮತ್ತು ಪ್ಲ್ಯಾಜೆಮನ್ ೧೯೭೪ರಲ್ಲಿ *Jupiter Effect* (ಗುರು ಪರಿಣಾಮ) ಎಂಬ ಹೆಸರಿನ ಜನಪ್ರಿಯ ವಿಜ್ಞಾನಗ್ರಂಥವೊಂದನ್ನು ಪ್ರಕಟಿಸಿದರು. ಇದರ ಪ್ರಕಾರ ೧೯೮೨ರಲ್ಲಿ ಸಂಭವಿಸಲಿರುವ ದಹಿನೇಸಜ್ ಸ್ಥಿತಿಯಲ್ಲಿ ನವಗ್ರಹಗಳು ಸೂರ್ಯನ

*** ಮಾನವನನ್ನು ಚಂದ್ರನಲ್ಲಿ ಇಳಿಸಿ ಹಿಂದೆ ಕರೆಸಿಕೊಂಡ ಯೋಜನೆಯನ್ನು ಏರ್ಪಡಿಸಿದ ಸಂಸ್ಥೆ; ಅಮೇರಿಕದ ಆಕಾಶಯೋಜನೆಗಳನ್ನು ನಿರ್ವಹಿಸುತ್ತಿರುವ ವ್ಯವಸ್ಥಾಪನೆ.**



ಒಂದೇ ಮಗ್ಗುಲಿಗೆ ಸರಿಸುಮಾರಾಗಿ ಒಂದೇ ಗೆರೆಯ ಮೇಲೆ ಬರಲಿವೆ. ಆಗ ಆಗಸದಲ್ಲಿ ಎರಡು ತಂಡಗಳ ನಡುವೆ ಹಗ್ಗ ಜಗ್ಗಾಟ (tug-of-war) ಜರಗಲಿದೆ. ಒಂದು ತಂಡದ ಸದಸ್ಯ ಸೂರ್ಯ ಮಾತ್ರ. ಇನ್ನೊಂದರ ಸದಸ್ಯರು ನವ ಗ್ರಹಗಳು. ಸೂರ್ಯನ ಪ್ರಚಂಡ ಗುರುತ್ವಬಲ ಎಲ್ಲ ಗ್ರಹಗಳನ್ನೂ ಸೂರ್ಯನತ್ತ ಸೆಳೆದರೆ ನವಗ್ರಹಗಳ ಸಂಯುಕ್ತ ಗುರುತ್ವಬಲ ಸೂರ್ಯನನ್ನು ಅವುಗಳತ್ತ ಸೆಳೆಯುತ್ತದೆ.

ಎರಡು ಕಾಯಗಳ ನಡುವೆ ವರ್ತಿಸುವ ಗುರುತ್ವಬಲವನ್ನು ನ್ಯೂಟನ್ನನ ಸುಪ್ರಸಿದ್ಧ ಪ್ರತಿಲೋಮ ವರ್ಗ ನಿಯಮದಿಂದ ಗಣಿಸಬಹುದು: GMM^1/R^2 "ಇಲ್ಲಿ G ಎಂಬುದೊಂದು ಸ್ಥಿರಾಂಕ. ಅಂದರೆ ಕಾಯಗಳು ಯಾವುದೇ ಆಗಿದ್ದರೂ ಎಲ್ಲಿಯೇ ಇದ್ದರೂ Gಯ ಬೆಲೆ ಮಾತ್ರ ಒಂದೇ ಆಗಿರುತ್ತದೆ. M ಮತ್ತು M^1 ಕಾಯಗಳ ಪಿಂಡರಾಶಿಗಳು. R ಅವುಗಳ ನಡುವಿನ ಅಂತರ. ಕಾಯಗಳ ರಾಶಿಗಳು ಜಾಸ್ತಿ

ಯಾದಿ-೧

ನವಗ್ರಹಗಳು	ಸೂರ್ಯ-ಗ್ರಹ ಸರಾಸರಿ ಅಂತರ, ಖಗೋಳ ಮಾನಗಳು	ಪರಿಭ್ರಮಣಾವಧಿ (ವರ್ಷಗಳು)	ಕಕ್ಷಾವೇಗ (ಸೆಕೆಂಡಿಗೆ ಕಿಲೊಮೀಟರುಗಳು)	ಭೂಕಕ್ಷೆಯ ಸಮತಲಕ್ಕೆ ಬಾಗು (ಡಿಗ್ರಿಗಳು)	ರಾಶಿ (ಭೂರಾಶಿ = ೧
ಬುಧ	೦.೩೮೭	೦.೨೪೧	೪೭.೯	೭	೦.೦೫೫
ಶುಕ್ರ	೦.೭೨೩	೦.೬೧೫	೩೫	೩.೪	೦.೮೧೫
ಭೂಮಿ	೧	೧	೨೯.೮	೦	೧
ಮಂಗಳ	೧.೫೨೪	೧.೮೮೧	೨೪.೧	೧.೯	೦.೧೦೮
ಗುರು	೫.೨೦೩	೧೧.೮೬	೧೩.೧	೧.೩	೩೧೭.೯
ಶನಿ	೯.೫೩೯	೨೯.೪೬	೯.೬	೨.೫	೯೫.೨
ಯುರೇನಸ್	೧೯.೧೮	೮೪.೦೧	೬.೮	೦.೮	೧೪.೬
ನೆಪ್ಚ್ಯೂನ್	೩೦.೦೬	೧೬೪.೮	೫.೪	೧.೮	೧೭.೨
ಪ್ಲೂಟೋ	೩೯.೪೪	೨೪೭.೭	೪.೭	೧೭.೨	ಅಖಚಿತ

ಖಗೋಳಮಾನ = ಸೂರ್ಯ-ಭೂಮಿ ಸರಾಸರಿ ಅಂತರ = ೧೪,೯೬,೦೦,೦೦೦ ಕಿಮೀ

ವರ್ಷ = ಸೂರ್ಯನನ್ನು ಒಮ್ಮೆ ಪರಿಭ್ರಮಿಸಲು ಭೂಮಿ ತೆಗೆದುಕೊಳ್ಳುವ ಅವಧಿ

ಕಕ್ಷಾವೇಗ = ಗ್ರಹಕ್ಕೆ ನಿಗದಿಯಾದ ಕಕ್ಷೆಯ (ಸೂರ್ಯನ ಸುತ್ತ ಸಾಗುವ ಪಥ) ಮೇಲೆ ಅದು ಸಾಗುವ ವೇಗ

ಬಾಗು = ಭೂಕಕ್ಷೆಯ ಸಮತಲಕ್ಕೂ (plane) ಗ್ರಹಕಕ್ಷೆಯ ಸಮತಲಕ್ಕೂ ನಡುವೆ ಇರುವ ಕೋನ

ರಾಶಿ = ದ್ರವ್ಯರಾಶಿ (mass) ; ಗ್ರಹದಲ್ಲಿ ಎಷ್ಟು ದ್ರವ್ಯ (matter) ಒಟ್ಟಯಿಸಿದೆ ಎಂಬುದನ್ನು ಅಳೆಯುವ ಮಾನಕ

ಭೂರಾಶಿ = ೫,೯೭೭,೦೦೦,೦೦೦,೦೦೦,೦೦೦,೦೦೦ ಮೆಟ್ರಿಕ್ ಟನ್ನುಗಳು


ಇರುವಾಗ ಅಥವಾ ಅವುಗಳ ನಡುವಿನ ಅಂತರ ಕಮ್ಮಿ ಇರುವಾಗ, ಅಥವಾ ಎರಡೂ ಆಗಿರುವಾಗ ಅವುಗಳ ನಡುವೆ ವರ್ತಿಸುವ ಗುರುತ್ವ ಬಲ ಜಾಸ್ತಿ ಆಗಿರುತ್ತದೆ. ರಾಶಿಗಳು ಕಮ್ಮಿ ಇರುವಾಗ ಅಥವಾ ಅವುಗಳ ನಡುವಿನ ಅಂತರ ಜಾಸ್ತಿ ಇರುವಾಗ ಅಥವಾ ಎರಡೂ ಆಗಿರುವಾಗ ಈ ಗುರುತ್ವಬಲ ಕಮ್ಮಿ ಆಗಿರುತ್ತದೆ. ಇಲ್ಲಾದರೂ ರಾಶಿಗಳ ಕೊಡುಗೆಗಿಂತ ಅಂತರದ ಕೊಡುಗೆಯದೇ ಮೇಲುಗೈ. ಈ ಕಾರಣದಿಂದಲೇ ಅನಂತಾಲ್ಪ ರಾಶಿಯ ಗ್ರಹಗಳು ಮಹಾರಾಶಿಯ ಸೂರ್ಯನಿಂದ ಆಪೋಶಿಲ್ಪಡದೆ ಅದರ ಸುತ್ತ ಪರಿಭ್ರಮಿಸುತ್ತಿರುವುದಾಗಿದೆ. ಸೂರ್ಯ-ನವಗ್ರಹ ರಾಶಿ ವಿತರಣೆಯನ್ನು ಯಾದಿ-೨ರಲ್ಲಿ ಕೊಟ್ಟಿದೆ.

ಸಮಸ್ತ ಗ್ರಹಗಳ ಸಮಗ್ರ ರಾಶಿ ಸೂರ್ಯ ರಾಶಿಯ ಶೇಕಡಾ ೦.೧೩೪೫೦೮ ಎಂಬ ಅನಂತಾಲ್ಪ ಸಂಖ್ಯೆ ಎಂದು ಇದರ ಅರ್ಥ. ಸೂರ್ಯ ಗೋಳದಲ್ಲಿ ಹತ್ತು ಲಕ್ಷ ಭೂಮಿಗಳನ್ನು ಇಲ್ಲವೇ ಒಂದು ಸಾವಿರ ಗುರುಗಳನ್ನು ತುಂಬ ಬಹುದು. ಗ್ರಹಗಳಿಗೆ ಸಾಪೇಕ್ಷವಾಗಿ ಸೂರ್ಯ ಇಂಥ ಅತಿಕಾಯನಾದರೆ ಸೂರ್ಯನಿಂದ ಗ್ರಹ ದೂರಗಳು ಬೃಹತ್ಸಂಖ್ಯೆಗಳು ಎಂಬುದನ್ನೂ

ಯಾದಿ-೨

ಗ್ರಹ		ಅದರ ರಾಶಿ (ಸೂರ್ಯರಾಶಿ = ೧ ಏಕಮಾನ)
ಬುಧ	...	0.000000೧೭
ಶುಕ್ರ	...	0.00000೨೪೫
ಭೂಮಿ	...	0.00000೩೦೪
ಮಂಗಳ	...	0.000000೩೨
ಗುರು	...	0.000೯೫೪೭
ಶನಿ	...	0.000೨೮೫೯
ಯುರೇನಸ್	...	0.0000೪೩೭
ನೆಪ್ಚೂನ್	...	0.0000೫೨೪
ಪ್ಲೂಟೋ	...	0.00000೨೫ (?)
ಜುಮ್ಲ	...	0.00೧೩೪೫೦೮

ನೆನಪಿನಲ್ಲಿಡಬೇಕು. ಉದಾಹರಣೆಗೆ ಸೂರ್ಯನಿಗೆ ಅತಿ ಸಮೀಪದಲ್ಲಿರುವ ಗ್ರಹ ಬುಧ; ಸೂರ್ಯನಿಂದ ಅತಿದೂರದಲ್ಲಿರುವ ಗ್ರಹ ಪ್ಲೂಟೋ. ಸೂರ್ಯ-ಬುಧ ಸರಾಸರಿ ಅಂತರ ೫ಕೋಟಿ ೭೯ಲಕ್ಷ ಕಿಲೊಮೀಟರ್; ಸೂರ್ಯ-ಪ್ಲೂಟೋ ಸರಾಸರಿ ಅಂತರ ೫೯೦ ಕೋಟಿ ಕಿಲೊಮೀಟರ್. ಇವೆಲ್ಲ



ಅಂಕಿ ಅಂಶಗಳ ದೊಂಬರಾಟದ ಅರ್ಥವಿಷ್ಟೇ: ೧೯೮೨ರಲ್ಲಿ ಸಂಭವಿಸಲಿರುವ ವಿಗೋಳೀಯ ಹಗ್ಗ ಜಗ್ಗಾಟ ಅಸಮಬಲರ, ಆದರೆ ಅತಿದೂರ ಕಾಯರ ನಡುವಿನ ಹೋರಾಟ ಮಾತ್ರ. ಇದರಿಂದ ಸೂರ್ಯನ ಮೇಲೆ, ಒಟ್ಟು ಸೌರವ್ಯೂಹದ ಹಿನ್ನೆಲೆಯಲ್ಲಿ, ಗಮನಾರ್ಹ ಪರಿಣಾಮವೇನೂ ಆಗದು.

ಸೂರ್ಯ ಮತ್ತು ಗ್ರಹಗಳನ್ನು ನಿರಪೇಕ್ಷವಾಗಿ ಪರಿಶೀಲಿಸಿದಾಗ ಇದೇನೋ ಸರಿ. ಆದರೆ ಇಲ್ಲೊಂದು ಸೂಕ್ಷ್ಮ ವಿಚಾರವನ್ನು ಕಡೆಗಣಿಸುವಂತಿಲ್ಲ ಎನ್ನುತ್ತಾರೆ *Jupiter Effect* ಪುಸ್ತಕದ ಲೇಖಕರು. ಭೂರಾಶಿ ಸೂರ್ಯರಾಶಿಯ ಶೇಕಡಾ ೦.೦೦೦೩೦೪; ಗುರುವಿನದಾದರೋ ೦.೦೯೫೪೭; ಶನಿ, ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳ ಸಂಯುಕ್ತ ರಾಶಿ ೦.೦೩೮೯. ಅಂದರೆ ಗುರುರಾಶಿ ಭೂರಾಶಿಯ ೩೧೮ ಮಡಿ ದೊಡ್ಡದಾದರೆ ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳ ಒಟ್ಟು ರಾಶಿ ಭೂರಾಶಿಯ ೪೪೫ ಮಡಿ ಮಾತ್ರ ದೊಡ್ಡದು. ಆದ್ದರಿಂದ ಗುರು ನಿಜಕ್ಕೂ ಗುರುವೇ – ಭೂಮಿಯನ್ನು ಕುರಿತಂತೆ. ಆದ್ದರಿಂದ ೧೯೮೨ರಲ್ಲಿ ಸಂಭವಿಸಲಿರುವ ವಹಿಸೇಸಜ್ ಸನ್ನಿವೇಶ ಭೂಮಿಗೆ ಎರಡು ಬಗೆಯ ಗಂಡಾಂತರಗಳನ್ನು ಎದುರೊಡ್ಡಲಿದೆ, ಇವುಗಳಿಂದ ಅದು ಪಾರಾಗಿ ಹೊರಬರಲಾರದು ಎಂಬುದು *Jupiter Effect* ಗ್ರಂಥಕರ್ತರ ಭವಿಷ್ಯವಾಣಿ.


ಮೊದಲನೆಯದಾಗಿ, ಆಗ ನವಗ್ರಹಗಳ ಸಂಯುಕ್ತ ಗುರುತ್ವ ಬಲ ಸೂರ್ಯನ ಮೇಲೆ ಪಾತವಾಗಲಿದೆ. ಇದರ ಫಲವಾಗಿ ಸೂರ್ಯನಲ್ಲಿ ಭೀಕರ ಅಗ್ನಿಜ್ವಾಲೆಗಳು ಅಥವಾ ಉದ್ರೇಕಗಳು ಈ ಗ್ರಹಗಳ ದಿಶೆಯಲ್ಲಿ ಹೊರಚಾಚಿ ಪರಮಾಣವಿಕ ಕಣಗಳ ಅಗ್ನಿಧಾರೆಗಳೇ ಪ್ರವಹಿಸಲಿವೆ. ಇವುಗಳ ಪೈಕಿ ಕೆಲವಾದರೂ ಭೂಮಿಯನ್ನು ತಲಪಿ ಇದರ ವಾಯುಮಂಡಲದಲ್ಲಿ ತೀವ್ರ ಸಂಕ್ಷೋಭೆಯನ್ನೂ ಆವರ್ತನೆಯಲ್ಲಿ– ಅಂದರೆ ಭೂಮಿಯ ಬುಗುರಿ ತಿರುಗುವಿಕೆ ಚಲನೆಯಲ್ಲಿ–ಹಠಾತ್ ವ್ಯತ್ಯಾಸವನ್ನೂ ಉಂಟುಮಾಡಲಿದೆ. ತತ್ಫಲವಾಗಿ ಹವೆಯಲ್ಲಿ ಕಡು ಪರಿಳಿತವೂ ಹಗಲಿರುಳುಗಳ ಮುನ್ನಡೆಯಲ್ಲಿ ಲಯದೋಷವೂ ತಲೆದೋರಿ ಜನಜೀವನ ಅಸ್ತವ್ಯಸ್ತವಾಗಲಿದೆ: ಗಗನಚುಂಬಿ ಸೌಧಗಳು ದೈತ್ಯ ಅಣೆಕಟ್ಟುಗಳು, ಬೃಹದ್ಯಂತ್ರ ಸ್ಥಾವರಗಳು ಮುಂತಾದವು ಕುಸಿದು ಕುಕ್ಕರಿಸಿ ಜನಕೋಟಿಯ ಮೇಲೆ ಊಹಾತೀತ ಸಂಕಷ್ಟ ಕೆಡೆಯಲಿದೆ.

ಎರಡನೆಯದಾಗಿ, ೧೯೮೨ ರಲ್ಲಿ ನೆಪ್ಚೂನ್, ಯುರೇನಸ್, ಶನಿ ಮತ್ತು ಗುರು ಎಂಬ ದೈತ್ಯ-ಗ್ರಹಗಳ ಸಂಯುಕ್ತ ಗುರುತ್ವ ಬಲ, ಅಲ್ಲಿಯೂ ವಿಶೇಷವಾಗಿ ಮಹಾ ದೈತ್ಯಗ್ರಹ ಗುರುವಿನ ಗುರುತ್ವ ಬಲ, ಭೂಮಿಯ ಮೇಲೆ ಪಾತವಾಗಲಿದೆ. ಭೂಮಿಯನ್ನು ಕುರಿತಂತೆ ಈ ಗುರು ಪರಿಣಾಮ ಪ್ರಳಯಾಂತಕವಾಗದಿರದು. ವಾಯುಮಂಡಲವೂ ಸಾಗರರಾಶಿಯೂ ಅತಿ ತೀವ್ರ ಗತಿಯ ಮಂಥನಕ್ಕೆ ಈಡಾಗಿ ನೆಲಭಾಗ ಪ್ಲಾವಿಸಿ ಹೋಗಬಹುದು ಅಥವಾ ಕೊಚ್ಚಿ ಹೋಗಬಹುದು. ಒಂದಿಗೇ ಭೂಕಂಪನಗಳು ಸಂಭವಿಸಿ ಇಡೀ ಭೂಮಿ ಹೋಳುಗಳಾಗಿ ಒಡೆದು, ಇವು ಅಸಂಖ್ಯಾತ ಸೀಳುಗಳಾಗಿ ಸಿಡಿದು, ಭೂಮಿ ಇದ್ದ ಸ್ಥಳದಿಂದ ಕ್ಷುದ್ರ ಕಾಯಗಳ ಹೊನಲು ಹರಿಯತೊಡಗಬಹುದು.

ಗುರುಪರಿಣಾಮ ಸಾಧುವೇ?

ನಾಳೆ ಅಲ್ಲ ನಾಡಿದ್ದು, ಅಂದರೆ ೧೯೮೨ರಲ್ಲಿ, ಸಂಭವಿಸಲಿರುವ ಈ ಆಕಾಶದುರಂತ ಮತ್ತು ಇದರಿಂದ ನಮಗೆ ಒದಗಲಿರುವ ಆಕಾಶ ಸಮಾಧಿ ಸಹಜವಾಗಿ ವಿಜ್ಞಾನಿಗಳಲ್ಲಿಯೂ ಶ್ರೀಸಾಮಾನ್ಯರಲ್ಲಿಯೂ ತೀವ್ರ ಕಳವಳಕ್ಕೆ ಕಾರಣವಾಗಿದೆ. ಎಂದೇ ಇತರ ವಿಜ್ಞಾನಿಗಳು *Jupiter Effect* ಗ್ರಂಥಕರ್ತರ ಆಧಾರಭಾವನೆ, ಗಣಿತಗಣನೆ ಮತ್ತು ತಜ್ಜನಿತ ತೀರ್ಮಾನಗಳನ್ನು ತೀಕ್ಷ್ಣ ತಪಾಸಣೆಗೆ ಒಳಪಡಿಸಿದ್ದಾರೆ. ಅವೇನೆಂಬುದನ್ನು ಮುಂದಿನ ಆರು ಹಂತಗಳಲ್ಲಿ ಪರಿಶೀಲಿಸೋಣ.

ಒಂದನೆಯದಾಗಿ, ನವಗ್ರಹಗಳು ಎಂದೂ ಒಂದು ಗೆರೆಯ ಮೇಲೆ ಬರಲಾರವು, ಅಂದರೆ



ಅವೆಂದೂ ಏಕರೇಖಸ್ಥವಾಗವು. ಏಕೆಂದರೆ ಸೂರ್ಯನನ್ನು ಪರಿಭ್ರಮಿಸುತ್ತಿರುವ ಗ್ರಹಗಳ ಕಕ್ಷಾತಲಗಳು ಪರಸ್ಪರ ಬಾಗಿಕೊಂಡಿವೆ. ಉದಾಹರಣೆಗೆ ಭೂಮಿಯ ಕಕ್ಷಾತಲಕ್ಕೆ ಗುರುವಿನ ಕಕ್ಷಾತಲದ ಬಾಗು ೧.೩, ಶನಿಯದು ೨.೫, ಯುರೇನಸ್ಸಿನದು ೦.೮ ಮತ್ತು ನೆಪ್ಚೂನಿನದು ೧.೮ (ಯಾದಿ–೧ನ್ನು ನೋಡಿ) ಆದ್ದರಿಂದ ೧೯೮೨ರ ಆ ದುಷ್ಟ ಮತ್ತು ಕ್ರೂರ ಮುಹೂರ್ತದಲ್ಲಿ ನವಗ್ರಹಗಳು, ಸೂರ್ಯನಿಂದ ಹೊರಚಾಚಿಕೊಂಡಿರುವ ಅಂಕುಡೊಂಕು ರೇಖೆಯ ಮೇಲೆ ಅಥವಾ ಸೂರ್ಯಗುಂಬದಿಂದ ಒಂದೇ ದಿಶೆಗೆ — ಆದರೆ ಒಂದೇ ರೇಖೆಯ ಮೇಲೆ ಅಲ್ಲ — ಚಾಚಿಕೊಂಡಿರುವ ಬೇರೆ ಬೇರೆ ಉದ್ದದ ಅರಗಳ ಕೊನೆ ಬಿಂದುಗಳಲ್ಲಿರುತ್ತವೆ. ಇವನ್ನು ಜೋಡಿಸುವ ರೇಖೆಗಳು ಮುತ್ರಿ ಮುತ್ರಿ (ಗರಗಸದ ಹಲ್ಲುಗಳಂಥ ಗೆರೆಯನ್ನು) ರೂಪಿಸುತ್ತವೆ. ಆದ್ದರಿಂದ ಗ್ರಹಗಳ ಸಂಯುಕ್ತ ಗುರುತ್ವ ಬಲ ಸೂರ್ಯನ ಮೇಲಾಗಲಿ ಭೂಮಿಯ ಮೇಲಾಗಲಿ ಗಮನಾರ್ಹ ಪರಿಣಾಮವೇನನ್ನೂ ಬೀರಲಾರದು.

ಎರಡನೆಯದಾಗಿ, ಗ್ರಹಗಳು ಸತತ ಚಲನೆಯಲ್ಲಿರುವ ಆಕಾಶಕಾಯಗಳು. ಸೂರ್ಯನಿಂದ ದೂರವಾಗಿರುವ ಗ್ರಹದ ಕಕ್ಷಾವೇಗ ಸೂರ್ಯನಿಗೆ ಹತ್ತಿರವಾಗಿರುವ ಗ್ರಹದ ಕಕ್ಷಾವೇಗಕ್ಕಿಂತ ಕಡಿಮೆ. ಉದಾಹರಣೆಗೆ ಭೂಮಿಯ ಸರಾಸರಿ ಕಕ್ಷಾವೇಗ ಸೆಕೆಂಡಿಗೆ ೨೯.೮ ಕಿಲೊಮೀಟರ್, ಗುರುವಿನದು ೧೩.೧, ಶನಿಯದು, ೯.೮, ಯುರೇನಸ್ಸಿನದು ೬.೮ ಮತ್ತು ನೆಪ್ಚೂನಿನದು ೫.೪ (ಯಾದಿ–೧ನ್ನು ನೋಡಿ). ಆದ್ದರಿಂದ ಭೂಮಿಯನ್ನು ಕುರಿತಂತೆ ಇತರ ಯಾವುದೇ ಎರಡು ಗ್ರಹಗಳು ಒಂದೇ ಗೆರೆಯ ಮೇಲೆ ಎಂದೂ ಬರಲಾರವು, ಅಷ್ಟೇ ಅಲ್ಲ, ಅವು ಒಂದೇ ದಿಶೆಯಲ್ಲಿ ದೀರ್ಘಕಾಲ ಇರಲಾರವು ಕೂಡ. ಅಲ್ಲಿಗೆ ಹಗ್ಗಜಗ್ಗಾಟದ ಪ್ರಾಥಮಿಕ ನಿಬಂಧನೆಯನ್ನೇ ಉಲ್ಲಂಘಿಸಿದಂತಾಯಿತು. ಆದ್ದರಿಂದ ಗುರುಪರಿಣಾಮಕ್ಕೆ ಯಾವ ಮಹತ್ತ್ವವನ್ನೂ ನೀಡಬೇಕಾಗಿಲ್ಲ.

ಮೂರನೆಯದಾಗಿ, ಭೂಮಿಯನ್ನು ಕುರಿತಂತೆ ಪ್ರಭಾವಶಾಲಿಗಳಾದ ಆಕಾಶಕಾಯಗಳು ಎರಡು: ಸೂರ್ಯ ಮತ್ತು ಚಂದ್ರ. ಗುರುವಿನ ಮಹಾ ರಾಶಿಯಿಂದಾಗಿ ಅದನ್ನೂ ಈ ಪಟ್ಟಿಗೆ ಸೇರಿಸೋಣ. ಸೂರ್ಯ–ಭೂಮಿ ಸರಾಸರಿ ಅಂತರಕ್ಕೆ ೧ ಖಗೋಳಮಾನವೆಂದು ಹೆಸರು. ಈ ಮಾನಕದ ಪ್ರಕಾರ ಸೂರ್ಯ–ಗುರು ಸರಾಸರಿ ಅಂತರ ೫.೨೦೩, ಭೂಮಿ–ಚಂದ್ರ ಸರಾಸರಿ ಅಂತರ ೦.೦೦೨೫೭. ಭೂಮಿಯ ರಾಶಿಯನ್ನು ೧ ಏಕಮಾನವೆಂದು ಇಟ್ಟುಕೊಂಡುದುದಾದರೆ ಸೂರ್ಯನ ರಾಶಿ ೩,೨೮,೯೪೭ ಏಕಮಾನಗಳು, ಗುರುವಿನದು ೩೧೭.೯ ಮತ್ತು ಚಂದ್ರನದು ೦.೦೧೨೩. ಈಗ, ಗುರುಪರಿಣಾಮ ಸಂಭವಿಸಲಿರುವ ದುರ್ಮುಹೂರ್ತದಲ್ಲಿ ಏನಾಗುವುದೆಂಬುದನ್ನು ಈ ಅಂಕಿ ಅಂಶಗಳ ಆಧಾರದಿಂದ ಗಣಿಸಿದರೆ ತಿಳಿಯುವುದಿಷ್ಟು: ಸೂರ್ಯ ಎಂದಿನಂತೆ ಭೂಮಿಯ ಮೇಲೆ ಸುಮಾರು ೩,೨೮,೯೫೦ ಏಕಮಾನಗಳಷ್ಟು ಗುರುತ್ವ ಬಲವನ್ನು ಬೀರಿದರೆ ಚಂದ್ರ ಸುಮಾರು ೧೮೫೦ ಏಕಮಾನಗಳಷ್ಟನ್ನೂ ಗುರು ಸುಮಾರು ೧೮ ಏಕಮಾನಗಳಷ್ಟನ್ನೂ ಬೀರುತ್ತವೆ. ಗುರುವಿಗೆ ಹೋಲಿಸಿದಂತೆ ತೀರ ಕ್ಷುದ್ರ ಕಾಯವಾದ ಚಂದ್ರ ಇದರ ಭೂಸಾಮೀಪ್ಯದ ಕಾರಣವಾಗಿ ಭೂಮಿಯ ಮೇಲೆ ಬೀರುವ ಗುರುತ್ವಬಲ ಗುರು ಅದರ ಅತಿ ದೂರದ ಕಾರಣವಾಗಿ ಬೀರುವ ಬಲಕ್ಕಿಂತ ನೂರು ಪಟ್ಟು ಜಾಸ್ತಿ. ಆದ್ದರಿಂದ ಗುರುಪರಿಣಾಮವನ್ನು ನಾವೇನೂ ಗುರುತರವಾಗಿ ಪರಿಗಣಿಸಬೇಕಾಗಿಲ್ಲ.

ನಾಲ್ಕನೆಯದಾಗಿ, ಗತ ಶತಮಾನಗಳ ವೈಜ್ಞಾನಿಕ ದಾಖಲೆಗಳ ಅಧ್ಯಯನದಿಂದ ಸೌರ ಉದ್ರೇಕ ಮತ್ತು ಕಲೆಗಳಿಗೂ ಗ್ರಹಗಳ ದೂರ ಮತ್ತು ಸ್ಥಾನಗಳಿಗೂ ನಡುವೆ ಯಾವುದೇ ನಿರ್ದಿಷ್ಟ ಸಂಬಂಧವನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ. ಎಲ್ಲ ಗ್ರಹಗಳ ಒಟ್ಟು ರಾಶಿ ಸೂರ್ಯರಾಶಿಯ ಶೇಕಡಾ ೦.೧೩೪೫೦೮ ಮಾತ್ರ. ಹೀಗಾಗಿ ಸಕಲ ಗ್ರಹಬಲದ ಸಂಯುಕ್ತ ತಾಡನೆಯೂ ಸೂರ್ಯನ ಮೇಲೆ ಯಾವ ಗಮನಾರ್ಹ ಪರಿಣಾಮವನ್ನೂ ಮಾಡದು – ಆನೆಯ ಮೇಲೆ ನುಸಿ ದಾಳಿ ಇಟ್ಟರೆ ಹೇಗೊ ಹಾಗೆ. ಆದ್ದರಿಂದ ಗುರುಪರಿಣಾಮದಿಂದಾಗಿ ಸೂರ್ಯನಿಂದ ಪರಮಾಣವಿಕ ಕಣಗಳ ಮಹಾ ಸ್ರೋತಸ್ಸೇ ಪ್ರವಹಿಸಿ ಭೂಮಿಯನ್ನು ಕಬಳಿಸಿಬಿಡಲಿದೆಯೆಂದು ಅಂಜಬೇಕಾಗಿಲ್ಲ.

ಐದನೆಯದಾಗಿ, ೧೯೮೨ರಲ್ಲಿ ಸಂಭವಿಸಲಿದೆಯೆಂದು ಹೇಳಲಾಗಿರುವ ನವಗ್ರಹಯೋಗ


ಗ್ರಹಗಳ ನಿಷ್ಕೃಷ್ಟ ಹೊಂದಾಣಿಕೆ ಆಗಲಾರದು. ಆ ದಿವಸಗಳಂದು ಭೂಮಿಯಿಂದ ನೋಡಿದಾಗ ಬುಧ, ಶುಕ್ರ ಮಂಗಳ, ಗುರು ಮತ್ತು ಶನಿ ಆಕಾಶದ ಒಂದು ನಿರ್ದಿಷ್ಟ ವಲಯಕ್ಕೆ ಸೀಮಿತವಾಗಿರುವಂತೆ ಕಾಣುವುದು ನಿಜ. ಆ ವಲಯದ ವ್ಯಾಪ್ತಿ* ಸುಮಾರು ೬೦ ಡಿಗ್ರಿಗಳು – ಅಷ್ಟು ವಿಸ್ತಾರವಾದ ವಲಯದಲ್ಲಿ ಅವು ಹರಡಿ ಹೋಗಿರುತ್ತವೆ ಎಂದು ಇದರ ಅರ್ಥ. ಹೀಗಾಗಿ ಬಾನ ಹಗ್ಗ ಜಗ್ಗಾಟದಲ್ಲಿ ಏಕಮುಖ ಬಲ ಪ್ರಯೋಗವಾಗದೆ ಸಮಗ್ರ ಪರಿಣಾಮ ಯಥಾಸ್ಥಿತಿಯ ಮುಂದುವರಿಕೆಯೇ ಆದೀತೆಂದು ನಿರೀಕ್ಷಿಸುವುದು ಸಾಧುವಾಗಿದೆ.

ಆರನೆಯದಾಗಿ, ಸುಮಾರು ೧೭೯ ವರ್ಷಗಳಿಗೊಮ್ಮೆ ನವಗ್ರಹಗಳು ಸೂರ್ಯನ ಒಂದೇ ಮಗ್ಗುಲಿಗೆ ಸರಿಸುಮಾರಾಗಿ ಒಂದೇ ಗೆರೆಯ ಮೇಲೆ ಬರುತ್ತವೆ ಎಂಬುದಾಗಿ ಗಣನೆಗಳಿಂದ ತಿಳಿಯುತ್ತದೆ. ಎಂದ ಮೇಲೆ ಕ್ರಿ. ಶ. ೧೮೦೩ ರಲ್ಲಿ ಸಂಭವಿಸಿರಬೇಕಾದ ನವಗ್ರಹಯೋಗದಲ್ಲಿ ಭೂಮಿ ಯಾವ ದುರ್ಘಟನೆಯನ್ನು ಎದುರಿಸಬೇಕಾಯಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಂದಿನ ತನಕ ಭೂಮಿ ಸೂರ್ಯನಿಗೆ ಕ್ರಮಪ್ರಕಾರ ಉರುಳು ಸೇವೆ ಸಲ್ಲಿಸುತ್ತ ಬಂದಿರುವುದೇ ಈ ಪ್ರಶ್ನೆಗೆ ತಕ್ಕ ಉತ್ತರ ! ಆದ್ದರಿಂದ ೧೯೮೨ರಲ್ಲಾದರೂ ಭೂಮಿ ಯಾವ ದುರ್ಘಟನೆಯನ್ನೂ ಎದುರಿಸಬೇಕಾಗಿಲ್ಲವೆಂದು ಭರವಸೆ ತಳೆಯಬಹುದು.

ಇದು ಹೇಗೂ ಇರಲಿ, ೧೯೮೧ ಏಪ್ರಿಲ್ ೧ ರಂದು ವಿಶಿಷ್ಟ ಪಂಚಗ್ರಹಕೂಟ ಸೇರಲಿದೆ: ಭೂಮಿ-ಸೂರ್ಯ ರೇಖೆಯ ವಿಸ್ತರಣೆಯ ಮೇಲೆ (ಅಂದರೆ ಭೂಮಿಯಿಂದ ನೋಡಿದಾಗ ಸೂರ್ಯನ ಹಿಂದೆ) ಸರಿಸುಮಾರಾಗಿ ಶುಕ್ರ ಮತ್ತು ಮಂಗಳ ಬರಲಿವೆ; ಸೂರ್ಯ-ಭೂಮಿ ರೇಖೆಯ ವಿಸ್ತರಣೆಯ ಮೇಲೆ (ಅಂದರೆ ಸೂರ್ಯನಿಂದ ನೋಡಿದಾಗ ಭೂಮಿಯ ಹಿಂದೆ) ಸರಿಸುಮಾರಾಗಿ ಗುರು ಮತ್ತು ಶನಿ ಬರಲಿವೆ. ಅಂದು ಮಂಗಳ, ಶುಕ್ರ, ಸೂರ್ಯ, ಭೂಮಿ, ಗುರು ಮತ್ತು ಶನಿ ಇದೇ ಕ್ರಮದಲ್ಲಿ ಸರಿಸುಮಾರಾಗಿ ಒಂದೇ ರೇಖೆಯ ಮೇಲಿರುತ್ತವೆಂದಾಯಿತು.

Jupiter effect ಅಥವಾ ಗುರುಪರಿಣಾಮ ಎಂಬುದನ್ನು ತಜ್ಞ ಭೌತವಿಜ್ಞಾನಿಗಳು ಯಾರೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಖಗೋಳ ವಿಜ್ಞಾನಿ ಕೆ. ಎಲ್. ಫ್ರ್ಯಾಂಕ್ಲಿನ್ ಅವರ ಪ್ರಕಾರ "ಇದು ಅವಿಜ್ಞಾನವೊಂದೇ ಅಲ್ಲ, ಅಸಂಬದ್ಧ ಕೂಡ." ಮನೆ ಎದುರಿನ ರಸ್ತೆಯಲ್ಲಿ ಗಡಬಡಿಸಿ ಧಾವಿಸುವ ಆಟೋ ರಿಕ್ಷಾ ನಮ್ಮ ಮೇಲೂ ಪರಿಸರದ ಮೇಲೂ ಬೀರುವ ಪರಿಣಾಮ ಗುರುಪರಿಣಾಮಕ್ಕಿಂತ ಖಾತ್ರಿ ಅಧಿಕ ತೀವ್ರತರವಾದದ್ದು ಮತ್ತು ಅಧಿಕ ಅಪಾಯಕಾರಿಯಾದದ್ದು ಕೂಡ. ✡

* ಉದಾಹರಣೆಗೆ ಈ ತಿಂಗಳಲ್ಲಿ (ಡಿಸೆಂಬರ್ ೧೯೮೦) ಸೂರ್ಯೋದಯದ ಮುನ್ನ ಪೂರ್ವಾಕಾಶವನ್ನು ಗಮನಿಸಿ. ತುಸು ಅಂತರದಲ್ಲಿ ನೆಲೆಗೊಂಡಿರುವ ಎರಡು ಬೆಳಕಿನ ಉಂಡೆಗಳು ನಿಮ್ಮನ್ನು ಆಕರ್ಷಿಸದಿರವು. ಇವುಗಳ ಪೈಕಿ ಪ್ರಕಾಶತರವಾದದ್ದು ಅಥವಾ ಸೂರ್ಯನಿಗೆ ಸಮೀಪತರವಾದದ್ದು ಶುಕ್ರ, ಇನ್ನೊಂದು ಗುರು. ಇವೆರಡು ಗ್ರಹಗಳನ್ನು ನಿಮ್ಮ ಕಣ್ಣಿಗೆ ಸೇರಿರುವ ಕಾಲ್ಪನಿಕ ರೇಖೆಗಳು ಅಲ್ಲಿ ರಚಿಸುವ ಕೋನಕ್ಕೆ, ಇವುಗಳ ಕೋನವ್ಯಾಪ್ತಿ, ಸಂಕ್ಷೇಪವಾಗಿ ವ್ಯಾಪ್ತಿ, ಎಂದು ಹೆಸರು. ಬೆಳಕಿನ ಹಲವು ಹುಡಿಗಳು ಬಾನಿನ ಒಂದೆಡೆಯಲ್ಲಿ ಹರಡಿಕೊಂಡಿರುವಾಗ ಅವುಗಳ ಪೈಕಿ ಅತಿ ದೂರವಾಗಿ ಬೇರ್ಪಟ್ಟಿರುವ ಎರಡು ಹುಡಿಗಳು ನಮ್ಮ ಕಣ್ಣಿನಲ್ಲಿ ರಚಿಸುವ ಕೋನವೇ ಆ ವಲಯದ ವ್ಯಾಪ್ತಿ.



ಸ್ತ್ರೀಯರಿಗೆ ಆದರ್ಶಪ್ರಾಯರಾಗಿ ಬಾಳಬೇಕೆಂದರೆ ನೀವು ಬ್ರಹ್ಮಚಾರಿಗಳಾಗಿಯೆ ಸಾಯಬೇಕಾದೀತು.

ಪತ್ತೇದಾರಿ ಕೆಲಸಕ್ಕೆ ಪ್ರಾಣಿ ಪಕ್ಷಿಗಳು

ಡಾ. ನಾರಾಯಣ ಮಹಿಷಿ

ಪ್ರಾಣಿ, ಪಕ್ಷಿಗಳನ್ನು ತರಬೇತುಗೊಳಿಸಿ ಮನುಷ್ಯ ಅವುಗಳನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳುತ್ತಲೇ ಇದ್ದಾನೆ. ಪ್ರಾಣಿಗಳ ವಿಷಯವಾಗಿ ಮಾತನಾಡುವಾಗ ನಮಗೆ ತಕ್ಷಣ ಹೊಳೆಯುವುದು ಬೆಕ್ಕು, ನಾಯಿಗಳು. ಅವುಗಳನ್ನು ಮನೆಯಲ್ಲಿಟ್ಟು ಮುದ್ದು ಮಾಡಬಹುದಾದರೂ ಹೆಚ್ಚು ಉಪಯೋಗವಾಗುವುದು ನಾಯಿಗಳಿಂದಲೇ. ಅವುಗಳಿಗೆ ವಿಶಿಷ್ಟ ತರಬೇತು ಕೊಟ್ಟಾಗ ಅನೇಕ ತರಹದ ಕೆಲಸಗಳಲ್ಲಿ ಅವು ಪಾಲ್ಗೊಳ್ಳಬಲ್ಲವು. ಪಕ್ಷಿಗಳ ವಿಷಯ ಪ್ರಸ್ತಾಪಿಸಿದಾಗ ಹೆಚ್ಚಾಗಿ ಗಿಣಿ, ಪಾರಿವಾಳಗಳು ನಮ್ಮ ಲಕ್ಷಕ್ಕೆ ಬರುತ್ತವೆ. ಗಿಣಿಯನ್ನು ಮನೆಯಲ್ಲಿಯೇ ಪಂಜರದಲ್ಲಿಟ್ಟು ಮಾತನಾಡಿಸಬಹುದಾದರೆ, ಪಾರಿವಾಳವನ್ನು ದೂರದಲ್ಲಿ ಸಂದೇಶ ಕಳಿಸಲು ಬಳಸಬಹುದು, ಪತ್ತೇದಾರಿ ಕೆಲಸಗಳಲ್ಲಿಯೂ ಉಪಯೋಗಿಸಬಹುದು.

ತರಬೇತು ಹೊಂದಿದ ನಾಯಿಯನ್ನು ಕಾನೂನು ಕಾರ್ಯಾಚರಣೆಯಲ್ಲಿ ಮೊದಲ ಸಲ ಉಪಯೋಗಿಸಿದ್ದು ೧೮೮೬ರ ಫೆಬ್ರುವರಿ ಎಂಟನೆಯ ದಿನಾಂಕದಂದು – ಇಂಗ್ಲಂಡಿನಲ್ಲಿ. ಕಂದಾಯ ವಸೂಲಿ ಅಧಿಕಾರಿಯಾದ ಮಾಲ್ಕಂ ಜಿಲೆಪ್ಸಿ, ಪತ್ತೇದಾರಿ ಕೆಲಸದಲ್ಲಿ ಬುಲ್–ಟೆರೀರ್ ಎಂಬ ಜಾತಿಯ ನಾಯಿಯನ್ನು ಮೊದಲ ಸಲ ಉಪಯೋಗಿಸಿದ. ಪರಿಣಾಮವಾಗಿ ಮಾದಕ ಪೇಯಗಳನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದ ತಂಡವನ್ನು ಪತ್ತೆಹಚ್ಚಲಾಯಿತು. ನಾಯಿಗಳಿಗೆ ಕೊಟ್ಟ ತರಬೇತೆಂದರೆ ಸಂಶಯಿತ ಜನರ ಕುದುರೆಗಳ ಮೂಗನ್ನು ಕಚ್ಚಿ ಹಿಡಿಯುವುದು. ಕುದುರೆಗಳು ಒದ್ದಾಡುವಾಗ ಬೆನ್ನು ಮೇಲೆ ಇಟ್ಟ ಸಾಮಾನುಗಳೆಲ್ಲ ಕೆಳಗೆ ಉರುಳಿ ಬೀಳುವವು. ಇನ್ನೊಂದು ಪತ್ತೇದಾರಿಯ ಕಾರ್ಯದಲ್ಲಿ ಬುಲ್–ಟೆರೀರ್‌ನ್ನು ಉಪಯೋಗಿಸಿದಾಗ ಆಪಾದಿತರು ಅದನ್ನು ಕೊಂದು ಹಾಕಿದರು– ಅದೇ ವರುಷದ ಜುಲೈ ೩೦ರಂದು.

ಪೋಲೀಸ್ ಕಾರ್ಯಾಚರಣೆಗೆ ನಾಯಿಗಳನ್ನು ಬಳಸಲು ಅನುಮತಿ ಕೊಟ್ಟಿದ್ದು ೧೮೯೯ ರಲ್ಲಿ –ಬೆಲ್ಜಿಯಂ ಅಧಿಕಾರಿಗಳಿಂದ. ಇದಕ್ಕೂ ಮೊದಲು ಅಲ್ಲಿಯ ಪೋಲೀಸರು ಪ್ರಾಯೋಗಿಕವಾಗಿ 'ರಾತ್ರಿ ಗಸ್ತು' ತಿರುಗಲು ನಾಯಿಗಳನ್ನು ಉಪಯೋಗಿಸುತ್ತಿದ್ದರು. ಕ್ರಿಮಿನಲ್ ಗುನ್ಹೆ

ಗಳಿಗೆ ಸಂಬಂಧಿಸಿದ ಪತ್ತೇದಾರಿ ಕೆಲಸದಲ್ಲಿ ಮೊದಲ ಸಲ ನಾಯಿಯನ್ನು ಉಪಯೋಗಿಸಿದ್ದು, ಬ್ಲ್ಯಾಕ್‌ಬರ್ನ್ ಪೋಲೀಸರಿಂದ, ೧೮೭೬ರ ಏಪ್ರಿಲ್ ತಿಂಗಳಲ್ಲಿ. ಎಮಿಲಿ ಹಾಲಂಡ್ ಎಂಬ ಏಳು ವರುಷದ ಮಗುವನ್ನು ಲೈಂಗಿಕ ವಾಸನೆಗೆ ಬಲಿಯಾಗಿಸಿ, ಕತ್ತು ಸೀಳಿದ ಕೊಲೆಗಡುಕರನ್ನು ಪತ್ತೆ ಮಾಡುವದೇ ನಾಯಿಯ ಕೆಲಸವಾಗಿತ್ತು. ಮೊದಲು ನಾಯಿಯನ್ನು ಬಾಸ್ವೆಲ್ ಎಂಬಲ್ಲಿ ಒಂದು ಹೊಲಕ್ಕೆ ಕರೆದೊಯ್ಯಲಾಯಿತು; ಅಲ್ಲಿ-ದ್ದುದು ಆ ಮಗುವಿನ ವಿಕರಾಳವಾದ ಶರೀರ. ಮೃತ ದೇಹದ ವಾಸನೆಯನ್ನು ಹಿಡಿಯುವುದು ನಾಯಿಗೆ ಸಾಧ್ಯವಾಗಲಿಲ್ಲ. ಮುಂದೆ ಇಬ್ಬರು ಸಂಶಯಿತರ ಮನೆಗೆ ಕರೆದೊಯ್ಯಲಾಯಿತು. ಮೊದಲನೆಯ ಮನೆಯಲ್ಲಿ ನಾಯಿಯು ಯಾವ ಆಶ್ಚರ್ಯಕ್ಕೂ ಅವಕಾಶ ಕೊಡಲಿಲ್ಲ; ಇನ್ನೊಂದು ಸ್ಥಳವೆಂದರೆ ಮಾಸ್ ಬೀದಿಯಲ್ಲಿರುವ ಒಬ್ಬ ಕ್ಷೌರಿಕನ ಅಂಗಡಿ. ನಾಯಿಯು ಈ ಸಲ ಪೋಲೀಸರನ್ನು ಬೆಂಕಿಯಿದ್ದ ಸ್ಥಳದಲ್ಲಿ ಕರೆದುಕೊಂಡು ಹೋಗಿ ಹೊಗೆನಾಳವಲ್ಲಿ ಮುಚ್ಚಿಟ್ಟಿದ್ದ ಮಗುವಿನ ರುಂಡವನ್ನು ತೋರಿಸಿತು. ಮನೆಯ ಒಡೆಯ ವಿಲಿಯಂ ಫಿಶ್ ಎಂಬವನನ್ನು ಬಂಧಿಸಿ ಪ್ರಶ್ನೆಗಳನ್ನು ಕೇಳಿದಾಗ ತಾನೇ ಕೊಲೆಯನ್ನು ಮಾಡಿದುದಾಗಿ ಒಪ್ಪಿಕೊಂಡ.

೧೯೦೮ರಲ್ಲಿ ರೇಲ್ವೆ ಇಲಾಖೆಯವರು ಪೋಲೀಸ್ ನಾಯಿಗಳನ್ನು ಉಪಯೋಗಿಸಲು ಪ್ರಾರಂಭಿಸಿದರು. ಮುಖ್ಯ ಸರಕು ಮ್ಯಾನೇಜರ್ ಗೆಡಿಸ್ ಎಂಬವರು ಸರಕುಗಳು ಕಳವಾಗಿ ಹೋಗುವ ವಿಷಯದಲ್ಲಿ ಬಹಳ ನೊಂದು ಹೋಗಿದ್ದರು. ಪೋಲೀಸ್ ನಾಯಿಗಳನ್ನು ತರಬೇತು ಮಾಡುವುದನ್ನು ನೋಡಲು ರೇಲ್ವೆ ಪೋಲೀಸರನ್ನು ಕಳಿಸಿಕೊಡಲಾಯಿತು. ಸಮಾಧಾನಕರ ವರದಿ ಬಂದದ್ದರಿಂದ ರೇಲ್ವೆಯ ಜನರಲ್ ಮೇನೇಜರರು ಮೂರು 'ಏರಿಡೇಲ್ ಟೆರೀರ್ಸ್'ಗಳನ್ನು ಕೊಂಡುಕೊಂಡರು. ಈ ನಾಯಿಗಳ ಉಪಯೋಗ ಪತ್ತೆದಾರಿ ಕಾರ್ಯದಲ್ಲಿ ಬಹಳವಾದ್ದರಿಂದ ೧೯೧೨ರಲ್ಲಿ ಒಂದು 'ಶ್ವಾನ ಸಮೂಹ'ವನ್ನೇ ಅಸ್ತಿತ್ವದಲ್ಲಿ ತರಲಾಯಿತು.

೧೯೧೨ರಲ್ಲಿಯೇ ಬ್ರಿಟನ್ನಿನಲ್ಲಿ 'ಲೆಬ್ರೊಡೋರ್' ನಾಯಿಗಳ ಒಂದು ದೊಡ್ಡ ತಂಡವನ್ನೇ ನಿರ್ಮಿಸಿ ಅವುಗಳನ್ನೆಲ್ಲ ರಾತ್ರಿ ಗಸ್ತಿಗಾಗಿ ಉಪಯೋಗಿಸಲಾಗುತ್ತಿತ್ತು! ಇಂಥ ನಿರ್ಣಯದ ಪರಿಣಾಮವೆಂದರೆ ಕಳ್ಳತನಗಳ ಸಂಖ್ಯೆ ಕಡಿಮೆಯಾಯಿತು. ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದು. ಇತ್ತೀಚಿನ ಮೂರು ದಶಕಗಳಲ್ಲಿ ಅನೇಕ ದೇಶಗಳಲ್ಲಿ, ದೇಶದ ಅನೇಕ ದೊಡ್ಡ ಪಟ್ಟಣಗಳಲ್ಲಿ ತರಬೇತು ಪಡೆದ ನಾಯಿಗಳ ತಂಡಗಳು ಪತ್ತೇದಾರಿ ಕೆಲಸಮಾಡುತ್ತಲಿವೆ. ಅನೇಕ ಸಲ ಯಶಸ್ಸು ಪರಿಣಾಮಕರವಾಗಿ ಬಂದಿದೆ.

ಇನ್ನು ಪಾರಿವಾಳದ ವಿಷಯ. ಮುಗ್ಧ ಪಕ್ಷಿಯಾದ ಪಾರಿವಾಳದ ಬಗ್ಗೆ ಎಲ್ಲರೂ ಬಲ್ಲರು. ಹಬ್ಬದ ದಿನಗಳಲ್ಲಿ, ಅವುಗಳನ್ನು ಶರ್ಯತ್ತಿಗಾಗಿ ಉಪಯೋಗಿಸಿ ಸಂತೋಷಪಡುವ ಜನರನ್ನು ನೋಡಬಹುದು. ಹಳೆಯ ಕಾಲದಲ್ಲಿ ಪಾರಿವಾಳದ ಕಾಲಿಗೆ ಸಂದೇಶ ಉಳ್ಳ ಚೀಟಿಯನ್ನು ಕಟ್ಟಿ



"ನಿಮ್ಮ ಮನೇಲಿ ಅನೇಕ ಮಾಣಿಕ್ಯಗಳಿವೆ ಅಂತ ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದಿರಂತೆ."

ಹಾರಿಬಿಡುವುದರ ಬಗ್ಗೆ ನಾವೆಲ್ಲರೂ ಕೇಳಿದ್ದೇವೆ. ಸರಿಯಾದ ಸ್ಥಳವನ್ನು ಮುಟ್ಟಿ ಸಂದೇಶ ತಲುಪಿಸುವುದು ಪಾರಿವಾಳದ ಬುದ್ಧಿಮತ್ತೆಗೆ ಸೇರಿದ ವಿಷಯ. ಈ ಪಕ್ಷಿಯನ್ನು ಬೇರಾವ ಕೆಲಸಕ್ಕೂ ಉಪಯೋಗಿಸಿದಂತಿಲ್ಲ. ಹೊಸದಾಗಿ ನಮಗೆ ಗೊತ್ತಾದ ವಿಷಯವೆಂದರೆ ಅಮೇರಿಕದ ಹಡಗು ಪಡೆಯವರು ಪಾರಿವಾಳಗಳನ್ನು ತರಬೇತುಗೊಳಿಸಿ ಸಮುದ್ರದಲ್ಲಿ ಕಳೆದುಹೋದ ಮನುಷ್ಯರನ್ನು ಗುರುತಿಸುವುದು.

ಇಷ್ಟು ವರುಷಗಳ ವರೆಗೆ ಮನುಷ್ಯರನ್ನೇ ಮನುಷ್ಯ ಶೋಧನೆಯಲ್ಲಿ ಉಪಯೋಗಿಸಲಾಗುತ್ತಿತ್ತು. ತರಬೇತು ಹೊಂದಿದ ವಿಮಾನ ಚಾಲಕರನ್ನೂ ಈ ಕಾರ್ಯದಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಆದರೆ ಪಾರಿವಾಳಗಳು ಮನುಷ್ಯರಿಗಿಂತಲೂ ಹೆಚ್ಚು ಸೂಕ್ಷ್ಮ ದೃಷ್ಟಿಯನ್ನು ಪಡೆದಿದ್ದು, ನಾವೆಯಿಂದ ಸಮುದ್ರಪಾಲಾದ ಜನರನ್ನು, ವಿಮಾನವು ಸಮುದ್ರದಲ್ಲಿ ಉರುಳಿ ಬಿದ್ದಾಗ ಕಾಣದಾದ ಮನುಷ್ಯರನ್ನು, ಶೋಧಿಸುವ ಕಾರ್ಯವನ್ನು ಬಹಳ ಕಾರ್ಯಕ್ಷಮತೆಯಿಂದ ಮಾಡಬಹುದಾಗಿದೆ. ಅನುಭವದ ಆಧಾರದ ಮೇಲೆ ಹೇಳಬೇಕೆಂದರೆ ಹೆಲಿಕಾಪ್ಟರ್‌ನಲ್ಲಿ ಸಮುದ್ರದ ಮೇಲೆ ಶೋಧನೆಯಲ್ಲಿ ಹಾರಾಡುವ ಚಾಲಕರು ಸಹ ಗುರುತಿಸದಂತಹ ಮನುಷ್ಯರನ್ನು ಪಾರಿವಾಳಗಳು ಗುರುತಿಸಿ ಮಾಹಿತಿ ಕೊಡುತ್ತವೆ. ತರಬೇತುಹೊಂದಿದ ಪಾರಿವಾಳಗಳನ್ನು ಹೆಲಿಕಾಪ್ಟರಿನಲ್ಲಿ ಪ್ಲಾಸ್ಟಿಕ್ ಪಂಜರದಲ್ಲಿ ತೆಗೆದುಕೊಂಡು ಹೋಗಲಾಗುವುದು. ಪಕ್ಷಿಗಳು ಏನಾದರೂ ಒಂದು ವಸ್ತುವನ್ನು ಕಂಡರೆ, ಅಲ್ಲಿದ್ದ ಒಂದು ಯಂತ್ರದ ಕೈಯನ್ನು ಕುಕ್ಕುತ್ತವೆ. ಪರಿಣಾಮವಾಗಿ ಒಂದು 'ಸಂಕೇತದೀಪ' ಹತ್ತಿ ಉರಿಯಲು ಆರಂಭಿಸುತ್ತದೆ. ಇದಕ್ಕೆ ಪ್ರತಿಫಲವಾಗಿ ಪಕ್ಷಿಗಳಿಗೆ ಆಹಾರ ಕೊಡಲಾಗುತ್ತದೆ. ಇದರರ್ಥ ಏನಾದರೂ ಒಳ್ಳೆಯ ಕೆಲಸ ಮಾಡಿದ ಮೇಲೆಯೆ ಆಹಾರ ಸಿಗುತ್ತದೆ ಎಂಬ ಭಾವನೆ ಪಕ್ಷಿಗಳಲ್ಲಿ ಬರುತ್ತದೆ. ತರಬೇತಿಯಲ್ಲಿ ಮೊದಲ ಹಂತವಾಗಿ ಒಂದು ಕಿತ್ತಳೆ ಬಣ್ಣದ ಧ್ವಜವನ್ನು ನೋಡಿದ ತಕ್ಷಣ ಯಂತ್ರದ ಕೈಯನ್ನು ಕುಕ್ಕುವ ಹಾಗೆ ಅಭ್ಯಾಸ ಮಾಡಿಸಲಾಗುವುದು. ಆ ಮೇಲೆ ಧ್ವಜದ ಸ್ಥಳದಲ್ಲಿ ಕಿತ್ತಳೆ ಬಣ್ಣದ ತೇಲು ಕವಚವನ್ನು (Life Jacket) ನೋಡಿದಾಗ ಕುಕ್ಕುವ ಅಭ್ಯಾಸ ಮಾಡಿಸಲಾಗುವುದು.

ಹತ್ತು ಪಾರಿವಾಳಗಳ ಒಂದು ಗುಂಪಿಗೆ ಹವಾಯಿಯ ಕೈಲುವಾ ಆಖಾತದಲ್ಲಿ ತರಬೇತಿ ಕೊಡಲಾಗುತ್ತಿದೆ. ತರಬೇತಿಯ ಅವಧಿ ಸುಮಾರು ಆರು ತಿಂಗಳಿಂದ ಎಂಟು ತಿಂಗಳುವರೆಗೆ ಇದ್ದು, ಕನಿಷ್ಟ ಆರು ಪಕ್ಷಿಗಳಾದರೂ ತರಬೇತನ್ನು ಯಶಸ್ವಿಯಾಗಿ ಮುಗಿಸಬಹುದೆಂಬ ಅಂದಾಜಿದೆ. ತರಬೇತು ಹೊಂದಿದ ಪಕ್ಷಿಗಳು ಈಗಾಗಲೇ ಒಳ್ಳೆಯ ಕೆಲಸವನ್ನು ಮಾಡಿದ್ದು ಅನೇಕ ಜನರ ಜೀವರಕ್ಷಣೆ ಸಾಧ್ಯವಾಗಿದೆ. ಸ್ವಭಾವದಲ್ಲಿ ಬಹಳ ಒಳ್ಳೆಯವು, ಅಗ್ಗವಾಗಿ ಸಿಗುವಂಥವು, ಬಹಳ ಮೃದುವಾದ ಪಾರಿವಾಳಗಳನ್ನು ತರಬೇತಿಗೆ ಗುರಿಮಾಡುವುದು ಬಹಳ ಸುಲಭದ ಕೆಲಸ. ಬರುವ ವರುಷಗಳಲ್ಲಿ ತರಬೇತಿನಲ್ಲಿ ಸಹ ಕೆಲವು ಬದಲಾವಣೆಗಳಾಗಲಿದ್ದು, ಸಮುದ್ರದಲ್ಲಿ ಏನು ನೋಡಿದರೂ, ಅವುಗಳಿಗೆ ಕಿತ್ತಳೆ ಬಣ್ಣವಿರಲಿ ಅಥವಾ ಇರದಿರಲಿ, ಗುರುತಿಸಲು ಸಾಧ್ಯವಾಗಬಹುದಾಗಿದೆ.

ತರಬೇತು ಕೊಟ್ಟು ಪ್ರಾಣಿ, ಪಕ್ಷಿಗಳನ್ನು ಯಾವ ರೀತಿ ಒಳ್ಳೆಯ ಕೆಲಸಗಳಿಗೆ ಅವುಗಳನ್ನು ಉಪಯೋಗಿಸಬಹುದು ಎಂಬುದಕ್ಕೆ ಮೇಲಿನವು ಒಳ್ಳೆಯ ಉದಾಹರಣೆಗಳಾಗಿವೆ. ✿

ಬೀಚಿ ಒಮ್ಮೆ 'ಕೈಲಾಸಂ ದಿನಾಚರಣೆ'ಯ ಮುಖ್ಯ ಅತಿಥಿಗಳಾಗಿ ಹೋಗಿದ್ದ ಸಂದರ್ಭ. ಕಾರ್ಯಕ್ರಮ ಪ್ರಾರಂಭಕ್ಕೆ ಸ್ವಾಗತ ಭಾಷಣ ಮಾಡುತ್ತಿದ್ದಾತ, "ನಮ್ಮ ಇಚ್ಛೆಯ ಮೇರೆಗೆ ದಿವಂಗತರಾದ ಕೈಲಾಸಂ ದಿನಾಚರಣೆಗಾಗಿ ಆಗಮಿಸಿರುವ ಹಾಸ್ಯ ಚಕ್ರವರ್ತಿ ಬೀಚಿಯವರು..." ಎಂದು ಪ್ರಾರಂಭಿಸಿಬಿಟ್ಟಾಗ ಬೀಚಿಯವರಿಗೇ [illegible] ...ಮಾಯಿತಂತೆ

—ಎಸ್. ವಿಠ್ಠಲ



ಕೆ. ಚಂದ್ರಮೌಳಿ

ಫ್ಯಾಸಿಸಂ, ನಾಜಿಸಂ. ಮಾರ್ಕ್ಸಿಸಂ, ಕಮ್ಯೂನಾಲಿಸಂ, ಆ ಇಸಂ, ಈ ಇಸಂ, ತೇರೆ ಕಸಂ, ಅಂತ ಎಂತೆಂತದ್ದೋ ಇಸಂಗಳೆಲ್ಲಾ ಬಂದುವು. ಈಗ ಇದ್ಯಾವುದಪ್ಪಾ ಹೊಸದಾಗಿ ಬಂದಿರುವ ಬಾಸಿಸಂ ಎಂದು ಆಶ್ಚರ್ಯಪಡಬೇಡಿ. ಬಾಸಿಸಂ ಹೊಸ ಪದವಾಗಿ ಕಂಡರೂ ಅದರ ಅರ್ಥ ವ್ಯಾಪ್ತಿಯಲ್ಲಿ ಬಲು ಹಳೆಯದು. ಮನುಷ್ಯ ಭೂಮಿಯ ಮೇಲೆ ಹುಟ್ಟಿದಷ್ಟೇ ಪುರಾತನವಾದದ್ದಿರಬೇಕು. ಆಂಜನೇಯ ಶ್ರೀರಾಮನಿಗೆ ಎಂಥಾ ಬಂಟನಾಗಿದ್ದ, ಕರ್ಣ ಹೇಗೆ ದುರ್ಯೋಧನನ ಸೇವೆಗೆ ಸಿದ್ಧನಾಗಿದ್ದ ಎಂದು ಎಲ್ಲರೂ ಕೇಳಿರುವ ವಿಷಯವೇ ಸರಿ. ಆದರೆ ಶ್ರೀರಾಮನಂಥ ಆದರ್ಶ ಒಡೆಯ ಸಿಗುವುದು ಅಪರೂಪ. ಅಂತೆಯೇ ಆಂಜನೇಯನಂಥ ಬಂಟನೂ ಅಷ್ಟೇ ಅಪರೂಪ. ಆಂಜನೇಯನೇ ಆಗಿರಲಿ, ಲಕ್ಷ್ಮಣನೇ ಆಗಿರಲಿ, ಸುಗ್ರೀವ ವಿಭೀಷಣರೇ ಆಗಿರಲಿ, ಶ್ರೀರಾಮ ಎಲ್ಲರಿಗೂ ಒಂದೇ ತರಹ ಪ್ರೇಮಭಾವ ತೋರುತ್ತಿದ್ದ. ಆದರೆ ಒಡೆಯ ದುರ್ಯೋಧನನಿಗೆ ತನ್ನ ಕೆಳಗಿನವರನ್ನು ಕಂಡರೆ ಬರೀ ಪ್ರೇಮಭಾವ ಒಂದೇ ಇತ್ತೆಂದು ಹೇಳಲು ಖಂಡಿತ ಸಾಧ್ಯವಿಲ್ಲ. ಜನಗಳ ಮುಖ ನೋಡಿ ಪ್ರೇಮ, ಹರ್ಷ, ಕ್ರೋಧ, ಇತರ ಭಾವಗಳನ್ನು ದುರ್ಯೋಧನ ತೋರಿಸುತ್ತಿದ್ದ, ತನ್ನ ಒಡೆತನ ನಡೆಸುವಾಗ. ಹೀಗೆ ಬಾಸಿಸಂ ಅಂದರೆ ಒಬ್ಬೊಬ್ಬರಿಗೆ ಒಂದೊಂದು ಅರ್ಥ. ಒಟ್ಟಿನಲ್ಲಿ ಈ ಪದಕ್ಕೆ ಒಂದು ಅರ್ಥವಿಲ್ಲ. ಅದಕ್ಕೆ ಸಾವಿರ ಅರ್ಥ ಸಾವಿರ ರೀತಿಯಲ್ಲಿ ಹೇಳಬಹುದು. ಹಿಂದಿನ ಕಾಲದಲ್ಲಿ ಬಾಸ್‌ಗೆ ದೊರೆ. ಒಡೆಯ, ಧಣಿ, ಮಾಲಿಕ, ಸಾವುಕಾರ, ಬುದ್ಧಿಯೋರು, ಅಧಿಕಾರಿ, ಸಾಹೇಬ್ರು ಅಂತ ಬೇರೆ ಬೇರೆ ಹೆಸರಿದ್ದುದು ನಿಮಗೆ ಗೊತ್ತೇ ಇದೆ. ಅಂದರೆ ಅನೇಕ ರೀತಿಯ ಸೇವಕರು ತಮ್ಮ ಮೇಲಿನವರಿಗೆ ಅನೇಕ ತರಹದ ಹೆಸರು ಕೊಟ್ಟು ಕರೆಯುತ್ತಿದ್ದರು. ಈ ಎಲ್ಲಾ ವಿಧವಿಧದ ಹೆಸರುಗಳೂ ಎಲ್ಲಾ ಅರ್ಥಗಳೂ ಒಂದೇ ಪದದಲ್ಲಿ ಬರಬೇಕೆಂದರೆ ನಾವು ಬಾಸಿಸಂ ಅನ್ನುವ ಇಂಗ್ಲೀಷ್ ಪದಕ್ಕೆ ಮೊರೆಹೋಗಬೇಕಾಗುತ್ತದೆ.

ಬರೀ ಅರ್ಥವಿನ್ಯಾಸಗಳಿಂದ ಅಲ್ಲದೇ ಬಾಸಿಸಂ ಈಗ ಸರ್ವ[illegible]

ಹರಡಿ ಹೋತಿದೆ.ಅಂದರೆ ಈಗಿನ ಕಾಲದಲ್ಲಿ ಬಾಸಿಸಂನ ಬಿಸಿಗಾಳಿಯಲ್ಲಿ ಬೇಯುದವರಿಲ್ಲ. ಅದರ ಅರ್ಥಟಕ್ಕೆ ಬೆದರದವರಿಲ್ಲ. ಯಾಕೆಂದರೆ ಈಗ ಯಾರನ್ನೇ ತಗೊಂಡರೂ ಅವನಿಗೆ ಒಬ್ಬ ಬಾಸ್ ಇದ್ದೇ ಇರುತ್ತಾನೆ. ಕಚೇರಿ, ಬ್ಯಾಂಕು, ಕೋರ್ಟುಗಳಲ್ಲಿರುವ ಸಿಪಾಯಿ,ಗುಮಾಸ್ತನಿಂದ ಡಿವಿಜನಲ್ ಕಮೀಶನರ್ ಸೆಕ್ರೆಟರಿಯ ವರೆಗೆ, ಕಾರಖಾನೆಯ ಕಾರಕೂನನಿಂದ ಮ್ಯಾನೇಜಿಂಗ್ ಡೈರೆಕ್ಟರ ವರೆಗೆ, ಅಂಗಡಿಯ ಮುಂಗಟ್ಟಿನ ಮಾರಾಟಗಾರನಿಂದ ಮಾಲಿಕನ ವರೆಗೆ, ಜೈಜವಾನನಿಂದ ಜನರಲ್ ವರೆಗೆ, ಜೈಕಿಸಾನನಿಂದ ಜಮೀನುದಾರನ ವರೆಗೆ, ಶಾಲಾ ಮಾಸ್ತರನಿಂದ ಶಿಕ್ಷಣಾಧಿಕಾರಿಗಳ ವರೆಗೆ ಎಲ್ಲೆಲ್ಲಿ ಸುತ್ತಿ ಬಂದರೂ, ಎತ್ತೆತ್ತ ಕಣ್ಣು ಹಾಯಿಸಿದರೂ ಗುಲಾಮರೇ ಗುಲಾಮರು ಕಾಣಸಿಗುತ್ತಾರೆ. ಅಂದರೆ ಇವರೆಲ್ಲರಿಗೂ ಮೇಲೆ ಒಬ್ಬ ಬಾಸ್ ಇದ್ದೇ ಇರುತ್ತಾನೆ. ಇಷ್ಟೇ ಯಾಕೆ, ಈಗಿನ ಸಿನೆಮಾ ಭಕ್ತರಾದ ನಿಮಗೆ ಚೆನ್ನಾಗಿ ಗೊತ್ತೇ ಇದೆ–ಫೈಟರ್ ಶೆಟ್ಟಿ ಸರ್ವಶಕ್ತನರಿ, ಆದರೆ ಅವ ಸರ್ವತಂತ್ರ ಸ್ವತಂತ್ರ ಅಲ್ಲ ಅಂತ ಗೊತ್ತಾಗುವುದು ನೀವು ಆತನ ಬಾಸ್‌ನನ್ನುಕೊನೆಗೆ ನೋಡಿದಾಗಲೇ. ಅಲ್ಲಿ ಸರಕಾರಿ ಸೆಕ್ರೆಟರಿ, ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್, ಮಾಲಕ, ಸೈನ್ಯದ ಜನರಲ್, ಶಿಕ್ಷಣಾಧಿಕಾರಿ ಇವರೇ ಬಾಸ್‌ಗಳು. ಇವರಿಗೆನ್ನಂತಹ ಬಾಸರೇ ಎಂದು ಮಧ್ಯೆ ಬಾಯಿ ಹಾಕಬೇಡಿ. ಕವಿ, ಕತೆಗಾರ, ಸಾಹಿತಿ, ಕಲೆಗಾರ,ಸ್ವಂತ ಉದ್ದಿಮೆಯನ್ನು ನಡೆಸುವ ಮಾಲಕ ಇವರಿಗೂ ಬಾಸ್‌ಗಳು ಇದ್ದೇ ಇದ್ದಾರೆ. ಯೋಚನೆ ಮಾಡಿದರೆ ಇವರಿಗೆ ಹೊರಗೆ ರಾಜಕೀಯ ಪಟುಗಳು,ಮನೆಯೊಳಗೆ ಅಮ್ಮಾವ್ರು ಇವರೇ ನಿಜವಾದ ಬಾಸ್‌ಗಳು.

ನಾವು ನೀವು ನಮ್ಮಂತಹ ಜನಸಾಮಾನ್ಯರು ಕೆಳಗಿನವರಿಗೆ ಬಾಸ್ ಆಗಿರಬಹುದು, ಆದರೂ ನಮಗೂ ಒಬ್ಬ ಬಾಸ್ ಇದ್ದಾರೆ ಅನ್ನುವುದನ್ನು ಮರೆಯುವ ಹಾಗೆ ಇಲ್ಲ. ನಾವು ಬಾಸ್, ನಮಗೆ ಬಾಸ್ ನಮ್ಮ ಬಾಸ್‌ಗೆ ಬಾಸ್ ಅಂತ ಇದಕ್ಕೆ ಕೊನೆಯೇ ಇಲ್ಲ. ಹೀಗೆ ಎಲ್ಲೆಲ್ಲಿ ಸುತ್ತಿ ಸುಣ್ಣವಾಗಿ ಬಂದರೂ ಬಾಸ್‌ನ ಬಾಸಿಸಂನ ವಿಷಚಕ್ರದಿಂದ ತಪ್ಪಿಸಿಕೊಳ್ಳುವುದು ನಮ್ಮಂಥವರಿಗೆ ಸಾಧ್ಯವೇ ಇಲ್ಲ. ಇನ್ನೊಂದು ಮಹತ್ವದ ವಿಚಾರ. ನೀವು ಮನೆ ನೋಡಿಕೊಳ್ಳಬ

ಹಲ್ಲು ಹಿಡಿದು ನೋಡಿ ಎಮ್ಮೆ ಸಾಕಬಹುದು, ಸಂಬಳ ನೋಡಿ ಕೆಲಸಕ್ಕೆ ಸೇರಬಹುದು. ಅಂದರೆ ಇಂತಹ ಅನೇಕ ವಿಚಾರಗಳಲ್ಲಿ ನಿಮ್ಮ ಆಯ್ಕೆಗೆ ಅವಕಾಶವಿದೆ. ಆದರೆ ನೋಡಿ ನಿಮ್ಮ ಬಾಸ್‌ನ್ನು ಮಾತ್ರ ನೀವು ಆರಿಸುವ ಹಾಗೆ ಇಲ್ಲ. ಒಂದು ವೇಳೆ ಮುಖ ನೋಡಿ ಹೊಸ ಕೆಲಸಕ್ಕೆ ಸೇರಿದರೂ, ಮಾರನೆಯ ದಿನವೇ ಅವನಿಗೆ ವರ್ಗವಾಗಿ ಬೇರೊಬ್ಬ ಬಾಸ್ ವಕ್ಕರಿಸಬಹುದು. ಒಂದೇ ಮಾತಿನಲ್ಲಿ ಹೇಳಬೇಕಾದರೆ ನಿಮಗೆ ಸಿಗುವ ಬಾಸ್ ನಿಮ್ಮ ಪುಣ್ಯ ಅಥವಾ ಗ್ರಹಚಾರ ಫಲ ಅಷ್ಟೇ. ಅದನ್ನು ತಪ್ಪಿಸಲು ವಿಧಿಗೂ ಸಾಧ್ಯವಿಲ್ಲ. ಬಾಸಿಸಂನ ವಿಷಚಕ್ರದಿಂದ ತಪ್ಪಿಸಿಕೊಳ್ಳುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ನಮಗೆ ವಕ್ರಿಸಬೇಕಾಗಿದ್ದ ಬಾಸ್‌ನ ಗ್ರಹಚಾರದಿಂದಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಇಷ್ಟು ಸರ್ವವ್ಯಾಪಿಯಾಗಿ, ಕಾಂಗ್ರೆಸ್ ಹುಲ್ಲಿನಂತೆ, ಕ್ಯಾನ್ಸರಿನಂತೆ, ಸಿಗರೇಟಿನ ಹೊಗೆಯಂತೆ, ಅಶಾಂತಿಯ ಧೂಳಿನಂತೆ, ಎಲ್ಲೆಲ್ಲೂ ಹರಡಿರುವ ಬಾಸಿಸಂನ ಬಗ್ಗೆ ನಾವು ಹೆಚ್ಚು ವಿವೇಚನೆ ಮಾಡಿಕೊಳ್ಳದೇ ಇರುವುದು ಎಂತಹ ದುರ್ದೈವ. ಹಾಗಾದರೆ ಬಾಸ್ ಅನ್ನುವುದಕ್ಕೆ ತಿಳಿಯಾದ ಅರ್ಥವೇನು? ಹಿಂದಿನ ಗಾದೆ ಮಾತು–ಆಳಾಗಬಲ್ಲವನು ಅರಸನಾಗಬಲ್ಲ– ಅನ್ನುವುದನ್ನು ವಿಸ್ತರಿಸಿದರೆ ಹೀಗಾಗುತ್ತದೆ. ಆಳಾಗಬಲ್ಲವನು ಅರಸನಾಗಬಲ್ಲ...ದಬ್ಬಾಳುವವನು ಬಾಸಾಗಬಲ್ಲ ಅಂದರೆ ಯಾವುದೇ ರೀತಿಯ ದಬ್ಬಾಳಿಕೆ ನಡೆಸಿ ಜಬರದಸ್ತಿನಿಂದ ಮುನ್ನುಗ್ಗುವವನೇ ಬಾಸ್. ದಬ್ಬಾಳಿಕೆಯೇ ಬಾಸಿನ ಮುಖ್ಯಲಕ್ಷಣ. ಕೆಲವು ವೇಳೆ ನಿಮ್ಮ ಕೆಳಗಿನವರೆ ನಿಮ್ಮ ಮೇಲೆ ಜೋರು ಮಾಡಿದಾಗ ದಬ್ಬಾಳಿಕೆಯ ಲಕ್ಷಣ ತೋರಿಸಿದಾಗ ತಕ್ಷಣ "ಏನ್ಲೆ ನನ್ನ ಮೇಲೇ ಬಾಸ್ ಮಾಡ್ತೀಯಾ ನೀನು, ಸ್ವಲ್ಪ ನಾಲಿಗೆ ಬಿಗಿ ಹಿಡಿ..." ಅಂತ ರೇಗುತ್ತೀರಿ, ನೀವು ನಿಜವಾದ ಬಾಸ್ ಆಗಿದ್ದರೆ. ಬಾಸನ ಎರಡನೆಯ ಮುಖ್ಯ ಲಕ್ಷಣ ಅಂದರೆ ಅವನನ್ನು ಕಂಡರೆ ಅವನ ಕೆಳಗೆ ಕೆಲಸ ಮಾಡುವ ಯಾರಿಗೂ ಸಾಮಾನ್ಯವಾಗಿ ಆಗುವುದೇ ಇಲ್ಲ.

ಬಾಸ್‌ನ ಬಗ್ಗೆ ಅವನ ಕೆಳಗಿನವರಿಗೆ ಒಂದು ರೀತಿಯ ವೈಷಮ್ಯ, ಒಳಗೊಳಗೇ ಕುದಿಯುವ

ನಮ್ಮ ಬಾಸ್ ದೇವರಂಥ ಮನುಷ್ಯ. ತುಂಬಾ
ಒಳ್ಳೆಯವರು. ಅಂತ ಯಾರಾದರೂ ಅಂದಿದ್ದೇ
ಆದರೆ ಆ ಬಾಸ್‌ಗೆ ದಬ್ಬಾಳಿಕೆ ಬರೋಲ್ಲ ಅಂದಾ
ಬಿತ್ತು. ಅಂಥವರನ್ನು ಆದಷ್ಟು ಬೇಗ ಅವರ
ಕೆಳಗಿನವರೋ, ಸಹೋದ್ಯೋಗಿಗಳೋ ಯಾರಾ
ದರೂ ಕೆಳಗೆಳೆದು ತಾವು ಬಾಸ್ ಆಗುತ್ತಾರೆ.
ಹೀಗೆ ನಿಜವಾಗಿ ಬಾಸ್ ಆಗಬೇಕಾದರೆ, ದಬ್ಬಾ
ಳಿಕೆ ನಡೆಸುವುದು ಅತ್ಯಗತ್ಯ: ದಬ್ಬಾಳಿಕೆ ನಡೆಸಿದರೆ
ಕೆಳಗಿನವರ ಕೋಪ, ತಾತ್ಸಾರ, ಬೇಸರ, ವೈಷ
ಮ್ಯಗಳಿಗೆ ಗುರಿಯಾಗುವುದು ತಪ್ಪುವುದಿಲ್ಲ.
ಬಾಸ್‌ಗೂ ನಿಮಗೂ ಏಕೆ ಹತ್ತಿದ ಕೈ ಹರಿ
ಯುಲ್ಲ–ಅಂದರೆ ಶಿಕ್ಕಾಟ ತಪ್ಪುವುದಿಲ್ಲ–ಅನ್ನು
ವುದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬ
ಹುದು. ತನ್ನ ಕೆಳಗಿನವರೆಲ್ಲರ ಕೆಲಸ, ರಜೆ
ಮತ್ತು ನಡತೆಗಳಿಗೆ ತಾನೇ ಪೂರ್ಣ ವಾರಸು
ದಾರ ಅಂತ ಬಾಸ್‌ಗಳು ಯಾವಾಗಲೂ ಯೋಚಿ
ಸುತ್ತಾರೆ. ಕೆಲಸಕ್ಕೆ ಸೇರಿದ ತಕ್ಷಣ ಒಬ್ಬ ನೌಕರ
ತನ್ನೆಲ್ಲ ಹಕ್ಕುಗಳನ್ನೂ ತನ್ನ ಬಾಸ್‌ನ ಹತ್ತಿರ
ಒತ್ತೆ ಇಟ್ಟಿರುತ್ತಾನೆ, ಇಡಲೇಬೇಕು ಅನ್ನು
ವುದು ಬಾಸ್‌ಗಳ ಅಂಬೋಣ. ಆದರೆ ಪ್ರೊಮೋ
ಶನ್ ವಿಚಾರ ಕೇಳಬೇಡಿ. ದಬ್ಬಾಳಿಕೆ ನಡೆಸಲು
ಮೂರು ಕಾರಣ ಸಿಕ್ಕ ಹಾಗೇ ಆಯಿತು. ದಬ್ಬ
ಆಳುವವರಿಗೆ ಕಾರಣ ಬೇರೆ ಬೇಕೆ? ತಮಾಷೆ
ಅಂದರೆ ಸ್ವತಃ ಕೆಲಸ ಬಾರದ ಬಾಸ್ ರೇಗಲು
ರಜೆ ಮತ್ತು ನಡತೆ ಇದ್ದೇ ಇರುತ್ತೆ. ಕೆಲಸವೂ
ಬರದೆ, ನಡತೆಯೂ ಚೆನ್ನಾಗಿಲ್ಲದ, ಬಾಸ್‌ಗೆ ನಿಮ್ಮ
ರಜೆಯ ಬಗ್ಗೆ, ಆಗು ಹೋಗುಗಳ ಬಗ್ಗೆ ಹಿಡಿತ
ಹೆಚ್ಚಾಗಿರುತ್ತೆ. ನಿಮ್ಮ ಕೆಲಸ, ನಡತೆ ತುಂಬಾ
ಚೆನ್ನಾಗಿದ್ದರಂತೂ ರಜೆಯ ಬಗ್ಗೆ ಬಾಸ್ ತನ್ನ
ಹಿಡಿತ ತೋರಿಸಲೇಬೇಕಾಗುತ್ತದೆ. ನಿಮಗೆ ರಜ
ಬೇಕಾಗಿದೆ ಅಂದುಕೊಳ್ಳಿ, ಹೇಗೆ ರಜ ಕೇಳುವು
ದೆಂದು ಬಹಳ ಹಿಂದೆ ಮುಂದೆ ನೋಡುತ್ತೀರಿ.
ಎರಡು ದಿನದಿಂದ ಬಾಸ್ ಹೇಳಿದ ಕೆಲಸ ಎಲ್ಲ
ವನ್ನೂ ಚೆನ್ನಾಗಿ ಮಾಡಿ, ಸಂಜೆ ಏಳು ಗಂಟೆಯ



ವರೆಗೂ ಕಚೇರೀಲೇ ಕಳೆದು, ದಿನಕ್ಕೆ ಹತ್ತು ಸಲ ಆಗ್ಲಿ ಸರ್, ಹೌದು ಸರ್, ಅಂತ 'ಸರ್' ಸುರಿಮಳೆ ಸುರಿಸಿ, ಬಾಸ್‌ನ ಮುಖದಲ್ಲಿ ನಗು ಬರುವುದನ್ನೇ ಕಾದು ತೊದಲುತ್ತ, ತಲೆ ಕೆರೆಯುತ್ತಾ ನಿಮ್ಮ ರಜದ ವಿಷಯ ಹೇಳುತ್ತೀರಿ. ರಜದ ವಿಷಯ ಕೇಳಿದ ತಕ್ಷಣ ಬಾಸಿನ ಮುಖ-ಚರ್ಯೆಯೇ ಬದಲಾಗಿಬಿಡುತ್ತದೆ- ನಗು ಹಾರಿಹೋಗಿ ಮುಖ ಗಂಟಿಕ್ಕಿಕೊಳ್ಳುತ್ತದೆ. ಕಿವಿ ಕೇಳದವರಂತೆ 'ಏನ್ರಿ ಅದು' ಎಂದು ಗರ್ಜಿಸಿದಾಗ ನೀವೇನೋ ಮಹಾಪರಾಧ ಮಾಡಿರುವಂತೆ ನಿಂತಲ್ಲೇ ಕುಸಿಯುತ್ತೀರಿ. ಇಂಥಾ ಪ್ರಸಂಗಗಳು ಸಾಮಾನ್ಯವಾಗಿ ನಮ್ಮೆಲ್ಲನೇಕರಿಗೆ ಅನುಭವವಾಗಿರುತ್ತದೆ, ಮನೇಲೇ ಕೂತು ರಜದ ಚೀಟಿ ಬರೆದು ಎಸೆಯುವ ಈಗಿನ ತರುಣರನ್ನು ಬಿಟ್ಟು. ಇಂತಹ ಒಂದು ಪ್ರಸಂಗದಲ್ಲಿ ನಮ್ಮ ಬಾಸ್ ನನ್ನನ್ನು ದುರುಗುಟ್ಟಿ ನೋಡಿ, "ಅಲ್ರೀ ನಿಮ್ಗೆ ಮದ್ವೆ ಬೇರೆ ದಂಡ, ಅದೂ ಕೆಲಸ ಜಾಸ್ತಿಯಾಗಿರುವ ಈ ಸಮಯದಲ್ಲೇ ನೀವು ಮದ್ವೆ ಮಾಡ್ಕೊಬೇಕೇನ್ರಿ ? ಮದ್ವೆ ಮುಂದಕ್ಕೆ ಹಾಕೊಳ್ರಿ" ಎಂದು ಗದರಿದ್ದರು. ನಾನು ಸಹ ಅಷ್ಟೆ ಕ್ಷೀಣವಾಗಿ "ಸರ್, ಇದು ನನ್ನ ಮದ್ವೆ ಅಲ್ಲ ಸರ್, ನನ್ನ ತಂಗೀ ಮದ್ವೆ. ಮುಂದಕ್ಕೆ ತಳ್ಳೋದು ನನ್ನಿಂದ ಸಾಧ್ಯವಿಲ್ಲ ಸರ್" ಅಂದಾಗ ನಮ್ಮ ಬಾಸ್‌ನ ಸ್ನೇಹಿತರು ನಕ್ಕುಬಿಟ್ಟರು. ಬಾಸ್‌ಗೂ ನಗದೇ ಗತ್ಯಂತರವಿಲ್ಲ. ನನಗೆ ರಜ ಸಿಕ್ಕಿತು. ನನ್ನ ಸ್ನೇಹಿತನಿಗೆ ರಜ ಇಲ್ಲ ಅಂದಾಗ ಆತನೂ ತಮಾಷೆ ಮಾಡಲು ಹೋಗಿ "ಸಾರ್, ಏನು ಮಾಡಲಿ ಸಾರ್, ಈ ಮದುವೆ ಮುಂದೆ ಹಾಕುಕ್ಕೆ ಆಗುಲ್ಲ ಸಾರ್, ಇದು ನನ್ನ ಹೆಂಡತಿಯ ಮದುವೆ ಸಾರ್" ಅಂದಾಗ ನಗುವುದಿರಲಿ ಎಲ್ಲರೂ ದಂಗಾದರು. "ಇಲ್ಲಾ ಸಾರ್, ಹಾಗಂದರೆ ಇವನ ಮದ್ವೆ ವಿಚಾರದಲ್ಲಿ ಇವನ ಮಾತೇನೂ ನಡೆಯುವ ಹಾಗೇ ಇಲ್ಲ, ಇವನ ಭಾವೀ ಹೆಂಡತಿಯ ಮಾತೇ ನಡೆಯುವುದು. ಇವನು ಈಗಾಗಲೇ ಹೆಂಡತಿಯ ಗುಲಾಮ. ಸಾರ್" ಎಂದು ವಿವರಿಸಿದ ಮೇಲೆಯೇ ಎಲ್ಲರ ಮುಖದ ಮೇಲೆ ನಗೆ ಮೂಡಿದ್ದು. ರಜ ಕೇಳಲು ಹೋದಾಗಲೇ

ತಿಳಿಯುವುದು. ನೀವೆಂಥಾ ನಿಷ್ಪ್ರಯೋಜಕರೆಂದು ತಿಳಿಯುವ ಇಚ್ಛೆ ಇದ್ದರೆ ನಿಮ್ಮ ಬಾಸ್ ಹತ್ತಿರ ಹೋಗಿ ನಿಮ್ಮ ಬಡತಿಯ ಬಗ್ಗೆ ವಿಚಾರಿಸಿ. ಇದಲ್ಲದೆ ನಿಮ್ಮ ಒಳ್ಳೆಯ ಗುಣ, ನೀವಿಲ್ಲದಿದ್ದರೆ ಎಷ್ಟು ಕಷ್ಟ ಆದೀತೆಂದು ತಿಳಿಯಬೇಕಾದರೆ ನಿಮ್ಮ ಬಾಸ್‌ನ್ನು ರಜ ಕೇಳಿ.

ಬಾಸ್‌ಗಳಲ್ಲಿ ಎಷ್ಟು ವಿಧ ಅಂತ ಕೇಳಿದಾಗ ನಮ್ಮ ಮಾದ ಬಾಯಿ ಹಾಕಿ "ಎಷ್ಟು ಜನ ಬಾಸ್‌ಗಳಿದ್ದಾರೋ ಅಷ್ಟು ವಿಧ" ಅಂತ ಒಂದೇ ಮಾತಿನಲ್ಲಿ ಮುಗಿಸಿಬಿಟ್ಟ. ಇದೇನೋ ನಿಜ, ಆದರೆ ನಿಮಗೆ ನಮಗೆಲ್ಲಾ ಬಾಸಿಸಂ ಬಗ್ಗೆ ಅರ್ಥವಾಗಬೇಕಾದರೆ. ಆ ಬಾಸಿಸಂನ ಬಿಸಿಯನ್ನು ಕೊಂಚ ಮಟ್ಟಿಗಾದರೂ ಕಡಿಮೆ ಮಾಡಿಕೊಳ್ಳಬೇಕಾದರೆ ಬಾಸ್‌ಗಳಲ್ಲಿರುವ ಮುಖ್ಯ ವಿಧಗಳನ್ನಾದರೂ ಗುರುತಿಸಲೇಬೇಕು. ಹೀಗೆ ಸ್ಥೂಲವಾಗಿ ನೋಡಿದರೆ ಬಾಸ್‌ಗಳನ್ನೆಲ್ಲಾ ನಾಲ್ಕು ವಿಧಗಳಲ್ಲಿ ವಿಂಗಡಿಸಬಹುದು-ಬೊಬ್ಬೆ ಹೊಡೆಯುವ ಬಾಸ್, ಬಂಡ್ವಾಳವಿಲ್ಲದ ಬಾಸ್, ಬೋರ್ ಹೊಡೆಯುವ ಬಾಸ್, ಬೇರೆ ರೀತಿಯ ಬಾಸ್ ಇವೇ ನಾಲ್ಕು ವಿಧಗಳು. ಈ ಬಾಸ್‌ಗಳ ಗುಣಲಕ್ಷಣಗಳೇನು, ಅದಕ್ಕೆ ಹಿನ್ನೆಲೆಯ ಕಾರಣಗಳೇನು, ಅವರ ಜೊತೆ ಹೇಗೆ ನಿಭಾಯಿಸಬೇಕು ಅನ್ನುವ ಬಗ್ಗೆ ಮೊನ್ನೆ ಒಂದು ಥಿಸೀಸ್ ಬರೆದಿದ್ದೇನೆ. ಯಾವುದಾದರೂ ವಿಶ್ವವಿದ್ಯಾಲಯಕ್ಕೆ ಕೊಟ್ಟು ಡಾಕ್ಟರೇಟ್ ಪಡೆಯೋಣ ಅಂತ ಯೋಚನೆ. ಆ ಥೀಸಿಸ್‌ನ ಒಂದು ಭಾಗವನ್ನು ನಿಮ್ಮೆಲ್ಲರ ಉಪಯೋಗಕ್ಕಾಗಿ ಇಲ್ಲಿ ಸಂಗ್ರಹ ಮಾಡಿದ್ದೀನಿ ಅಷ್ಟೆ.

ಬೊಬ್ಬೆ ಹೊಡೆಯುವ ಬಾಸ್ ಹೊತ್ತಿಗೆ ಸರಿಯಾಗಿ ಎಂದೂ ಕಚೇರಿಗೆ ಬರುವುದಿಲ್ಲ. ಕಚೇರಿಗೆ ಬರುವುದೇ ತಡ- ಕೂಗಾಟ, ಅರಚಾಟ ಶುರುವಾಗುತ್ತೆ. ಮೇಜು ಕುರ್ಚಿಯ ಧೂಳು ಸರಿಯಾಗಿ ಒರೆಸಿಲ್ಲ, ನೀರಿನ ಲೋಟ ಕೊಳೆಯಾಗಿದೆ ಎಂದು ಜವಾನನ ಮೇಲೆ ಮೊದಲು ಕಿರುಚಾಟ. ಜವಾನ ಬೆನ್ನು ತಿರುಗಿಸಿದ್ದೇ ತಡ, ಹೆಡ್ಡ ಗುಮಾಸ್ತೇನ ಕರೆದು ಕಾಗದ ಪತ್ರ ಸರಿಯಾಗಿ ನೋಡ್ಲಿಲ್ಲ, ಆ ಕಡತ ಯಾಕೆ ಇನ್ನೂ

ಚಾಟ. ಮೀಟಿಂಗ್ ಕರೆದಾಗ ಇದ್ದವರೆಲ್ಲರ ಮೇಲೆ ಅರಚಾಟ, ಹೊರಗೆ ಇನಸ್ಪೆಕ್ಷನ್ ಅಂತ ಹೊರಟರೆ ಅಲ್ಲಿ ಕೂಗಾಟ, ಯಾರಾದರೂ ದೂರು ತಗೊಂಡು ಬಂದರೆ ಅದನ್ನು ಕೇಳಲಾಗದಷ್ಟು ರೋಷ. ತನ್ನ ಮದುವೆಗೆಂದು ರಜೆ ಕೇಳಲು ಬಂದರೆ "ನಿಂಗೇನು ಹುಚ್ಚೋ ಗಿಚ್ಚೋ? ನಿಂಗೆಂತಾ ಮದುವೆ? ರಜೆ 'ಇಲ್ಲ ಹೋಗು" ಎಂದು ಒದರಾಟ. ಹೀಗೆ ಕ್ಷಣಕ್ಕೊಮ್ಮೆ ಗಳಿಗೆಗೊಮ್ಮೆ ಕೂಗಾಡುವುದು, ಬೊಬ್ಬೆ ಹೊಡೆಯುವುದೇ ಈ ಬಾಸಿನ ಲಕ್ಷಣ. ಇಂತಹ ಬಾಸ್‌ಗಳು ಸಾಮಾನ್ಯವಾಗಿ ತೆಳ್ಳಗೆ ನರಪೇತ ನಾರಾಯಣನ ಹಾಗಿದ್ದು ಹಸಿದ ಮುಖ, ಇಂಗಿದ ಕಣ್ಣು ಹೊಂದಿರುತ್ತಾರೆ. ಧ್ವನಿ ಕ್ಷೀಣವಾಗಿರುತ್ತದೆ. ಇವರ ಕೂಗಾಟಕ್ಕೆ ಕಾರಣ ಇವರ ಅಥವಾ ಇವರ ಮನೆಯವರ ಅನಾರೋಗ್ಯ. ಹಚ್ಚು ಪಾಲು ಇವರಿಗೆ ಹೊಟ್ಟೆಗೆ ಸಂಬಂಧಪಟ್ಟ ಅಲ್ಸರ್, ಇಲ್ಲವೇ ಪೈಲ್ಸ್‌ನಂತಹ ಯಾವುದಾದರೂ ರೋಗ, ಹೇಳಲೂ, ಆರ, ಅನುಭವಿಸಲೂ ಆರ ಅನ್ನುವ ರೋಗ. ಇಲ್ಲವೆ ಇವರ ಮನೆಯಲ್ಲಿ ಹೆಂಡತಿ, ಮಕ್ಕಳಲ್ಲಿ ಯಾರಿಗಾದರೂ ಏನಾದರೂ ಒಂದು ರೋಗ ತಪ್ಪಿದ್ದೇ ಇಲ್ಲ. ಪ್ರಾಯಶಃ ಹೆಂಡತಿ ಅಸ್ಥಮಾ, ಮಗ ಮಂಡ, ಅವರ ಯೋಗಕ್ಷೇಮ ವಿಚಾರಿಸಿಕೊಂಡು ಮನೆಗೆಲಸವನ್ನೂ ತಾವೇ ಮಾಡಿ ಕಚೇರಿಗೆ ಬರುವುದರೊಳಗೆ ಅವರ ಉತ್ಸಾಹ ಚೈತನ್ಯ ಎಲ್ಲಾ ಕಮರಿಹೋಗಿರುತ್ತದೆ. ಮನೆಯಲ್ಲಿ ಅನಾರೋಗ್ಯವಿಲ್ಲದಿದ್ದರೆ ಹೆಂಡತಿ ಹಿಡಿಂಬಾಸುರೆಯಿರಬೇಕು– ಗಂಡನನ್ನೇ ಗುಂಗೆಯಂತೆ ಕೊರೆದು, ಜೋರು ಮಾಡಿ ತನ್ನ ಎಡಗೈ ಹಬ್ಬೆರಳಡಿಯಲ್ಲಿ ಅದುಮಿ ಹಿಡಿದಿರಬೇಕು. ಇಂತಹ ಪರಿಸ್ಥಿತಿಯಲ್ಲಿ ಮನೆಯಲ್ಲಿ ಯಾರ ಮೇಲೂ ರೇಗಲಾರದೆ ಒಳಗೇ ಅದುಮಿಟ್ಟಿದ್ದ ರೋಷ, ತಾಪ ಎಲ್ಲವೂ ಹೆಂಡತಿ ಮರೆಯಾದ ನಂತರ, ಕಚೇರಿಯಲ್ಲಿ ನಮ್ಮ–ನಿಮ್ಮನ್ನು ನೋಡಿದ ತಕ್ಷಣ ಕಟ್ಟೆಯೊಡೆಯುತ್ತದೆ. ಇಂತಹ ಬಾಸನ್ನು ಒಲಿಸಬೇಕಾದರೆ ನಿಮಗೆ ಹೋಮಿಯೋಪತಿ ಗೊತ್ತಿರಬೇಕು. ಇಲ್ಲವೇ ಆ ಹಿಡಿಂಬಿಗೆ ಪ್ರೀತಿಯಾದ ಒಂದೆರಡು ವಿದೇಶೀ ಸಾಮಾನು ಕೊಟ್ಟು, ಅವಳನ್ನು



ಹೊಗಳಿ ಬರಬೇಕು. ನನ್ನ ಸ್ನೇಹಿತ ಮಾದನಿಗೆ ಇಂತಹ ಬಾಸ್ ಸಿಕ್ಕು ಒದ್ದಾಡುತ್ತಿದ್ದಾಗ ಒಂದು ವಿದೇಶೀ ಸೆಂಟ್ ಸೀಶೆಯಲ್ಲಿ ಸ್ವದೇಶಿ ಮಾಲನ್ನು ತುಂಬಿಸಿ ಮಾತನ್ನು ಕಲಿಸಿಕೊಟ್ಟಿದ್ದೆ. ಆ ಬಾಸಿಣಿಯು ಗತ್ತು, ಅವಳ ಹಿಂದೆಯೇ ಬಾಸಿನ ಮುಖ ನೋಡಿ ಮಾದನಿಗೆ ಮಾತೇ ಮರೆತುಹೋಗಿದೆ. ಸೆಂಟ್ ಸೀಶೆ ಕೊಟ್ಟು ಏನೋ ಹೇಳಬೇಕೆಂದುಕೊಂಡು, ಕೊನೆಗೆ ತಡವರಿಸುತ್ತಾ "ಈ ಸೆಂಟ್ ಹೆಸರು ಲವ್ಸ್ ಡಿಲೈಟ್ ಅಂದರೆ ಪ್ರಿಯತಮಗೆ ಮಾತ್ರ ಕೊಡಬೇಕಂತೆ. ನಾನು ಇದನ್ನು ನಿಮಗೇ ಕೊಡಲು ತಂದಿದ್ದೇನೆ" ಅಂದಾಗ ಬಾಸಿಣಿಯ ಮುಖ ಕೆಂಪಾಗಿದ್ದಂತೂ ನಿಜ; ನಾಚಿಕೆಗೋ, ಕೋಪಕ್ಕೋ ಅನ್ನುವುದನ್ನು ಮಾತ್ರ ಕೇಳಬೇಡಿ.

ಬಂಡ್ವಾಳವಿಲ್ಲದ ಬಾಸ್‌ಗೆ ಏನೂ ಸರಿಯಾಗಿ ಗೊತ್ತಿರುವುದಿಲ್ಲ. ಕೆಲಸದ ಬಗ್ಗೆ ಶೂನ್ಯಜ್ಞಾನ, ಕೆಲಸ ಮಾಡಿಸುವ ಚಾಣಾಕ್ಷತನ ಏನೇನೂ ಕಾಣದಷ್ಟು ಒರಟುತನ. ಹೀಗೆ ವ್ಯವಹಾರ ಜ್ಞಾನ ತಿಳುವಳಿಕೆ ಇಲ್ಲದ ಬಾಸ್‌ನ ಖಾಲೀ ತಲೆಯ ಹೊರಗೆಲ್ಲಾ ಪೊದೆ ಪೊದೆ ಗುಂಗುರು ಕೂದಲು. ಇಲ್ಲದ್ದನ್ನು ಮುಚ್ಚಲು ಇವರು ಉಡುವುದು ರಂಗು ರಂಗಿನ ಆಕರ್ಷಕ ಬಟ್ಟೆ.

ಗಳು, ಆಡುವ ಮಾತು ಅವರಿಗೂ ಅರ್ಥವಾಗದ ದೊಡ್ಡ ವೇದಾಂತ. ಮಾಡುವ ಕೆಲಸ ದೊಡ್ಡ ಉಸಾಬರಿಯವು. ಇವರು ಓಡಾಡುವುದು ದೊಡ್ಡ ದೊಡ್ಡ ಜನಗಳೊಂದಿಗೆ, ಆ ಕ್ಲಬ್ ಈ ಕ್ಲಬ್, ರೇಸ್ ಕ್ಲಬ್, ಗಾಲ್ಫ್ ಕ್ಲಬ್‌ಗಳೇ ಇವರ ಸಂಜೆಯ ಠಿಕಾಣಿ, ಕುಡಿತ ಕುಣಿತ, ಚಕ್ಕಂದಗಳೇ ಇವರ ಹವ್ಯಾಸಗಳು. ಸೊಸೈಟಿಯ ಲೇಡಿಗಳೆಲ್ಲಾ ಇವರ ಹಿಂದೆ ಅಥವಾ ಇವರು ಅವರೆಲ್ಲರ ಹಿಂದೆ. ಇವರ ನಡತೆಯ ಬಗ್ಗೆ ನೂರು ಕಥೆ ಕೇಳಿದರೂ ಯಾವುದೂ ಯಾರಿಗೂ ಸರಿಯಾಗಿ ಗೊತ್ತಿರುವುದಿಲ್ಲ. ಇವರು ಆಫೀಸಿಗೆ ಬಂದರೆ ಉಳಿದವರಿಗೆಲ್ಲಾ ತೊಂದರೆ. ಇವರಿಗೆ ಅರ್ಥವಾಗದ್ದನ್ನು ಸರಿಯಾಗಿ ತಿಳಿಹೇಳುತ್ತೇನೆಂದು ಹೊರಟವನಿಗೆ ತಲೆನೋವು ಖಂಡಿತ. ಹೇಳಿದ ವಿಷಯ ಅರ್ಥವಾಗದಿದ್ದರೂ ಅವರ ಬಗ್ಗೆ ತನಗೇ ಚೆನ್ನಾಗಿ ತಿಳಿದಿದೆಯೆಂದು ಅವರು ಕೇಳುವ ಪ್ರಶ್ನೆಗಳು, ಅವರ ಸಲಹೆ ಸೂಚನೆಗಳು, ಅವರ ಅರ್ಥವಿನ್ಯಾಸಗಳು ಎಲ್ಲವನ್ನೂ ಕೇಳಿ ನಿಮಗೆ ತಲೆ ಚಿಟ್ಟು ಹಿಡಿದರೆ ಆಶ್ಚರ್ಯವಿಲ್ಲ. ಅವರ ಮುಂದೆ ಕೂತಾಗ ಅವರು ಬಿಟ್ಟ ಪೈಪಿನ ಹೊಗೆ (ಇಂತಹ ಬಾಸ್ ಸಿಗರೇಟಿಗೆ ಬದಲು ಪೈಪನ್ನೇ ಸೇದುತ್ತಾರೆ) ನಿಮ್ಮ ಮುಖವನ್ನೆಲ್ಲಾ ಸುತ್ತಿ ನಿಮಗೆ ಹೇಗೆ ಕಸಿವಿಸಿಯಾಗುತ್ತದೆ ಅದೇ ರೀತಿ ಅವರ ಬಂಡ್ವಾಳವಿಲ್ಲದ ಮಾತಿನಿಂದ ನಿಮ್ಮ ಬುದ್ಧಿಗೂ ಕಸಿವಿಸಿಯಾಗಿ ಬಿಟ್ಟಿರುತ್ತದೆ. ಪೈಪಿನ ಹೊಗೆ ಹೋಗಲಾಡಿಸಲು ಸ್ವಲ್ಪ ಗಾಳಿ ಸೇವೆ, ಬುದ್ಧಿಯ ಪಲ್ಲಟ ಸರಿಪಡಿಸಲು ಒಂದೆರಡು ಕಪ್ಪು ಚಹಾ, ಸ್ನೇಹಿತರೊಂದಿಗೆ ಒಂದಿಷ್ಟು ಹರಟೆ ಬೇಕೇಬೇಕೆನಿಸುತ್ತದೆ. ಹಾಗಾದರೆ ಈ ಬಂಡ್ವಾಳವಿಲ್ಲದ ನಿಮ್ಮ ಬಾಸ್ 'ಬಾಸ್' ಆದದ್ದಾದರೂ ಹೇಗೆ ಅನ್ನುವ ಪ್ರಶ್ನೆ ಬರುತ್ತದೆ. ಅವರಿಗೆ ನಿಮ್ಮ ಬಾಸ್ ಆಗಿ ಬಡತಿ ದೊರಕಿದ್ದಕ್ಕೆ ನಾನಾ ಕಾರಣಗಳಿರಬಹುದು– ಆ ಬಾಸ್‌ನ ಬಾಸ್‌ಗೆ ಇವರ ಹೆಂಡತಿ ಒಲಿದಿರಬೇಕು ಇಲ್ಲವೇ ದೊಡ್ಡ ಬಾಸ್‌ನ ಹೆಂಡತಿ ಈತನ ಹಿಂದೆ ಬಿದ್ದಿರಬೇಕು. ಅಥವಾ ಟೆನ್ನಿಸ್, ಗಾಲ್ಫ್ ಇವನ್ನು ನಿಮ್ಮ ಬಾಸ್ ದೊಡ್ಡ ಬಾಸ್‌ಗೋ ಅಥವಾ ಈಜುವುದನ್ನು ಅವರ ಹೆಂಡತಿಗೋ ಕಲಿಸುತ್ತಿರಬೇಕು. ಇಂತಹ ದೊಡ್ಡಾಟಗಳನ್ನು ನೀವೂ ಕಲಿತು ನಿಮ್ಮ ಬಾಸ್‌ನ್ನು ಒಲಿಸಿಕೊಳ್ಳಿ ಎಂದು ಹೇಳಲು ಇಷ್ಟವಿಲ್ಲ. ಬಂಡ್ವಾಳವಿಲ್ಲದ ಬಾಸ್‌ನಿಂದ ನಿಮಗೆ ದಿನಪೂರ್ತಿ ಕಿರುಕುಳ, ತಲೆನೋವು. ತಲೆಚಿಟ್ಟು ಹಿಡಿದುಹೋಗುತ್ತದೆ. ಆದರೆ ಈ ಬಾಸ್ ನಿಮ್ಮ ಏಳ್ಗೆ ಬೀಳ್ಗೆಗೆ ಹೆಚ್ಚು ಕಾರಣರಲ್ಲದ್ದರಿಂದ ಸಾಧ್ಯವಾದಷ್ಟೂ ಅವರ ತಲೆ ಮರೆಸಿ ಓಡಾಡಿ, ಒಂದು ವೇಳೆ ಅವರ ಸಲಹೆ ಸೂಚನೆ ಸಿಕ್ಕರೂ ಎಲ್ಲವನ್ನೂ ಹೂಂಗುಟ್ಟಿ ಕೇಳಿ ನಿಮ್ಮ ಕೆಲಸ ನಿಮಗೆ ಸೂಕ್ತವೆನಿಸಿದಂತೆ ಮಾಡಿಕೊಂಡು ಹೋಗಿ; ತಪ್ಪಿಯಾದರೂ ನಿಮ್ಮ ಮನಸ್ಸಿಗೆ ವಿರುದ್ಧವಾಗಿ ಆ ಬಾಸ್‌ನ ಸಲಹೆಯಂತೆ ಕೆಲಸಮಾಡಬೇಡಿ.

ಬೋರ್ ಹೊಡೆಯುವ ಬಾಸ್ ಬಂಡ್ವಾಳವಿಲ್ಲದವರ ತದ್ವಿರುದ್ಧ ಅನ್ನಬಹುದು. ಇವರಿಗೆ ಕೆಳಗಿನಿಂದ ಮೇಲಿನವರೆಗೆ ಪ್ರತಿಯೊಂದು ವಿಷಯವೂ ಗೊತ್ತು. ಇವರು ಸಣ್ಣ ಗುಮಾಸ್ತೆಯ ಅಥವಾ ನೌಕರನ ಹುದ್ದೆಯಿಂದ ಪ್ರತಿ ಹುದ್ದೆಯಲ್ಲಿ ವರ್ಷಗಟ್ಟಲೆ ದುಡಿದು ಬೆವರು ಸುರಿಸಿರುತ್ತಾರೆ. ಕೊನೆಗೆ ಯಾರದೋ ಕೃಪಾಕಟಾಕ್ಷದಿಂದ, ನಿವೃತ್ತಿಗೆ ಮೊದಲಾದರೂ ಈ ಪ್ರಾಣಿ ಒಂದೆರಡು ವರ್ಷ ಆರಾಮವಾಗಿರಲೆಂದು ಇವರಿಗೆ ನಿಮ್ಮ ಬಾಸ್‌ನ ದೊಡ್ಡ ಹುದ್ದೆಗೆ ಬಡತಿಯಾಗಿರುತ್ತದೆ. ಇದರಿಂದ ಯಾವ್ಯಾವ ಹುದ್ದೆಯಲ್ಲಿ ಯಾರ್ಯಾರು ಹೇಗೆ ಕೆಲಸ ತಪ್ಪಿಸುತ್ತಾರೆ, ಮೋಸ ಮಾಡುತ್ತಾರೆ, ಸುಳ್ಳು ಹೇಳಿ ಇನ್ನೊಬ್ಬರ ಮುಖಕ್ಕೆ ಮಸಿ ಬಳಿದು, ಅವರನ್ನು ತುಳಿದು ತಾವು ಹೇಗೆ ಮೇಲೆ ಬರುತ್ತಾರೆ ಅನ್ನುವ ನೂರಾರು ತಂತ್ರ ಕುತಂತ್ರಗಳೆಲ್ಲಾ ಇವರಿಗೆ ಚೆನ್ನಾಗಿ ಮನದಟ್ಟಾಗಿರುತ್ತವೆ. ಇಷ್ಟೆಲ್ಲಾ ಒಳಗುಟ್ಟು ಗೊತ್ತಿದ್ದರೂ ಇವರಿಗೆ ಮೊದಲೇ ಯಾಕೆ ಬಡತಿ ದೊರೆಯಲಿಲ್ಲವೆಂದು ನೀವು ಆಶ್ಚರ್ಯ ಪಡಬಹುದು. ಇದಕ್ಕೆ ಕಾರಣ ಸತ್ಯ, ಧರ್ಮ, ನ್ಯಾಯ, ನಿಯಮ, ಸಂಯಮ, ರೂಲ್ಸ್‌ಗಳ ಬಗ್ಗೆ ಇವರ ಜಿಗುಟುತನ. ಕಣ್ಣು ಕಟ್ಟಿದ ಕುದುರೆಯಂತಹ ಇವರಿಗೆ ಕಾಣುವುದು ಒಂದೇ ದಾರಿ? ಇದರಿಂದಾಗಿ ಯಾರಿಗೂ ಮಣಿಯದೆ, ಯಾರಿಗೂ ಬಗ್ಗದೇ ಎಲ್ಲವನ್ನೂ ಕೆದಕಿ ಬೆದಕಿ



ಎದುರು ಹಾಕಿಕೊಳ್ಳುವುದು ಇವರ ಸಾಮಾನ್ಯ ಗುಣವಾಗಿರುತ್ತದೆ. ಎಲ್ಲರಿಗೂ ಇವರ ಕೆಲಸ, ಚಾಣಾಕ್ಷತನ ನೋಡಿ ಅಸೂಯೆ: ಆದರೆ ಇವರ ಜಿಗುಟುತನ, ಒರಟುತನ ನೋಡಿ ಜಿಗುಪ್ಸೆ: ಇವರ ಜೊತೆಯವರು, ಕೆಳಗಿನವರು ಇವರನ್ನು ದಾಟಿ ಮೇಲೆ ಹೋದದ್ದು ನೋಡಿ ಇವರ ಮೈ, ಮನ, ಮಾತೆಲ್ಲಾ ಬಿಸಿ ಬಿಸಿ, ಕಹಿ ಕಹಿ, ಇಂತಹ ಬಾಸ್‌ನ ಕಣ್ಣು ತಪ್ಪಿಸಿ ಏನಾದರೂ ಮಾಡುತ್ತೇನೆಂದರೆ ಗಿಡುಗನ ಹಾಗೆ ಬೀಳುತ್ತಾರೆ. ತಪ್ಪನ್ನು ಕಂಡು ಹಿಡಿಯಲಂತೂ, ದೊಡ್ಡ ಭೂತಗನ್ನಡಿಯನ್ನೇ ಮೂಗಿನ ಮೇಲೆ ಏರಿಸಿರುತ್ತಾರೆ. ಏನೂ ಕಾಣದಿದ್ದರೆ ನಿಮ್ಮ ಶರ್ಟಿನ ಬಣ್ಣ, ಪ್ಯಾಂಟಿನ ನವೀನ ರೀತಿ, ಹಿಪ್ಪಿ ತಲೆ ಕೂದಲು, ಸಿಗರೇಟು ಸೇದುವ ನಿಮ್ಮ ಚಟ, ಕೊನೆಗೆ ಏನಿಲ್ಲದಿದ್ದರೆ ನೀವು ನಿಲ್ಲುವ ಭಂಗಿ, ಅಂತೂ ಏನಾದರೊಂದು ವಿಷಯದ ಮೇಲೆ ತಪ್ಪು ಕಂಡು ಓಡಿದು ರೇಗುತ್ತಾರೆ. ಈ ಬಾಸ್‌ನ ಜೋರ್‌ನಿಂದಾಗಿ ತಲೆನೋವು ಬಂತೆಂದು ಒಂದ ಲೋಟ ಕಾಫಿಗೆ ಹೊರಟರೆ ಗಡಿಯಾರ ತೋರಿಸಿ 'ಕೂತ್ಕೊಳ್ಳಿ' ಅಂತಾರೆ. ಅಲ್ಲೇ

ಹರಟೆ ಹೊಡೆಯಲೂ ನಿಮಗೆ ಸ್ವಾತಂತ್ರ್ಯವಿಲ್ಲ. ಗುಸುಗುಸುಗುಟ್ಟಿದರೆ ನೀವೆಲ್ಲಾ ಗುಂಪಾಗಿ ಬಾಸ್ ಮೇಲೆ ಏನೋ ಪಿತೂರಿ ನಡೆಸಿದ್ದೀರಿ ಅಂತಲೇ ಅವರ ತೀರ್ಮಾನ. ಒಂದು ವೇಳೆ ನಿಮ್ಮ ಕಚೇರಿಯಲ್ಲಿ ರಿಸೆಪ್ಶನಿಸ್ಟ್ ಆಗೋ ಟೈಪಿಸ್ಟ್ ಆಗೋ ಒಂದು ಚೆಂದೊಳ್ಳೆ ಹೆಣ್ಣು ಕೆಲಸಕ್ಕಿದ್ದರೆ, ಅವಳ ಜೊತೆ ಲೋಕಾರೂಢಿಯಾಗಿ ನೀವೆರಡು ಮಾತಾಡಿದರೆ ದೇವರೇ ಗತಿ. ಒಟ್ಟಿನಲ್ಲಿ ಈ ನಿಮ್ಮ ಬಾಸ್ ಬರೀ ಬೋರಪ್ಪ ಒಂದೇ ಅಲ್ಲ, ಒಂದು ತರಹ 'ಡೌಟಿಂಗ್ ಥಾಮಸ್' ಸಹ –ಅಂದರೆ ಸಂಶಯಪಿಶಾಚಿ. ಇಂತಹವರ ಜೊತೆ ಏಗುವುದು ಕಷ್ಟವೇ ಸರಿ, ಆದರೂ ಬಾಸ್ ಅಂದ ಮೇಲೆ ಏಗಲೇ ಬೇಕಲ್ಲ. ಅದಕ್ಕೆ ಅವರ ಬುದ್ಧಿ–ಮತ್ತೆ, ಸ್ವಾಭಿಮಾನ, ಸಂಶಯಮನ, ಇವುಗಳೇ ಏಟು ಹಾಕಬೇಕು. "ಸಾರ್ ಈ ವಿಚಾರ ನಿಮಗೊಬ್ಬರಿಗೇ ಸರಿಯಾಗಿ ಗೊತ್ತಂತೆ. ಇನ್ನು ಯಾರನ್ನು ಕೇಳಿದರೂ ಪ್ರಯೋಜನವಿಲ್ಲ ಅಂತ ಕೇಳಿದೆ. ಅದಕ್ಕೆ ನಿಮ್ಮ ಸಲಹೆಗೆ ಬಂದೆ" ಅಂದ ತಕ್ಷಣ ಅವರೇ ನಿಮ್ಮ ಅರ್ಧ ಕೆಲಸ ಮಾಡುತ್ತಾರೆ. "ನಾನೂ ಎಲ್ಲರ ಕಾಗದ ಪತ್ರಗಳನ್ನೂ

ವಾಗಿ. ಚೆನ್ನಾಗಿ ಇಂಗ್ಲೀಷ್‌ನಲ್ಲಿ ರಿಪೋರ್ಟ್ ಬರೆಯುವವರನ್ನೂ ನಾನಿನ್ನೂ ನೋಡಿಲ್ಲ" ಎಂದಾಗ ನಿಮ್ಮ ತಪ್ಪುಗಳಿಗೆ ಪೈಗುಳ ಕಡಿಮೆಯಾಗುತ್ತದೆ. ಅಲ್ಲಲ್ಲಿ ಕೇಳಿದ್ದನ್ನು ಬಹಳ ಗುಟ್ಟಾಗಿ ಅವರೊಬ್ಬರಿಗೇ ಹೇಳುವಂತೆ ಗುಸು ಗುಸುಮಾಡಿದರೆ ಅವರ ಸಂಶಯದಿಂದ ನೀವು ಪಾರು.

ಇನ್ನು ಕೊನೆಯದಾಗಿ ಬೇರೆ ರೀತಿಯ ಬಾಸ್. ಈ ವಿಧದಲ್ಲಿ ಮೇಲೆ ಹೇಳಿದ ಜೊಪ್ಪೆ ಹೊಡೆಯುವ ಬಂಡ್ವಾಳವಿಲ್ಲದ ಅಥವಾ ಜೋರ್ ಹೊಡೆಯುವ ಬಾಸ್‌ಗಳನ್ನು ಬಿಟ್ಟು ಮಿಕ್ಕೆಲ್ಲ ಬಾಸ್‌ಗಳನ್ನೂ ಸೇರಿಸಿಬಿಡಬಹುದು. ಬೆದರುಗೊಂಬೆ ಬಾಸ್, ಬೆನ್ನೆಲುಬಿಲ್ಲದ ಬಾಸ್, ನ್ಯಾಗಿಂಗ್ ಬಾಸ್, ಗೊಂದಲಮೂರ್ತಿ ಬಾಸ್, ಎರಡು ನಾಲಿಗೆಯ ಬಾಸ್...ಎಂದು ನಾನಾ ಹೆಸರುಗಳನ್ನು ಇವರಿಗೆ ಕೊಡಬಹುದು. ಆದರೆ ಇವರೆಲ್ಲರನ್ನೂ ನಾನು ಬೇರೆ ರೀತಿಯ ಬಾಸ್ ಎಂದು ಒಂದು ಗುಂಪಿನಲ್ಲಿ ಸೇರಿಸಿದ್ದೇನೆ. ಇವರ ಬಗ್ಗೆ ಹೆಚ್ಚಿನ ವಿವರಗಳಿಗೆ ನಾನು ಪ್ರಕಟಿಸುವ ಥೀಸಿಸ್ ನೋಡಬಹುದು. ಮುಖ್ಯವಾದ ವಿಷಯವೆಂದರೆ ಯಾರು ಎಂತಹ ಬಾಸೇ ಇರಲಿ ಅವರನ್ನು ಚೆನ್ನಾಗಿ ಅರ್ಥ ಮಾಡಿಕೊಂಡು, ಅವರ ತಾಳಕ್ಕೆ ಮೇಳವಾಗಿರಬೇಕು. ಇಲ್ಲವೇ ಅವರ ಗುಟ್ಟನ್ನು ಭೇದಿಸಿ, ಅವರ ಜುಟ್ಟನ್ನು ನಿಮ್ಮ ಕೈಯಲ್ಲಿಟ್ಟುಕೊಂಡು, ನಿಶ್ಚಿಂತೆಯಾಗಿ ಬಾಸಿಸಂನ ಹಂದರದಲ್ಲೇ ಚಿಗುರೊಡೆದು ಬೆಳೆಯುವ ಹಾಗಿರಬೇಕು. ಹಾಗಾದಾಗ ಮಾತ್ರ ನಿಮಗೆ ಬಾಸಿಸಂ ಅನ್ನುವುದು ಬರೀ ಬೆದರುಗೊಂಬೆಯಾದೀತು. 'ಮಕ್ಕಳ ಸ್ಕೂಲ್ ಮನೇಲಲ್ವೇ' ಅಂತ ನೀವೆಲ್ಲಾ ಕೇಳೇ ಇದ್ದೀರಾ? ಆದ್ದರಿಂದ ನಿಮ್ಮ ಬಾಸ್‌ನ್ನು ಅರ್ಥ ಮಾಡಿಕೊಳ್ಳುವ ಮೊದಲ ಪಾಠ ಕಲಿಯಲು ನಿಮ್ಮ ಮನೆಯೊಡತಿಯನ್ನು ಮೊದಲು ಸರಿಯಾಗಿ ಅರ್ಥಮಾಡಿಕೊಳ್ಳಿ– ನೀವು ಹೆಂಡತಿಯ ಗುಲಾಮರೋ, ಅವರು ಗಂಡನ ದಾಸಿಯೋ ಮೊದಲು ತೀರ್ಮಾನಿಸಿ. ಹಾಗೆ ತೀರ್ಮಾನಿಸುವವರೆಗೆ ನಿಮಗೆ ನನ್ನ ನಮಸ್ಕಾರಗಳು. ✡

ಅನುಪಯುಕ್ತ ಮಾಹಿತಿ

ಆರರಿಂದ ಹದಿಮೂರನೆಯ ಶತಮಾನದ ವರೆಗೆ ಜಗತ್ಪ್ರಸಿದ್ಧಿ ಪಡೆದಿದ್ದ ವಿದ್ಯಾಕೇಂದ್ರ ನಾಲಂದಾ. ಇಲ್ಲಿ ಸ್ತ್ರೀಯರಿಗೂ ಪ್ರವೇಶವಿತ್ತು. ಇಲ್ಲಿನ ವಿದ್ಯಾರ್ಥಿಗಳು ಸ್ತ್ರೀಯರನ್ನು ಕಣ್ಣೆತ್ತಿ ನೋಡುವಂತಿರಲಿಲ್ಲ. ಇಂಥ ಅಪರಾಧ ಮಾಡಿದವರಿಗೆ ಒಂದು ವರ್ಷ ಕಾಲ ಬಾಲ ತೂಗಾಡುತ್ತಿರುವ ಕತ್ತೆಯ ಚರ್ಮ ಹೊದೆದು ತಮ್ಮ ಪಾಪ ನಿವೇದನೆ ಮಾಡಿಕೊಳ್ಳುತ್ತ ಭಿಕ್ಷೆ ಬೇಡುವ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

*

ಸ್ತ್ರೀಯರೇ ವಹಿವಾಟು ನಡೆಸುವ ದೊಡ್ಡ ಬಜಾರು ಮಣಿಪುರದಲ್ಲಿದೆ.

*

ಲಕ್ಷ್ಮಣ ದೇವಾಲಯ ಹೃಷಿಕೇಶದಲ್ಲಿದೆ.

*

ಬೀರಬಲ್‌ನ ಹುಟ್ಟು ಹೆಸರು ಮಹೇಶದಾಸ್.

*

ಪ್ರಪಂಚದಲ್ಲೇ ದೊಡ್ಡದಾದ ಬೌದ್ಧ ಸ್ತೂಪ ಜಾವಾ ದ್ವೀಪದಲ್ಲಿದೆ. ಈ ಸ್ತೂಪ

ಇದು ಸರ್ವರೋಗಗಳಿಗೂ ರಾಮಬಾಣವಾಗಬಹುದೆ ?

ವೈದ್ಯಕೀಯರಂಗದ ವಿಸ್ಮಯ: ಇಂಟರ್‌ಫೆರಾನ್

ಯಮುನಾಬಾಯಿ ಆರ್. ರಾವ್

ವೈರಸ್ ರೋಗ ತಗುಲಿದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಸ್ವಾಭಾವಿಕವಾಗಿ ಶರೀರದಲ್ಲಿ ಉದ್ಭವವಾಗುವ ಪದಾರ್ಥವೊಂದು ಈಗ ವೈದ್ಯಕೀಯ ವಿಜ್ಞಾನದಲ್ಲಿ ಅಪಾರ ಕೀರ್ತಿ ಗಳಿಸಿದೆ. ಬ್ಯಾಕ್ಟೀರಿಯಗಳಿಂದ ಬರುವ ಅನೇಕ ರೋಗಗಳಿಗೆ ಮದ್ದಾಗಿ ಸಲ್ಫಾ ಔಷಧಿಗಳು ಮತ್ತು ಪೆನಿಸಿಲಿನ್ ವೈದ್ಯಕೀಯ ರಂಗದಲ್ಲಿ ಹೊಸ ಅಧ್ಯಾಯವನ್ನೇ ಆರಂಭಿಸಿದವು. ಹೀಗೆಯೇ ಇಂಟರ್‌ಫೆರಾನ್ ಎಂದು ಹೆಸರು ಪಡೆದಿರುವ ಈ ಪದಾರ್ಥ ಅದೇ ರೀತಿಯಲ್ಲಿ ಅದೇ ರೀತಿಯ ಎಲ್ಲ ವೈರಸ್ ರೋಗಗಳಿಗೆ ಮದ್ದಾಗಬಲ್ಲುದೆಂಬ ಆಸೆ ಹುಟ್ಟಿಸಿದೆ ಮತ್ತು ವೈರಸ್ ಸಂಬಂಧದ ಕ್ಯಾನ್ಸರ್ ಮಾತ್ರವಲ್ಲದೆ ವಿಕಿರಣದಿಂದ ಹಾಗೂ ರಾಸಾಯನಿಕಗಳಿಂದ ಉಂಟಾಗುವ ಕ್ಯಾನ್ಸರ್‌ಗಳನ್ನೂ ಗುಣಪಡಿಸುವ ಭರವಸೆಯನ್ನು ಕೊಟ್ಟಿದೆ. ದೇಹದ ರೋಗ ನಿರೋಧ ವ್ಯವಸ್ಥೆಯಲ್ಲಿಯೂ ಇದು ಪ್ರಮುಖ ಪಾತ್ರ ವಹಿಸುತ್ತಿರಬೇಕೆಂದು ವಿಜ್ಞಾನಿಗಳು ಈಗ ಅನುಮಾನಿಸುತ್ತಿದ್ದಾರೆ.

ಇಂಟರ್‌ಫೆರಾನ್ ಗುಣಪಡಿಸಬಹುದೆಂದು ವಿಜ್ಞಾನಿಗಳು ಈ ತನಕ ತೋರಿಸಿ ಕೊಟ್ಟಿರುವ ರೋಗಗಳ ಪಟ್ಟಿ ಇಲ್ಲಿದೆ: ನೆಗಡಿ, ಸರ್ಪಸುತ್ತು, ಶೀತಾಳಿ ಸಿಡುಬು, ವೈರಸ್ಸಿನಿಂದ ಬರುವ ಕಣ್ಣುನೋವು, ನವಜಾತ ಶಿಶುಗಳಿಗೆ ತಗಲುವ ವೈರಸ್ ಕಾಯಿಲೆಗಳು, ಘೋರವಾದ ಆಸ್ಟಿಯೋ ಜೆನಿಕ್ ಸಾರ್ಕೋಮ ಎಂಬ ಮೂಳೆಯ ಕ್ಯಾನ್ಸರ್, ಕ್ಯಾನ್ಸರ್ ಅಲ್ಲದಿದ್ದರೂ ಹಾನಿಕರವಾದ ದುರ್ಮಾಂಸಗಳು, ಸ್ತನಗಳ ಕ್ಯಾನ್ಸರ್, ಮಲ್ಟಿಪಲ್ ಮಯೆಲೋಮ (ಲಿಂಫೋಮ), ಮಲೇರಿಯ ಇತ್ಯಾದಿ. ಸ್ವತಃ ದೇಹದ ರಕ್ಷಣಾವ್ಯವಸ್ಥೆ ಅದೇ ದೇಹಕ್ಕೆ ಇದಿರಾಗಿ ವರ್ತಿಸುವ ಮತ್ತು ಈ ತನಕ ನಿರ್ದಿಷ್ಟ ಔಷಧ ಶೋಧಿಸದ ರ್ಹ್ಯುಮಟಾಯಿಡ್ ಆರ್ಥ್ರೈಟಿಸ್ ಎಂಬ ಸಂಧಿವಾತ ಸಹ ಇಂಟರ್‌ಫೆರಾನಿನಿಂದ ಗುಣವಾಗುವ ಸೂಚನೆಗಳಿವೆ.

ಇಂಟರ್‌ಫೆರಾನ್ ಶರೀರಕ್ಕೆ ಅಷ್ಟು ಹಾನಿಕರವಲ್ಲ. ಈಗ ಉಪಯೋಗಿಸುತ್ತಿರುವ ಕ್ಯಾನ್ಸರ್ ವಿರೋಧಿ ರಾಸಾಯನಿಕಗಳು ಆರೋಗ್ಯವಂತ ಕೋಶಗಳಿಗೂ ಹಾನಿ ಮಾಡುತ್ತವೆ. ಮೊದಲೇ ದುರ್ಬಲವಾಗಿರುವ ಕ್ಯಾನ್ಸರು ರೋಗಿಯ

ಸೋಂಕು ನಿರೋಧಿ ರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ಹಾಳು ಮಾಡುತ್ತವೆ. ಎಷ್ಟೋ ಕ್ಯಾನ್ಸರ್ ರೋಗಿಗಳು ಹೀಗಾಗಿ ಇತರ ಸೋಂಕುಗಳಿಗೆ ತುತ್ತಾಗುತ್ತಾರೆ. ಈಚೆಗೆ ನಿಧನರಾದ ಇರಾನಿನ ಮಾಜಿ ಷಾ ಅವರಿಗೂ ಹೀಗೇ ಆಯಿತೆಂದು ವರದಿಗಳು ಬಂದಿವೆ. ಆದರೆ ಇಂಟರ್‌ಫೆರಾನ್ ದೇಹದಲ್ಲೇ ಉದ್ಭವಿಸುವ ಸ್ವಾಭಾವಿಕ ಪದಾರ್ಥ. ಇದರಿಂದ ರೋಗಿಗೆ ಸ್ವಲ್ಪ ಜ್ವರ ಬಂದು ಸುಸ್ತಾಗಬಹುದು. ಮೂಳೆಯ ಮಜ್ಜೆಯಲ್ಲಿ ರಕ್ತ ಕಣಗಳ ಉತ್ಪಾದನೆ ಸ್ವಲ್ಪ ತಗ್ಗಬಹುದು ಅಷ್ಟೆ. ಇದು ವೈರಸ್ ಸೋಂಕುಗಳನ್ನೂ ಎದುರಿಸುವುದರಿಂದ ಮೊದಲೇ ದುರ್ಬಲವಾದ ರೋಗಿಗೆ ತಗಲುವ ಸೋಂಕುಗಳಿಂದಲೂ ರಕ್ಷಣೆ ನೀಡುತ್ತದೆ. ಆದರೆ ಇದರ ದೀರ್ಘಕಾಲಿಕ ಪರಿಣಾಮಗಳು ಇನ್ನೂ ಗೊತ್ತಾಗಿಲ್ಲ.

ಇಷ್ಟೆಲ್ಲಾ ಆಸೆಗಳನ್ನು ಮೂಡಿಸಿರುವ ಈ ಪದಾರ್ಥ ಬೆಳಕಿಗೆ ಬಂದದ್ದು ೧೯೫೭ರಲ್ಲಿ. ಒಬ್ಬ ವ್ಯಕ್ತಿಗೆ ಒಂದು ವೈರಸ್ ರೋಗ ಬಂದಿದ್ದಾಗ ಮತ್ತೊಂದು ವೈರಸ್ ಸೋಂಕು ಏಕೆ ತಗಲುವುದಿಲ್ಲ ಎಂಬ ಬಗ್ಗೆ ಲಂಡನ್ನಿನಲ್ಲಿ ಸಂಶೋಧನೆ ನಡೆಸುತ್ತಿದ್ದ ಡಾ. ಅಲಿಕ್ ಐಸಾಕ್ಸ್ ಮತ್ತು ಡಾ. ಜಾನ್ ಲಿಂಡೆನ್ ಮಾನ್ ಪರಿಶೀಲಿಸಿದಾಗ ವೈರಸ್‌ಗ್ರಸ್ತ ಕೋಶದಿಂದ ಉತ್ಪತ್ತಿಯಾಗುತ್ತಿದ್ದ ಒಂದು ಪದಾರ್ಥ ಇದಕ್ಕೆ ಕಾರಣವೆಂದು ತಿಳಿಯಿತು. ಇದಕ್ಕೆ ಇಂಟರ್‌ಫೆರಾನ್ ಎಂದು ಹೆಸರಿಟ್ಟರು. ಇಂಗ್ಲೀಷ್ ಭಾಷೆಯಲ್ಲಿ ಇಂಟರ್ ಫಿಯರ್ ಎಂದರೆ ಮಧ್ಯೆ ಪ್ರವೇಶಿಸು, ಅಡ್ಡ ಬಾ ಎಂದರ್ಥ. ವೈರಸ್ ಆರೋಗದಿಂದ ಪ್ರಚೋದಿತವಾದ ಕೋಶಗಳು ಬೇರೆ ವೈರಸ್ ಸೋಂಕುಗಳಿಗೆ ಅಡ್ಡ ಬರುವ ಏನನ್ನೋ ಉತ್ಪಾದಿಸುವವು ಎಂದಾಯಿತು.

ಇದು ತುಂಬ ಅರ್ಥವತ್ತಾದ ಸಂಗತಿ; ಪೆನ್ಸಿಲಿನ್ ಸಂಶೋಧನೆಯಷ್ಟೇ ಮಹತ್ತ್ವಪೂರ್ಣವಾದದ್ದು. ಈ ಪದಾರ್ಥವನ್ನು ಕೃತಕವಾಗಿ ತಯಾರಿಸಲು ಸಾಧ್ಯವಾದರೆ ಅನೇಕಾನೇಕ ವೈರಸ್ ರೋಗಗಳಿಗೆ ನಿರ್ದಿಷ್ಟವಾದ ಔಷಧವಾಗಬಲ್ಲದೆಂಬ ಬಗ್ಗೆ ಆಸೆ ಮೊಳೆಯಿತು. ಆದರೂ ಆಗ ಎಷ್ಟೋ ಸಲ ಇತರ ಸುಳಿವುಗಳ ಬೆನ್ನು ಹತ್ತಿ, ನಿರಾಶರಾಗಿದ್ದ ವಿಜ್ಞಾನಿಗಳು ಇದನ್ನು ಶಂಕೆಯಿಂದಲೇ ನೋಡಿದರು. ಈ ಕಾರ್ಯದಲ್ಲಿ ವೈದ್ಯರಿಗಿಂತಲೂ ಜೀವರಸಾಯನಶಾಸ್ತ್ರಜ್ಞರು ಯಶಸ್ವಿಯಾಗಬಲ್ಲರೆಂದು ಯೋಚಿಸಿ ಲಿಂಡೆನ್ ಮಾನ್ ಮೂರು ವರ್ಷಗಳ ನಂತರ ಬೇರೆ ಸಂಶೋಧನೆಗಳತ್ತ ಗಮನಹರಿಸಿದರು. ಐಸಾಕ್ಸ್ ಮಿದುಳಿನಲ್ಲಿ ದುರ್ಮಾಂಸ ಬೆಳೆದುದರಿಂದ ೧೯೬೭ರಲ್ಲಿ ತೀರಿಕೊಂಡರು.

ಕೇವಲ ಕೆಲವೇ ವಿಜ್ಞಾನಿಗಳು ಎಷ್ಟೋ ವರ್ಷಗಳು ಕಷ್ಟಪಟ್ಟು ಕೆಲಸ ಮಾಡಿದ್ದರ ಫಲವಾಗಿ ಇಂಟರ್‌ಫೆರಾನ್ ೧೫೦ ಅಮೈನೊ ಆಮ್ಲಗಳಿರುವ ಗ್ಲೈಕೋಪ್ರೋಟೀನೆಂದೂ ಜೀವಂತ ಕೋಶಗಳು ಯಾವುದಾದರೂ ಪ್ರಚೋದನೆಗೊಳಗಾದಾಗ, ಮುಖ್ಯವಾಗಿ ವೈರಸ್ ಅಂಟಿದಾಗ, ಇದನ್ನು ಉತ್ಪಾದಿಸುತ್ತವೆಯೆಂದೂ ತಿಳಿಯಿತು. ಈಗ ಮೂರು ಬಗೆಯ ಇಂಟರ್‌ಫೆರಾನ್‌ಗಳನ್ನು ಗುರುತಿಸಲಾಗಿದೆ; ಬಿಳಿ ರಕ್ತಕಣಗಳಲ್ಲಿ ತಯಾರಾಗುವುದು, ಚರ್ಮ ಮತ್ತಿತರ ಅಂಗಗಳಲ್ಲಿ ಜೋಡಣೆಯ ಕೋಶಗಳಾದ ಫೈಬ್ರೋಬ್ಲಾಸ್ಟ್ ಕಣಗಳಿಂದ ಬರುವುದು, ಶರೀರರಕ್ಷಣಾ ವ್ಯವಸ್ಥೆಯ ಅಂಗಗಳಾಗಿದ್ದು ಪರಕೀಯ ಆಕ್ರಮಣಕಾರಿಗಳನ್ನೆದುರಿಸುವ ಕೋಶಗಳಾದ ಲಿಂಫೋಸೈಟುಗಳಿಂದ ಉತ್ಪತ್ತಿಯಾಗುವುದು.

ಇಂಟರ್‌ಫೆರಾನ್ ಸುಲಭವಾಗಿ ಕೈಗೆ ಸಿಗುವ ವಸ್ತುವಲ್ಲ. ಶರೀರದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಉತ್ಪನ್ನವಾಗುವ ಇದರ ತಯಾರಿಕೆ ಜೀವಂತ ಕೋಶಗಳಿಂದ ಮಾತ್ರ ಸಾಧ್ಯ. ಪ್ರಯೋಗಶಾಲೆಯಲ್ಲಿ ಇವನ್ನು ಪಡೆಯಬೇಕಾದರೆ ಜೀವಕೋಶಗಳನ್ನು ತೆಗೆದು ಅವುಗಳಿಗೆ ವೈರಸ್ ಸೋಂಕು ಬರಿಸಿ ಆ ಕೋಶಗಳಿಗಿರುವ ಪೋಷಕ ದ್ರವದಿಂದ ಇದನ್ನು ಪಡೆಯಬೇಕು. ಇದನ್ನು ಪ್ರತ್ಯೇಕಿಸುವುದೂ ಕಷ್ಟ. ಒಂದು ಪ್ರಾಣಿ ಜಾತಿಯ ಇಂಟರ್‌ಫೆರಾನ್ ಆ ಪ್ರಾಣಿ ಜಾತಿಯಲ್ಲಿ ಮಾತ್ರ ಕೆಲಸ ಮಾಡುತ್ತದೆ. ಹೀಗಾಗಿ ಇಂಟರ್‌ಫೆರಾನ್ ಮಾನವರಲ್ಲಿ ರೋಗ ನಿವಾರಣೆ ಮಾಡಬಲ್ಲುದೇ ಆಗಿದ್ದಲ್ಲಿ ಇದರ ಕಾರ್ಯವಿಧಾನವೇನು? ಎಂಬುದನ್ನು ಅಧ್ಯಯನ ಮಾಡುವ ಕಾರ್ಯ ನಿಧಾನವಾಗಿ ಮುನ್ನಡೆಯಿತು.

೧೯೬೦ರ ದಶಕದಲ್ಲಿ ನಡೆದ ಒಂದು ಪ್ರಯೋಗ ಗಮನಾರ್ಹ. ವೈರಸ್ ಸೋಂಕಿನಿಂದ ದೇಹದಲ್ಲಿ ಇಂಟರ್‌ಫೆರಾನ್ ಉತ್ಪಾದನೆಯಾಗುತ್ತದೆಯಷ್ಟೆ. ವೈರಸ್ಸನ್ನು ಹೋಲುವ ಕೃತಕ ಆರ್.ಎನ್.ಎ.ಯ ಜೋಡಿಸರಣಿಗಳನ್ನು ಸೂಜಿಮದ್ದಿನಿಂದ ಮಾನವರಲ್ಲಿ ಒಳ ಸೇರಿಸಿ ಇದರ ಉತ್ಪಾದನೆಯನ್ನು ಪ್ರಚೋದಿಸಲು ಸಾಧ್ಯವೇ ಎಂದು ಮರ್ಕ್ ಸಂಸ್ಥೆಯಲ್ಲಿ ಪ್ರಯೋಗ ನಡೆಯಿತು. ಇದರಿಂದ ಅಷ್ಟೇನೂ ಪ್ರಯೋಜನ ಕಾಣಲಿಲ್ಲ. ಕೆಲವು ವೇಳೆ ಇಂತಹ ಪ್ರಚೋದಕಗಳಿಂದ ಬಹಳ ಹಾನಿಯೂ ಆದುದರಿಂದ ಈ ಪ್ರಯೋಗಗಳನ್ನು ಆಗ ಕೈ ಬಿಡಲಾಯಿತು. ಆದರೂ ಇತ್ತೀಚೆಗೆ ಹೊಸ ಪ್ರಚೋದಕವೊಂದು ಇಂಥ ಪ್ರಯೋಗಗಳಲ್ಲಿ ಒಳ್ಳೆಯ ಫಲ ತೋರಿಸುತ್ತಿದೆಯೆಂದು ವರದಿಯಾಗಿದೆ.

ಸದ್ಯಕ್ಕೆ ಸಂಶೋಧನೆಗಳಿಗಾಗಿ ಇಂಟರ್‌ಫೆರಾನ್ ಒದಗುತ್ತಿರುವುದು ಫಿನ್ಲೆಂಡಿನ ವೈರಸ್ ತಜ್ಞ ಕಾರಿಕಾಂಟೆಲ್ ಅವರ ಪ್ರಯೋಗಶಾಲೆಯಿಂದ. ೧೯೬೩ ರಿಂದ ಹತ್ತು ವರ್ಷ ಕಾಲ ಒಂದೇ ಸಮ ಶ್ರಮಿಸಿ ಮಾನವ ರಕ್ತದ ಬಿಳಿ ಕಣಗಳಿಂದ ಇಂಟರ್‌ಫೆರಾನನ್ನು ಬೇರ್ಪಡಿಸುವ ವಿಧಾನವನ್ನು ಇವರು ರೂಪಿಸಿಕೊಂಡರು. ಹಲವು ಲೀಟರ್ ರಕ್ತವನ್ನು ಸಂಸ್ಕರಿಸಿದರೆ ಎಲ್ಲೋ ಸ್ವಲ್ಪ ಇಂಟರ್‌ಫೆರಾನ್ ಸಿಗುತ್ತದೆ. ಉದಾಹರಣೆಗೆ ೧೯೭೯ರಲ್ಲಿ ೪೫೦೦೦ ಲೀಟರ್ ರಕ್ತ ಸಂಸ್ಕರಿಸಿದಾಗ ಸಿಕ್ಕಿದ್ದು ಕೇವಲ ೪೦೦ ಮಿಲಿ ಗ್ರಾಮ್‌ಗಳಷ್ಟು. ಹೀಗೆ ಇದು ಅತ್ಯಂತ ಬೆಲೆ ಬಾಳುವ ಪದಾರ್ಥವಾಗಿದೆ.

ಇಂಟರ್‌ಫೆರಾನ್ ವೈರಸ್ಸಿಗೆ ಎದುರಾಗಿ ಕೆಲಸ ಮಾಡುವುದು ಹೇಗೆ? ಯಾವುದೇ ಕೋಶಕ್ಕೆ ವೈರಸ್ ತಗುಲಿದಾಗ ಅದು ಇಂಟರ್ ಫೆರಾನನ್ನು ಉತ್ಪಾದಿಸಲು ಪ್ರಾರಂಭಿಸುತ್ತದೆ. ಇಂಟರ್‌ಫೆರಾನ್ ವೈರಸ್ಸುಗಳ ಮೇಲೆ ನೇರವಾಗಿ ದಾಳಿ ಮಾಡುವುದಿಲ್ಲ. ಉಳಿದ ಕೋಶಗಳಿಗೆ ಹೋಗಿ ಅವು ವೈರಸ್ ವಿರೋಧಿ ಪ್ರೋಟೀನುಗಳನ್ನು ಉತ್ಪಾದಿಸಲು ಉತ್ತೇಜನ ಕೊಡುತ್ತದೆ. ಇವು ಉಳಿದ ಕೋಶಗಳಲ್ಲಿ ವೈರಸ್ ಸಂತಾನ ಬೆಳೆಯದಂತೆ ತಡೆಗಟ್ಟಿ ಅನೇಕ ಕೋಶಗಳಿಗೆ ವೈರಸ್ಸಿನಿಂದ ರಕ್ಷಣೆ ನೀಡಿ ಕಡೆಗೆ ಇಡೀ ಪ್ರಾಣಿಯನ್ನೇ ವೈರಸ್ಸಿನಿಂದ ರಕ್ಷಿಸುತ್ತದೆ. ಇಂಟರ್ ಫೆರಾನ್ ಅಣುಗಳು ಕೋಶಗಳನ್ನು ಎಚ್ಚರಿಸುವ ಸಂದೇಶವಾಹಕಗಳಾಗಿವೆ. ಅಂದರೆ ಅವು ವೈರಸ್ ದಾಳಿಯನ್ನು ಎದುರಿಸಲು ಸಜ್ಜಾಗುವ ವ್ಯವಸ್ಥೆಯ ಮುಂಚೂಣಿ ದಳ.

ಅಷ್ಟೇ ಅಲ್ಲ. ವಿಜ್ಞಾನಿಗಳಿಗೆ ಈಗ ಎನಿಸುತ್ತಿರುವುದು ಇಂಟರ್‌ಫೆರಾನ್ ದೇಹದ ಸಮಗ್ರ ರಕ್ಷಣಾ ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತದೆ ಎಂದು. ಪರಕೀಯ ಪದಾರ್ಥಗಳನ್ನು ಕಬಳಿಸುವ ಮ್ಯಾಕ್ರೋಫೇಜ್ ಕೋಶಗಳನ್ನು ಇದು ಕೂಡಿಹಾಕುತ್ತದೆ. ಹಂತಕ ಕೋಶಗಳೆಂದು ಕರೆಯಬಹುದಾದ ಒಂದು ರೀತಿಯ ಲಿಂಫೋಸೈಟುಗಳನ್ನು ಪ್ರಚೋದಿಸುತ್ತದೆ. ಕ್ಯಾನ್ಸರ್ ಕೋಶಗಳನ್ನು ಇದು ನಾಶಪಡಿಸದಿದ್ದರೂ ಅವುಗಳ ಸಂತಾನ ವೃದ್ಧಿಯಾಗದಂತೆ ತಡೆಗಟ್ಟುತ್ತದೆ ಮತ್ತು ಒಟ್ಟಿನಲ್ಲಿ ಕೋಶ ವಿಭಜನೆಯ ಗತಿ



"ಎರಡು ಸೈಕಲ್ ಕದ್ದ ಮೇಲೆ ಮೂರು ತಿಂಗಳು ಕದಿಯೋದು ಬಿಟ್ಟುಬಿಟ್ಟದ್ದೆ. ಒಳಗಿದ್ದೆ"

ಯನ್ನು ನಿಧಾನ ಮಾಡುತ್ತದೆ, ಅಂದರೆ ರೋಗಿ ನಿರೋಗೀ ಕೋಶಗಳೆರಡರ ಬೆಳವಣಿಗೆಯನ್ನೂ ಕಡಿಮೆ ಮಾಡುತ್ತದೆಯೆಂದು ತಜ್ಞರ ಅನಿಸಿಕೆ. ವೈರಸ್ ಸವಾಲಿಗೆ ಜವಾಬಾಗಿ ಉದ್ಭವಿಸುವ ಈ ವಸ್ತುವನ್ನು ಕ್ಯಾನ್ಸರ್ ರೋಗದಲ್ಲಿ ಅವರು ಪ್ರಯೋಗಿಸಲು ಕೆಲವು ವಿಧದ ಕ್ಯಾನ್ಸರುಗಳಿಗೂ ವೈರಸ್ಸುಗಳಿಗೂ ಸಂಬಂಧವಿರುವುದೇ ಕಾರಣವಾಗಿದ್ದರೂ ಈಗ ವೈರಸ್ ಸಂಬಂಧವೇ ಇಲ್ಲದ, ಕೇವಲ ವಿಕಿರಣಗಳಿಂದ ಅಥವಾ ರಾಸಾಯನಿಕಗಳಿಂದ ಬಂದ ಕ್ಯಾನ್ಸರುಗಳ ಮೇಲೂ ಇದು ಪರಿಣಾಮಕಾರಿಯೆಂದು ತಿಳಿದು ಬಂದಿದೆ. ವಿಜ್ಞಾನಿಗಳು ಮತ್ತೂ ಮುಂದೆ ಹೋಗಿ ಆರೋಗ್ಯವಾದ ಅಂಗಾಂಶಗಳನ್ನು ರೋಗಿಗಳಲ್ಲಿ ಕಸಿ ಮಾಡುವ ಸಂದರ್ಭಗಳಲ್ಲೂ ಇದು ಉಪಯುಕ್ತವಾಗಬಲ್ಲುದೇ ಎಂದು ಪರಿಶೀಲಿಸುತ್ತಿದ್ದಾರೆ. ಏಕೆಂದರೆ ಕೋಶವಿಭಜನೆ, ಕೋಶಗಳ ಉಪಾಪಚಯ ಕ್ರಿಯೆಗಳು, ಕೋಶದ ಪ್ರೋಟೀನ್ ತಯಾರಿಕಾ ವ್ಯವಸ್ಥೆ ಇವೆಲ್ಲದರ ಮೇಲೂ ಮೂಲಭೂತವಾದ ಪ್ರಭಾವ ಬೀರಬಲ್ಲ ಶಕ್ತಿ ಇಂಟರ್‌ಫೆರಾನಿಗೆ ಇರಬಹುದೆಂದು ಊಹೆ ಇವರಿಗೆ ಬಂದಿದೆ. ಅಂತೂ ಪ್ರಾಣಿಗಳಲ್ಲಿ ಇದು ಬಹುಮುಖ ಪ್ರಭಾವ ಬೀರುತ್ತದೆ.

ಈ ಪದಾರ್ಥಕ್ಕೆ ವಿಜ್ಞಾನಿಗಳು ಅನುಕೂಲಕ್ಕಾಗಿ ಇಟ್ಟು ಕೊಂಡಿರುವ ಮೊಟಕು ಹೆಸರು I.F. ಎಂದು. ಇಂಗ್ಲೀಷ್ ಭಾಷೆಯಲ್ಲಿ ಇದರರ್ಥ "ರೆ" ಎಂದಾಗುತ್ತದೆ. ಸದ್ಯಕ್ಕಂತೂ ಇದು ಒಂದು ರೀತಿಯಲ್ಲಿ ಅನ್ವರ್ಥನಾಮವೇ ಆಗಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಮಾನವರಲ್ಲಿ ಪ್ರಯೋಗ ನಡೆಸಲು ಸಾಕಷ್ಟು ಇಂಟರ್‌ಫೆರಾನ್ ತ್ವರಿತವಾಗಿ ಸಿಗುತ್ತಿಲ್ಲ. ಇದಕ್ಕೆ ಮಾನವ ಇಂಟರ್‌ಫೆರಾನೇ ಆಗಬೇಕು. ಇನ್‌ಸ್ಯುಲಿನ್, ಡಿಫ್ತೀರಿಯ ಆ್ಯಂಟಿ ಟಾಕ್ಸಿನ್ ಇಂಥ ಔಷಧಗಳಂತೆ ಇದನ್ನು ಕುರಿ, ಹಸು, ಕುದುರೆ ಇಂಥ ಪ್ರಾಣಿಗಳಿಂದ ಪಡೆಯಲು ಆಗದು. ಸದ್ಯಕ್ಕಂತೂ ಪೆನ್ಸಿಲಿನ್, ಸ್ಟ್ರೆಪ್ಟೊ


ವೈರಸ್ ಇತ್ಯಾದಿಗಳಂತೆ ಸೂಕ್ಷ್ಮ ಜೀವಿಗಳ ಜೀವಕ್ರಿಯೆಗಳ ಅಂಗವಾಗಿ ಪಡೆಯುವ ಕಾರ್ಯ ವಿಧಾನ ರೂಪಿತವಾಗಿಲ್ಲ. ಈಗ ದೊರೆಯುತ್ತಿರುವುದು ಫಿನ್ಲೆಂಡಿನಲ್ಲಿ ಮಾನವರ ಬಿಳಿ ರಕ್ತ ಕಣಗಳಿಂದ ಪಡೆಯುತ್ತಿರುವ ಇಂಟರ್‌ಫೆರಾನ್. ಮತ್ತು ಎಳೆ ಮಕ್ಕಳಿಗೆ ಸುನ್ನತಿ ಮಾಡಿದಾಗ ಬರುವ ಶಿಶ್ನ ಚರ್ಮ ಕೋಶಗಳಿಂದ ಸ್ವಲ್ಪ ಫೈಬ್ರೋಬ್ಲಾಸ್ಟ್ ಇಂಟರ್‌ಫೆರಾನ್ ದೊರೆಯುತ್ತದೆ. ಅಂದರೆ ಇದರ ತಯಾರಿಕೆಗೆ ಬೇಕಾದ ಮೂಲ ಸಾಮಗ್ರಿ ಸುಲಭವಾಗಿ ಸಿಗುವಂಥದ್ದಲ್ಲ.

ಇಂಟರ್‌ಫೆರಾನ್ ತಯಾರಿಕೆ ಕುರಿತು ಹಲವೆಡೆ ಸಂಶೋಧನೆ ನಡೆಯುತ್ತಿದೆ. ವೈದ್ಯಕೀಯ ರಂಗದಲ್ಲಿ ಬಹಳ ಆಸೆಗಳನ್ನು ಮೂಡಿಸಿರುವುದರಿಂದ ಮತ್ತು ಮುಂದೆ ಇದು ಅಧಿಕ ಪ್ರಮಾಣದಲ್ಲಿ ಬೇಕಾಗಬಹುದಾದ್ದರಿಂದ ಹಲವು ಔಷಧಿ ತಯಾರಿಕೆ ಕಂಪನಿಗಳು ಇದಕ್ಕಾಗಿ ಅಧಿಕ ಬಂಡವಾಳ ಹೂಡಿವೆ. ಮೊದಲನೆಯದಾಗಿ ಈಗ ಇರುವ ವಿಧಾನಗಳಲ್ಲೇ ಹೆಚ್ಚು ಇಳುವರಿ ಬರುವಂತೆ ಮಾಡಲು ನೋಡುತ್ತಿವೆ. ಎರಡನೆಯದಾಗಿ ಈ ಅಣುವಿನ ರಾಸಾಯನಿಕ ವಿನ್ಯಾಸವನ್ನು ಪತ್ತೆ ಹಚ್ಚಿ ಅವನ್ನು ಕೃತಕವಾಗಿ ಸಂಶ್ಲೇಷಿಸಲು ಪ್ರಯತ್ನಿಸುತ್ತಿವೆ. ಕೊಂಡು ತಂದ ರಾಸಾಯನಿಕಗಳನ್ನು ಉಪಯೋಗಿಸಿ ಕೃತ್ರಿಮವಾಗಿ ಇಂಟರ್‌ಫೆರಾನ್ ತಯಾರಿಸುವುದು. ಈಗ ಬಹಳ ಕುತೂಹಲದಿಂದ ಎದುರು ನೋಡುತ್ತಿರುವುದು ಜೈವ ರಾಸಾಯನಿಕ ಎಂಜಿನಿಯರಿಂಗ್‌ನ ಪುನರ್ನಿಯೋಜಿತ ಡಿಎನ್‌ಎ ವಿಧಾನದಲ್ಲಿ ನಡೆಯುತ್ತಿರುವ ಪ್ರಯೋಗ ಫಲಿತಾಂಶಗಳನ್ನು. ಇದರಲ್ಲಿ ನಿರುಪದ್ರವಿಯಾದ ಚೆನ್ನಾಗಿ ಪರಿಚಿತವಾದ ಕರುಳಿನ ಬ್ಯಾಕ್ಟೀರಿಯಾ. [illegible] ಕೋಶದ ಡಿಎನ್‌ಎಗೆ ನಮಗೆ ಯಾವ ಗುಣ ಬೇಕೋ ಆ ಗುಣ ಇರುವ ಮತ್ತೊಂದು ಜೀವಿಯ ಜೀನನ್ನು ರಾಸಾಯನಿಕವಾಗಿ ಲಗತ್ತಿಸುತ್ತಾರೆ. ಅಲ್ಲಿ ಇಂಟರ್‌ಫೆರಾನ್ ಉತ್ಪಾದಕ ಜೀನನ್ನು ಲಗತ್ತಿಸುವ ಪ್ರಯತ್ನ ನಡೆದಿದೆ. ಇದು ಸಫಲವಾದರೆ ಈ ಹೊಸ ಜೀನನ್ನು ಪಡೆದ ಬ್ಯಾಕ್ಟೀರಿಯ ಅನುಕೂಲ ಪರಿಸ್ಥಿತಿಯಲ್ಲಿ ಇಂಟರ್‌ಫೆರಾನ್‌ನನ್ನು ಉತ್ಪಾದಿಸತೊಡಗುತ್ತದೆ. ಜೂರಿಕ್ಕಿನಲ್ಲಿ ಈ ವಿಧಾನದಿಂದ ಮಾನವ ಲ್ಯೂಕೋಸೈಟ್ ಇಂಟರ್‌ಫೆರಾಅನ್ನು ತಯಾರಿಸಲಾಯಿತು ಎಂದು ಈ ಜನವರಿಯಲ್ಲಿ ವರದಿಯಾಯಿತು. ವಾಣಿಜ್ಯಗಾತ್ರದಲ್ಲಿ ಇದು ಯಶಸ್ವಿಯಾದರೆ ಆಗ ಇಂಟರ್‌ಫೆರಾನ್ ಎಲ್ಲರ ಕೈಗೆ ಎಟಕುವ ಬೆಲೆಗೆ ಸಿಗುತ್ತದೆ.

ಆದರೆ ಇದು ಸಾಕಷ್ಟು ಪ್ರಮಾಣದಲ್ಲಿ ಸಿಗತೊಡಗಿದರೂ ಇದರ ದೀರ್ಘಾವಧಿ ಪರಿಣಾಮಗಳು ತಿಳಿದಿಲ್ಲವಾದ್ದರಿಂದ ಇದನ್ನು ಬಲು ಎಚ್ಚರಿಕೆಯಿಂದ ಉಪಯೋಗಿಸಬೇಕೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಈಗ ಇದನ್ನು ಕುರಿತು ಇರುವ ತಿಳಿವಳಿಕೆ ಇದನ್ನು ವ್ಯಾಪಕವಾಗಿ ಉಪಯೋಗಿಸಲು ಸಾಲದು ಎಂದು ಅವರ ಅನಿಸಿಕೆ. ಈಗಂತೂ ಉಳಿದೆಲ್ಲ ಮಾರ್ಗಗಳನ್ನು ಪ್ರಯೋಗಿಸಿ ಗುಣಪಡಿಸುವುದರಲ್ಲಿ ವಿಫಲರಾದ ಸಂದರ್ಭಗಳಲ್ಲಿ ಇದನ್ನು ಪ್ರಯೋಗಿಸಿ ನೋಡುತ್ತಿದ್ದಾರೆ.

ಕೆಲವರು ಈ ಹೊಸ ಔಷಧಿ ಬಗೆಗೆ ಬಹಳ ಆಶಾದಾಯಕ ಮನೋಭಾವ [illegible]ರೆ. ಇದನ್ನು ಸರಿಯಾಗಿ ಉಪಯೋಗಿಸಿದರೆ ಮಾನವ ದೇಹದ ರಕ್ಷಣಾ ವ್ಯವಸ್ಥೆಯನ್ನು ಹೇಗೆ ಬೇಕೋ ಹಾಗೆ ನಿಯಂತ್ರಿಸಬಹುದು. ಇದರಿಂದ ಎಷ್ಟೋ ರೋಗಗಳನ್ನು ದೂರ ಇಡಬಹುದು. ಜೊತೆಗೆ ಕಸಿ ಮಾಡಿದ ಅಂಗಗಳು ದೇಹದಿಂದ ತಿರಸ್ಕೃತವಾಗದಂತೆ ಹೊಂದಿಕೊಳ್ಳುವಂತೆ ಮಾಡಬಹುದೆಂದು ಅವರು ಹೇಳುತ್ತಾರೆ. ಇಂಟರ್‌ಫೆರಾನ್‌ನಿಂದ ಏನೇನು ಸಾಧಿಸಬಹುದೆಂಬುದನ್ನು ಇನ್ನೂ ಕಾದು ನೋಡಬೇಕಾಗಿದೆ.

ಆತನಿಗೆ ಹೃದಯವೆಂಬುದೇ ಇಲ್ಲ ಎಂದು ಅವಳಾಗಲಿ, ಅವಳ ಬಗ್ಗೆ ಆತ ಹಾಗೆ ಹೇಳುವುದಾಗಲಿ ತೀರ ಸಹಜ. ಯಾಕೆಂದರೆ ಒಬ್ಬರ ಹೃದಯವನ್ನು ಇನ್ನೊಬ್ಬರು ಕಸಿದುಕೊಂಡುಬಿಟ್ಟಿರುತ್ತಾರೆ.


ಅಧಿಕ ಮಿತವ್ಯಯ ಮತ್ತು ಬಿಳಿಪು ಬೇಕಾಗಿದ್ದರೆ
ಸಾಬೂನುಗಳನ್ನು ಮರೆತುಬಿಡಿರಿ, ಕೊಳ್ಳಿರಿ
ಸುಪರ್ 777
ಡಿಟರ್ಜೆಂಟ್ ಬಾರ್
• ಸಾಬೂನಿಗಿಂತ 1½ ಪಟ್ಟು ಹೆಚ್ಚು ಶಕ್ತಿಶಾಲಿ, ಅಧಿಕ ಮಿತವ್ಯಯಕರ!
• ಆಪ್ಟಿಕಲ್ ವೈಟನರ್‌ಯುಕ್ತ!!
ಜಗತ್ತಿನ ನಂ.1
ಡಿಟರ್ಜೆಂಟ್
ಒಗೆಯುವ ಬಾರ್
ಸುಪರ್ 777
ಕೊಳೆಗೆ ಆಪತ್ತು,
ಬಿಳಿಪಿನ
ತಾಕತ್ತು
SUPER 777
Shilpi DM 13A/80 Kan

ಜನಮನ ಜನಜೀವನ

ಚೌಪಾಟಿ ನೋಡಲು ಹೋಗಿದ್ದೆ. ಸಂಜೆಯ 'ಬೀಜಿ' ಸಮಯ. ಚೌಪಾಟಿಗೆ ಬಣ್ಣ ಬರುತ್ತಿತ್ತು. ಭೇಲ್‌ಪುರಿ ತಿನ್ನುತ್ತ ಸುತ್ತುತ್ತಿದ್ದ ಹಾಗೆ ಹತ್ತು ಹನ್ನೆರಡು ವರ್ಷದ ಬಾಲೆಯೊಬ್ಬಳು ಮುಂದೋಡುತ್ತಿದ್ದ ಆಲ್‌-ಶೇಷಿಯನ್ ಸರಪಣಿ ಹಿಡಿದು ಓಡುತ್ತಿದ್ದಳು. ಒಂದೆರಡು ಸಲ ನೋಡಿ ಮತ್ತೆ ಒತ್ತಿ ಬರುತ್ತಿದ್ದ ಅಲೆಗಳತ್ತ ದೃಷ್ಟಿ ಹರಿಸಿದೆ. ಮುಂದೆ ಅಲೆಗಳ ಭೋರ್ಗರೆತ, ಹಿಂದೆ ಎಡೆಬಿಡದೇ ಸ್ಪೀಡಿನಿಂದೋಡುವ ಕಾರು-ಟ್ಯಾಕ್ಸಿ-ಬಸ್ಸು-ಲಾರಿಗಳ ಸದ್ದು.

ಸಂಜೆಗೆಂಪು ಹೆಚ್ಚುತ್ತಿತ್ತು, ನಗು-ನಲಿವು ಉಲಿವು ಕೂಡ. ಸುತ್ತ ನೋಡುತ್ತಲಿದ್ದ ಹಾಗೆ ಮತ್ತೆ ಆ ಓಡುವ ಹುಡುಗಿ ಕಂಡಳು. ಆದರೆ ಅವಳೆದುರಿನ ನಾಯಿ ಇರಲಿಲ್ಲ. 'ಟೈಗರ್, ಟೈಗರ್' ಎಂದೆನ್ನುತ್ತ ಒಂದೇ ಸಮನೇ ಓಡುತ್ತಲಿದ್ದಳು. ನನಗೆ ದೂರದಲ್ಲಿ ನಾಯಿ ನೆಗೆಯುತ್ತ ಹೋಗುತ್ತಿರುವುದು ಕಂಡಿತು. ಕಣ್ಣವೆ ಬಡಿವುದರೊಳಗಾಗಿ ಅದು ಬೇಲಿ ಹಾರಿ ರಸ್ತೆಗಿಳಿಯಿತು, ದಾಟಿತು. ಹುಡುಗಿಯೂ ಅದನ್ನು ಕರೆಯುತ್ತ ರಸ್ತೆಗಿಳಿದದ್ದೊಂದೇ ತಡ, ಟ್ಯಾಕ್ಸಿಯೊಂದು ಆಕೆಯನ್ನು ದೂಡಿಕೊಂಡು ಓಡಿತು. ಅತ್ತ ನಾಯಿ ಅದನ್ನು ನೋಡಿ ಮರಳಿ ಆಕೆಯತ್ತ ಬರುವ ಹೊತ್ತಿಗೆ ಮತ್ತೊಂದು ಟ್ಯಾಕ್ಸಿ ನಾಯಿಯನ್ನು ನೆಲಕ್ಕೊರೆಸಿ ಓಡಿತು. ಸಮುದ್ರದ ನೀರು ಕೆಂಪೇರುತ್ತಿತ್ತು. ಆದರೆ ರಸ್ತೆಯಲ್ಲಿ ಹರಿದ ನೆತ್ತರಿನ ಕೆಂಪನ್ನು ಲಕ್ಷ್ಯಕ್ಕೆ ತಂದುಕೊಳ್ಳದ ಟ್ಯಾಕ್ಸಿ-ಕಾರುಗಳ ಸ್ಪೀಡ್ ಮಾತ್ರ ಮತ್ತಷ್ಟು ಹೆಚ್ಚಾಗಿತ್ತು.

— ಗೋವಾ

ಮಾನವೀಯತೆ ನಶಿಸಿಹೋಗಿದೆ ಎಂದು ಗಂಟೆಗಟ್ಟಳೆ ಭಾಷಣ ಬಿಗಿದ ನನ್ನ ಹಿರಿಯ ಮಿತ್ರರೊಂದಿದಿಗೆ ಚಹ ಕುಡಿಯಲು ಹೊಟೆಲಿಗೆ ಹೋಗಿದ್ದೆ. ಅಲ್ಲಿಯೂ ಅವರ 'ಮಾನವೀಯತೆ' ಮುಗಿದಿರಲಿಲ್ಲ. ಅಲ್ಲಿಂದ ಮರಳುವಾಗ ಮಾಣಿಗೆ ಟಿಪ್ಸ್ ಬಿಟ್ಟೇಳುವುದನ್ನು ಅವರು ಮರೆಯಲಿಲ್ಲ.

ಹೊರಗೆ ಬಂದಾಗ ಕಾಲಿಲ್ಲದ ಮುದುಕ "ಎಪ್ಪಾ-ಒಂದಿಷ್ಟ ದಾನಾ ಕೊಡ್ರಿ...ಹತ್ತ ಪೈಸಾ ಕೊಡ್ರಿ ತಂದೆ" ಎಂದಾಗ 'ಮಾನವೀಯತೆ'ಯ ಮಿತ್ರ ಅತ್ತ ನೋಡದೆ, ಕೊಡಲು ಜೇಬಿಗೆ ಕೈ ಹಾಕಿದ್ದ ನನ್ನನ್ನೆಳೆಯುತ್ತ ಮುಂದೆ ಸಾಗಿದರು. "ಅವ್ರಿಗೆಲ್ಲಾ ಕೊಟ್ಟು ಕಲಿಸಿ ಭಿಕ್ಷಾಟನೆ-ಆಲಸ್ಯ ಹೆಚ್ಚಾಗೋ ಹಾಗೆ ಮಾಡಿದೀವಿ. ಇನ್ನ ಮೇಲಾದ್ರೂ ಹೀಗೆ ಕೊಡೋದನ್ನ ನಿಲ್ಸಿ," ಅಂತ ಮತ್ತೆ ಉಪದೇಶಿಸಿದರು.

— ವೃಷಭೇಂದ್ರಯ್ಯ

ಅಂದು ಮಧ್ಯಾಹ್ನದ ಸುಡು ಬಿಸಿಲಲ್ಲಿ ಊಟ ಮಾಡಿದ್ದರಿಂದಾಗಿ ಕಣ್ಣೆಳೆಯ ತೊಡಗಿದ್ದರಿಂದ ಮಲಗಿದ್ದೆ. 'ಅಮ್ಮಾ ತಾಯಿ ಒಂದಷ್ಟು ನೀಡಿ ತಾಯಿ' ಎಂಬ ಕೂಗು ಕೇಳಿಸಿತು. ಬೊಚ್ಚು ಬಾಯ ಕುರುಚಲು ಗಡ್ಡದ ಮುದುಕ ನಿಂತಿದ್ದ. ನೋಡಿದರೆ ದೈನ್ಯವುಂಟಾಗುತ್ತಿತ್ತಾದರೂ ಒಳಗೆದ್ದು ಹೋಗಿ ಉಳಿದ ತಂಗಳನ್ನೋ, ಮುಸುರೆಯನ್ನೋ ತಂದು ಆತನಿಗೆ ನೀಡಲೂ ಆಲಸಿಕೆಯಾಗಿ 'ಹೋಗಯ್ಯಾ ಮುಂದೆ ಅಂಡೆ.' ಆತ ಹೋಗಲಿಲ್ಲ. ಬದಲಾಗಿ ಹಟಹಿಡಿದವರಂತೆ ಮತ್ತೆ ಮತ್ತೆ ಕೇಳಿಕೊಳ್ಳತೊಡಗಿದ. ನನಗೂ ಕೋಪ ಬಂತು. ಎಷ್ಟು ಕೂಗಿಕೊಳ್ಳು

ತ್ತಾನೋ ಕೂಗಿಕೊಳ್ಳಲಿ ಎಂದುಕೊಂಡು ಹಾಗೇ ಮಲಗಿದೆ. ಆತ ಕೂಗಿಕೊಳ್ಳುತ್ತಲೇ ಇದ್ದ. ನಮ್ಮನೆ ಕೆಲಸದಾಕೆ, 'ಅಯ್, ನೀನೂ ಬೋ ಪಟವಾರಿ ಕಣಯ್ಯ. ಪಾಪ, ಹೊಟ್ಟೆ ತುಂಬಿ ಮಲಗಿದಾರೆ ಬಿಸಲಲ್ಲಿ ಏನ್ ನಿನ್ ಕಾಟ. ಹಿಡಿ ತಕೊಂಡ್ಹೋಗು,' ಎಂದಾಗ ಆಕೆಯತ್ತ ನೋಡಿದೆ.

ನಾನು ಆಕೆಗಿತ್ತ ಊಟದಲ್ಲಿ ಅರ್ಧವನ್ನು ಆಕೆ ಆತನ ತಟ್ಟೆಗಿಡುತ್ತ, 'ಓಗು, ಉಂಡ್ಕೋ ಓಗು' ಅಂದಳು.

—ತರಂಗಿಣಿ

ನನ್ನ ಮುದ್ದಿನ ಮಗಳು ಲ್ಯುಕೇಮಿಯದಂತಹ ಭಯಂಕರ ಕಾಯಿಲೆಯಿಂದಾಗಿ ನನ್ನನ್ನಗಲಿ ಹೋಗಿದ್ದ ಹೊಸದರಲ್ಲಿ ನಮ್ಮ ಕಾಲನಿಯಲ್ಲೇ ವಾಸಿಸುವವರ ಮಗುವಿನ ಮೊದಲ ಹುಟ್ಟುಹಬ್ಬಕ್ಕೆ ಆಮಂತ್ರಣ ಬಂದಿತ್ತು. ಮರುದಿನದ ಆ ಸಮಾರಂಭದಲ್ಲಿ ನಿರ್ವಿಕಾರವಾಗಿ ನಾನು ಭಾಗವಹಿಸಲಾರೆ-ನೆಂಬ ಅಳುಕುಂಟಾಗಿ ಹೇಗಾದರೂ ಹೋಗದಿರಲು ಕಾರಣ ಹುಡುಕಿದೆ. ಕೊನೆಗೊಮ್ಮೆ ತವರಿಗೆ ಹೋಗುವ ನಿರ್ಧಾರ ಮಾಡಿದೆ. ಸಂಜೆ ಊರಲ್ಲಿನ ನನ್ನ ಗೆಳತಿಯ ಮನೆಗೆ ಹೋದೆ. ಎಷ್ಟು ತಡೆದರೂ ಹುಟ್ಟುಹಬ್ಬದ ಸಮಾರಂಭದ ಬಗ್ಗೆ ಮಾತುಬಂತು. 'ಹೋಗಬಾರದೆಂದಿದ್ದೇನೆ,' ಎಂದೆ. ಆಕೆ, 'ನಾಳೆಗೆ ನನ್ನ ಮಗ ತೀರಿಕೊಂಡು ಐದು ವರ್ಷವಾಯಿತು' ಎಂದಳು. ನನಗೆ ಶಾಕ್ ಆದಂತಾಯಿತು. ತನ್ನ ಮಗ ಸತ್ತ ದಿನ! ಆ ದುಃಖ ಮರೆತು, ಮತ್ತೊಂದು ಮಗುವಿನ ಹುಟ್ಟುಹಬ್ಬದಲ್ಲಿ ಭಾಗವಹಿಸಲಿರುವ ಆ ತಾಯಿಯದು ಅದೆಂತಹ ದೊಡ್ಡ ಗುಣ! ಅನಿಸಿತು.

—ಪರಿಮಳಾ ಕುರ್ತಕೋಟಿ


ನನ್ನ ತಮ್ಮ ತಂದೆ ನೋಡಿ ಒಪ್ಪಿದ ಹುಡುಗಿಯ ಕೊರಳಿಗೆ ಮಾಂಗಲ್ಯ ಬಿಗಿಯದೇ ತನ್ನ ಸಹೋದ್ಯೋಗಿ ಸುಂದರಿಯನ್ನು ಕಟ್ಟಿಕೊಂಡಂದಿನಿಂದ ತಂದೆ ಮಗನ ಸಂಪರ್ಕ ಕಡಿದುಹೋಗಿತ್ತು. ಬೇರೆಯೇ ವಾಸಿಸಿದ್ದ ಮಗನ ಮನೆಯತ್ತ ತಪ್ಪಿ ಕೂಡ ಹೆಜ್ಜೆ ಹಾಕುತ್ತಿರಲಿಲ್ಲ ಅವರು.


ಬಹಳ ವರ್ಷಗಳ ನಂತರ ತಮ್ಮನ ಮನೆಗೆ ಹೋಗಿದ್ದೆ. ಈ ನಡುವೆ ತಮ್ಮನಿಗೊಬ್ಬ ಮಗನೂ ಹುಟ್ಟಿದ್ದ. ನನ್ನ ನಾದಿನಿ ಮಗನನ್ನು ನೋಡಿಕೊಳ್ಳಲು ತನ್ನ ಪರಿಚಯದ ಹುಡುಗಿಯೊಬ್ಬಳನ್ನು ಕರೆತಂದಿದ್ದಳು. ಒಂದು ಸಂಜೆ ಅಪ್ಪನ ಮನೆಯಿಂದ ತಮ್ಮನ ಮನೆಗೆ ಹೋದೆ. ಮನೆಗೆ ಬೀಗ ಹಾಕಿತ್ತು. ಪಕ್ಕದ ಮನೆಯವರನ್ನು ವಿಚಾರಿಸಿದೆ. ಇನ್ನೂ ಬರಲು ಅರ್ಧ ಗಂಟೆ ಬೇಕು ಎಂದರು. ಮಗು ಮತ್ತು ಕೆಲಸ ಹುಡುಗಿ ಸಮೀಪದ ಪಾರ್ಕಿಗೆ ಹೋಗಿರುವುದೂ ತಿಳಿಯಿತು. ಅಲ್ಲಿಗೇ ಹೋದೆ.

ದೂರದಲ್ಲಿ ಬೆಂಚೊಂದರ ಮೇಲೆ ಆ ಹುಡುಗಿಯೊಬ್ಬಳೇ ಕಳ್ಳೆಕಾಯಿ ತಿನ್ನುತ್ತ ಕೂತಿದ್ದಳು. ಸಮೀಪ ಹೋಗಿ ಮಗು ಎಲ್ಲಿ? ಅಂದೆ "ಅಕೋ ಆ ಮುದುಕ್ರು ಕರ್ಕೊಂಡಿದಾರೆ, ತಾತ ಅಂತ ಹಚ್ಕೊಂಬಿಟ್ಟಿದೆ. ದಿನಾಗ್ಲೂ ಈ ಹೊತ್ಗೆ ಬಂದು ಆಡಿಸಿ ತಿಂಡಿ ಕೊಡಿಸ್ತಾರೆ," ಅಂತ ತೋರಿಸಿದಳು

ನೋಡಿದೆ. ಒಂದು ನಿಮಿಷ ನಂಬಲಾಗಲಿಲ್ಲ. ನನ್ನ ತಂದೆ ಮೊಮ್ಮಗನನ್ನು ಎತ್ತಿ ಆಡಿಸುತ್ತಿದ್ದರು. ಸಮೀಪಿಸಿದೆ ನನ್ನ ನೋಡಿದವರೆ, "ಹಾಳು ವ್ಯಾಮೋಹ. ಮಗು ಅಂದಕೂಡ್ಲೇ ಎಲ್ಲಾ ಬಿಟ್ಟು ಸೇಡ ಮರೆ-ತ್ಹೋಗತ್ತೆ ನೋಡು." ಅಂದ ತಂದೆಯ ಕಣ್ಣಲ್ಲಿ ಒಂದು ರೀತಿಯ ಸಂತೋಷ ಉಕ್ಕೇರುತ್ತಿತ್ತು.

—ಗಿರಿಜಾ ದಿವಾಕರ







ಮೂಲ: ಮನ್ಮಥನಾಥ ಗುಪ್ತ

ಸೂರ್ಯಸೇನ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕ್ರಾಂತಿಪಥದ ಮೇಲೆ ನಡೆದ ವೀರರ ಆದರ್ಶ ಹಾಗೂ ಸಾಹಸಗಾಥೆಗಳು ಕ್ರಮೇಣವಾಗಿ ಜನಮಾನಸದಿಂದ ಮಾಯವಾಗುತ್ತಿರುವ ಸಂದರ್ಭದಲ್ಲಿ ಇಂಥ ಒಬ್ಬ ಅಸೀಮ ದೇಶಭಕ್ತನ ಪರಿಚಯವನ್ನು ಸ್ವತಃ ಕ್ರಾಂತಿಕಾರಿಗಳಾದ ಶ್ರೀ ಮನ್ಮಥನಾಥ ಗುಪ್ತರು ಇಲ್ಲಿ ಮಾಡಿದ್ದಾರೆ. ಭಾರತದಲ್ಲಿನ ಬ್ರಿಟಿಶ್ ಪ್ರಭುತ್ವವನ್ನು ಕೊನೆಗಾಣಿಸಲು ಕೃತ ಸಂಕಲ್ಪ ಮಾಡಿದ ಸೂರ್ಯಸೇನ ಹಾಗೂ ಅವರ ಸಂಗಡಿಗರು ಎಸಗಿದ ಸಾಹಸ ಕೃತ್ಯಗಳು ಸ್ವಾತಂತ್ರ್ಯ ಸಮರದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದುವು. ಸೂರ್ಯಸೇನರಿಂದ ಸ್ಫೂರ್ತರಾದ ಯುವಕರು ಭಾರತದ ಮೂಲೆಮೂಲೆಗಳಲ್ಲಿಯೂ ಕ್ರಾಂತಿಯ ಕಹಳೆಯನ್ನು ಮೊಳಗಿಸಿದರು. ಆದರೆ ಕ್ರಾಂತಿಯ ಈ ಕೂಗು ಭಾರತದ ಸ್ವಾತಂತ್ರ್ಯದೊಂದಿಗೆ ಕೊನೆಗೊಳ್ಳದೆ ಬಾಂಗ್ಲಾದೇಶ ಉದಯವಾಗುವ ವರೆಗೂ ಮುಂದುವರೆಯಿತು. ಬಾಂಗ್ಲಾದೇಶ ಸ್ವತಂತ್ರ ರಾಷ್ಟ್ರವಾಗಿ ರೂಪುಗೊಳ್ಳುವ ಸಂದರ್ಭದಲ್ಲಿ ಶೇಖ್ ಮುಜೀಬುರ್ ರಹಮಾನರು ಸೂರ್ಯಸೇನರಿಂದ ತಾವು ಸ್ಫೂರ್ತಿ ಪಡೆದುದನ್ನು ಕೃತಜ್ಞತೆಯಿಂದ ನೆನೆದರು. ಪ್ರಸ್ತುತ ಕನ್ನಡ ರೂಪಾಂತರ ದಿಲ್ಲಿಯ 'ದಿನಮಾನ್' ಪತ್ರಿಕೆಯಿಂದ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ೧೮೫೭ರ ಮಹಾ ವಿಪ್ಲವದಿಂದ ಆರಂಭಗೊಂಡ ಕ್ರಾಂತಿಕಾರಿ ಆಂದೋಲನ ಆಜಾದ್ ಹಿಂದ್ ಸೇನೆಯ ಯುದ್ಧ ಹಾಗೂ ಭಾರತೀಯ ನೌಕಾ ಪಡೆಯ ದಂಗೆಯೊಂದಿಗೆ ಕೊನೆಗೊಂಡಿತು.

ಸಂಪೂರ್ಣ ಕ್ರಾಂತಿಕಾರಿ ಆಂದೋಲನದ ಚರಿತ್ರೆಯಲ್ಲಿ ೧೮೫೭ರ ದಂಗೆ, ಆಜಾದ್ ಹಿಂದ್ ಸೇನೆಯ ಕಾರ್ಯ, ಕೋಮಗಾಟಾಮಾರು ಸಾಹಸ ಹಾಗೂ ನೌಕಾದಳದ ದಂಗೆಯಂತಹ ಸೈನಿಕರಿಗೆ ಸಂಬಂಧಿಸಿದ ಘಟನೆಗಳನ್ನು ಬಿಟ್ಟರೆ 'ಚಿಟಗಾಂಗ್ ಶಸ್ತ್ರಾಗಾರ ಕಾಂಡ' ಕ್ರಾಂತಿಕಾರಿ ಆಂದೋಲನದ ಅತಿ ದೊಡ್ಡ ಘಟನೆ. ಜಲಾಲಾಬಾದಿನ ಯುದ್ಧವೊಂದರಲ್ಲೇ ಹನ್ನೆರಡು ಕ್ರಾಂತಿಕಾರರು ಹುತಾತ್ಮರಾದರು. ಈ ಕಾಂಡದ ಕೇಂದ್ರಬಿಂದುವಾಗಿದ್ದ ಮಹಾನಾಯಕ ಸೂರ್ಯಸೇನರ ಪರಿಚಯ, ಅವರ ಕಾರ್ಯಕ್ಷೇತ್ರವಾದ ಉತ್ತರ ಭಾರತದಲ್ಲೇ ಕಡಿಮೆ ಜನರಿಗಿರುವುದು ಆಶ್ಚರ್ಯ.

ಭಾರತದಿಂದ ವಂಗಬಂಧು, ಮುಜೀಬುರ್ ರಹಮಾನರನ್ನು ಕಾಣಲು ಹೋಗಿದ್ದ ಕ್ರಾಂತಿಕಾರಿಗಳೊಡನೆ ಮಾತನಾಡುತ್ತಾ, ಮುಜೀಬರು, "ನಾನು ಸೂರ್ಯಸೇನರು ಆರಂಭಿಸಿ ಹೋದ ಕೆಲಸವನ್ನು ಪೂರ್ಣಗೊಳಿಸುವ ಕಾರ್ಯದಲ್ಲಿ ತೊಡಗಿದ್ದೇನೆ," ಎಂದರು. ಈ ಮಾತಿನಿಂದ ಅತ ಮಾಡಿದ್ದು ಎಂಥಾ ಮಹತ್ಕಾರ್ಯವೆನ್ನುವುದು ಅರಿವಾಗುತ್ತದೆ.

ಸೂರ್ಯಸೇನರ ಕಾರ್ಯಕ್ಷೇತ್ರವಾದ ಚಿಟಗಾಂಗ್

ಇಂದು ಬಾಂಗ್ಲಾದೇಶದಲ್ಲಿದೆ. ಅದು ಗುಡ್ಡಗಳಿಂದಲೂ ಮಣ್ಣಿನ ದಿನ್ನೆಗಳಿಂದಲೂ ತುಂಬಿದೆ. ಲುಸಾಯಿ ಪರ್ವತದ ತುಂಡೊಂದು ಅರದ ಹಾಗೆ ಚಟಗಾಂವ್ ಜಿಲ್ಲೆಯೊಳಗೆ ಹೊಕ್ಕು ಅದನ್ನು ಉತ್ತರದಿಂದ ದಕ್ಷಿಣಕ್ಕೆ ಸೀಳಿಕೊಂಡು ಹೋಗಿದೆ. ಜಿಲ್ಲೆಯ ಕೇಂದ್ರವೆಂದರೆ ಚಿಕ್ಕ ದೊಡ್ಡ ಮಣ್ಣು ದಿನ್ನೆಗಳ ಸಮೂಹವೇ ಸರಿ. ಹಲವು ಕಥೇರಿಗಳು ಮಣ್ಣು ದಿನ್ನೆಗಳ ಮೇಲೆ ವಿಜೃಂಭಿಸಿದ್ದು ಆಕಾಶದೊಂದಿಗೆ ಸಖ್ಯ ಬೆಳೆಸಲು ಹವಣಿಸಿವೆ. ಚಟಗಾಂವಿನ ಮುಖ್ಯ ನದಿ ಕರ್ಣಫೂಲಿ, ಇದು ಲುಸಾಯಿ ಪರ್ವತದಿಂದ ಹೊರಟು ಕೆಲವೇ ಮೈಲುಗಳಷ್ಟು ಹರಿದು ಸಮುದ್ರ ಸೇರಿಬಿಟ್ಟಿದೆ. ಶಂಖ, ಮಾತಾಮುಹರಿ ಮತ್ತು ಹಾಲ್ದಾ ಎಂಬ ಹೆಸರಿನ ಇನ್ನೂ ಮೂರು ನದಿಗಳೂ ಈ ಜಿಲ್ಲೆಯಲ್ಲಿವೆ. ಇದಲ್ಲದೆ ಚಟಗಾಂವ್ ಒಂದು ಬಂದರ. ಇಲ್ಲಿನ ಜನರು ಜಗತ್ತಿನಲ್ಲೇ ಉತ್ತಮ ನಾವಿಕರೆಂದು ಹೆಸರು ಪಡೆದಿದ್ದಾರೆ.

ಆ ಕಾಲದಲ್ಲಿ ಚಟಗಾಂವಿನ ಜನಸಂಖ್ಯೆ ಹದಿನಾರು ಲಕ್ಷಗಳಷ್ಟಿತ್ತು. ಅದರಲ್ಲಿ ಸೇಕಡಾ ಎಂಭತ್ತರಷ್ಟು ಮಂದಿ ಮುಸಲ್ಮಾನರು. ಪ್ರಕೃತಿಯ ಕಷ್ಟ ಕಾರ್ಪಣ್ಯಗಳಿಗೆ ಈಡಾಗಿದ್ದು ಇಲ್ಲಿಯ ಜನ ಶೂರ ಸ್ವಭಾವದವರಾಗಿದ್ದು, ಹಿಂದುಗಳೂ ಮುಸಲ್ಮಾನರೂ ಪರಸ್ಪರ ನೆಮ್ಮದಿಯಿಂದ ಜೀವಿಸಿದ್ದರು. ಆದರೆ ಮುಂದೆ ಬ್ರಿಟಿಷ್ ಸರಕಾರದ ವಿಶ್ವಾಸ ಘಾತುಕ ಪ್ರವೃತ್ತಿಯಿಂದಾಗಿ ಮುಸ್ಲಿಮ್ ಲೀಗಿನ ಪ್ರಭಾವ ಇಲ್ಲಿಗೆ ತಟ್ಟಿದಾಗ ಆ ನೆಮ್ಮದಿ ನಾಶವಾಯಿತು. ಪ್ಲಾಸಿಯ ಕದನದ ಬಳಿಕ ಇಂಗ್ಲೀಷರ ಪ್ರಭಾವ ಈ ಭಾಗದಲ್ಲಿ ಪರಿಸರಿಸಲು ಬಹಳ ಕಷ್ಟವಾಗಿತ್ತು. ಆಗ ಇಲ್ಲಿಯ ಹಳ್ಳಿಯ ಜನಗಳು ಕೊಟಯುದ್ಧ ತಂತ್ರಗಳನ್ನುಪಯೋಗಿಸಿ ಹಲವು ಇಂಗ್ಲೀಷರನ್ನೂ ಅವರ ಸೈನಿಕರನ್ನೂ ಕೊಂದಿದ್ದರು. 'ಚಕಮಾ' ಎಂಬ ಈ ಭಾಗದ ಗ್ರಾಮನಿವಾಸಿಗಳ ಕೆಲವು ಬೇಡಿಕೆಗಳನ್ನು ಇಂಗ್ಲೀಷರು ಉಪಾಯವಿಲ್ಲದೆ ಒಪ್ಪಿದ ಬಳಿಕವೇ ಒಂದು ರೀತಿಯ ಶಾಂತಿ ನೆಲೆಸುವಂತಾಗಿತ್ತು. ೧೮೫೭ರ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ, ಇಲ್ಲಿ ೩೪ನೆಯ ನಂಬರಿನ ಕಾಲಾಳುಗಳ ಸೈನಿಕ ತುಕಡಿ ಇತ್ತು. ೧೮೫೭ರ ನವಂಬರ್ ೧೮ ರಂದು ಈ ಸಂಪೂರ್ಣ ಸೈನಿಕ ತುಕಡಿ ಕ್ರಾಂತಿಕಾರಿಗಳೊಡನೆ ಸೇರಿ ಬ್ರಿಟಿಶ್ ಸರಕಾರದ ವಿರುದ್ಧ ದಂಗೆಯೆದ್ದಿತು. ಈ ಸೈನಿಕರು ತ್ರಿಪುರಾದೊಳಗೆ ನುಗ್ಗಲು ಯತ್ನಿಸಿದಾಗ ಅಲ್ಲಿಯ ಅರಸ ಇವರನ್ನು ಹಿಡಿದು ಬ್ರಿಟಿಷರಿಗೆ ಒಪ್ಪಿಸಿದಾಗ ಅವರೆಲ್ಲರೂ ಗಲ್ಲಿಗೇರಿಸಲ್ಪಟ್ಟರು.

ಇದೇ ಜಿಲ್ಲೆಯ ನೊವಾಪಾಡಾದಲ್ಲಿ ೧೮೯೪ರ ಮಾರ್ಚ್ ಇಪ್ಪತ್ತೆರಡರಂದು ಸೂರ್ಯಸೇನರ ಜನನವಾಯಿತು. ಅವರ ತಂದೆಯ ಹಸರು ರಾಜಮಣಿ ಸೇನ್ ಹಾಗೂ ತಾಯಿಯ ಹೆಸರು ಶಶಿಬಾಲಾ. ಸೂರ್ಯಸೇನರಿಗೆ ನಾಲ್ವರು ಸೋದರಿಯರೂ ಒಬ್ಬ ಸಹೋದರನೂ ಇದ್ದರು. ಸೂರ್ಯಸೇನ ಮಕ್ಕಳಲ್ಲಿ ನಾಲ್ಕನೆಯವರು. ಅವರಿಗೆ ಐದನೆಯ ವರ್ಷ ನಡೆಯುತ್ತಿದ್ದಾಗ ತಂದೆ ತೀರಿಹೋದುದರಿಂದ ಚಿಕ್ಕಪ್ಪನ ಆಶ್ರಯದಲ್ಲಿರಬೇಕಾಯಿತು. ನೊವಾಪಾಡಾದ ಇಂಗ್ಲೀಷ್ ಶಾಲೆಯಲ್ಲಿ ಎಂಟನೆಯ ತರಗತಿಯ ವರೆಗೆ ಓದಿ ಅವರು ಮುಂದಕ್ಕೆ ನಗರದ ನ್ಯಾಶನಲ್ ಹೈಸ್ಕೂಲಿನಲ್ಲಿ ಮೆಟ್ರಿಕ್ ಪರೀಕ್ಷೆ ಪಾಸಾಗುವ ತನಕ ಅಧ್ಯಯನ ನಡೆಸಿದರು. ಕೃಶ ಶರೀರಿಯಾದರೂ ತೀಕ್ಷ್ಣಮತಿ. ಚಟಗಾಂವ್ ಕಾಲೇಜಿನಲ್ಲಿ ಇಂಟರ್ ಮುಗಿಸಿ, ಕೃಷ್ಣನಾಥ ಕಾಲೇಜ್ ಸೇರಿದರು.

ಆಗಿನ ಕಾಲದಲ್ಲಿ 'ಯುಗಾಂತರ' ಎಂಬ ಹೆಸರಿನ ಒಂದು ಸುಪ್ರಸಿದ್ಧ ಕ್ರಾಂತಿಕಾರಿಗಳ ಗುಂಪು ಇತ್ತು. ಅದಕ್ಕೆ ಸಂಘಟಿಸಿದ ಸತೀಶ್‌ಚಂದ್ರ ಚಕ್ರವರ್ತಿ ಎಂಬ ಅಧ್ಯಾಪಕ ಕೃಷ್ಣನಾಥ ಕಾಲೇಜಿನಲ್ಲಿ ಕಲಿಸುತ್ತಿದ್ದರು. ಅವರ ಪ್ರಭಾವದಿಂದ ಅನೇಕ ವಿದ್ಯಾರ್ಥಿಗಳು ಕ್ರಾಂತಿಕಾರಿಗಳಾಗಿದ್ದರು. ಕ್ರಾಂತಿಕಾರಿಯಾಗಲು ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳನ್ನು ಅವರು ಅರಸುತ್ತಿದ್ದರು. ಹೀಗಾಗಿ ಸಹಜವಾಗಿ ಸೂರ್ಯಸೇನರ ಮೇಲೆ ಅವರ ದೃಷ್ಟಿ ಬಿತ್ತು.

೧೯೦೫ರಲ್ಲಿ ಬಂಗಾಳವನ್ನು ವಿಭಜಿಸಿದಾಗ ಉಂಟಾದ ವಿಸ್ಫೋಟದಿಂದುಂಟಾದ ಕ್ರಾಂತಿಯ ಕಿಡಿ ಆಗಿನ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಉರಿಯುತ್ತಿತ್ತು. ಮೊದಲು ಬಹಿರಂಗವಾಗಿ ನಡೆದಿದ್ದ ವಂಗಭಂಗ ಚಳವಳಿ ಮತ್ತೆ ಭೂಗತ ರೂಪ ಪಡೆಯಿತು. ಬಂಗಾಳವನ್ನು ಪುನಃ ಒಂದು-

ಗೂಡಿಸಲು ಕರೆ ಕೊಟ್ಟು, ಆರಂಭವಾದ ಚಳವಳಿ ಹೊಸ ತಿರುವನ್ನು ಪಡೆದು ಸ್ವಾತಂತ್ರ್ಯದ ಆಂದೋಲನವಾಯಿತು. ವೈಸ್‌ರಾಯ್ ಲಾರ್ಡ್ ಕರ್ಜನ್ನನ ಆಡಳಿತದ ಅನುಕೂಲಕ್ಕೋಸ್ಕರ ಬಂಗಾಳವನ್ನು ವಿಭಜಿಸಲಾಯಿತೆಂದು ಆಂಗ್ಲ ಸರಕಾರ ಹೇಳಿದರೂ ಅದರ ಮೂಲ ಉದ್ದೇಶ ಮುಸಲ್ಮಾನರನ್ನು ಹಿಂದುಗಳ ವಿರುದ್ಧ ಎತ್ತಿ ಕಟ್ಟಿ, ಕೋಮುವಾರು ದ್ವೇಷದ ಜ್ವಾಲೆಯನ್ನು ಉರಿಸಿ, ರಾಷ್ಟ್ರೀಯ ಆಂದೋಲನವನ್ನು ಹತ್ತಿಕ್ಕುವುದಾಗಿತ್ತು.

೧೮೫೭ರ ಕ್ರಾಂತಿಯ ಶಕ್ತಿಯನ್ನು ಒಮ್ಮೆಗೆ ಹತ್ತಿಕ್ಕಿದ ಬಳಿಕ ಬಹಳ ಕಾಲದವರೆಗೆ ಇಂಗ್ಲೀಷರು ಮುಸಲ್ಮಾನರನ್ನು ದ್ವೇಷಿಸಿದ್ದರು. ಮುಸ್ಲಿಮರು ಕೂಡ ಇಂಗ್ಲೀಷರ ಆಡಳಿತ, ಶಿಕ್ಷಣ ಕ್ರಮಗಳನ್ನು ಮೊಗಲರ ಶಾಸನ ಪುನಃ ಸ್ಥಾಪಿತವಾಗುವುದೆಂಬ ಆಶೆಯಿಂದ ತಿರಸ್ಕರಿಸಿದ್ದರು. ೧೮೭೦ರ ಕಾಲಾವಧಿಯಲ್ಲಿ ಇಬ್ಬರೂ ತಮ್ಮ ತಮ್ಮ ನಿಲುಮೆಗಳನ್ನು ಪುನರ್ವಿಮರ್ಶಿಸತೊಡಗಿದ್ದರು. ೧೮೭೭–೭೨ರ ಸುಮಾರಿಗೆ ನಡೆದ ವಹಾಬೀ ಕ್ರಾಂತಿಯಲ್ಲಿ ಅಬ್ದುಲ್ಲಾ ಮತ್ತು ಶೇರ್ ಅಲಿ ಎಂಬ ಇಬ್ಬರು ಮುಸಲ್ಮಾನ್ ಕ್ರಾಂತಿಕಾರರು ಹುತಾತ್ಮರಾದರು. ಶೇರ್‌ಅಲಿ ವೈಸ್‌ರಾಯ್ ಲಾರ್ಡ್ ಮೇಯೋನನ್ನು ಅಂಡಮಾನಿನಲ್ಲಿ ಚೂರಿಯಿಂದ ಇರಿದು ಕೊಂದು ಹಾಕಿದ. ಅಬ್ದುಲ್ಲಾ ನಾರ್ಮನ್ ಎಂಬ ಇಂಗ್ಲಿಷ್ ನ್ಯಾಯಾಧೀಶನನ್ನು ಕೊಲೆ ಮಾಡಿದ. ಇವರಿಬ್ಬರನ್ನೂ ಫಾಸಿಗೆ ಏರಿಸಲಾಯಿತು. ಅನಂತರ ಅವರ ಶವಗಳನ್ನು ಮಾರ್ಗದಲ್ಲಿ ಎಳೆದು ಅವಮಾನಿಸಿ, ಅಗೌರವಿಸುವ ಉದ್ದೇಶದಿಂದ ಸುಡಲಾಯಿತು.

೧೯೧೭ರಲ್ಲಿ ಬಿ. ಎ. ಪರೀಕ್ಷೆ ಕೊಟ್ಟು, ಸೂರ್ಯ ಸೇನ ಉಮಾತಾರಾ ಇಂಗ್ಲೀಷ್ ಹೈಸ್ಕೂಲಿನಲ್ಲಿ ಗಣಿತದ ಉಪಾಧ್ಯಾಯರಾದರು. ಅವರ ಮನೆಯವರು ಅವರನ್ನು ಸರಕಾರೀ ನೌಕರಿಗೆ ಸೇರಿಸಬೇಕೆಂದು ಬಯಸಿದ್ದರೂ ಅವರು ನಿರ್ಧಾರವನ್ನು ಬದಲಿಸಲಿಲ್ಲ. ಮದುವೆಯಾದರೆ ವ್ಯಾವಹಾರಿಕ ಜ್ಞಾನ ಬರಬಹುದೆಂದು ಅವರ ಸಂಬಂಧಿಕರು ನಗೇಂದ್ರನಾಥ ದತ್ತರ, ಪುತ್ರಿ ಪುಷ್ಪಕುಂತಲಾ ಎಂಬ ಸುಂದರ ತರುಣಿಯೊಡನೆ ಸೂರ್ಯಸೇನರ ವಿವಾಹ ಮಾಡಿದರು. ಆದರೆ ಸೂರ್ಯಸೇನರು ತಮ್ಮ ನಿರ್ಧಾರವನ್ನು ಬದಲಿಸದೆ ಶಿಕ್ಷಕ ವೃತ್ತಿಯಲ್ಲಿದ್ದುಕೊಂಡು ನವಯುವಕರಲ್ಲಿ ಕ್ರಾಂತಿಕಾರಿ ವಿಚಾರ ಬೀಜ ಬಿತ್ತತೊಡಗಿದರು.

ಜಾಲಿಯನ್‌ವಾಲಾಬಾಗಿನ ಹತ್ಯಾಕಾಂಡದಿಂದ ವಿಚಲಿತರಾದ ಕವಿ ರವೀಂದ್ರನಾಥ ಠಾಕೂರರು ತಮಗೆ ಬ್ರಿಟಿಷರಿಂದ ಪ್ರಾಪ್ತವಾಗಿದ್ದ 'ಸರ್' ಬಿರುದನ್ನು ಬಿಟ್ಟುಕೊಟ್ಟರು. ಈ ಸಂದರ್ಭದಲ್ಲೇ ಸೂರ್ಯಸೇನರ ಹೃದಯದ ಕಿಡಿ ಜ್ವಾಲೆಯಾಗಿ ಪ್ರಜ್ವಲಿಸಿದ್ದು. ಜಾಲಿಯನ್ ವಾಲಾ ಬಾಗಿನ ಕಾಂಡದಿಂದ ಅವರು ತತ್ತರಿಸಿದ್ದರೂ ಥಕ್ಕನೆ ತಮ್ಮ ಭಾವನೆಯನ್ನು ಅವರು ಪ್ರಕಟಿಸಲಿಲ್ಲ. ಈ ಹತ್ಯಾಕಾಂಡಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಅವರು ಕೇವಲ 'ಕ್ರೋಧವನ್ನು ಪ್ರಕಟಿಸಿ ಠರಾವು ಪಾಸು ಮಾಡುವುದಷ್ಟೇ ನಮ್ಮ ಕೆಲಸವಲ್ಲ' ನಿಮಗೆ ನಿಜವಾಗಿ ಈ ಘಟನೆಯಿಂದ ವೇದನೆಯಾಗಿದ್ದರೆ ಅದಕ್ಕೆ ಉತ್ತರವನ್ನು ಕೊಡುವೆವೆಂಬ ಸಂಕಲ್ಪ ನೀವು ಮಾಡಬೇಕು' ಎಂದಷ್ಟೇ ಹೇಳಿದ್ದರು.

ಅದಕ್ಕೆ ಪ್ರತಿಯಾಗಿ ವಿದ್ಯಾರ್ಥಿಗಳು 'ನಾವು ಅವಶ್ಯವಾಗಿ ಉತ್ತರ ಕೊಡುತ್ತೇವೆ' ಎಂದರು. ಸೂರ್ಯಸೇನ ವಿದ್ಯಾರ್ಥಿಗಳಿಗೆ ಹೇಳಿದುದನ್ನು ತಮಗೂ ಹೇಳಿಕೊಂಡರು. ಆದುದರಿಂದ ಜಾಲಿ ಅಸಹಕಾರ ಆಂದೋಲನ ಆರಂಭಗೊಂಡ ಕೂಡಲೇ ಶಾಲೆ ಕಾಲೇಜುಗಳನ್ನು ತ್ಯಜಿಸಿದ ವಿದ್ಯಾರ್ಥಿಗಳ ತಂಡವೊಂದನ್ನು ಸಂಘಟಿಸಿ, ತಾವೇ ಅದರ ನಾಯಕರಾದರು. ಅಸಹಕಾರ ಆಂದೋಲನದ ಮುಖ್ಯ ಆಧಾರ ಅಹಿಂಸೆಯಾಗಿತ್ತು. ಅಹಿಂಸೆಯ ಮೇಲೆ ಸೂರ್ಯಸೇನರಿಗೆ ಎಳ್ಳಷ್ಟೂ ವಿಶ್ವಾಸವಿರಲಿಲ್ಲ. ಹಾಗಾದರೆ ಅವರೇಕೆ ಈ ಸಂಘಟನೆಯನ್ನು ಮಾಡಿದರು ಎಂಬ ಸಮಸ್ಯೆ ಬರುವುದು ಸ್ವಾಭಾವಿಕವೆ. ಸೂರ್ಯಸೇನರಿಗೆ ತಮ್ಮ ಕಾರ್ಯಗಳಿಗೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಆರಿಸಬೇಕಾಗಿತ್ತು. ಅದಕ್ಕಾಗಿ ಅವರು ಈ ಕಾರ್ಯ ಕೈಗೊಂಡರು. ಸರಕಾರೀ ವಿದ್ಯಾಸಂಸ್ಥೆಗಳನ್ನು ಬಿಟ್ಟು ಮತ್ತೆಂದೂ ಅವುಗಳನ್ನು ಪ್ರವೇಶಿಸದ ಇಬ್ಬರು ವಿದ್ಯಾರ್ಥಿಗಳು ಅವರಿಗೆ ಲಭಿಸಿದರು. ಅವರೇ ಗಣೇಶ ಘೋಷ್ ಮತ್ತು ಅನಂತಸಿಂಗ್. ಮುಂದೆ ಇವರಿಬ್ಬರೂ ಸೂರ್ಯಸೇನರ ಪ್ರಮುಖ ಶಿಷ್ಯ

ರಾದರು. ಚಿಟಗಾಂವ್ ಕಾಂಡದ ನೇತೃತ್ವವನ್ನು ಇವರಿಬ್ಬರು ವಹಿಸಿದರು. ಬಳಿಕ ಅವರು ಕ್ರಾಂತಿಕಾರಿಗಳ ಗುಪ್ತ ಸಂಘಟನೆಯನ್ನು 'ಸಾಮ್ಯ-ಆಶ್ರಮ' ಎಂಬ ಹೆಸರಿನಲ್ಲಿ ಆರಂಭಿಸಿದರು.

ಇದೊಂದು ಚಿಕ್ಕ ಗುಂಪಾಗಿತ್ತು. ಅಂಬಿಕಾ ಚಕ್ರವರ್ತಿ. ಅನುರೂಪ ಸೇನ್. ನಗೇನ್ ಸೇನ್, ಹಾಗೂ ಚಾರುವಿಕಾಸ ದತ್ತರು ಇದರ ಪ್ರಮುಖ ಸದಸ್ಯರಾಗಿದ್ದರು. ಇವರು ಒಟ್ಟಾಗಿ ತಮ್ಮ ಗುಪ್ತ ದಳವನ್ನು ಬಲಗೊಳಿಸುವ ಕಾರ್ಯದಲ್ಲಿ ತೊಡಗಿದರು. ಪೂರ್ವ ಭಾರತದಲ್ಲಿ ಅಗ ಮುಖ್ಯವಾಗಿ 'ಯುಗಾಂತರ' ಹಾಗೂ 'ಅನುಶೀಲನ' ಎಂಬ ಎರಡು ಕ್ರಾಂತಿಕಾರೀ ದಳಗಳಿದ್ದುವು. ಭಾರತದಲ್ಲಿದ್ದ ಕ್ರಾಂತಿಕಾರೀ ದಳಗಳೆಲ್ಲಾ ಒಟ್ಟಾಗುವುದು ತಾತ್ವಿಕವಾಗಿ ಸರಿಯಾದ ಮಾರ್ಗವಾಗಿದ್ದರೂ, ಆ ಕಡೆಗೆ ಹೆಚ್ಚಿನ ಗಮನ ಕೊಡಲಾಗಲಿಲ್ಲ. ಏಕೆಂದರೆ ವ್ಯಾವಹಾರಿಕ ದೃಷ್ಟಿಯಿಂದ ದಳಗಳು ಬೇರೆ ಬೇರೆಯಾಗಿ ಇರುವುದರಲ್ಲೇ ಒಳಿತಿತ್ತು. ಯಾಕೆಂದರೆ ಯಾರಾದರೊಬ್ಬರ ಮೂರ್ಖತನದಿಂದಲೋ, ವಂಚನೆಯಿಂದಲೋ ಒಂದು ದಳ ಸಿಕ್ಕಿಬಿದ್ದರೆ ಇಡೀ ಕ್ರಾಂತಿಕಾರಿಗಳ ಸಮೂಹವೇ ಬಲಿಯಾಗಬೇಕಾಗುತ್ತಿತ್ತು. ಬೇರೆ ಬೇರೆಯಾಗಿದ್ದರೆ ಇತರ ಗುಂಪುಗಳು ಅಬಾಧಿತವಾಗಿ ಕಾರ್ಯವೆಸಗುತ್ತಿದ್ದವು. 'ಅನುಶೀಲನ' ೧೯೦೨ರಲ್ಲಿ ಆರಂಭವಾದ ಗುಂಪು, ಇದರಲ್ಲಿ ಸುರೇಂದ್ರನಾಥ ಠಾಕೂರ್. ಪ್ರಮಥನಾಥ ಮಿತ್ರ, ಸತೀಶ್ಚಂದ್ರ ಬಸು ಯತೀಂದ್ರ ವಂದ್ಯೋಪಾಧ್ಯಾಯ (ನಿರಾಲಂಬ ಸ್ವಾಮಿ), ದೇಶಬಂಧು ಚಿತ್ತರಂಜನ್ ದಾಸ್, ಅರವಿಂದ ಘೋಷ್ ಮೊದಲಾದವರಿದ್ದರು. ಈ ದಳದೊಡನೆ ಸ್ವಾಮೀ ವಿವೇಕಾನಂದರ ತಮ್ಮ ಭೂಪೇಂದ್ರನಾಥ ದತ್ತ, ಸಂಪಾದಕ ಬ್ರಹ್ಮಬಾಂಧವ ಉಪಾಧ್ಯಾಯ, ಪುಲಿನ ಬಿಹಾರೀದಾಸ್, ವಿಪಿನಚಂದ್ರ ಪಾಲ್, ಸಖಾರಾಮ ಗಣೇಶ ದೇವುಸ್ಕರ ಇವರ ಸಂಬಂಧವಿತ್ತು. ಈ ಗುಂಪು ವಂಗಭಂಗ ವಿರೋಧಿ ಚಳವಳಿಯ ಕಾಲದಲ್ಲಿ ಬಹಿರಂಗವಾಗಿದ್ದು, ಬ್ರಿಟಿಷ್ ಸರಕಾರದ ದಬ್ಬಾಳಿಕೆಯ ಫಲವಾಗಿ ಮತ್ತೆ ಭೂಗತವಾಯಿತು. 'ಅನುಶೀಲನ'ದಿಂದ ಬೇರ್ಪಟ್ಟ ಕೆಲವು ಸದಸ್ಯರು 'ಯುಗಾಂತರ'ವೆಂಬ ಹೆಸರಿನ ಇನ್ನೊಂದು ಕ್ರಾಂತಿಕಾರಿ ದಳವನ್ನು ಸಂಘಟಿಸಿತು. ಇವರು 'ಯುಗಾಂತರ'ವೆಂಬ ಹೆಸರಿನ ಕ್ರಾಂತಿ ವಿಚಾರಕ ಪತ್ರಿಕೆಗೆ ಸಂಬಂಧಿಸಿದವರಾಗಿದ್ದರಿಂದ ಆ ಹೆಸರು ಅವರ ಪಕ್ಷಕ್ಕೆ ಅನುರೂಪವಾಯಿತು. ಅದರ ಮುಂಚೂಣಿಯಲ್ಲಿ ಶ್ರೀ ಅರವಿಂದ, ಚಿತ್ತರಂಜನ್ ದಾಸ, ಸುಭಾಷ್ಚಂದ್ರ ಬೋಸರಂತಹ ನೇತಾರಿದ್ದರು.

ಸೂರ್ಯಸೇನರ ದಳವು 'ಅನುಶೀಲನ' ಹಾಗೂ 'ಯುಗಾಂತರ'ದಿಂದ ಬೇರೆಯಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ನಿರ್ಧರಿಸಿತು. ಆದರೆ ೧೯೨೨ರಲ್ಲಿ ಈ ದಳವು ಎರಡು ಹೋಳುಗಳಾಗಿ ವಿಭಜಿತವಾಗಿ ಒಂದು ಚಿಕ್ಕ ವಿಭಾಗ 'ಅನುಶೀಲನ'ವನ್ನು ಸೇರಿತು.

ಕ್ರಾಂತಿಕಾರೀ ಆಂದೋಲನದಲ್ಲಿ ಮುಸಲ್ಮಾನರ ಪಾತ್ರದ ಬಗ್ಗೆ ಇಲ್ಲಿ ಸ್ವಲ್ಪ ವಿಚಾರಿಸಬೇಕಾಗುತ್ತದೆ. ವೀರ ಸಾವರಕರರಂತಹ ಕ್ರಾಂತಿಕಾರಿಗಳೂ ತಮ್ಮ ಕ್ರಾಂತಿಕಾರೀ ಚಟುವಟಿಕೆಗಳ ಕಾಲದಲ್ಲಿ ನಿಷ್ಪಕ್ಷ



"ಮುಂದೆ ನಮ್ಮ ಮಗ ಖಂಡಿತಾ ಸಂಪಾದಕನಾಗ್ತಾನೆ ಒಂದು ಪತ್ರಿಕೆಗೆ."

ಜಾತಿಗಳಾಗಿದ್ದು ಧರ್ಮನಿರಪೇಕ್ಷರಾಗಿದ್ದರು. ೧೮೫೭ರ ಕ್ರಾಂತಿಯಲ್ಲಿ ಮುಸ್ಲಿಮರ ಪಾತ್ರವಿತ್ತು.

ಆದರೂ ಲೋಕಮಾನ್ಯ ಟಿಳಕರ ಶಿವಾಜಿ ಮಹೋತ್ಸವ, ಗಾಂಧೀಜಿಯವರ ರಾಮರಾಜ್ಯದ ಮಾತು, ಕ್ರಾಂತಿಕಾರಿಗಳ ಕಾಳಿಯ ಮೂರ್ತಿ ಎದುರು ಪ್ರತಿಜ್ಞೆ ಮಾಡುವ ಪದ್ಧತಿ ಇತ್ಯಾದಿಗಳು ಮುಸಲ್ಮಾನರ ಮನಸ್ಸಿನಲ್ಲಿ ಸಂಶಯಕ್ಕೆ ಎಡೆಮಾಡಿ ಕೊಟ್ಟಿರಬೇಕು. ಇಂಗ್ಲೀಷರಂತೂ ಸಂದರ್ಭವನ್ನು ಸರಿಯಾಗಿ ಉಪಯೋಗಿಸಿಕೊಂಡು ಸಾಂಪ್ರದಾಯಿಕ ಕೋಮುವಾರು ಶಕ್ತಿಗಳಿಗೆ ಪ್ರೋತ್ಸಾಹವಿತ್ತರು. ಕಾಂಗ್ರೆಸ್ಸಿನವರು ಭಾರತೀಯರಿಗನುಗುಣವಾಗಿ ದೇಶದ ಆಡಳಿತವಿರಬೇಕೆಂದಾಗ 'ಭಾರತೀಯ'ವೆಂದರೆ 'ಹಿಂದೂ' ಎಂದರ್ಥ ಎಂಬುದಾಗಿ ಸರ್ ಸೈಯದ್ ಅಹಮದ್‌ರಂತಹರ ತಲೆಯಲ್ಲಿ ತುಂಬಿ ಹಿಂದು – ಮುಸಲ್ಮಾನರಲ್ಲಿ ಅನೈಕ್ಯವನ್ನು ಉಂಟುಮಾಡಲು ಪ್ರಯತ್ನಿಸಿದರು. ಇಂಗ್ಲೀಷರಿಂದ ಪ್ರತಿಭಾವಿತರಾದ ಮುಸಲ್ಮಾನರು ಸರ್ ಸೈಯದ್, ಹಾಲೀ ಹಸನ್ ನಿಜಾಮಿ ಇಕ್‌ಬಾಲ್ ಮೊದಲಾದವರ ನಾಯಕತ್ವದಲ್ಲಿ ಅಲೀಗಡವನ್ನು ಕೇಂದ್ರವಾಗಿರಿಸಿ ಮುಸ್ಲಿಮ್ ರಾಷ್ಟ್ರೀಯತೆ ಉದಯವಾಗುವಂತೆ ಮಾಡಿದರು. ಇಷ್ಟೆಲ್ಲಾ ಇದ್ದರೂ ಅಜಾದ್ ಹಿಂದ್ ಸೈನ್ಯದಲ್ಲಿ ಸಾಕಷ್ಟು ಮುಸ್ಲಿಮರು ಸೇರಿದ್ದುದನ್ನು ನಾವು ಗಮನಿಸಬೇಕು. ಸೂರ್ಯಸೇನರು ಕೂಡ ತಮ್ಮ ದಳದಲ್ಲಿ ಮುಸಲ್ಮಾನರನ್ನು ಯೋಗ್ಯ ರೀತಿಯಲ್ಲಿ ತರಬೇತಿಗೊಳಿಸಿ ಸೇರಿಸಿದ್ದರೆಂದು ಅವರ ಅನುಯಾಯಿ ಗಣೇಶ ಘೋಷ ಬರೆದಿದ್ದಾರೆ.

ಅಸಹಕಾರ ಚಳವಳಿಯ ಕಾಲದಲ್ಲಿ ಗಾಂಧೀಜಿ ಕಲ್ಕತ್ತಾದಲ್ಲಿ ಕ್ರಾಂತಿಕಾರಿಗಳ ಸಹಕಾರ ಅಪೇಕ್ಷಿಸಿ ಅವರೊಡನೆ ಮಾತುಕತೆ ನಡೆಸಿದ್ದರು. ಸೂರ್ಯಸೇನರು ಆಗ ಬಂಗಾಲದ ಕಾಂಗ್ರೆಸ್ ಮುಖಂಡ ಯತೀಂದ್ರಮೋಹನ್ ಸೇನಗುಪ್ತರೊಡನೆ ಸಹಕರಿಸಿದ್ದರು.

ಈ ಸಂದರ್ಭದಲ್ಲಿ ಚಟಗಾಂವಿನಲ್ಲಿ ಎರಡು ಉಲ್ಲೇಖನೀಯ ಘಟನೆಗಳು ನಡೆದವು. ಚಟಗಾಂವಿಯಲ್ಲಿ ಬುಲಾಕ್ ಕಂಪನಿ ಎಂಬ ಒಂದು ಇಂಗ್ಲೀಷ್ ಕಂಪೆನಿ ಇತ್ತು. ಈ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಜನಪ್ರಿಯ ಕಾರ್ಮಿಕ ಮುಖಂಡನೊಬ್ಬ ಕಂಪನಿಯಲ್ಲಿ ಕಾರ್ಮಿಕ ಸಂಘವನ್ನು ಸ್ಥಾಪಿಸಲು ಹವಣಿಸಿದ. ಆ 'ಅಪರಾಧ'ಕ್ಕಾಗಿ ಅವನನ್ನು ಕೆಲಸದಿಂದ ಬರ್ಖಾಸ್ತುಗೊಳಿಸಿದರು. ಇದರಿಂದಾಗಿ ಕಂಪನಿಯಲ್ಲಿ ಮುಷ್ಕರವಾಯಿತು. ಯತೀಂದ್ರಮೋಹನ್ ಹಾಗೂ ಇನ್ನೊಬ್ಬ ಪ್ರಸಿದ್ಧ ಮುಖಂಡ ಕಾಸಿಂ ಅಲಿ ಈ ಮುಷ್ಕರದ ಸೂತ್ರಧಾರರಾದರು. ಕಂಪನಿಯ ಹಡಗುಗಳಲ್ಲಿ ಕೆಲಸಮಾಡುವವರೂ ಮುಷ್ಕರದಲ್ಲಿ ಸೇರಿಕೊಂಡರು. ಆಗ ಉಪಾಯಗಾಣದೆ ಕಂಪನಿಯ ಮಾಲಕರು ಕೆಲಸಗಾರರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತು.

ಇದರಿಂದ ಸ್ಫೂರ್ತಿ ಪಡೆದ 'ಅಸ್ಸಾಂ ಬೆಂಗಾಲ್ ರೇಲ್' ಎಂಬ ವಿದೇಶೀ ರೈಲು ಕಂಪನಿಯಲ್ಲೂ ಮುಷ್ಕರವಾಯಿತು. ಸಿಪ್ಪೂರ್, ಕಛಾವ ಪ್ರದೇಶಗಳಲ್ಲಿ ಇಂಗ್ಲೀಷರ ಚಹಾ ತೋಟಗಳಿದ್ದವು. ಅಲ್ಲಿಯೂ ಕಾರ್ಮಿಕ ಅಸಂತುಷ್ಟಿ ತಲೆದೋರಿತು. ಬಿಹಾರಿನ ಮಜದೂರರು ತಾವು ಬಿಹಾರಿಗೆ ಹಿಂತಿರುಗ ಬಯಸಿದರು.

ಕೆಲಸ ಬಿಟ್ಟು ಊರಿಗೆ ಹಿಂತಿರುಗಬಯಸಿದ ಈ ಮಜದೂರರು ಬಿಹಾರಿಗೆ ಹೋಗದಂತೆ ಮಾಡಲು ಚಹಾ ತೋಟಗಳ ಮಾಲಿಕರು ಪ್ರಯತ್ನಿಸಿದರು. ಅವರು ರೇಲ್ವೆ ಕಂಪನಿಯವರಿಗೆ ತಿಳಿಸಿ; ಈ ಮಜದೂರರು ರೈಲು ಹತ್ತಲು ಬಂದಾಗ ಅವರು ರೈಲಿಗೆ ಪ್ರವೇಶಿಸದಂತೆ ತಡೆದರು, ತೋಟಗಳಿಗೆ ಹಿಂತಿರುಗುವ ಬದಲು ಕೂಲಿಯಾಳುಗಳು ರೇಲ್ವೆ ಸ್ಟೇಶನಿನಲ್ಲೇ ಧರಣಿ ಹೂಡಿದರು. ನಾಲ್ಕು, ಐದು ದಿನಗಳವರೆಗೂ ಅವರು ಸ್ಟೇಶನ್ ಬಿಟ್ಟು ಕದಲಲಿಲ್ಲ. ಆಗ ಇಂಗ್ಲೀಷ್ ಮಾಲಿಕರು ಗೂರ್ಖಾ ಸೈನಿಕರಿಗೆ ಮದ್ಯ ಕುಡಿಸಿ ರಾತ್ರಿಯಲ್ಲಿ ಅವರನ್ನು ಈ ಕೂಲಿಯಾಳುಗಳು ಮೇಲೆ ಛೂ ಬಿಟ್ಟರು. ಭಯಂಕರ ಅತ್ಯಾಚಾರ ನಡೆಯಿತು. ಕೋವಿಗಳ ತಿವಿತದಿಂದ ತೀರಿ ಹೋದವರ ಹೆಣಗಳನ್ನು ಪದ್ಮಾ ನದಿಯಲ್ಲಿ ಎಸೆದು ಬಿಡಲಾಯಿತು. ಈ ಮುಷ್ಕರದ ಸೂತ್ರಧಾರರಾಗಿ ಹಿಂದೆ ಸೂರ್ಯಸೇನರಿದ್ದರು.

ಚಟಗಾಂವಿನ ಕ್ರಾಂತಿಕಾರಿಗಳು ಇನ್ನು ನಾವು ಸುಮ್ಮನಿರಲಾರೆವು ಎಂದರು. ಉತ್ಸಾಹ ಉಕ್ಕೇರಿದ್ದ ಯುವಕರನ್ನು ಕಂಡ ಸೂರ್ಯಸೇನರು, ಅನುಯಾಯಿಗಳ ಮೂಲಕ ಹಲವಾರು ಸಾವಿರ

ರೂಪಾಯಿಗಳಷ್ಟು ಚಂದಾ ಕೂಡಿಸಿದರು. ಸಂಬಳದ ಹಣ ಸಾಗಿಸುತ್ತಿದ್ದ ರೇಲ್ವೆ ಕಂಪನಿಯವರ ಕುದುರೆ ಗಾಡಿಯೊಂದನ್ನು ದೋಚಿ ಹದಿನೇಳು ಸಾವಿರ ರೂಪಾಯಿಗಳನ್ನು ಬೇರೆ ಸಂಗ್ರಹಿಸಲಾಯಿತು.

ಚಟಗಾಂವ್ ಗುಡ್ಡಗಳಿಂದ ಕೂಡಿದ್ದರಿಂದ ಅಲ್ಲಿ ಗುಡ್ಡಗಳ ಬದಿಗಳಲ್ಲಿ ಕುಳಿತು ಕ್ರಾಂತಿಕಾರಿ ಕಾರ್ಯಗಳ ಕುರಿತು ಯೋಜನೆ ಹಾಕಲು ಸಾಧ್ಯವಾಗುತ್ತಿತ್ತು. ಕಲ್ಕತ್ತಾದಲ್ಲಿ ಕೆಲಸ ಮಾಡುತ್ತಿದ್ದ ಕ್ರಾಂತಿಕಾರಿಗಳು ದೇವೇನ್ ದೇ ಅವರ ನೇತೃತ್ವದಲ್ಲಿ ತಮ್ಮ ದಳದ ಖರ್ಚಿಗಾಗಿ ದರೋಡೆಗಳಲ್ಲಿ ತೊಡಗಿದ್ದರು. ಅವರಿಗೆ ಕೊನೆ ಕೊನೆಗೆ ಕಲ್ಕತ್ತದಲ್ಲಿ ಇರುವುದು ಅಸಾಧ್ಯವಾದಾಗ ಅಲ್ಲಿಂದ ಕಾಲ್ತೆಗೆದು ಚಟಗಾಂವ್‌ಗೆ ಬಂದು ನೆಲೆಸಿ ಸೂರ್ಯಸೇನರ ಸಂಗಡಿಗರಾದರು.

ಒಳಗಿಂದೊಳಗೆ ಕಾರ್ಯ ಸಾಗತೊಡಗಿತು. ಯಾರೊಬ್ಬನಿಗೂ ಇವರ ಯೋಜನೆಗಳ ಸುಳಿವು ಹತ್ತಲಿಲ್ಲ. ೧೯೨೩ ಡಿಸೆಂಬರ್ ೨೩. ಚಟಗಾಂವಿನ ಗುಡ್ಡಗಳ ಬದಿಯ ಮುಖ್ಯ ರಸ್ತೆಯ ಬದಿಯಲ್ಲಿ ನಾಲ್ವರು ಯುವಕರು ಹೊಂಚುಹಾಕಿ ಕುಳಿತಿದ್ದರು. ರೈಲು ಕಂಪನಿಯ ವೇತನ ಹಣ ಸಾಗಿಸುವ ಕುದುರೆ ಗಾಡಿ ಆ ಬದಿಯಿಂದ ಬಂತು. ದೇವೇನ್ ದೇ ಮತ್ತು ಅನಂತಸಿಂಗ್ ಗಾಡಿ ಹತ್ತಿರ ಬರುತ್ತಲೇ ಪಿಸ್ತೂಲು ತೋರಿಸಿ ಗಾಡಿಯ ಒಳಗೆ ಕುಳಿತಿರುವವರನ್ನು ಕೆಳಗಿಳಿಸಿದರು. ಗಾಡಿಯ ಚಾಲಕನನ್ನೂ ಇಳಿಸಿ ತಾವೇ ಗಾಡಿ ಹೊಡೆದುಕೊಂಡು ಮುಂದೆ ಸಾಗಿದರು. ಗಾಡಿಯವನೂ ಇತರರೂ ಬೊಬ್ಬಿಟ್ಟರೂ ಪ್ರಯೋಜನವಾಗಲಿಲ್ಲ. ಈ ದರೋಡೆಯಿಂದ ದಳಕ್ಕೆ ಬಹಳ ಲಾಭವಾಯಿತು.

ಪಟ್ಟಣದಿಂದ ಮೂರು ಮೈಲುಗಳ ದೂರದಲ್ಲಿ 'ಬರ್‌ಫರ್ ಘಾಟ್' ಎಂಬ ಮುಸ್ಲಿಂ ಗ್ರಾಮವೊಂದಿತ್ತು. ಅಲ್ಲಿ ಪೋಲೀಸರ ಕಣ್ಣುತಪ್ಪಿಸಿ ಕೆಲವು ಕ್ರಾಂತಿಕಾರಿಗಳು ವಾಸವಾಗಿದ್ದರು. ಕುದುರೆ ಗಾಡಿಯ ಕಾಂಡದ ಬಳಿಕ ಹೀಗೆ ತಲೆಮರೆಸಿ ಇರುವ ಯೋಜನೆಯಾಗಿತ್ತು. ಸೂರ್ಯಸೇನರು ಅಲ್ಲಿಯೇ ಇರುತ್ತಿದ್ದರು. ಬೆಳಿಗ್ಗೆ ಶಾಲೆಗೆ ಹೋಗಿ, ಸಂಜೆ ಸುದ್ದಿ ಸಮಾಚಾರ ಸಂಗ್ರಹಿಸಿಕೊಂಡು ಬರುತ್ತಿದ್ದರು.



“ಶ್ರಾದ್ಧ ಅನ್ನೋ ಅಂದ್ರೆ ಶಾರದಾಂತ್ಲೇ ಹೇಳ್ತಿಯಲ್ಲೋ.?

ಕುದುರೆ ಗಾಡಿ ಲೂಟಿಯಾಗಿ ಹತ್ತಾರು ದಿನಗಳು ಕಳೆದ ಬಳಿಕ ಒಬ್ಬ ಪೋಲೀಸ್ ಅಧಿಕಾರಿ ಇಲ್ಲಿ ವಿಚಾರಣೆಗೆಂದು ಬಂದ. ಅಪಾಯದ ಸುಳಿವು ಪಡೆದ ಸೂರ್ಯಸೇನರು ತಮ್ಮೆಲ್ಲ ಅನುಯಾಯಿಗಳಿಗೆ ಗ್ರಾಮ ಬಿಟ್ಟು ಹೋಗಬೇಕೆಂದು ಹೇಳಿದರು. ಇವರೆಲ್ಲಾ ಹಳ್ಳಿ ಬಿಟ್ಟು ಹೊರಟಾಗ ಊರವರು ಉಪದ್ರವ ಕೊಟ್ಟರು. ಕ್ರಾಂತಿಕಾರಿಗಳು ಶಸ್ತ್ರಗಳನ್ನು ಹೊರ ತೆಗೆದು ಬೆದರಿಸಿದಾಗ ಆಗ ಹಳ್ಳಿಗರು ಹಿಂಜರಿದರು. ಆದರೂ ಇಟ್ಟಿಗೆ, ಕಲ್ಲುಗಳನ್ನು ಎಸೆಯತೊಡಗಿದರು. ಅವರು ಹತ್ತು ಹನ್ನೆರಡು ಮೈಲುಗಳ ವರೆಗೂ ಇವರನ್ನು ಬೆನ್ನಟ್ಟಿದರು. ಹಳ್ಳಿಯ ಕಾವಲುಗಾರರು ಗುಂಡುಗಳನ್ನೂ ಹಾರಿಸಿದರು. ಆದರೆ ಅವರು ನಮ್ಮ ಶತ್ರುಗಳಲ್ಲ ಆದ್ದರಿಂದ ಅವರ ಮೇಲೆ ಪ್ರತಿಯಾಗಿ ಗುಂಡು ಹಾರಿಸಬೇಡಿ ಎಂದು ಸೂರ್ಯಸೇನ ಆದೇಶವಿತ್ತರು. ಅಷ್ಟರಲ್ಲಿ ಪೋಲೀಸ್ ದಳ ಅವರ ಬೆನ್ನಟ್ಟಿ ಬಂತು. ಕಾಡು ಸಮೀಪವಾಗಿತ್ತು. ಕ್ರಾಂತಿಕಾರಿಗಳು ಕಾಡು ಸೇರಿದರು. ಆದರೆ ಕೆಲವು ಪೋಲೀಸರು ಬೆನ್ನು ಬಿಡಲಿಲ್ಲ, ಹಿಂಬಾಲಿಸಿದರು.

ಕ್ರಾಂತಿಕಾರಿಗಳು ದಣಿದು ಸೋತಿದ್ದರು. ಆಯಾಸದಿಂದಾಗಿ ಸೂರ್ಯಸೇನರಿಗೆ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಅವರು ಅಂಬಿಕಾ ಚಕ್ರವರ್ತಿಯೊಡನೆ ಸಲಹೆ ಕೇಳಿದರು. ಇಬ್ಬರೂ ಪೊಟ್ಯಾಶಿಯಮ್ ಸ್ಯಾನೈಡ್ ತಿಂದು ಅಲ್ಲೇ ಸಾಯಲು ನಿಶ್ಚಯಿಸಿದರು. ತಮ್ಮಿಬ್ಬರ ಶವವನ್ನು ಕಂಡ ಪೋಲೀಸರು ಅಲ್ಲಿ ಸ್ವಲ್ಪ ಕಾಲವಾದರೂ ನಿಂತೇ ನಿಲ್ಲುತ್ತಾರೆ. ಆ ಸಂದರ್ಭ ಉಪಯೋಗಿಸಿಕೊಂಡು ಇತರರು ಪಾರಾಗಬಹುದು ಎಂದು ಅವರ ಲೆಕ್ಕಾಚಾರವಾಗಿತ್ತು. ಅದನ್ನು ಮನ್ನಿಸಿದ ಸಂಗಡಿಗರು, ಅವರನ್ನು ಬೀಳ್ಕೊಟ್ಟು ಮುಂದುವರಿದರು. ಸ್ವಲ್ಪ ಹೊತ್ತಿನಲ್ಲೇ ಇವರಿಬ್ಬರೂ ಮೂರ್ಛೆ ಹೋದರು. ರಾತ್ರಿಯ ಕೊನೆಯ ಪ್ರಹರದಲ್ಲಿ ಜೋರಾಗಿ ಮಳೆ ಸುರಿಯಿತು. ಇಬ್ಬರೂ ಎಚ್ಚೆ

ತ್ತರು. ಆದರೆ ಬಹಳ ನಿಶ್ಶಕ್ತರಾಗಿದ್ದುದರಿಂದ ಎದ್ದು ನಡೆಯುವಂತಿರಲಿಲ್ಲ. ಆದರೆ ಇಂತಹ ಭಯಂಕರ ವಿಷ ತಿಂದರೂ ಅವರು ಬದುಕಿದುದು ಆಶ್ಚರ್ಯ.

ಪೋಲೀಸರು ಇಬ್ಬರನ್ನೂ ಬಂಧಿಸಿದರು. ಯತೀಂದ್ರಮೋಹನ ಗುಪ್ತ ಇವರ ಪರವಾಗಿ ಮಾಡಿದ ವಕಾಲತ್ತಿನಿಂದಾಗಿ, ಇಬ್ಬರೂ ನಿರ್ದೋಷಿಗಳೆಂದು ತೀರ್ಮಾನವಾಗಿ ಬಿಡುಗಡೆಯಾಯಿತು. ಅನಂತಸಿಂಗರ ನೇತೃತ್ವದಲ್ಲಿ ಮುಂದೆ ಹೋಗಿದ್ದ ಇತರ ಕ್ರಾಂತಿಕಾರಿಗಳು ಪಾರಾದರೂ ಮುಂದೆ ಸ್ವಲ್ಪ ಕಾಲದ ನಂತರ ಅನಂತಸಿಂಗರನ್ನು ಕಲ್ಕತ್ತೆಯಲ್ಲಿ ಬಂಧಿಸಲಾಯಿತು. ಆದರೆ ಪೋಲಿಸ ಮೊಕದ್ದಮೆಯಲ್ಲೂ ಯತೀಂದ್ರಮೋಹನರು ಪ್ರಭಾವಿಯಾಗಿ ವಾದಿಸಿ ಅವರನ್ನು ಬಂಧನದಿಂದ ಬಿಡುಗಡೆಗೊಳಿಸಿದರು.

ಓರ್ವ ಚುರುಕ ಪೋಲೀಸ್ ಅಧಿಕಾರಿ ಕ್ರಾಂತಿಕಾರಿಗಳಲ್ಲಿ ಒಬ್ಬನ ಗೆಳೆಯನಾಗಿ ಇವರ ಗುಟ್ಟನ್ನು ಬಯಲು ಮಾಡಲು ಹವಣಿಸಿದ್ದ ಸುದ್ದಿ ಸೂರ್ಯಸೇನರಿಗೆ ಬಂದು ಮುಟ್ಟಿತು. ಅವರು ಆ ಕ್ರಾಂತಿಕಾರಿಯ ಮನಸ್ಸನ್ನೇ ತಮ್ಮ ಉಪದೇಶದಿಂದ ತಿರುಗಿಸಿ, ಅವನ ಆ ಪೋಲೀಸ್ ಅಧಿಕಾರಿಯನ್ನು ಕೊಲೆಗೈಯ್ಯುವಂತೆ ಮಾಡಿದರು.

ಚಟಗಾಂವ್ ಕ್ರಾಂತಿಕಾರಿಗಳು ತಮ್ಮನ್ನು ಬಾಕ್ಸಿಂಗ್, ಯುತ್ಸು, ಈಜಾಟ, ಅಡಿಕೆ ಹಾಗೂ ತೆಂಗಿನ ಮರ ಏರುವುದು ಮೊದಲಾದವುಗಳಲ್ಲಿ ತರಬೇತಿಗೊಳಿಸಿಕೊಳ್ಳುತ್ತಿದ್ದರು. ಆದರೆ ಮಾಸ್ಟರ್ ದಾದಾ (ಸೂರ್ಯಸೇನ) ಇವುಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಹುಡುಗರು ಒಮ್ಮೊಮ್ಮೆ 'ಮಾಸ್ಟರ್ ದಾದಾ, ನೀವು ಕಷ್ಟದಲ್ಲಿ ಸಿಲುಕಿದರೆ ಹೇಗೆ ತಪ್ಪಿಸಿಕೊಳ್ಳುವಿರಿ?' ಎಂದು ಕೇಳಿದಾಗ ಸೂರ್ಯಸೇನರು, 'ನೋಡಿಕೊಂಡಿರಿ, ನಾನು ಬಲಹೀನನಾಗಿರುವೆನಾದರೂ ಸಂದರ್ಭ ಬಂದಾಗ ತಪ್ಪಿಸಿಕೊಳ್ಳಬಲ್ಲೆ?' ಎಂದು ಉತ್ತರಿಸುತ್ತಿದ್ದರು. ಅದು ಸರಿಯೆಂಬುದು ೧೯೨೫ರಲ್ಲಿ ಬೆಳಕಿಗೆ ಬಂತು.

೧೯೨೫ರಲ್ಲೊಂದು ದಿನ ಸೂರ್ಯಸೇನರು ಕಲ್ಕತ್ತದ ಶೋಭಾ ಬಜಾರಿನ ಒಂದು ಮನೆಯಲ್ಲಿ, ಬಾಂಬು ತಯಾರಿಸುತ್ತಿದ್ದಾಗ ಸಂಜೆ ನಾಲ್ಕು ಗಂಟೆಗೆ ಅಚಾನಕವಾಗಿ ಪೋಲೀಸರು ಈ ಮನೆಗೆ ಮುತ್ತಿಗೆ ಹಾಕಿದರು. ಸೂರ್ಯಸೇನರು ಕೂಡಲೆ ಕೆಲಸದವನ ಕೊಳಕು ಬಟ್ಟೆಗಳನ್ನು ತೊಟ್ಟುಕೊಂಡು, ಕೈಯಲ್ಲಿ ಚಹಾ ದಾನಿ ಹಿಡಿದು ಹೊರ ಹೊರಟರು. ಬಾಗಿಲಲ್ಲಿ ಪೋಲೀಸಿನವ ತಡೆದು, 'ನಿನಗೆ ಹೊರ ಹೋಗಲು ಹುಕುಮಿಲ್ಲ. ಒಳಗೆ ನಡಿ' ಎಂದಾಗ ಚಹ ತರಲು ಹೊರಟವನು ಹಲ್ಲು ಕಿರಿದು ಹಣ ತೋರಿಸಿ, ಚಹಾ ತರಲು ಹೊರಟಿದ್ದೇನೆ' ಎಂದ. ಆಗ ಸಿಪಾಯಿ, 'ಚಹ ತರುವುದು ಬೇಡ. ನಡಿ ಒಳಗೆ ಎಂದು ಗರ್ಜಿಸಿದಾಗ ಸೂರ್ಯಸೇನರಿಗೆ ಏನು ಮಾಡುವುದೆಂದು ಹೊಳೆಯಲಿಲ್ಲ. ಅಷ್ಟರಲ್ಲಿ ಬಂಗಾಳಿ ಸಬ್ ಇನ್‌ಸ್ಪೆಕ್ಟರ್, 'ಕೆಲಸದವ ಹೋಗಲಿ ಬಿಡು' ಎಂದಾಗ ಮಾಸ್ಟರ್ ದಾದಾ ಬೇರೆ ಬೇರೆಯಾಗಿ ಎಲ್ಲರಿಗೂ ಬಗ್ಗಿ ನಮಸ್ಕರಿಸಿ ಹಲ್ಲು ಕಿರಿದು ಪರಾರಿಯಾದರು.

ಆ ಮನೆಯೊಳಗೆ ಬೇರೆ ಕ್ರಾಂತಿಕಾರರೂ ಇದ್ದರು ಅವರೆಲ್ಲ ಬಂಧಿತರಾದರು. ಅವರಲ್ಲಿ ಪ್ರಮೋದ ಚೌಧರಿ, ರಾಜೇಂದ್ರನಾಥ ಲಾಹಿರಿ, ಅನಂತ ಹರಿಮಿತ್ರ ಮುಂತಾದವರು ಇದ್ದರು. ಪ್ರಮೋದ ಚೌಧರಿಗೆ ಬಾಂಬು ತಯಾರಿಸಿದ ಅಪರಾಧಕ್ಕಾಗಿ ಐದು ವರ್ಷ ಶಿಕ್ಷೆಯಾಯಿತು. ಲಾಹಿರಿಗೆ ಹತ್ತು ವರ್ಷಗಳ ಶಿಕ್ಷೆಯಾಗಿ ಕಾಕೋರಿ ಹತ್ಯಾಕಾಂಡದ ಅಪರಾಧಕ್ಕಾಗಿ ಮತ್ತೂ ಇನ್ನೂ ಹೆಚ್ಚಿನ ಶಿಕ್ಷೆಗೆ ಲಾಹೋರಿಗೆ ಕಳುಹಿಸಲ್ಪಟ್ಟ. ಉಳಿದ ಈ ಕೇಸಿಗೆ ಸಂಬಂಧಿಸಿದವರು ಜೈಲಿನಲ್ಲಿ ರಾವ್ ಬಹಾದುರ್ ಭೂಪೇಂದ್ರನಾಥ ಚಟರ್ಜಿಯವರನ್ನು ಸೊಳ್ಳೆ ಪರದೆ ಹಾಕಲು ಉಪಯೋಗಿಸುವ ಕಂಭದ ಕೋಲುಗಳಿಂದ ಹೊಡೆದು ಕೊಂದರು. ಇದಕ್ಕಾಗಿ ಪ್ರಮೋದ ಚೌಧರೀ ಮತ್ತು ಅನಂತ ಹರಿಮಿತ್ರರಿಗೆ ಫಾಶಿಯಾಯಿತು. ಉಳಿದವರ ಶಿಕ್ಷೆಯು ಅವಧಿ ಹೆಚ್ಚಿತು. ಆದರೆ ಕೆಲಸದವನ ಕೊಳಕು ಬಟ್ಟೆ: ಚಹ ತರುವ ಕೆಟ್ಲಿ, ಸಲಾಮುಗಳು ಸೂರ್ಯಸೇನರನ್ನು ದೊಡ್ಡ ಅಪಾಯದಿಂದ ಪಾರುಮಾಡಿದ್ದವು.

ಆದರೆ ಒಂದು ವರ್ಷದೊಳಗೆ ೧೯೨೫ರ ಕೊನೆಯಲ್ಲಿ ಪೋಲೀಸರು ಅವರನ್ನು ಬಂಧಿಸಿ ದೂರದ ರತ್ನಾಗಿರಿಯಲ್ಲಿರಿಸಿದರು. ಆಗ ಪೋಲೀಸ್ ಅಧಿಕಾರಿ ಲೋಮನ್, 'ಇನ್ನು ಸುಮಾರು ದಿನ ನಮಗೆ ಕೆಲಸವಿಲ್ಲವೆಂದು ಕಾಣುತ್ತದೆ' ಎಂದು

ಇವರನ್ನು ನೋಡಿ ನಗುತ್ತಾ ಅಂದ. ಸೂರ್ಯಸೇನರ ವಿರುದ್ಧ ಪುರಾವೆಗಳಿಲ್ಲದ್ದರಿಂದ ಯಾವ ಮೊಕದ್ದಮೆಯೂ ನಡೆಯಲಿಲ್ಲ. ಅವರ ವಿರುದ್ಧ ಸಾಕ್ಷಿ ಸಾಕ್ಷಿ ಹೇಳುವವರೂ ಸಿಗಲಿಲ್ಲ. ಆದ್ದರಿಂದ ಅವರನ್ನು ಕೇವಲ ಗೃಹಬಂಧನಕ್ಕೊಳಪಡಿಸಬೇಕಾಯಿತು. ಖಟ್ಲೆ ಹೂಡದೆ ಹಾಗೆಯೆ ಬಂಧಿಸಿ ಇಡುವುದನ್ನು ಇಂಗ್ಲೆಂಡಿನ ಪಾರ್ಲಿಮೆಂಟ್ ಸದಸ್ಯರು ವಿರೋಧಿಸಿದರು. ಒಂದೋ, ಮೊಕದ್ದಮೆ ಹೂಡಿ, ಇಲ್ಲವಾದರೆ ಅವರನ್ನು ಬಿಟ್ಟುಬಿಡಿ–ಎಂದು ಅವರು ವಾದಿಸಿದರು. ಭಾರತದಾದ್ಯಂತ ಈ ಬಂಧನಗಳ ವಿರುದ್ಧ ಜನರು ವಿರೋಧವನ್ನು ವ್ಯಕ್ತಪಡಿಸಿದರು.

೧೯೨೮ರ ಕಲ್ಕತ್ತಾ ಕಾಂಗ್ರೆಸ್ಸಿನ ಅಧ್ಯಕ್ಷತೆ ಮೋತೀಲಾಲ ನೆಹರೂ ವಹಿಸಿದ್ದರು. ಆ ಸಂದರ್ಭವಲ್ಲಿ ಸೈನಿಕ ಉಡುಪು ಧರಿಸಿದ ಸುಭಾಸ ಚಂದ್ರ ಬೋಸ ಏಳು ಸಾವಿರ ಕಾಂಗ್ರೆಸ್ ಸ್ವಯಂ ಸೇವಕರ ನಾಯಕರಾಗಿ ಕುದುರೆಯ ಮೇಲೆ ಸವಾರಿ ಮಾಡುತ್ತ ಬಂದರು. ಚಟಗಾಂವಿನಿಂದ ಪ್ರತಿನಿಧಿಯಾಗಿ ಅಧಿವೇಶನಕ್ಕೆ ಬಂದಿದ್ದ ಸೂರ್ಯಸೇನ ಈ ದೃಶ್ಯವನ್ನು ಕಂಡು ಮುಗ್ಧರಾಗಿ ಹೋದರು. ಇದಕ್ಕೂ ಮೊದಲು ಅವರು ಸರಕಾರಿ ಸೈನಿಕರನ್ನು ಪೋಲೀಸರನ್ನು ಮಾತ್ರ ಸಮವಸ್ತ್ರದಲ್ಲಿ ನೋಡಿದ್ದರು. ಇಲ್ಲಿ ಸಾವಿರಾರು ಸ್ವಯಂಸೇವಕರು ಸುಭಾಸರ ಮುಖಂಡತ್ವದಲ್ಲಿ ಕವಾಯತು ಮಾಡುತ್ತಿದ್ದುದನ್ನು ಕಂಡು ಅವರಿಗಾದ ಆನಂದಕ್ಕೆ ಪಾರವಿಲ್ಲದಾಯಿತು. ಆದರೆ ಅಹಿಂಸೆಯಿಂದ ಕಾಂಗ್ರೆಸ್ಸು ದೂರ ಸರಿಯುತ್ತಿದೆಂದು ಮನಗಂಡ ಗಾಂಧೀಜಿ ಈ ಕವಾಯತು, ಸೆಲ್ಯೂಟುಗಳನ್ನು ಒಂದು ವಿನೋದವೆಂದು ಬಣ್ಣಿಸಿ ಬಿಟ್ಟರು.

ಸರಿಯಾಗಿ ಕಲ್ಕತ್ತಾ ಕಾಂಗ್ರೆಸ್ ಸೇರುವ ಮೊದಲು ಸೂರ್ಯಸೇನರ ಪತ್ನಿ ಪುಷ್ಪಕುಂತಲಾ ತೀರಿಕೊಂಡರು. ಈ ನಾರೀಮಣಿ ಜೀವನವಿಡೀ ಪತಿಯಿಂದ ಸುಖ ಪಡೆಯಲಿಲ್ಲ. ಸೂರ್ಯಸೇನರಿಗೆ ಆನಂದಮಠದ ಸಂನ್ಯಾಸಿಗಳ ತತ್ವದ ಮೇಲೆ ವಿಶ್ವಾಸವಿತ್ತು. ಅದರ ಮೂಲ ಮಂತ್ರವೇನೆಂದರೆ "ಎರಡು ಪ್ರೇಮಗಳು ಒಟ್ಟಿಗೆ ನಡೆಯಲು ಸಾಧ್ಯವಿಲ್ಲ."

ಸೂರ್ಯಸೇನ ಕಲ್ಕತ್ತಾ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿದ್ದರೂ ಒಳಗಿಂದೊಳಗೆ ಕಾಂಗ್ರೆಸ್ಸಿನಿಂದ ಸ್ವಾತಂತ್ರ್ಯ ದೊರಕಿಸಿಕೊಳ್ಳಲು ಆಗುವುದಿಲ್ಲವೆಂದು ಭಾವಿಸಿದರು. ಅವರು ಸಂದರ್ಭ ಸಾಧಿಸಿ ಕಲ್ಕತ್ತದ ಹಿಂದಿನ ಕ್ರಾಂತಿಕಾರಿಗಳನ್ನು ಭೆಟ್ಟಿಯಾದರು. ಅವರಲ್ಲಿ ಹೆಚ್ಚಿನವರ ಹುಮ್ಮಸ್ಸು ಅಡಗಿಹೋಗಿತ್ತು. ಆದರೂ ಸೂರ್ಯಸೇನ ಧೃತಿಗೆಡದೇ ತಾವೊಬ್ಬರೇ ಮಾರ್ಗದಲ್ಲಿ ಮುನ್ನಡೆಯಲು ನಿರ್ಧರಿಸಿದರು.

ಈ ನಿರ್ಧಾರದೊಂದಿಗೆ ಅವರು ಚಟಗಾಂವಿಗೆ ಮರಳಿದರು. ಇಂಡಿಯನ್ ರಿಪಬ್ಲಿಕನ್ ಆರ್ಮಿ ಸಂಘಟಿಸುವ ಕನಸು ಅವರದಾಗಿತ್ತು. ತಮ್ಮನ್ನು ಕೇವಲ ಕ್ರಾಂತಿಕಾರಿಯೆನ್ನದೆ ಅವರು ಸಾದಾ ಸೈನಿಕನೆಂದು ಹೇಳಿಕೊಳ್ಳುತ್ತಿದ್ದರು. ತಮ್ಮ ಸಂಗಡಿಗರನ್ನು ಸೈನಿಕರನ್ನಾಗಿ ಮಾಡಲು ಹವಣಿಸಿದರು. ಸೈನಿಕ ಸಾಧನೆಯಿಂದಲ್ಲದೆ ಬೇರಾವುದರಿಂದಲೂ ಕಾರ್ಯಸಾಧನೆಯಾಗಲಾರದೆಂಬ ಭಾವನೆಯನ್ನು ಅವರು ಗೆಳೆಯರಲ್ಲಿ ತುಂಬಿದರು. ಹೀಗಾಗಿ ಈ ಕ್ರಾಂತಿಕಾರಿಗಳು ಸೈನಿಕರಾಗಲು ಬೇಕಾದ ವಿಷಯಗಳನ್ನು ಓದತೊಡಗಿದರು. ನನಗೆ ಸ್ವತಃ ಈ ಕುರಿತು ಚೆನ್ನಾಗಿ ತಿಳಿದಿದೆ. ಏಕೆಂದರೆ ನಾನಾಗ ಬರೇಲೀ ಜೈಲಿನಲ್ಲಿದ್ದೆ. ಸೂರ್ಯಸೇನರ ಶಿಷ್ಯ ಗಣೇಶ್ ಘೋಷ್, ಕೂಡಾ ಅಲ್ಲಿದ್ದರು. ಅವರು ನಮ್ಮನ್ನು ಭೆಟ್ಟಿಯಾಗುತ್ತಿದ್ದರು. ಅವರ ಸಂಗಡಿಗರೊಡನೆ ಕೂಟಯುದ್ಧ, ಥಕ್ಕನೆ ಆಕ್ರಮಿಸಿ ಓಡುವ ಯುದ್ಧ ಕೌಶಲ ಇತ್ಯಾದಿಗಳ ಕುರಿತಾದ ಗ್ರಂಥಗಳಿದ್ದವು. ನನಗೂ ಅವನ್ನು ಓದಲು ಕೊಡುತ್ತಿದ್ದರು.

ಕ್ರಾಂತಿಕಾರರು ಸೈನಿಕರಾದುದರಿಂದ ಸೂರ್ಯಸೇನ ಅವರನ್ನು ದರೋಡೆ ಮಾಡುವ ಗೊಂದಲದ ಕಾರ್ಯಗಳಿಂದ ದೂರವಿರುವಂತೆ ಉಪದೇಶಿಸಿದರು. ದರೋಡೆ ಮಾಡುವುದರಿಂದ ಕ್ರಾಂತಿಕಾರಿಗಳ ಹೆಚ್ಚಿನ ಶಕ್ತಿ ಹಾಗೂ ಸಮಯ ಖಟ್ಲೆಗಳಲ್ಲಿ ಕಳೆದು ಹೋಗುತ್ತಿತ್ತು. ಇದರ ಬದಲು ಸೂರ್ಯಸೇನ ಚಂದಾ ಎತ್ತಿ ಹಣ ಕೂಡಿಸುವಂತೆ ಹೇಳಿದರು. ಇದರ ಲೆಕ್ಕಾಚಾರವನ್ನು ಗುಪ್ತವಾಗಿ ಇಡಲಾಗುತ್ತಿತ್ತು. ಹೆಚ್ಚಿನ ಚಂದಾ ಅವರವರ ಮನೆಗಳಿಂದಲೇ ಬರುತ್ತಿತ್ತು. ಹೀಗೆ ಒಟ್ಟು ನಾಲ್ಕುಸಾವಿರ ರೂಪಾಯಿಗಳು ಸಂಗ್ರಹವಾದವು.

ಸೂರ್ಯ ಸೇನರ ಸೈನಿಕ ತರಬೇತಿ ಭರದಿಂದ ಸಾಗಿತು. ಚಟಗಾಂವಿನ ಭೌಗೋಲಿಕ ಸ್ಥಿತಿಯನ್ನು ಅಭ್ಯಸಿಸಿದರು. ಅಲ್ಲಿ ಅಡಗಿರಲು ಯೋಗ್ಯವಾದ

ತಾಣಗಳು, ಚಿಕ್ಕ ದೊಡ್ಡ ಗುಡ್ಡ ಪರ್ವತಗಳು, ಸಮುದ್ರದ ಸ್ವರೂಪ, ದಟ್ಟವಾದ ಕಾಡುಗಳಿರುವ ಜಾಗೆಗಳು ಇವನ್ನೆಲ್ಲಾ ಪ್ರತಿ ಕ್ರಾಂತಿಕಾರಿಯೂ ತಿಳಿದುಕೊಂಡನು. ಇದಲ್ಲದೆ ಆ ಭಾಗದಲ್ಲಿ ಸರಕಾರದ ಸೈನಿಕರಿರುವ ಠಾಣ್ಯಗಳು ಅವರ ಸಂಖ್ಯೆ, ಬಿಳಿಯರ ಕ್ಲಬ್ಬುಗಳು, ಅಲ್ಲಿ ನಡೆಯುವ ವಿಷಯಗಳು ಹಾಗೂ ಬಂದು ಹೋಗುವ ಜನ, ಟೆಲಿಫೋನು ಮತ್ತು ಅದರ ತಂತಿಗಳು. ರೈಲ್ವೆ ಲೈನುಗಳು, ರೈಲುಗಳ ಸಮಯ ಇದನ್ನೆಲ್ಲಾ ಸೂಕ್ಷ್ಮವಾಗಿ ಪರಿಶೀಲಿಸಿದರು. ಅನಂತಸಿಂಗರಿಗೆ ವ್ಯಾಯಾಮ ಕೇಂದ್ರದ ಜವಾಬ್ದಾರಿಯನ್ನು ಕೊಡಲಾಯಿತು. ಕಾಂಗ್ರೆಸ್ ಸ್ವಯಂಸೇವಕರ ಹೆಸರಲ್ಲಿ ಕ್ರಾಂತಿಕಾರಿ ಸೇನೆ ಸಿದ್ಧವಾಗತೊಡಗಿತು.

ಸೂರ್ಯಸೇನ ತಮ್ಮ ಯೋಜನೆಯನ್ನು ಒಮ್ಮಿಂದೊಮ್ಮೆ ಹೊರಗೆಡಹಲಿಲ್ಲ. ಸರಕಾರದ ವಿರುದ್ಧ ಸೆಣಸುವುದಲ್ಲದೆ ತಾವು ಮಾಡುತ್ತಿರುವ ಕಾರ್ಯದ ಔಚಿತ್ಯವನ್ನು ಮನೆಯವರಲ್ಲಿ ಬಿಂಬಿಸುವುದೂ ಒಂದು ದೊಡ್ಡ ಸಾಹಸವೇ ಆಗಿತ್ತು. ೧೯೨೯ರ ಮೇ ತಿಂಗಳಲ್ಲಿ ಚಟಗಾಂವಿನಲ್ಲಿ ಒಂದು ಸಮ್ಮೇಳನ ನಡೆಯಿತು. ಅಧ್ಯಾಪಕ ಜ್ಯೋತಿಶ್ಚಂದ್ರ ಘೋಷ್ ಯುವ ಸಮ್ಮೇಳನದ ಮುಖಂಡರಾಗಿದ್ದರು. ನೃಪೇಂದ್ರ ಬೆನರ್ಜಿ ವಿದ್ಯಾರ್ಥಿಗಳ ಸಮ್ಮೇಳನದ ಅಧ್ಯಕ್ಷರಾದರು. ಲತಿಕಾ ಬಸು ಮಹಿಳಾ ಸಮ್ಮೇಳನದ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಸುಭಾಷ್ಚಂದ್ರ ಬೋಸರೂ ಬಂದಿದ್ದರು. ವಿಶೇಷ ಸಭೆಯೊಂದು ಕೆಲವೇ ವ್ಯಕ್ತಿಗಳಿಂದೊಡಗೂಡಿ ರಹಸ್ಯವಾಗಿ ನಡೆಯಿತು. ಅಲ್ಲಿ ಸುಭಾಷ ಬಾಬು ಅಹಿಂಸೆಯಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಬಹಿರಂಗವಾಗಿ ಹೇಳಿದರು. ಆದರೆ ಅಹಿಂಸೆಯ ಬಹಿರಾವರಣವಿರುವುದು ಅನುಕೂಲವೆಂದೂ ಅವರು ಹೇಳಿದ್ದರು.

ಸುಮಾರು ಈ ಘಟನೆಯಾದ ಎರಡು ತಿಂಗಳ ನಂತರ ಸೂರ್ಯಸೇನರು ಎಲ್ಲ ಸಿದ್ಧತೆಗಳನ್ನೂ ಪೂರ್ಣಗೊಳಿಸಿ ಸಂಗಡಿಗರಿಗೆ 'ನಾವು ಎರಡು ಮೂರು ದಿನಗಳ ಮಟ್ಟಿಗಾದರೂ ಚಟಗಾಂವನ್ನು ಪೂರ್ಣ ಸ್ವತಂತ್ರಗೊಳಿಸಿಬಿಡಬೇಕು. ಆಗ ಇದರ ಪ್ರಭಾವ ದೇಶದಲ್ಲಿ ದಿನೆ ದಿನೆ ಬೆಳೆಯುತ್ತಿರುವ ಸ್ವಾತಂತ್ರ್ಯ ಆಂದೋಲನದ ಮೇಲಾಗುವುದು' ಎಂದು ಹೇಳಿದರು. ಈ ಉದ್ದೇಶಕ್ಕಾಗಿ ಕ್ರಾಂತಿಕಾರಿಗಳ ಒಂದು ವಿಶೇಷ ಸಭೆ ಕರೆಯಲ್ಪಟ್ಟಿತು. ಅದರಲ್ಲಿ ಯೋಜನೆಯ ರೂಪರೇಖೆಗಳನ್ನು ಈ ರೀತಿ ಮಂಡಿಸಲಾಯಿತು:

(೧) ಸರಕಾರದ ಸಸ್ತ್ರಾಗಾರವನ್ನು ಕೊಳ್ಳೆ ಹೊಡೆಯುವುದು.

(೨) ರೈಲಿನ ಆಕ್ಸಿಲಿಯರೀ ಶಸ್ತ್ರಾಗಾರವನ್ನು ದೋಚುವುದು.

(೩) ತಂತಿ, ಟೆಲಿಫೋನ್ ಎಕ್ಸ್‌ಚೇಂಜಿನ ಆಫೀಸನ್ನು ಆಕ್ರಮಿಸಿ ಹೊರ ಜಗತ್ತಿಗೆ ಅದರ ಸಂಪರ್ಕ ಲಭಿಸದಂತೆ ಮಾಡುವುದು.

(೪) ಬಿಳಿಯರ ಕ್ಲಬ್ಬಿನ ಮೇಲೆ ದಾಳಿ ನಡೆಸುವುದು.

(೫) ಸರಕಾರೀ ಖಜಾನೆಯನ್ನು ಆಕ್ರಮಿಸಿ ಅದನ್ನು ವಶಕ್ಕೆ ತೆಗೆದುಕೊಳ್ಳುವುದು.

(೬) ಜೈಲುಗಳನ್ನು ಆಕ್ರಮಿಸಿ ಕೈದಿಗಳನ್ನು ಬಿಡಿಸುವುದು.

(೭) ನಗರದ ಕೋವಿಯ ಅಂಗಡಿಗಳನ್ನು ಆಕ್ರಮಿಸಿ ಅಲ್ಲಿರುವ ಅಸ್ತ್ರಶಸ್ತ್ರಗಳ ಮೇಲೆ ಅಧಿಕಾರ ಸ್ಥಾಪಿಸುವುದು.



"ಇಲ್ಲೇ ವಿಚಾರಣೆ ಮಾಡಿಸ್ಬಿಡಪ್ಪ, ಎಲ್ಲಾ ಒದರ್‍ಬಿಡ್ತೀನಿ ನಿನ್ ದಮ್ಮಯ್ಯಾಂತ..."

([illegible]) ಮತ್ತು ಬ್ರಿಟಿಷ್ ಅಧಿಕಾರಿಗಳನ್ನು ಬಂಧಿಸುವುದು.

([illegible]) ಚಟಗಾಂವಿನಲ್ಲಿ ರಾಷ್ಟ್ರೀಯ ಸರಕಾರ [illegible].

[illegible] ಮುಖ್ಯಸ್ಥ ಗಣೇಶ್ ಘೋಷ ಹೇಳುವಂತೆ, 'ಇದರಿಂದ ನಮಗೇನೂ ಲಾಭವಿಲ್ಲವೆಂದು ನಾವೆಲ್ಲಾ ತಿಳಿದಿದ್ದೆವು. ಚಟಗಾಂವ್ ಸ್ವತಂತ್ರವಾದರೂ ಭಾರತ ಸ್ವತಂತ್ರವಾಗದೆಂದು ನಮಗೆ ತಿಳಿದಿತ್ತು. ಹಾಗಾದರೆ ನಮ್ಮ ಕೆಲಸವೇನು? ಕ್ರಾಂತಿಕಾರಿ ಸರಕಾರವನ್ನು ಸ್ಥಾಪಿಸಿ ಅದರ ರಕ್ಷಣೆಗಾಗಿ ಹೋರಾಡುತ್ತಾ ಮಡಿಯುವುದು. ಆದುದರಿಂದ ಈ ಕಾರ್ಯಕ್ರಮಕ್ಕೆ ಮೃತ್ಯುವಿನ ಕಾರ್ಯಕ್ರಮ (Progamme of death) ಎಂದು ಹೆಸರಿಡಲಾಯಿತು.

ಕಾರ್ಯಕ್ರಮ ಸಿದ್ಧವಾಗಿತ್ತು. ಪೂರ್ವ ನಿರ್ಧರಿತ ಸಮಯಕ್ಕೆ ಭಗತ್‌ಸಿಂಗ್ ಮತ್ತು ಬಟುಕೇಶ್ವರದತ್ತರು ಕೇಂದ್ರೀಯ ಅಸೆಂಬ್ಲಿಯಲ್ಲಿ ಬಾಂಬನ್ನು ಸ್ಫೋಟಗೊಳಿಸಿದರು. ಇದು ಕಾರ್ಮಿಕ ವಿರೋಧೀ ಕಾನೂನುಗಳ ವಿರುದ್ಧವಾಗಿದ್ದು, ಇನ್‌ಕಿಲಾಬ್ ಜಿಂದಾಬಾದ್ ಘೋಷಣೆಯನ್ನು ರಾಷ್ಟ್ರವ್ಯಾಪಿಗೊಳಿಸಲು ಸಹಾಯವಾಯಿತು. ಸೂರ್ಯಸೇನ ಸ್ವಾತಂತ್ರ್ಯಂದೋಲನದೊಡನೆ ತಮ್ಮ ಕಾರ್ಯಕ್ರಮವನ್ನು ಸಂಯೋಜಿಸಲು ಹೊಂಚು ಹಾಕುತ್ತಾ, ರಾಜಕೀಯ ಕ್ಷೇತ್ರದ ಆಗುಹೋಗುಗಳ ಮೇಲೆ ಕಣ್ಣಿಟ್ಟು ಕಾಯುತ್ತಿದ್ದರು. ಇದದೊಂದಿಗೆ ಕಾಂಗ್ರೆಸಿನೊಳಗೆ ಕೆಲಸ ಸಾಗುತ್ತಿತ್ತು. ಸ್ಥಳೀಯ ಕಾಂಗ್ರೆಸ್ಸಿನ ಚುನಾವಣೆಯಲ್ಲಿ ಸೂರ್ಯಸೇನರ ಪಕ್ಷ ಗೆದ್ದಿತು. ಇಷ್ಟಾಗುತ್ತಲೇ ವಿರೋಧಿ ಪಕ್ಷದವರು [illegible]. [illegible] ಏರಿ ಬಂದರು. [illegible] ಸೂರ್ಯಸೇನರ ತಲೆಯ ಮೇಲೆ [illegible]. ಅವರ ತಲೆ [illegible] ರಕ್ತ ಹರಿಯಿತು. ಸ್ವಯಂಸೇವಕರು ಸಕಾಲದಲ್ಲಿ ಬಂದುದರಿಂದ ಗೂಂಡಾಗಳು ಕಾಲಿಗೆ ಬುದ್ಧಿ ಹೇಳಿದರು. ಸ್ವಯಂಸೇವಕರು [illegible]. ಆದರೆ ತಮ್ಮ [illegible] ಸೂರ್ಯಸೇನ ಯುವಕರನ್ನು ಶಾಂತಗೊಳಿಸಿದರು.

ಒಟ್ಟು ೬೨ ನವ ತರುಣರು ಸೈನಿಕ ಕಾರ್ಯಾಚರಣೆಗಾಗಿ ಆರಿಸಲ್ಪಟ್ಟರು. ಇವರಲ್ಲಿ ಹೆಚ್ಚಿನವರು ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಾಗಿದ್ದರು. ಎಲ್ಲರೂ ಬಹು ಉತ್ಸಾಹದೊಂದಿಗೆ ಸೂರ್ಯಸೇನರನ್ನು ತಮ್ಮ ನಾಯಕನೆಂದು ಚುನಾಯಿಸಿದರು. [illegible] ಜವಾಬ್ದಾರಿಯನ್ನು ಸಂಪೂರ್ಣವಾಗಿ ಪಾಲಿಸುವೆನೆಂದೂ ಅದೇ ತಮ್ಮ ಜೀವನದ ಸಂಕಲ್ಪವೆಂದೂ ಹೇಳಿದರು.

ಈ ಸೈನ್ಯದಲ್ಲಿ ಆರು ವಿಭಾಗಗಳಿದ್ದವು. ಅವರ ನಾಯಕರಾಗಿ ನಿರ್ಮಲ್ ಸೇನ್, ಲೋಕನಾಥ್ ಬಲ್, ಅನಂತಸಿಂಗ್, ಗಣೇಶ್ ಘೋಷ್, ಅಂಬಿಕಾ ಚಕ್ರವರ್ತಿ ಮತ್ತು ಉಪೇಂದ್ರ ಭಟ್ಟಾಚಾರ್ಯರು ಕಾರ್ಯ ನಿರ್ವಹಿಸಿದರು.

ಕ್ರಾಂತಿಕಾರಿಗಳಿಗಾಗಿ ವಿಶೇಷ ಸೈನಿಕ ಪೋಷಾಕನ್ನು ಸಿದ್ಧಗೊಳಿಸಲಾಗಿತ್ತು. ೧೯೩೦ರ ಏಪ್ರಿಲ್ ೧೮ರಂದು ಆಕ್ರಮಣ ನಡೆಸಲು ನಿಶ್ಚಯಿಸಲಾಯಿತು. ಸರ್ವಾಧಿನಾಯಕರು ಪ್ರತಿ ವಿಭಾಗದ ಮುಖಂಡನೊಡನೆ ಆ ತುಕಡಿಯ ಕಾರ್ಯಕ್ರಮದ ಬಗ್ಗೆ ಚರ್ಚಿಸಿದರು. ಸಮಯಕ್ಕೆ ಸರಿಯಾಗಿ ೯.೪೫ಕ್ಕೆ ಕಾರ್ಯ ಆರಂಭವಾಯಿತು. ರೇಲ್ವೇ ಲೈಯಿನ್ ನಾಶಗೊಳಿಸುವ ತುಕಡಿ ಮೊದಲು ಹೊರಟು ಹೋಯಿತು. ಪೋಲೀಸ್ ಶಸ್ತ್ರಭಂಡಾರದ ಮೇಲೆ ಆಕ್ರಮಣವೆಸಗುವ ಜವಾಬ್ದಾರಿ ಅನಂತಸಿಂಗ್ ಹಾಗೂ ಗಣೇಶ್ ಘೋಷರ ವಿಭಾಗಗಳಿಗಿತ್ತು. ಇವರನ್ನು ಒಯ್ಯುವ ಮೋಟರ್ ಡ್ರೈವರ್ ಆಗಿ ಅನಂತಸಿಂಗರೇ ಕಾರ್ಯ ನಿರ್ವಹಿಸಿದರು.

ಈ ಕ್ರಾಂತಿಕಾರಿಗಳಲ್ಲಿ ಆನಂದಪ್ರಸಾದ ಗುಪ್ತ ಮತ್ತು ದೇವಪ್ರಸಾದ ಗುಪ್ತರೆಂಬ ಸಹೋದರರಿದ್ದರು. ಹದಿನಾರು ಮತ್ತು ಹತ್ತೊಂಭತ್ತರ ಹದಿ ಹರೆಯದ ತರುಣರಿವರು. ಇವರಲ್ಲಿ ದೇವಪ್ರಸಾದ ಗುಪ್ತ ಚಟಗಾಂವ್ ಶಸ್ತ್ರಾಗಾರ ಕಾಂಡದಲ್ಲಿ ಗುಂಡಿನೇಟಿಗೆ ಆಹುತಿಯಾದರು. ತಮ್ಮ ಆನಂದಪ್ರಸಾದನಿಗೆ ಕಾಲಿಗೆ ಗುಂಡು ತಾಗಿ ಗಾಯಗೊಂಡು, ಆತ ಸೆರೆಸಿಕ್ಕ. ಮುಂದೆ ಆತನಿಗೆ ಕರಿನೀರಿನ ಶಿಕ್ಷೆಯಾಯಿತು. ಈ


ಇತರರನ್ನು ಹಿಂದೆ ಬೀಳಿಸುವ ಬಿಳಿಪು.
ವಿಜಯದ ಕಾಂತಿಯಿಂದ ಥಳಥಳಿಸುವ
ಬಿಳಿಪು. ಕಣ್ಣು ಕೋರೈಸುವ ಬಿಳಿಪು.
ಬಿಳಿಪಿಗಿಂತ ಮಿಗಿಲಾದ ಬಿಳಿಪು.
ಅದುವೇ ಸ್ಕೋರ್! ಸ್ಕೋರ್ ಡಿಟರ್ಜೆಂಟ್
ಬಿಲ್ಲೆಯು ಕೊಳೆಯನ್ನು ಹೊರಹಾಕಿ ನಿಮ್ಮ
ಬಟ್ಟೆಗಳಿಗೆ ಅತ್ಯಂತ ಸುಂದರವಾದ
ಕಾಂತಿಯನ್ನು ನೀಡುವುದು. ಸ್ಕೋರ್
ನೊಡನೆ ಬಿಳೀ ಬಟ್ಟೆಗಳನ್ನು ಹೆಚ್ಚು
ಬಿಳಿಪಾಗಿ ಮಾಡಿ, ಬಣ್ಣದ ಬಟ್ಟೆಗಳನ್ನು
ಹೆಚ್ಚು ಶುಭ್ರ ಹಾಗೂ ಉಜ್ವಲಗೊಳಿಸಿ.
ವಿಜಯದ ಕಾಂತಿಯಿಂದ
ಥಳ ಥಳಿಸುವ ಬಿಳಿಪು
ಸ್ಕೋರ್
ನೀಲಿ ಡಿಟರ್ಜೆಂಟ್ ಬಿಲ್ಲೆ
ಕೇರಳ ಸ್ಟೇಟ್ ಡಿಟರ್ಜೆಂಟ್ಸ್ & ಕೆಮಿಕಲ್ಸ್ ಲಿಮಿಟೆಡ್
(ಒಂದು ಸರ್ಕಾರದ ಉದ್ಯಮ)
LATEST
Score
ವಿಜಯದ ಕಾಂತಿಯಿಂದ
ಥಳ ಥಳಿಸುವ ಬಿಳಿಪು!

ಅನಂದಪ್ರಸಾದನೇ ತಾವಿಬ್ಬರು ಸಹೋದರರು ತಾಯಿಯಿಂದ ಬೀಳ್ಕೊಂಡ ಸಂದರ್ಭವನ್ನು ವರ್ಣಿಸಿದ್ದಾನೆ.

"ಎಪ್ರಿಲ್ ಹದಿನೆಂಟರ ರಾತ್ರಿ ೯.೩೦ರ ಅಂದಾಜಿಗೆ ಸೈನಿಕ ಉಡುಪು ಧರಿಸಿ ನಾನು ಮತ್ತು ಅಣ್ಣ ತಾಯಿಯ ಬಳಿ ಬೀಳ್ಕೊಳ್ಳಲು ಬಂದೆವು.

"ಅಮ್ಮ ಹಲವು ದಿನಗಳಿಂದ ನಮ್ಮ ಕಾರ್ಯಗಳನ್ನು ಲಕ್ಷ್ಯಗೊಟ್ಟು ನೋಡುತ್ತಿದ್ದಳು. ಅವಳ ಮನಸ್ಸಿನಲ್ಲಿ ನಾವೇನೋ ಮಹತ್ವದ ಕಾರ್ಯದ ಸಿದ್ಧತೆಯಲ್ಲಿ ಇದ್ದೇವೆಂಬ ಭಾವನೆ ಉಂಟಾಗಿತ್ತು. ಅಮ್ಮ ನಮ್ಮ ಅನಿಶ್ಚಿತ ಭವಿಷ್ಯದಿಂದಾಗಿ ತುಂಬಾ ಚಿಂತಾಕ್ರಾಂತಳಾಗಿರುವಳೆಂದು ನಮಗೆ ತಿಳಿದಿತ್ತು. ಆದರೆ ನಮ್ಮ ಯಾವ ಕೆಲಸದಲ್ಲೂ ತಾಯಿ ಅಡ್ಡ ಬರುತ್ತಿರಲಿಲ್ಲ. ನಾವು ಅವಳಿಗೆ ಕೆಲವು ಸಲ ಕ್ರಾಂತಿಗೆ ಸಂಬಂಧಿಸಿದ ಪುಸ್ತಕಗಳನ್ನು ತಂದು ಓದಲು ಕೊಡುವುದೂ ಇತ್ತು. ಅವಳು ಅವುಗಳನ್ನು ಬಹಳ ಆಸಕ್ತಿಯಿಂದ ಓದುತ್ತಿದ್ದಳು. ತನ್ನ ಮಕ್ಕಳು ದುಷ್ಟರ ಸಂಗದಲ್ಲಿರದೆ ಸೂರ್ಯಸೇನ, ಗಣೇಶ್ ಘೋಷ್, ಆನಂತಸಿಂಗರಂತಹ ಆದರ್ಶ ದೇಶಭಕ್ತರ ಒಡನಾಟದಲ್ಲಿರುವರೆಂಬುದು ಅವಳಲ್ಲಿ ಅಭಿಮಾನವನ್ನುಂಟುಮಾಡಿತ್ತು. ಕೆಲವೊಮ್ಮೆ ನಾವು ಬಂದೂಕು ಇತ್ಯಾದಿಗಳನ್ನು ಅವಳೊಡನೆ ತೆಗೆದಿಡಲು ಕೊಡುವುದೂ ಇತ್ತು. ಅವಳೆಂದೂ ಆಗ ಆಕ್ಷೇಪಿಸಿರಲಿಲ್ಲ. ಮನೆಯ ಹೊರಕೋಣೆಯಲ್ಲಿ ನಾವು ಆಸಿಡ್ಡುಗಳನ್ನು ಉಪಯೋಗಿಸಿ ಬಾಂಬು ತಯಾರಿಸುವಾಗ ಆಕೆ ಜಾಗರೂಕಳಾಗಿರುತ್ತಿದ್ದು ಮಾರ್ಗದಲ್ಲಿ ಅಪರಿಚಿತರು ಗೋಚರಿಸಿದಾಕ್ಷಣ ನಮ್ಮನ್ನು ಎಚ್ಚರಿಸುತ್ತಿದ್ದಳು. ಆದರೆ ಅಂದು ನಾವು ಕೊನೆಯದಾಗಿ ಬೀಳ್ಕೊಳ್ಳಲು ಸಿದ್ಧರಾಗಿ ಅವಳ ಕಾಲಿಗೆರಗಿದಾಗ ಆಕೆ ಒಮ್ಮೊಂದೊಮ್ಮೆ ವಿಚಲಿತಳಾದ, 'ನೀವೆಂದೂ ಇನ್ನು ಹಿಂತಿರುಗಲಾರಿರೆಂದು ನನಗನಿಸುತ್ತದೆ. ಆದರೂ ನಿಮ್ಮ ಜೀವನ ಸಾರ್ಥಕವಾಗಲೆಂದು ಆಶೀರ್ವದಿಸುತ್ತೇನೆ' ಎಂದು ಹೇಳುತ್ತಿದ್ದಾಗ ಅವಳ ಕಣ್ಣಲ್ಲಿ ನೀರು ತುಂಬಿತು. ನಮಗೆ ಹೆಚ್ಚು ಹೊತ್ತು ನಿಲ್ಲಲು ಸಮಯವಿರಲಿಲ್ಲ. ಒಂದು ರೀತಿಯ ಬಲಾತ್ಕಾರದ ಭಾವವನ್ನು ನಮ್ಮ ಪಡೆದೆವು."

ಇದರಿಂದ ಕ್ರಾಂತಿಕಾರಿಗಳು ತಮ್ಮ ಕುಟುಂಬಗಳನ್ನೇ ಹೇಗೆ ಕ್ರಾಂತಿಕಾರಕವಾಗಿ ಮಾರ್ಪಡಿಸಿದ್ದರೆಂದು ತಿಳಿಯುತ್ತದೆ. ತನ್ನ ಎರಡು ತರುಣ ಪುತ್ರರನ್ನು ಮೃತ್ಯುವಿನ ದವಡೆಗೆ ಕಳುಹಿಸಿ ಕೊಟ್ಟ ಆ ಮಾತೆಯ ಹೆಸರು ಇತಿಹಾಸದಲ್ಲಿ ಬಾರದೆ ಹೋಗಬಹುದು. ಆದರೆ ಕ್ರಾಂತಿಕಾರಿ ಅಂದೋಲನದ ಚರಿತ್ರೆಯಲ್ಲಿ, ಇತರ ಈ ರೀತಿಯ ಸಾಹಿತ್ಯದಲ್ಲಿ ಅಂತಹ ಮಾತೆಯರ ವಿವರಗಳು ಬೇಕಾದಷ್ಟು ಸಿಗುತ್ತವೆ.

ಕ್ರಾಂತಿಕಾರಿಗಳ ತುಕಡಿಗಳು ಕೆಲಸ ಅರಂಭಿಸಿದವು. ಸಂಜೆಯ ಹೊತ್ತಿಗೆ ಲೋಕನಾಥ ಬಲ್ ತನ್ನ ಸಂಗಡಿಗರೊಂದಿಗೆ ಬಂದು ಟ್ಯಾಕ್ಸಿಯನ್ನು ಬಾಡಿಗೆಗೆ ಪಡೆದು ನಗರದಿಂದ ಹೊರಗೆ ಹೊರಟ. ನಿರ್ಜನ ಪ್ರದೇಶ ಬಂದಾಗ ಡ್ರೈವರನೊಡನೆ, 'ಸ್ವಲ್ಪ ನಿಲ್ಲಿಸಿ' ಎಂದ. ಡ್ರೈವರ್ ಕಾರು ನಿಲ್ಲಿಸುತ್ತಲೇ ಕ್ರಾಂತಿಕಾರಿಗಳು ಆತನ ಮೂಗಿಗೆ ಕ್ಲೋರೋಫಾರ್ಮಿನ ಬಟ್ಟೆ ಇಟ್ಟು ಮೂರ್ಛೆಗೊಳ್ಳುವಂತೆ ಮಾಡಿ ಆತನನ್ನು ಮಾರ್ಗದ ಬದಿಯಲ್ಲಿ ಮಲಗಿಸಿ ಟ್ಯಾಕ್ಸಿಯೊಡನೆ ನಗರದ ಕಡೆಗೆ ಬಂದರು. ಗಣೇಶ ಘೋಷ್ ಮತ್ತು ಅನಂತಸಿಂಗರೂ ಹಾಗೆಯೆ ಮಾಡಿದ್ದರು ಗಣೇಶ ಘೋಷ್ ಡ್ರೈವರಿಗೆ ಪಿಸ್ತೂಲ್ ತೋರಿಸಿ ಹೆದರಿಸಿ, ಆತನ ಕೈಕಾಲು ಕಟ್ಟಿ ಖಾಲಿ ಮನೆಯೊಂದರೊಳಗೆ ಅವನನ್ನು ಮಲಗಿಸಿ, ಟ್ಯಾಕ್ಸಿ ಸಹಿತ ಫರಾರಿಯಾದ. ಆದರೆ ಹಾಗೆ ಮಾಡುವುದಕ್ಕಿಂತ ಮೊದಲು ಆತ ಡ್ರೈವರನಿಗೆ ನಿನಗೇನೂ ಹಾನಿ ಮಾಡುವ ಉದ್ದೇಶವಿಲ್ಲ ಎಂದೂ ಹೇಳಿದ್ದ.

ಅವರೆಲ್ಲರೂ ಸುಂದರವಾದ ಗುಡ್ಡದ ಮೇಲಿದ್ದ ಪೋಲೀಸ್ ಶಸ್ತ್ರಾಗಾರದ ಎದುರು ಸೈನಿಕ ವೇಷದಲ್ಲಿ ಬಂದರು. ಸೊಂಟದಲ್ಲಿ ಪಿಸ್ತೂಲುಗಳು ತೂಗುತ್ತಿದ್ದವು. ನಾಲ್ಕು ಜನ ಪಹರೆಯವರು ಪೋಲೀಸ್ ಶಸ್ತ್ರಾಗಾರವನ್ನು ಕಾಯುತ್ತಿದ್ದರು. ಯಾರೋ ಆಫೀಸರ್ ಬಂದಿರಬೇಕೆಂದು ಅವರು ಎಣಿಸಿದರು. ಮಾತೆತ್ತುವ ಮೊದಲೇ ಅನಂತ ಸಿಂಗ್ ಗುಂಡು ಹಾರಿಸಿ ಒಬ್ಬ ಕಾವಲುಗಾರನನ್ನು ನೆಲಕ್ಕುರುಳಿಸಿದ. ಅದರೊಂದಿಗೆ ತನ್ನ ಸಂಗಡಿಗರಿಗೆ

ಕಾವಲುಗಾರರೂ ಕುಸಿದು ಬೀಳುವಂತಾಯಿತು. ಬೇರೆ ಕಾವಲುಗಾರರೂ ಓಡಿ ಬಂದರು. ಕ್ರಾಂತಿಕಾರರು ಅವರ ಮೇಲೆ ಬಾಂಬ್ ಎಸೆದರು. ಅಷ್ಟರಲ್ಲಿ ಸೂರ್ಯಸೇನರನ್ನೊಳಗೊಂಡು ಮೂವತ್ತು ಮಂದಿಯಷ್ಟು ಕ್ರಾಂತಿಕಾರಿಗಳು ಶಸ್ತ್ರಾಗಾರದ ಒಳ ನುಗ್ಗಿದ್ದರು. ತಮ್ಮಲ್ಲಿದ್ದ ಸುತ್ತಿಗೆ ಮತ್ತು ಪೆಟ್ಟಿಗೆ ಒಡೆಯುವ ಸಾಧನಗಳಿಂದ ಅವರು ಅಲ್ಲಿದ್ದ ಪೆಟ್ಟಿಗೆಗಳನ್ನು ಒಡೆದು ಯಥೇಷ್ಟವಾಗಿ ಶಸ್ತ್ರಾಸ್ತ್ರಗಳನ್ನು ವಶಕ್ಕೆ ತೆಗೆದುಕೊಂಡರು.

ಲೋಕನಾಥ ಬಲ್ ಇದೇ ರೀತಿ ಆಕ್ಸಿಲರೀ ಸೈನ್ಯದ ಶಸ್ತ್ರಾಗಾರವನ್ನು ಕೊಳ್ಳೆ ಹೊಡೆದ. 'ನೀವು ಯಾರೆಂದು' ಕಾವಲು ಗಾರನು ಆತನನ್ನು ಕೇಳಿದಾಕ್ಷಣ ಮಿತ್ರನೆಂದು ಉತ್ತರಿಸಿ ಗುಂಡು ಹಾರಿಸಿದ. ಗುಂಡಿನ ಸದ್ದಿನಿಂದ ಜಾಗೃತನಾದ ಅಲ್ಲಿಯ ಬ್ರಿಟಿಷ್ ಅಫೀಸರ್ ಹೊರಬಂದು, ಪಿಸ್ತೂಲು ತರಲು ಹಿಂದಿರುಗುವುದರೊಳಗೆ ಲೋಕನಾಥನ ಗುಂಡಿಗೆ ಬಲಿಯಾದ. ಕಾರಿನಲ್ಲಿ ಬಂದಿದ್ದ ಮೂವರು ಇತರ ಬ್ರಿಟಿಷರು ಕಾರು ಬಿಟ್ಟು ಓಡಿ ತಪ್ಪಿಸಿಕೊಂಡರು. ಕ್ರಾಂತಿಕಾರಿಗಳು ಶಸ್ತ್ರಾಗಾರದ ಬಾಗಿಲು ಮುರಿಯಲು ಯತ್ನಿಸುತ್ತಿದ್ದರು. ಅಷ್ಟರಲ್ಲಿ ಅವರನ್ನು ಸೈನಿಕರು ಮುತ್ತಿದರು. ಕ್ರಾಂತಿಕಾರಿಗಳು ಶಸ್ತ್ರಾಗಾರಕ್ಕೆ ಬೆಂಕಿ ಇಟ್ಟರು. ಹೊರಗೆ ಸಿಕ್ಕಿದ ಶಸ್ತ್ರಗಳನ್ನು ಹಿಡಿದುಕೊಂಡು ಹೊರ ಹೊರಟರು. ಅಂಬಿಕಾ ಚಕ್ರವರ್ತಿ ಟೆಲಿಫೋನ್ ಎಕ್ಸ್‌ಚೇಂಜಿನ ತಮ್ಮ ಕೆಲಸ ಮುಗಿಸಿ ಕೇಂದ್ರ ಸ್ಥಳಕ್ಕೆ ಹಿಂತಿರುಗಿದರು.

ಹೀಗೆ ಮೆಚ್ಚಿನ ರೀತಿಯಲ್ಲಿ ಕ್ರಾಂತಿಕಾರಿಗಳ ಕಾರ್ಯ ಸಫಲವಾಗಿ ಕೊನೆಗೊಂಡಿತು. ಅವರೆಲ್ಲ ಸೂರ್ಯಸೇನರಿಗೆ ಗಾರ್ಡ್ ಆಫ್ ಆನರ್ ಕೊಟ್ಟು ಗೌರವಿಸಿದರು.

ಇದರಿಂದಾಗಿ ಉತ್ಸಾಹಿತರಾದ ಕ್ರಾಂತಿಕಾರರು ಅದೇ ರಾತ್ರಿ ತ್ರಿವರ್ಣ ಧ್ವಜ ಹಾರಿಸಿ ಅದರ

ಗೌರವಾರ್ಥ ಗುಂಡು ಹಾರಿಸಿದರು. ಸೂರ್ಯಸೇನರು ಧ್ವಜದ ಕೆಳಗೆ ನಿಂತು ಚಟಗಾಂವಿನ ಭೂಮಿ ಇನ್ನೂರು ವರ್ಷಗಳ ಬ್ರಿಟಿಷ್ ಆಡಳಿತದಿಂದ ಮುಕ್ತವಾಯಿತೆಂದು ಘೋಷಿಸಿದರು. ತಾತ್ಕಾಲಿಕ ಕ್ರಾಂತಿಕಾರಿ ಸರಕಾರದ ಸ್ಥಾಪನೆಯಾಯಿತು. ಸೂರ್ಯಸೇನರು ರಾಷ್ಟ್ರಪತಿಯಾದರು. ಜನರು ಸಹಕರಿಸಬೇಕೆಂದೂ ವಿದ್ಯಾರ್ಥಿಗಳು ತಮ್ಮ ಸೈನ್ಯವನ್ನು ಸೇರಬೇಕೆಂದೂ ಅನ್ಯಾಯಿ ಬ್ರಿಟಿಷರನ್ನು ತಂದೊಪ್ಪಿಸಿ ಪುರಸ್ಕಾರ ಪಡೆಯಬೇಕೆಂದೂ ಬರೆದ ವಿಜ್ಞಾಪನಾ ಪತ್ರಗಳನ್ನು ಹಂಚಲಾಯಿತು.

ಇದಾದ ಬಳಿಕ ಸೂರ್ಯಸೇನರ ಮುಂದಾಳುತನದಲ್ಲಿ ಎಲ್ಲಾ ಸಶಸ್ತ್ರ ಕ್ರಾಂತಿಕಾರಿಗಳು ಪರ್ವತಗಳ ಕಡೆಗೆ ನಡೆದರು. ಇಷ್ಟರಲ್ಲಿ ಬಂದರಿನಲ್ಲಿ ತಂಗಿದ್ದ ಹಡಗುಗಳ ವೈರ್‌ಲೆಸ್ ಮೂಲಕ ನಗರದ ದಂಗೆಯ ಸುದ್ದಿ ಹೊರಗೆ ತಲುಪಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಬ್ರಿಟಿಷ್ ಸರಕಾರದ ಸೈನ್ಯ ಬರಲು ವ್ಯವಸ್ಥೆಯಾಯಿತ್ತು. ನಗರದಿಂದ ಸುದ್ದಿ ತರಲು ಸೂರ್ಯಸೇನರು ಅಮರೇಂದ್ರ ನಂದಿಯನ್ನು ಕಳುಹಿಸಿದ್ದರು. ಆದರೆ ಆತನು ಹಿಂತಿರುಗುವಾಗ ಬ್ರಿಟಿಷರ ಕೈಲಿ ಸಿಕ್ಕಿಬಿದ್ದಾಗ ಅಲ್ಲಿಯೇ ಆತ್ಮಹತ್ಯೆ ಮಾಡಿಕೊಂಡು ಅಮರನಾದ.

ಪೋಲೀಸ್ ಶಸ್ತ್ರಾಗಾರದಿಂದ ನಾಲ್ಕು ಕಾರುಗಳಲ್ಲಿ ಅಸ್ತ್ರಗಳನ್ನು ತರಲಾಗಿತ್ತು. ಉಳಿದ ಶಸ್ತ್ರಾಸ್ತ್ರಗಳು ವೈರಿಗಳಿಗೆ ಸಿಗಬಾರದೆಂದು ಸೂರ್ಯಸೇನರು ಅವುಗಳನ್ನು ಸುಡಲು ಆಜ್ಞೆ ಇತ್ತರು. ಪೋಲೀಸ್ ಶಸ್ತ್ರಾಗಾರಕ್ಕೂ ಬೆಂಕಿ ಹಚ್ಚಿದರು.


ಚಟಗಾಂವಿಯಲ್ಲಿದ್ದ ಇಂಗ್ಲೀಷರೆಲ್ಲ ಭಯಭೀತರಾದರು. ಅವರು ತಮ್ಮ ನಿವಾಸಗಳನ್ನು ಬಿಟ್ಟು ಮಕ್ಕಳು ಮರಿಗಳೊಡನೆ ಕರ್ಣಫೂಲಿ ನದಿಯ ದಂಡೆಯನ್ನು ತಲುಪಿದರು.

ಅಷ್ಟರಲ್ಲಿ ಲುಯಿಶೊಸ್‌ಗಂಜ್ ಪ್ರದೇಶದಿಂದ ಗುಂಡಿನ ಸದ್ದು ಕೇಳತೊಡಗಿದ್ದರಿಂದ ಸೂರ್ಯಸೇನರು ನಗರದ ಕಡೆ ಹೋಗುವ ಇಚ್ಛೆ ತೊರೆಯಬೇಕಾಯಿತು. ಬ್ರಿಟಿಷರಿಗೆ ಹೊರಗಿನಿಂದ ಸಹಾಯ ಲಭಿಸಿತ್ತು. ಕೆಲವು ಕ್ರಾಂತಿಕಾರಿಗಳು ಗಾಯಗೊಂಡಿದ್ದರು. ಅವರನ್ನು ಸುರಕ್ಷಿತ ಸ್ಥಾನಕ್ಕೆ ತಲುಪಿಸಬೇಕಾಗಿದ್ದುದು ಹಿಂತಿರುಗಲು [illegible]ಲಿಲ್ಲ. ಆದ್ದರಿಂದ ಪರ್ವತದ ಮೇಲೆಯೇ ರಾತ್ರಿ ಕಳೆಯಲು ನಿರ್ಧರಿಸಿದರು.

ಕ್ರಾಂತಿಕಾರಿಗಳು [illegible] ಶಸ್ತ್ರಾಸ್ತ್ರಗಳನ್ನೇನೋ ಸಂಗ್ರಹಿಸಿದ್ದರು. ಆದರೆ ಅವರು ಆಹಾರವನ್ನು ಸಂಗ್ರಹಿಸಿ ಇಟ್ಟುಕೊಂಡಿರಲಿಲ್ಲ. ಹಸಿವು ಶ್ರಮದಿಂದಾಗಿ ಈಗ ಎಲ್ಲರಿಗೂ ಬಳಲಿಕೆಯಾಗಿತ್ತು. ಗ್ರಾಮವಾಸಿಗಳ ಕೃಪೆಯಿಂದ ಅವರು ಬದುಕಿದರು. [illegible]

ಕ್ರಾಂತಿಕಾರಿಗಳು ತೆವಳುತ್ತಾ ಜಲಾಲಾಬಾದಿನ ಗುಡ್ಡಗಳಲ್ಲಿ ಅಡಗಿ ಕುಳಿತಿರಲು ಯೋಗ್ಯವಾದ [illegible]. ನಗರ ಅಲ್ಲಿಂದ ಮೂರು ಮೈಲು ದೂರದಲ್ಲಿತ್ತು. ಬ್ರಿಟಿಷರ ಸಾಮ್ರಾಜ್ಯದಲ್ಲೇ ಗಲಿಬಿಲಿ [illegible]. ಕ್ರಾಂತಿಕಾರರನ್ನು ಹಿಡಿದುಕೊಟ್ಟವರಿಗೆ ಐದುಸಾವಿರ ರೂಪಾಯಿಗಳ ಬಹುಮಾನ ಘೋಷಿಸಲಾಗಿತ್ತು. ಅಧಿಕ ಸೈನಿಕರು ವಿಮಾನಗಳಿಂದ ಬಂದಿಳಿದರು. ಗುಡ್ಡಗಳನ್ನು ಸಂಪೂರ್ಣವಾಗಿ ಮುತ್ತಿದರು. ಸೂರ್ಯಸೇನರಿಗೆ ಇನ್ನು ಹೊರ ಹೋಗುವ ಮಾರ್ಗವಿಲ್ಲವೆಂದು ಖಚಿತವಾದಾಗ ಅವರು ತಮ್ಮ ಗೆಳೆಯರಿಗೆ ಇನ್ನು ಯುದ್ಧದ ಮಾರ್ಗವೊಂದೇ ಉಳಿದಿರುವುದೆಂದು ಹೇಳಿದರು.

ಯುದ್ಧ ನಡೆಯಿತು. ಹರಿಗೋಪಾಲಲಾಲಿಗೆ ಗುಂಡು ತಗಲಿತು. ಅವರು ಲೋಕನಾಥ ಬಲನಿಗೆ 'ಸೋನಾ ಭಾಯಿ, ಸೋನಾ ಭಾಯಿ ಆರ್ ಜಿ ಪಾರ್ ಛಿನಾ' (ಸೋನಾ ಭಾಯಿ, ಇನ್ನು ನನ್ನಿಂದ ಸಾಧ್ಯವಾಗದು) ಎಂದರು. ಲೋಕನಾಥ 'ನೆವರ್ ಮೈಂಡ್, ಡೈ ಲೈಕ್ ಎ ರೆವಲ್ಯೂಶನರಿ' ಎಂದು ಉತ್ತರಿಸಿದರು. ಆಗಲೇ ಹರಿಗೋಪಾಲರ ಎದೆಗೆ ಇನ್ನೊಂದು ಗುಂಡು ತಗಲಿ ಅವರು ಅಲ್ಲಿಯೇ ಕುಸಿದು ಬಿದ್ದು. ಜಾಲಾಲಾಬಾದಿನ ಸಂಗ್ರಾಮದ ಪ್ರಥಮ ಹುತಾತ್ಮರಾದರು. ಆ ಬಳಿಕ ನರೇಶ ರಾಯ್,ವಿಧು ಭಟ್ಟಾಚಾರ್ಯರ, ತ್ರಿಪುರ್ ಸೇನ್, ಪ್ರಭಾಸ್ ಬಾಲ್, ಪುಲಿನ್ ಘೋಷ್,


"ಒರಟಾದ, ಗಟ್ಟಿ ಕಣಗಳಿರುವ
ಟೂಥ್‌ಪೌಡರ್‌ಗಳು ನಿಮ್ಮ
ಒಸಡು ಮತ್ತು ಹಲ್ಲುಗಳಿಗೆ
ಹಾನಿಯನ್ನುಂಟುಮಾಡಬಹುದು...
ಕೋಲ್ಗೇಟ್ ಟೂಥ್ ಪೌಡರ್ ಬಳಸಿ ನಿಮ್ಮ
ಹಲ್ಲುಗಳನ್ನೂ ಒಸಡುಗಳನ್ನೂ ರಕ್ಷಿಸಿರಿ–ಮತ್ತು ಉಸಿರಿನ
ದುರ್ವಾಸನೆಯನ್ನೂ
ನಿವಾರಿಸಿರಿ!
Colgate
TOOTH POWDER
Protects your teeth and gums
ಕೋಲ್ಗೇಟ್ ಟೂಥ್‌ಪೌಡರ್ ಅತಿ ಸೂಕ್ಷ್ಮ ಹಾಗೂ ಬಿಳುಪಾಗಿದೆ.
ಅದು ನಿಮ್ಮ ಒಸಡುಗಳನ್ನು ಮೃದುವಾಗಿ ಉಜ್ಜುತ್ತಿರುವಾಗಲೇ
ಅದರ ಪಾಲಿಶ್ ಮಾಡುವ ಸೌಮ್ಯ ಸತ್ವ ನಿಮ್ಮ ಹಲ್ಲುಗಳ
ಮೇಲಿನ ಕೊಳೆಯ ಪರೆಯನ್ನು ತೆಗೆದು ಅವುಗಳನ್ನು ಅಧಿಕ ಸ್ವಚ್ಛ
ಹಾಗೂ ಬಿಳಿ ಮಾಡುತ್ತದೆ. ಕೋಲ್ಗೇಟ್‌ನ ಹೇರಳ ನೊರೆ ನಿಮ್ಮ
ಹಲ್ಲುಗಳ ಎಡೆಗಳನ್ನು ಪ್ರವೇಶಿಸಿ, ದುರ್ಗಂಧವನ್ನೂ ದಂತಕ್ಷಯ-
ವನ್ನೂ ಉಂಟುಮಾಡುವ ಕೀಟಾಣುಗಳನ್ನು ನಿವಾರಿಸುತ್ತದೆ;
ಮತ್ತು ಶ್ವಾಸದ ದುರ್ಗಂಧವನ್ನು ದೂರಗೊಳಿಸುತ್ತದೆ.
ನಿಮ್ಮ ಕುಟುಂಬದವರಿಗೆ ಕೋಲ್ಗೇಟ್ ಟೂಥ್‌ಪೌಡರ್‌ನ
ಮೂಲಕ ಆಧುನಿಕ ದಂತರಕ್ಷಣೆಯನ್ನು ನೀಡಿರಿ. ಅವರಿಗೆ
ಅದರ ಶೀತಲವಾದ ಹಾಗೂ ಪೆಪ್ಪರ್‌ಮಿಂಟ್‌ನಂತಹ
ಪರಿಮಳ ಇಷ್ಟವಾಗುವುದು.

ಮಧುಸೂದನ ದತ್ತ, ಮೋತೀ ಕಾನಂಗೋ ಮುಂತಾದವರು ಒಬ್ಬೊಬ್ಬರಾಗಿ ವೀರಸ್ವರ್ಗವೇರಿದರು. ಅರ್ಧೇಂದು ದಸ್ತಿದಾರ್ ಬಹುವಾಗಿ ಗಾಯಗೊಂಡರು. ಅಂಬಿಕಾ ಚಕ್ರವರ್ತಿಯ ತಲೆಗೆ ಗುಂಡು ತಗಲಿತು. ವಿನೋದ ಚೌಧರಿಯ ಕಂಠ ನಾಳಕ್ಕೆ ಗಾಯವಾಯಿತು. ವಿನೋದ ದತ್ತರ ಬಲ ಭುಜ ಗುಂಡಿನಿಂದ ಕೊರೆಯಲ್ಪಟ್ಟು ಮೂರ್ಛೆ ಹೋದರು. ಎಚ್ಚರ ಬಂದಾಗ ಹಿಮದ ತುಂಡು ಭುಜದೊಳಗೆ ಹೋದಂತಾಗಿದೆ ಎಂದರು.ರು. ಅವರ ಕೈಗೆ ರೈಫಲ್ ಕೊಡುತ್ತಾ ನಿರ್ಮಲ್‌ದಾದಾ, 'ಎಡಗೈಯಿಂದ ಗುಂಡು ಹಾರಿಸು, ಅಂದಾಗ ವಿನೋದ ದತ್ತರು ಎಡಗೈಯಿಂದ ರೈಫಲ್ ಹಿಡಿದು ಗುಂಡಿನ ಮಳೆ ಸುರಿಸಿದರು.

ಸೂರ್ಯ ಅಸ್ತಾಚಲವನ್ನು ಪ್ರವೇಶಿಸಿದ್ದ. ಆದರೆ ಗುಂಡುಗಳ ತೂರಾಟಕ್ಕೆ ನಡೆದೇ ಇತ್ತು. ನಿರ್ಮಲ್ ಸೇನ್ ಹಿಂದಿನಿಂದ ರೈಫಲ್ಲುಗಳನ್ನು ಸ್ವಚ್ಛಗೊಳಿಸಿ ಗುಂಡುಗಳನ್ನು ತುಂಬುತ್ತಿದ್ದರು. ಸೂರ್ಯಸೇನರು ತೆವಳುತ್ತಾ ತೆವಳುತ್ತಾ ಸಾಗಿ ಎಲ್ಲರಿಗೂ ಬೇಕಾದ ಸಾಮಗ್ರಿಗಳನ್ನು ಒದಗಿಸುತ್ತಿದ್ದರು. ನಿರ್ಮಲ್ ಸೇನ್ ಅವರಿಗೆ ಅಂಗರಕ್ಷಕರಾಗಿದ್ದು ನೆರಳಿನಂತೆ ಅವರನ್ನು ಅನುಸರಿಸುತ್ತಿದ್ದರು. ಈ ಭಯಂಕರ ಸ್ಥಿತಿಯಲ್ಲೂ ಅವರು ಹಾಳಾದ ಕೋವಿಗಳನ್ನು ಸರಿಪಡಿಸುವುದು, ಸ್ವಚ್ಛಗೊಳಿಸುವುದು, ಗುಂಡುಗಳನ್ನು ತುಂಬುವುದು ಮುಂತಾದ ಕೆಲಸಗಳನ್ನು ಮಾಡುತ್ತಲೇ ಇದ್ದರು. ಹೀಗೆ ಲೋಕನಾಥ ಬಲರ ನೇತೃತ್ವದಲ್ಲಿ ನಾಲ್ಕು ಗಂಟೆಗಳಷ್ಟು ಸಮಯ ಯುದ್ಧ ಮುಂದುವರಿಯಿತು. ಕತ್ತಲಾದ ಮೇಲೆ ಒಬ್ಬೊಬ್ಬರಾಗಿ ಕ್ರಾಂತಿಕಾರಿಗಳು ಬೇರೆ ಬೇರೆ ತಾಣಗಳಿಗೆ ತಲುಪಿದರು. ಮೊದಲು ಸೂರ್ಯಸೇನರು ಯಾರದಾದರೂ ಪ್ರಾಣ ಉಳಿದಿದೆಯೇ ಎಂದು ನೋಡಲು ಪ್ರತಿಯೊಬ್ಬ ಸಂಗಡಿಗನ ಶವವನ್ನೂ ಸರಿಯಾಗಿ ಮುಟ್ಟಿ ನೋಡಿ ಅವರು ಸತ್ತಿರುವರೆಂದು ಖಚಿತವಾದೊಡನೆಯೆ ಅಲ್ಲಿಂದ ಹೊರಟರು. 'ನನ್ನ ಕಾಲ ಸಮೀಪಿಸಿತು, ನೀವೆಲ್ಲಾ ಸುರಕ್ಷಿತ ಸ್ಥಳಗಳಿಗೆ ಹೋಗಿ' ಎಂದು ಅಂಬಿಕಾ ದಾದಾ ತಮ್ಮಲ್ಲಿದ್ದ ಹಣ ಮತ್ತು ಕಾಗದ ಪತ್ರಗಳನ್ನು

ಚೌಧರಿ ಇನ್ನೊಂದು ಕೈಯಿಂದ ವಿನೋದ ದತ್ತರನ್ನು ಆಧರಿಸಿ ಗುಡ್ಡ ಕಾಡುಗಳ ದಾರಿಯಲ್ಲಿ ಮುನ್ನಡೆದರು. ಅನಂತರ ಸೂರ್ಯಸೇನರು ಉಳಿದ ಗಾಯಾಳುಗಳಿಗೆ ಸಹಾಯ ಮಾಡುತ್ತಾ ಬೆಳಗಾಗುವ ಮೊದಲು ಗಾಯಾಳುಗಳೊಡನೆ ಇನ್ನೊಂದು ಗುಡ್ಡದ ಬದಿ ತಲಪಿದರು. ಬೆಳಗಾಗುತ್ತಲೇ ಬ್ರಿಟಿಷ್ ಸೇನೆ ಗುಂಡು ಸುರಿಸಲು ಆರಂಭವಾಯಿತು. ಆದರೆ ಕ್ರಾಂತಿಕಾರಿಗಳು ಸುಸ್ತಾಗಿದ್ದರು. ಮೂರು ಗಂಟೆಯ ಹೊತ್ತಿಗೆ ಪುನಃ ಗುಂಡಿನ ಸಪ್ಪಳ ಕೇಳಿಬಂತು. ಸೂರ್ಯಸೇನರ ತಂಡಕ್ಕೆ ಚಿಕಿತ್ಸೆಯೂ ಇರಲಿಲ್ಲ, ನೀರೂ ಇರಲಿಲ್ಲ. ಉರಿ ಬಿಸಿಲಿನ ಜಳ ಮಾತ್ರ ಅವರ ಬೆನ್ನು ಬಿಟ್ಟಿರಲಿಲ್ಲ. ಕೊನೆಗೆ ಕತ್ತಲಾದಾಗ ಅವರು ಗಾಯಾಳುಗಳೊಡನೆ ಹೊರಟು ರೇಲ್ವೆ ಲೈನ್ ತಲಪಿದರು. ಸೂರ್ಯಸೇನರು ವಿನೋದ ಬಿಹಾರಿ ದತ್ತರಿಗೆ ಒಂದು ಪಿಸ್ತೂಲ್ ಕೊಟ್ಟು ಇನ್ನೊಬ್ಬ ಸಂಗಡಿಗನೊಡನೆ ಅವರನ್ನು ಕಳುಹಿಸಿಕೊಟ್ಟರು.

ಸೂರ್ಯಸೇನ ಮತ್ತು ಲೋಕನಾಥ ಬಲರ ತುಕಡಿ ಬೇರೆ ಬೇರೆ ದಾರಿಗಳ ಮೂಲಕ ವಿಜಯಸೇನರ ಮನೆ ತಲುಪಿದವು. ಹನ್ನೊಂದು ಕ್ರಾಂತಿಕಾರಿಗಳು ಯುದ್ಧದಲ್ಲಿ ಮೃತರಾಗಿದ್ದರು. ಕೆಲವರು ನಡೆಯಲು ಸಾಧ್ಯವಿಲ್ಲದಷ್ಟು ಗಾಯಗೊಂಡಿದ್ದರು. ಆದರೆ ಅರ್ಧೇಂದು ದಸ್ತಿದಾರರೊಬ್ಬರನ್ನು ಬಿಟ್ಟರೆ ಬೇರೆ ಯಾರನ್ನೂ ಬಂಧಿಸಲು ಸರಕಾರಕ್ಕೆ ಸಾಧ್ಯವಾಗಲಿಲ್ಲ. ಇತರರು ಎಂದೋ ಯುದ್ಧಭೂಮಿಯಲ್ಲಿ ಮಡಿದರು ಅಥವಾ ತಪ್ಪಿಸಿಕೊಂಡರು.

ಅರ್ಧೇಂದು ದಸ್ತಿದಾರರನ್ನು ಭೀಕರವಾಗಿ ಹಿಂಸಿಸಿದರೂ ಅವರು ಯಾವ ವಿಷಯವನ್ನೂ ಹೊರಗೆಡಹಲಿಲ್ಲ. ಕೊನೆಗೆ ಅವರು ಹಿಂಸೆಗೆ ಬಲಿಯಾಗಿ ಹುತಾತ್ಮರಾದರು.

ಜಲಾಲಾಬಾದಿನ ಯುದ್ಧ ಕ್ರಾಂತಿಕಾರೀ ಇತಿಹಾಸದ ಮಹತ್ವಪೂರ್ಣ ಘಟನೆ. ಗಣೇಶ ಘೋಷ್ ಬಹಳ ಸಮಯದ ನಂತರ ಬಂಧಿತರಾದರು. ಆಗ ಇಂಗ್ಲೀಷ್ ಅಧಿಕಾರಿ ಟೈಗರ್ಟ್ ಸಿಟ್ಟಿನಿಂದ, 'ನೀವು ೬೪ ಜನರ ಪ್ರಾಣ ತೆಗೆದಿದ್ದೀರಿ' ಎಂದ. ಆದರೆ ಸರಕಾರದ ಸೈನಿಕರೂ

ಉತ್ತಮ ಆಡಳಿತದಲ್ಲಿ 'ನಿಧಾನ' ತನಗೆ ಎಡವಿಲ್ಲ. ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾಗಿ ಶ್ರೀ ಗುಂಡೂರಾವ್ ಅವರು ಅಧಿಕಾರ ವಹಿಸಿಕೊಂಡ ಕೇವಲ ಒಂಭತ್ತು ತಿಂಗಳ ಅವಧಿಯಲ್ಲಿ ಅವರು ನೀಡಿದ ಹಲವಾರು ಆಶ್ವಾಸನೆಗಳಲ್ಲಿ ಮುಖ್ಯವಾದದ್ದು, 'ದಕ್ಷ ಆಡಳಿತ' ತಮ್ಮ ಆಶ್ವಾಸನೆಯನ್ನು ಕಾರ್ಯರೂಪಕ್ಕೆ ತರಲು ಜಡಭರಿತ ಕಡತಗಳ ವಿಲೇ ಮಾಡಲಾಗಿದೆ. ಇಂದು ರಾಜ್ಯದಲ್ಲಿ ಯಾವುದೇ ಒಂದು ಹಳೇ ಕಡತವು ಉಳಿದಿರುವುದೇ ಉಂಟಿಲ್ಲ? ಕೆಲವೇ ತಿಂಗಳಲ್ಲಿ ಸರ್ಕಾರ ನೀಡಿದ ಆಶ್ವಾಸನೆಗಳೇನು? ಸಾಧನೆಗಳೇನು? ಒಂದಿಷ್ಟು ಗಮನಿಸೋಣ...

ಉತ್ತಮ ಆಡಳಿತ ನಡೆಸುವ ಛಲ ಅನುಗುಣವಾಗಿ ನಡೆಯುವ ಆಶಯ ಆಶ್ವಾಸನೆಗೆ

ಶಾಂತಿಪಾಲನೆ, ಪ್ರಗತಿ ಸಾಧನೆ, ಕಲ್ಯಾಣ ಸ್ಥಾಪನೆ, ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರುವ ಆಶ್ವಾಸನೆಗಳ ನೀಡಲಾಗಿದೆ.

ಈ ಹೊಸ ಸರ್ಕಾರ ಒಂಭತ್ತು ತಿಂಗಳ ಹಿಂದೆ ಅಧಿಕಾರ ವಹಿಸಿಕೊಂಡಾಗ ಇಂತಹ ಪ್ರಮಾಣ ವಚನವನ್ನು ಸ್ವೀಕರಿಸಿತು.

'ಕೇವಲ ಆಶ್ವಾಸನೆ ನೀಡುವುದಲ್ಲ...' ಎಂದಂತೆ ಸರ್ಕಾರವು ಅಧಿಕಾರ ವಹಿಸಿ ಕೊಂಡ ಒಂಭತ್ತು ತಿಂಗಳ ಈ ಅಲ್ಪಸಮಯ ದಲ್ಲೇ ಸರ್ಕಾರ ತನ್ನ ಆಶ್ವಾಸನೆಗಳನ್ನು ಹಲವು ವಿಧಗಳಲ್ಲಿ ಕಾರ್ಯರೂಪಕ್ಕೆ ತಂದಿದೆ.

ಶಿಫಾರಸು, ಪ್ರಭಾವಗಳ ಪಲಾಯನ

ಹೂಂ ಯಾರಿಗೆ ಎಲ್ಲಿಗೆ ಬೇಕು ಅಲ್ಲಿಗೆ ವರ್ಗ ! ಯೋಗ್ಯತೆ ಇರಲಿ ಬಿಡಲಿ ಕೊಡಿ ಅವನಿಗೆ ಬಡ್ತಿ. ಇದು ಕತ್ತಲಲ್ಲಿ ಕಂಡ ಕನಸಲ್ಲ... ಸರಿಯಾದ ಪ್ರಭಾವ ಬೀರುವ ವ್ಯಕ್ತಿಯನ್ನು ಹಿಡಿದಲ್ಲಿ ಹಿಂದಿನ ದಿನಗಳಲ್ಲಿ ಏನು ಬೇಕಾದರೂ ಸಾಧಿಸಬಹುದಾಗಿತ್ತು. ಆದರೆ ಈಗ ಅದೆಲ್ಲ ಗತಕಾಲದ ಕಥೆ, ಇಂದು, ಕಾಯಿದೆ, ಕಟ್ಟಳೆಗಳು ಎಲ್ಲರಿಗಾಗಿ ಸಾರ್ವಜನಿಕರ ಹಿತಕ್ಕಾಗಿ, ಕೇವಲ ಕೆಲವೇ ಜನರ ಪಕ್ಕಲ್ಲ ಎಂಬುದನ್ನು ಎಲ್ಲರಿಗೂ ಮನದಟ್ಟು ಮಾಡಲಾಗಿದೆ.

ಪ್ರಭಾವಿ ವ್ಯಕ್ತಿಗಳ ಹಿಂದೆ ಮುಂದೆ ಇದ್ದು ಕಾರ್ಯಸಾಧನೆಗಳನ್ನು ಮಾಡುತ್ತ ಮೆರೆಯು ತ್ತಿದ್ದವರ ಸೊಲ್ಲು ಇಲ್ಲವಾಗಿದೆ.

ಕಡತಗಳು... ಕಣ್ಣು ಬಾಯ್ಬಿಟ್ಟು, ಉಸಿರುಕಟ್ಟಿ ಇನ್ನು ಕಾಯಬೇಕಾಗಿಲ್ಲ

ಸರ್ಕಾರದ ಅಪ್ಪಣೆಗಾಗಿ ಉತ್ತರಕ್ಕಾಗಿ ಕಾಯುವ ಕಾಲ ಹೋಯಿತು. ಹಿಂದೆ ಜವಾಬ್ದಾರಿ ನಾಗರಿಕ. ಪ್ರತಿ ಹಂತದಲ್ಲೂ ನಿಧಾನ. ಅದಕ್ಕೆ ಒಂದೊಂದು ಕಾರಣ ಕೇಳುತ್ತಿದ್ದುದು... ಮತ್ತೊಂದು ಗತಕಾಲದ ಮಾತು.

ಪ್ರತಿಯೊಂದು ವಿಷಯದಲ್ಲೂ ಶೀಘ್ರಗತಿ ನಿಷ್ಠೆ ಕಾರ್ಯತತ್ಪರತೆಯ ಮಹತ್ವವನ್ನು ರಾಜ್ಯ ಮಟ್ಟದಿಂದ ತಾಲ್ಲೂಕು ಮಟ್ಟದ ವರೆಗೂ ಎಲ್ಲ ವಲಯಗಳಲ್ಲೂ ಇದೇ ನಿಲುವು ಮನವರಿಕೆ ಮಾಡಲಾಗಿದೆ.

ಈಗ ನಿರ್ಮಿಸಿರುವ ವಾತಾವರಣದಲ್ಲಿ ಯಾರು ತಮ್ಮ ಕೆಲಸಗಳಿಗಾಗಿ ಅಲೆದಾಡುವ ಅವಶ್ಯಕತೆಯಿಲ್ಲ. ಅಷ್ಟೇಕೆ ನಿಮ್ಮ ಮನೆ ಬಾಗಿಲಲ್ಲೇ ನಿಮ್ಮ ಅಗತ್ಯಗಳೆಲ್ಲವುಗಳ ಪೂರೈಕೆ.

ಕೆಲವು ನಿದರ್ಶನಗಳನ್ನು ನೀಡುವುದಾದರೆ ಕಡತಗಳ ವಿಲೇವಾರಿಯ ಈ ಎರಡು ತಿಂಗಳಲ್ಲಿ ಸುಮಾರು 2½ ಲಕ್ಷ ಫೈಲುಗಳು ವಿಲೇವಾರಿ ಯಾಗಿವೆ. ಕೋರ್ಟಿನ ತೀರ್ಮಾನಕ್ಕಾಗಿ ಕಾದಿ ರುವ ಕಡತಗಳು ಮಾತ್ರ ಇನ್ನೂ ತೀರ್ಮಾನ ವಾಗಬೇಕಾಗಿದೆ.

ಜಡತ್ವಕ್ಕೆ ಜಾಗವಿಲ್ಲ

ಸರ್ಕಾರ ಕೈಗೊಂಡ ಮತ್ತೊಂದು ಪ್ರಮುಖ ನಿರ್ಧಾರ, ನಾಯಿ ಕೊಡೆಗಳಂತೆ ಹುಟ್ಟಿದ ಹತ್ತು ಹಲವಾರು ಅನಾವಶ್ಯಕ ಮಂಡಲಿ, ಸಮಿತಿಗಳ ರದ್ದು, ನಾನಾ ರೀತಿಯ ಇತರ ಅನುಪಯುಕ್ತ ಸಂಸ್ಥೆಗಳ ರದ್ದು, ಸಾರ್ವಜನಿಕ ಬೊಕ್ಕಸಕ್ಕೊಂದು ಭಾರಿ ಉಳಿತಾಯ.

ಪಾತಕಿ ಪಾರ್ಥೇನಿಯಂ

ನಗರದ ಸುತ್ತ ಮುತ್ತಲಿನಲ್ಲಿ ಹರಡಿ, ಅರಳಿದ ಪಾರ್ಥೇನಿಯಂನ್ನು ನಿರ್ಮೂಲಗೊಳಿಸಿ ಸುಂದರ ನಗರದ ಸಸ್ಯ ಸಂಪತ್ತನ್ನು ಹೆಚ್ಚಿಸುವ.

ಈ ಭಯಂಕರ ಕಳೆ ಮಾರಕ ಎಂಬುದನ್ನು ಅರಿತು ಈಗಾಗಲೇ ೨,೦೦೦ ಎಕರೆಗೂ ಹೆಚ್ಚು ಕಳೆಯನ್ನು ಕಿತ್ತು ಧ್ವಂಸ ಮಾಡಬೇಕಾಗಿದೆ. ರಾಜ್ಯದ ಎಲ್ಲ ಭಾಗಗಳಿಗೂ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗುತ್ತದೆ.

ಒಮ್ಮತದಿಂದ ಒಂದಾಗುವ

ರೈತ ಬಾಂಧವರ ಕ್ಷೇಮಾಭಿವೃದ್ಧಿಗೆ ಸರ್ಕಾರ ಎಂದಿಗೂ ಬದ್ಧ. ಅವರ ಹಿತಾಸಕ್ತಿಯನ್ನು ಕಾಪಾಡುವುದೇ ಸರ್ಕಾರದ ಹಂಬಲ. ರೈತರ ಸಮಸ್ಯೆಗಳನ್ನು ಕೂಲಂಕುಷವಾಗಿ ತಿಳಿಯಲು ಸರ್ಕಾರದಿಂದ ಸಮಿತಿಯೊಂದರ ನೇಮಕ. ರೈತರ ಈಗಿನ ಅಶಾಂತಿಯಿಂದ ಮಾತ್ರ ಸರ್ಕಾರ ಜಾಗೃತವಾಗಲಿಲ್ಲ. ರೈತ ಹಿತರಕ್ಷಣೆಯ ದೃಷ್ಟಿಯಿಂದ ಸರ್ಕಾರ ಅವರಿಗೆ ದೊರಕಿಸಿ ಕೊಟ್ಟಿರುವ ಸೌಲಭ್ಯಗಳು ಹಲವಾರು.

ಪ್ರಥಮ ಹಾಗೂ ಮುಖ್ಯವಾದದ್ದು ಒಂದು ಕೋಟಿ ರೂಪಾಯಿಗಳ ನೇರ ಪರಿಹಾರ ರೈತರ ಕಲ್ಯಾಣಕ್ಕಾಗಿ ಸುಮಾರು ೮೫ ಕೋಟಿಗಳ ವೆಚ್ಚದಲ್ಲಿ ನೀರಾವರಿ, ಕೃಷಿ ಸಾಧನ, ಉತ್ತಮ ಹೈಬ್ರಿಡ್ ತಳಿ, ರಸಗೊಬ್ಬರ ಮುಂತಾದವುಗಳ ನೀಡಿಕೆ, ನೀರುದರ, ಅಭಿವೃದ್ಧಿ ತೆರಿಗೆಗಳ ರದ್ದು. ನೀರೆತ್ತುವ ಪಂಪಿಗೆ ಬಳಸುವ ವಿದ್ಯುತ್ ದರದಲ್ಲಿ ಕಡಿತ, ಕೃಷಿ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಸಣ್ಣ ಮತ್ತು ಮಧ್ಯಮ ಹಿಡುವಳಿದಾರರ ತಕಾವಿ ಬಾಕಿಯ ರದ್ದು ಮುಂತಾದವು ರೈತರ ಒಳಿತಿಗಾಗಿಯೇ ಕೈಕೊಂಡ ಕ್ರಮಗಳು.

ಕೃಷಿ ವಿಮಾ ಯೋಜನೆ ಪ್ರಸ್ತುತ ಐದು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭವಾಗಿದೆ. ಇಷ್ಟರಲ್ಲೇ ಈ ಸೌಲಭ್ಯ ಇತರ ರೈತರಿಗೂ ದೊರೆಯಲಿದೆ.

ಕಬ್ಬು ಕಡ್ಲೇಕಾಯಿಗೆ ಕನಿಷ್ಠ ದರದ ನಿಗದಿಯಲ್ಲದೇ ರೈತರಿಗೆ ಹೆಚ್ಚಿನ ಪರಿಹಾರ ಹಾಗೂ ರಿಯಾಯಿತಿಗಳನ್ನು ನೀಡಲಾಗಿದೆ. ಈ ಪುನರ್ವಿಮರ್ಶಿತ ದರ ನಿಗದಿ ಕೇಂದ್ರ ಸರ್ಕಾರ ಶಿಫಾರಸು ಮಾಡಿರುವುದಕ್ಕಿಂತ ಆಕರ್ಷಕವಾಗಿದೆ. ವ್ಯವಸಾಯಕ್ಕೆ ಉದ್ಯಮಕ್ಕಾದ ಪ್ರಾಧಾನ್ಯತೆಯನ್ನು ನೀಡಲಾಗಿದೆ. ರೈತರಿಗೆ ದೊರೆತ ಜೀವನದ ಎಲ್ಲ ಸವಲತ್ತುಗಳನ್ನು ದೊರಕಿಸಲಾಗಿದೆ. ಜೀವವಿಮೆ, ಕ್ಷೇಮ ನಿಧಿ ಮುಂತಾದ ಸೌಲಭ್ಯಗಳನ್ನು ರೂಪಿಸಿ ಅವರ ಆರ್ಥಿಕ ಸಂಪತ್ತನ್ನು ಸುಧಾರಿಸಲು ಮಹತ್ತರ ಹೆಜ್ಜೆ ಇಡಲಾಗಿದೆ. ಈ ರೀತಿಯ ಸವಲತ್ತುಗಳನ್ನು ಬೇರೆ ಯಾವ ರಾಜ್ಯ ಸರ್ಕಾರವೂ ಇದುವರೆಗೆ ನೀಡಿಲ್ಲ.

ಆಶ್ವಾಸನೆಯನ್ನು ಇನ್ನೂ ಹಲವು ವಿಧಗಳಲ್ಲಿ ಆಚರಣೆಗೆ ತರಲಾಗಿದೆ

* ಕಲಾವಿದರಿಗೆ ಮಾಸಾಶನ, ಗೌರವಧನ
* ನಿಮ್ನ ಮತ್ತು ಹಿಂದುಳಿದ ವರ್ಗದವರಿಗೆ ಹೆಚ್ಚಿನ ಉದ್ಯೋಗ ಭರವಸೆ.
* ನಿಮ್ನ ಮತ್ತು ಹಿಂದುಳಿದ ಪಂಗಡಗಳಿಗೆ ಉತ್ತಮ ಬಡ್ತಿ ಅವಕಾಶಗಳು.
* ದುರ್ಬಲ ವರ್ಗದವರಿಗಾಗಿ ಒಂದು ಲಕ್ಷ ಮನೆಗಳು.
* ಉತ್ತಮ ಗ್ರಾಮ ಸಂಪರ್ಕ ಯೋಜನೆ (೧೮.೭ ಕೋಟಿ ರೂಪಾಯಿಗಳು)
* ಪ್ರತಿ ಹಳ್ಳಿಗೂ ಕುಡಿಯುವ ನೀರಿನ ವ್ಯವಸ್ಥೆ.
* ನಿವೃತ್ತಿ ವಯಸ್ಸನ್ನು ಹೆಚ್ಚಿಸದೆ, ನಿವೃತ್ತಿಯಾದವರ ಮರು ನೇಮಕ ಮಾಡದೆ ನಿರುದ್ಯೋಗಿ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳ ನೀಡಿಕೆ.
* ಜ್ಞಾನ ಮಂದಿರಗಳ ನಿರ್ಮಾಣ–ಶಾಲೆಯ ನಂತರ ಮಕ್ಕಳು ಅಭ್ಯಾಸ ಮಾಡಲು ದೀಪ ಮತ್ತು ಇತರ ಸಲಕರಣೆಗಳ ವ್ಯವಸ್ಥೆ.
* ಪ್ರತಿಯೊಂದು ಶಾಲೆಯಲ್ಲಿ ಶಾಲಾ ಆರೋಗ್ಯ ಕಾರ್ಯಕ್ರಮಕ್ಕೆ ಅನುಕೂಲ ಕಲ್ಪಿಸುವ ಯೋಜನೆ.
* ಆರೋಗ್ಯ ಕೇಂದ್ರಗಳಿಲ್ಲದ ಕಡೆ ಸಂಚಾರಿ ಆರೋಗ್ಯ ಕೇಂದ್ರಗಳ ವ್ಯವಸ್ಥೆ.
* ಬೀಡಿ ಕಾರ್ಮಿಕರು ನೇಕಾರ, ಮತ್ತಿತರರಿಗೆ ಗುಂಪು ವಿಮಾ ಸೌಲಭ್ಯ.

ಆಗಲಿ ೨೫ನೇ ರಾಜ್ಯೋತ್ಸವ ದಿನ; ಸರ್ಕಾರ ಪೂರೈಸುವ ಆಶ್ವಾಸನೆಗಳ ಮಹೋತ್ಸವ ದಿನ

ಪ್ರಕಟಣೆ: ಕರ್ನಾಟಕ ವಾರ್ತಾ ಇಲಾಖೆ, ೫, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-೫೬೦ ೦೦೧.

ಕ್ರಾಂತಿಕಾರಿಗಳಿಂದ ಕೊಲ್ಲಲ್ಪಟ್ಟಿದ್ದರೆಂಬ ಅನುಮಾನವಿದೆ.

ಸೂರ್ಯಸೇನರಿಗೆ ಇನ್ನು ಯಾವ ರೀತಿಯಿಂದಲೂ ಕಾರ್ಯ ಸಾಗದೆಂದು ಅರಿವಾಗುತ್ತಲೇ ಸಮಯ ಸಾಧಿಸಿ ಫರಾರಿಯಾದರು. ಹೋಗುವ ಮೊದಲು ತಮ್ಮ ಸಂಗಡಿಗರಿಗೆ 'ನಾವು ಈ ಯುದ್ಧದಲ್ಲಿ ಪರಾಜಿತರಾದೆವು. ಆದರೆ ಮುಂದೆ ಜೀವನವಿಡೀ ಕೊಟಯುದ್ಧದ ಮೂಲಕ ಇಂಗ್ಲೀಷರ ಸೈನ್ಯಕ್ಕೆ ಕಿರುಕುಳ ಕೊಡುತ್ತಲೇ ಇರುವೆವು' ಎಂದು ಹೇಳಿದರು. ಅನಂತಸಿಂಗ್ ಹಾಗೂ ಗಣೇಶ್ ಘೋಷ್ ಮೊದಲೇ ಓಡಿ ಹೋಗಿ ತಪ್ಪಿಸಿಕೊಂಡಿದ್ದರು.

ಚಟಗಾಂವಿನ ಪ್ರಕರಣದ ಬಳಿಕ ಆ ಪ್ರದೇಶದಲ್ಲಿ ಸೈನಿಕ ಕಾನೂನು ಜಾರಿಗೆ ಬಂದಿತಾದರೂ ನ್ಯಾಯದ ದೃಷ್ಟಿಯಿಂದ ವಾಸ್ತವವಾಗಿ ಯಾವ ಕಾನೂನೂ ಇಲ್ಲದೆ ಹೋಯಿತು. ಪೋಲೀಸರಿಗೆ ಸರ್ವಾಧಿಕಾರವನ್ನು ಕೊಡಲಾಯಿತು. ಯಾವ ಯುವಕನನ್ನೂ ಬೇಕಾದಾಗ ಬಂಧಿಸಿ ಶೋಧಿಸುವ ಅಧಿಕಾರ ಅವರಿಗೆ ಸಿಕ್ಕಿತು. ಯುವಕರು ನಿರ್ಭೀತರಾಗಿ ಹೊರಗೆ ತಿರುಗುವುದು ಅಸಾಧ್ಯವಾಯಿತು. ಜನರ ಮೇಲೆ ಅತ್ಯಾಚಾರ ನಡೆಯುತ್ತಿರುವಾಗ ತಾನು ಸುಮ್ಮನಿರುವುದು ಸರಿಯಲ್ಲವೆಂದು ಅಡಗಿ ಕುಳಿತ ಅನಂತಸಿಂಗ್ ತಾನೇ ಹೊರ ಬಂದು ಬಂಧಿತನಾದ.

ಆದರೆ ಉಳಿದ ಕ್ರಾಂತಿಕಾರಿಗಳ ಸುಳಿವು ಹತ್ತಲಿಲ್ಲ. ಸ್ವಲ್ಪ ಸಮಯದಲ್ಲೇ ಪೋಲೀಸರಿಗೆ, ಕ್ರಾಂತಿಕಾರಿಗಳು ಚಟಗಾಂವನ್ನು ತ್ಯಜಿಸಿ ಹೋಗಿರುವರೆಂದೂ ಬಂಗಾಳದ ಮೂಲೆ ಮೂಲೆಗಳಲ್ಲಿ ಬೀಡುಬಿಟ್ಟಿರುವರೆಂದೂ ತಿಳಿಯಿತು.

ಇದೇ ಸಮಯದಲ್ಲಿ ಕಲ್ಕತ್ತಾ ಪೋಲೀಸರಿಗೆ ಒಂದು ಸುದ್ದಿ ತಲಪಿ, ಅವರು ಚೆುದನ್‌ನಗರದ ಒಂದು ಮನೆಗೆ ಮುತ್ತಿಗೆ ಹಾಕಿದರು. ಇವರ ನೇತೃತ್ವವನ್ನು ಕ್ರಾಂತಿಕಾರಿಗಳ ಬಗೆಗೆ ವಿಶೇಷ ಶೋಧ ನಡೆಸಿದ ಚಾರ್ಲ್ಸ್ ಟೇಗರ್ಟ್ ವಹಿಸಿದ್ದರು. ಅವರು ಕ್ರಾಂತಿಕಾರಿಗಳ ಅತಿ ದೊಡ್ಡ ವೈರಿ ಎನಿಸಿದ್ದರು. ಕ್ರಾಂತಿಕಾರಿಗಳು ಅವರ ಮೇಲೆ ಹಲವು ಸಲ ಆಕ್ರಮಣ ನಡೆಸಿದ್ದರೂ ಅವರು ಮೃತರಾಗಿರಲಿಲ್ಲ. ಪೋಲೀಸರು ಮುತ್ತಿಗೆ ಹಾಕಿದ ಮನೆಯೊಳಗೆ ಲೋಕನಾಥ ಬಲ್ ಮತ್ತಿತರ ಕ್ರಾಂತಿಕಾರಿ ಅವಿತುಕೊಂಡಿದ್ದರು ಹೊರ ಹೋಗಲು ಅಸಾಧ್ಯವಾದಾಗ ಅವರು ಗುಂಡು ಹಾರಿಸತೊಡಗಿದರು. ಪೊಲೀಸರ ಕಡೆಯಿಂದಲೂ ಗುಂಡಿನ ಮಳೆ ಸುರಿಯಿತು. ಕೊನೆಗೆ ಕ್ರಾಂತಿಕಾರಿಗಳ ಗುಂಡುಗಳೆಲ್ಲ ತೀರಿ ಹೋಗಿ ಅವರು ಪೋಲೀಸರಿಗೆ ಸೆರೆ ಸಿಕ್ಕರು. ಹೀಗೆ ಚಟಗಾಂವಿನ ಕೆಲವು ಕ್ರಾಂತಿಕಾರಿಗಳು ಪೋಲೀಸರ ಕೈಲಿ ಸಿಕ್ಕಿಬಿದ್ದರೂ ಸೂರ್ಯಸೇನರು ಸಿಗದಿದ್ದುದರಿಂದ ಪೋಲೀಸರಿಗೆ ತೃಪ್ತಿಯಾಗಿರಲಿಲ್ಲ. ಆದ್ದರಿಂದ ಚಟಗಾಂವಿನ ಯುವಕರ ಮೇಲೆ ಇನ್ನೂ ಅತ್ಯಾಚಾರ ನಡೆಯುತ್ತಲೇ ಇತ್ತು.

ಆಗಿನ ಪ್ರದೇಶ ಕಾಂಗ್ರೆಸ್ಸಿನ ಮುಖಂಡ ಯತೀಂದ್ರಮೋಹನ ಸೇನಗುಪ್ತ ಮತ್ತು ಅಧ್ಯಾಪಕ ನೃಪೇಂದ್ರಚಂದ್ರರು ಈ ಅತ್ಯಾಚಾರಗಳ ತನಿಖೆಗಾಗಿ ಒಂದು ಕಮೀಶನ್ ಸ್ಥಾಪಿಸಿದರು. ಯತೀಂದ್ರಮೋಹನರು ಈ ಅತ್ಯಾ–



"ಏನು, ಇವತ್ತು ಬಲು ಖುಷಿಯಾಗಿದ್ದೀರಾ? ನಿಮ್ಮ ಬಾಸ್ ಏನಾದ್ರೂ ರಿಟೈರ್ ಆದ್ರೋ ಹ್ಯಾಗೆ?"

ಚಾರಗಳ ಲ್ಯಾಂಟನ್ ಸ್ಲೈಡ್ ತಯಾರಿಸಿ ಇಂಗ್ಲೆಂಡಿಗೆ ತೆರಳಿ, ಅಲ್ಲಿನ ಜನತೆಗೂ ಪಾರ್ಲಿಮೆಂಟಿನ ಸದಸ್ಯರಿಗೂ ತೋರಿಸಿದರು.

೧೯೩೨ರ ಮಾರ್ಚ್ ಎರಡರಂದು ಚಟಗಾಂವ್ ಶಸ್ತ್ರಾಗಾರ ಪ್ರಕರಣದ ಪ್ರಥಮ ಮೊಕದ್ದಮೆಯ ತೀರ್ಪು ಪ್ರಕಟವಾಯಿತು. ಹನ್ನೆರಡು ಮಂದಿ ಕ್ರಾಂತಿಕಾರಿಗಳಿಗೆ ಆಜನ್ಮ ಕರಿನೀರಿನ ಶಿಕ್ಷೆಯಾಯಿತು. ನಂದಸಿಂಹ ಮತ್ತು ಅನಿಲ್ ದಾಸಗುಪ್ತರಿಗೆ ಬೋರ್ಸ್ಟಲ್ ಶಿಕ್ಷೆಯಾಯಿತು. ಹದಿನಾರು ಜನರನ್ನು ನಿರ್ದೋಷಿಗಳೆಂದು ಬಿಡಲಾಯಿತು.

೧೨ನೆಯ ಜೂನ್ ೧೯೩೨ ರಂದು, ಸೂರ್ಯಸೇನರು ನಿರ್ಮಲಸೇನರನ್ನು ಕೂಡಿಕೊಂಡು ಧುಲ್‌ಘಾಟ್ ಎಂಬ ಹಳ್ಳಿಗೆ ಹೋದರು. ಅಲ್ಲಿ ಪ್ರೀತಿಲತಾ ಎಂಬ ಕ್ರಾಂತಿಕಾರಿಣಿ ವಾಸವಾಗಿದ್ದಳು. ಅವಳನ್ನು ಭೆಟ್ಟಿಯಾಗುವುದು ಇವರ ಉದ್ದೇಶವಾಗಿತ್ತು. ಮಹಿಳೆಯರನ್ನು ಕ್ರಾಂತಿಯಲ್ಲಿ ಸೇರಿಸಿಕೊಂಡರೆ ಅದರಿಂದ ಯುವಕರಿಗೆ ಸ್ಫೂರ್ತಿ ಬರುವುದು ಖಂಡಿತ ಎಂಬ ಭಾವನೆ ಸೂರ್ಯಸೇನರಲ್ಲಿ ಮೂಡಿತ್ತು. ಆದರೆ ಜೂನ್ ಹದಿಮೂರರಂದು ಸೈನಿಕರು ಇವರಿದ್ದ ಮನೆಯನ್ನು ಮುತ್ತಿದರು. ಎರಡೂ ಕಡೆಗಳಿಂದ ಗುಂಡುಗಳು ಹಾರಿಸಲ್ಪಟ್ಟವು. ಒಬ ಸೈನಿಕ ಕೊಲ್ಲಲ್ಪಟ್ಟ. ನಿರ್ಮಲ್‌ಸೇನ್ ಮತ್ತು ಅಪೂರ್ವಸೇನ್ ಇಬ್ಬರೂ ಅಲ್ಲಿಯೆ ಹುತಾತ್ಮರಾದರು. ಸೂರ್ಯಸೇನರು ಸೈನಿಕರ ವ್ಯೂಹವನ್ನು ಬೇಧಿಸಿ ಪ್ರೀತಿಲತಾಳೊಡನೆ ಅಲ್ಲಿಂದ ಹೊರಬಿದ್ದರು.

ಅವರ ಪ್ರೇರಣೆಯಿಂದ ಪ್ರೀತಿಲತಾ ವಾದೇದಾರ್ ಯುರೋಪಿಯನ್ನರ ಕ್ಲಬ್ಬಿನ ಮೇಲೆ ದಾಳಿ ನಡೆಸಿದಳು. ಅವರೊಡನೆ ಇತರ ಏಳು ಕ್ರಾಂತಿಕಾರರೂ ಇದ್ದರು. ಒಬ್ಬ ಯುರೋಪಿಯನ್ ಮೃತನಾದ. ಕೆಲವು ಬಿಳಿಯರು ಗಾಯಗೊಂಡರು ೧೯೩೨ರ ಸೆಪ್ಟೆಂಬರ್ ೨೪ನೇ ದಿನ ಪ್ರೀತಿಲತಾ ವಾದೇದಾರ್ ಅಲ್ಲಿ ವಿಷ ತೆಗೆದುಕೊಂಡು ಹುತಾತ್ಮಳಾದಳು. ಅವಳ ಶವನ್ನು ಶೋಧಿಸಿದಾಗ ಸ್ತ್ರೀಯರೆಲ್ಲರೂ ಸಾಮ್ರಾಜ್ಯವಾದದ ವಿರುದ್ಧ ಎದ್ದು ನಿಲ್ಲಬೇಕೆಂದು ಬರೆದ ಪ್ರಕಟಣೆಯೊಂದು ದೊರಕಿತು.

ಸೂರ್ಯಸೇನರಿಗೆ ಪ್ರೀತಿಲತಾ ಮೃತಪಟ್ಟ ಸಮಾಚಾರದಿಂದ ಹೆಮ್ಮೆಯುಂಟಾಯಿತು. ಭಾರತೀಯ ಸ್ತ್ರೀ ಈ ಮಟ್ಟಕ್ಕೆ ತಲಪಿದುದಕ್ಕೆ ಅವರಲ್ಲಿ ಅವಳ ಬಗೆಗೆ ಅಭಿಮಾನವುಂಟಾದರೂ ಮೃತಳಾಗಿದ್ದಕ್ಕೆ ಸೂರ್ಯಸೇನರು ಬಾಲಕನಂತೆ ಬಿಕ್ಕಿ ಬಿಕ್ಕಿ ಅತ್ತರು.

೧೦ ಫೆಬ್ರವರಿ ೧೯೩೩ ರಂದು ಚಟಗಾಂವ್ ಪ್ರಕರಣದ ಎರಡನೆ ಮೊಕದ್ದಮೆಯ ನಿರ್ಣಯವಾಯಿತು. ಅಂಬಿಕಾ ಚಕ್ರವರ್ತಿಗೆ ಫಾಶಿಯ ಶಿಕ್ಷೆಯಾದರೂ ಮುಂದೆ ಅಪೀಲಿನಲ್ಲಿ ಅದು ಆಜನ್ಮ ಕರಿನೀರಿನ ಶಿಕ್ಷೆಗೆಳಿಸಲ್ಪಟ್ಟಿತು. ಆಗಲೂ ಕಣ್ಣೀರು ಒರಸಿಕೊಂಡು ಸೂರ್ಯಸೇನ ತಮ್ಮ ಚಟುವಟಿಕೆಗಳನ್ನು ಮುಂದುವರಿಸುತ್ತಲೇ ಹೋದರು.

ಫೆಬ್ರವರಿ ೧೯೩೩. ಸೂರ್ಯಸೇನರಿಗೆ ಕಲ್ಪನಾ ದತ್ತ ಎಂಬ ಇನ್ನೊಬ್ಬ ಕ್ರಾಂತಿಕಾರಿ ತರುಣಿಯ ಪರಿಚಯವಾಗಿತ್ತು. ಪ್ರೀತಿಲತೆಯ ಮೇಲಿದ್ದಷ್ಟೇ ವಿಶ್ವಾಸ ಅವರಿಗೆ ಕಲ್ಪನಾ ಮೇಲೂ ಇತ್ತು. ಅದೊಂದು ದಿನ ಕಲ್ಪನಾ ದತ್ತಳ ಜತೆ ಎಲ್ಲೋ ಹೋಗುತ್ತಿದ್ದಾಗ ಒಮ್ಮಿಂದೊಮ್ಮೆ ಎರಡೂ ಕಡೆಗಳಿಂದ ಗುಂಡುಗಳು ಹಾರಿದವು. ಪೋಲೀಸರಿಗೆ ತಮ್ಮ ಸುಳಿವು ಸಿಕ್ಕಿದೆಯೆಂದು ಸೂರ್ಯಸೇನರಿಗೆ ತಿಳಿಯಲು ತಡವಾಗಲಿಲ್ಲ. ಅವರಿಬ್ಬರೂ ಮರಗಳ ಮರೆಯಲ್ಲಿ ಅಡಗಿ ತೆವಳುತ್ತಾ ಒಂದು ಕೊಳದ ಬಳಿ ಬಂದರು. ಅಲ್ಲಿ ತಲೆ ಮಾತ್ರ ಹೊರಗಿಟ್ಟು ಮುಳುಗಿ ಕುಳಿತರು. ಆದರೆ ಅವರನ್ನು ನೋಡಿದ ಒಬ್ಬ 'ಭಕ್ತ' ಅದನ್ನು ಪೋಲೀಸರಿಗೆ ತಿಳಿಸಿದ್ದರಿಂದ ಅವರು ಬಂಧಿತರಾದರು. ಸೂರ್ಯಸೇನರ ಬಂಧನದಿಂದ ಪೋಲೀಸ್ ವಿಭಾಗದಲ್ಲಿ ಸಂತೋಷ, ಉತ್ಸಾಹಗಳು ಪ್ರವಾಹವೇ ಹರಿಯಿತು. ಅವರ ಗೆಳೆಯರು ಸೂರ್ಯಸೇನರನ್ನು ಜೈಲಿನಿಂದ ಹಾರಿಸಿಕೊಂಡು ಹೋದಾರೆಂಬ ಹೆದರಿಕೆ ಸರಕಾರಕ್ಕಿತ್ತು. ಹೀಗಾಗಿ ಬೇಗನೆ ಇವರ ವಿರುದ್ಧ ಖಟ್ಲೆಹೂಡಿ ತೀರ್ಮಾನವಾಯಿತು. ಸೂರ್ಯಸೇನ ಮತ್ತು ಇನ್ನೊಬ್ಬ ಕ್ರಾಂತಿಕಾರಿ ತಾರಕೇಶ್ವರರಿಗೆ ಮರಣ ದಂಡನೆಯನ್ನು ಕೊಡಲಾಯಿತು. ಕಲ್ಪನಾ ದತ್ತ(ಬಳಿಕ ಕಲ್ಪನಾ ಜೋಶಿಯಾದರು)ರಿಗೆ ಕರಿನೀರಿನ ಶಿಕ್ಷೆಯಾಯಿತು. (ಅವರು ಈಗಲೂ ಜೀವಿಸಿದ್ದಾರೆ.)

ಸೂರ್ಯಸೇನರರನ್ನು ಗಲ್ಲಿಗೇರಿಸುವ ಮೊದಲು

ಚಿಟಗಾಂವ್ ಜೈಲಿನಲ್ಲಿರಿಸಲಾಯಿತು. ಅರವನ್ನು ಅಪೀಲು ಇತ್ಯಾದಿಗಳಿಗಾಗಿ ಕೆಲವು ದಿನ ಅವರು ಜೈಲಿನಲ್ಲಿಯೇ ಇರಬೇಕಾಯಿತು. ಆಗ ತಮಗೆ ಪುಸ್ತಕಗಳನ್ನು ಕೊಡಬೇಕೆಂದು ಸೂರ್ಯಸೇನ ಕೇಳಿದರು. ಜೈಲಿನವರೂ ಪೋಲೀಸರೂ ಸರಕಾರವೂ ಮೊದಲು ಒಪ್ಪಲಿಲ್ಲ. ಕೊನೆಗೆ ಅವರಿಗೆ ಒಂದು ರಾಮಾಯಣ ಗ್ರಂಥವನ್ನು ಓದಲು ಕೊಡಲಾಯಿತು.

ಸೂರ್ಯಸೇನರ ಬಂಧನದಿಂದ ಕ್ರಾಂತಿಕಾರಿಗಳ ಹುಟ್ಟಡಗಿತೆಂಬ ಪೋಲೀಸರ ಭಾವನೆ ಸುಳ್ಳಾಯಿತು. ಸೂರ್ಯಸೇನ, ತಾರಕೇಶ್ವರ, ಕಲ್ಪನಾ ದತ್ತರು ಕೊನೆಯ ತನಕ ಹೋರಾಡಿದರೆಂದೂ, ಪೋಲೀಸರು ಅವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೆಂದೂ ಎಲ್ಲರಿಗೂ ತಿಳಿದಿತ್ತು. ಆದುದರಿಂದ ಕ್ರಾಂತಿಕಾರಿಗಳ ನಿರ್ಧಾರ ಮತ್ತೂ ಅಚಲವಾಯಿತು. ಇಂಗ್ಲೀಷರು ಭಾರತೀಯರ ಮೇಲೆ ಭಯೋತ್ಪಾದಕ ನೀತಿ ಅನುಸರಿಸಿದರೆ ಭಾರತೀಯರೂ ಅವರ ಮೇಲೆ ಅದೇ ಪ್ರಯೋಗ ಮಾಡಬೇಕೆಂಬ ನಿಶ್ಚಯ ಬಲವಾಯಿತು.

ಜನವರಿ ೧೨ನೇ ದಿನಾಂಕ ೧೯೩೪. ಮಿಲಿಟ್ರಿ ಮೈದಾನದಲ್ಲಿ ಕ್ರಿಕೆಟ್ ಆಟ ನಡೆಯುತ್ತಿತ್ತು. ಇಂಗ್ಲೀಷರೇ ಆಡುತ್ತಿದ್ದರು. ಇಂಗ್ಲೀಷರೇ ಪ್ರೇಕ್ಷಕರಾಗಿದ್ದರು. ಒಮ್ಮಿಂದೊಮ್ಮೆ ನಾಲ್ಕು ಭಾರತೀಯ ನವಯುವಕರು ಅವರೆಲ್ಲರ ಮೇಲೆ ಆಕ್ರಮಣ ಮಾಡಿದರು. ಸಾಧ್ಯವಿದ್ದಷ್ಟು ಜನರನ್ನು ಕೊಂದು ಅವರೂ ಅಲ್ಲಿಯೇ ಮಡಿದರು.

ಅಂದೇ ಸೂರ್ಯಸೇನರನ್ನೂ ತಾರಕೇಶ್ವರರನ್ನೂ ಗಲ್ಲಿಗೇರಿಸಲಾಯಿತು. ಅವರಿಬ್ಬರೂ ಸಂತೋಷದಿಂದ 'ವಂದೇ ಮಾತರಂ' ಎನ್ನುತ್ತಾ ಫಾಶಿ ಶಿಕ್ಷೆ ಸ್ವೀಕರಿಸಿದರು. ಅವರ ಧ್ವನಿ ಜೈಲಿನೊಳಗೆ ಇತರ ಕ್ರಾಂತಿಕಾರಿಗಳವರೆಗೆ ತಲಪಿತು, ಅವರೂ 'ವಂದೇ ಮಾತರಂ'ಗೆ ಉತ್ತರವಾಗಿ 'ವಂದೇ ಮಾತರಂ' ಎಂದರು. ಈ ಎಲ್ಲರ ಸ್ವರ ಒಟ್ಟಾಗಿ ಪ್ರತಿಧ್ವನಿಯಂತೆ ದೇಶದ ಉದ್ದಗಲಕ್ಕೂ ಪಸರಿಸಿತು. ✡

ಭಾರತದಲ್ಲಿ ಬೀರಬಲ್ಲನಿಗಿರುವ ಸ್ಥಾನವೇ ಅಮೇರಿಕದಲ್ಲಿ ಆಲಿವರ್ ಹರಫೋರ್ಡ್‌ನಿಗಿದೆ. ಬೀರಬಲ್ಲ ಓರ್ವ ಆಸ್ಥಾನಿಕನಾಗಿದ್ದರೆ ಹರಫೋರ್ಡ್ ಸಾಹಿತಿಯಾಗಿದ್ದೇ ಅವರಿಬ್ಬರೊಳಗಿನ ಅಂತರ.

ಹರಫೋರ್ಡ್ ಸದಸ್ಯನಾಗಿದ್ದ ಕ್ಲಬ್ಬಿನಲ್ಲಿ ಸಿಮ್ಸನ್ ಎಂಬೊಬ್ಬ ಹರಟೆಮಲ್ಲನಿದ್ದ ಬೇರೊಬ್ಬರಿಗೆ ಮಾತಾಡಲು ಅವಕಾಶವನ್ನೇ ಆತ ಕೊಡುತ್ತಿರಲಿಲ್ಲ. ಒಂದು ದಿನ ಸಹ ಸದಸ್ಯನೊಬ್ಬನಿಗೆ ಸಿಮ್ಸನ್ನನ ಈ ವರ್ತನೆ ಬಲು ಬೇಸರ ತಂದಿತು. ಆತ ಸಿಮ್ಸನ್ನನಿಗೆ, "ನಾನು ನಿಮಗೆ ಐವತ್ತು ಡಾಲರುಗಳನ್ನು ಕೊಡುತ್ತೇನೆ- ದಯವಿಟ್ಟು ಈ ಕ್ಲಬ್ಬಿನ ಸದಸ್ಯತ್ವ ಬಿಟ್ಟು ನಮ್ಮನ್ನು ಅರಾಮಾಗಿರಲು ಬಿಡಿ" ಎಂದ ಸಿಮ್ಸನ್ನನಿಗೆ ಬಹಳ ಪೇಚಿಗಿಟ್ಟುಕೊಂಡಿತು. ಆತ ಹರಫೋರ್ಡ್‌ನೆದುರು ತನ್ನ ಸಂಕಟ ಹೇಳಿಕೊಂಡ.

"ಈಗಲೇ ಏನೂ ಹೇಳಬೇಡಿ. ಇನ್ನೂ ಹೆಚ್ಚು ಸಿಕ್ಕರೂ ಸಿಕ್ಕೀತು." ಎಂದುತ್ತರಿಸಿದ ಹರಫೋರ್ಡ್

Printed & published by G. Vamadev, Charity Commissioner, Belgaum, Receiver for Loka Shikshana Trust, at Samyukta Karnataka Press, Koppikar Road, Hubli–580 020. Rept : Bombay : V. Satyamurthy Phone : 522412; Calcutta : H. Majumdar 46–4233; Madras : K. A. Subramanian Phone : 842201; New Delhi : P. R. Chopra Phone : 714130.



ಸದಾ ಲವಲವಿಕೆಯಿಂದಿರಿ
ನೆಸ್‌ಕಾಫೆ®
NESCAFE
instant coffee
ವಿಶ್ವದಲ್ಲೇ
ಅತ್ಯಂತ ಹೆಚ್ಚು
ಮಾರಾಟವಾಗುವ
ಇನ್‌ಸ್ಟೆಂಟ್ ಕಾಫಿ
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟೆಂಟ್ ಕಾಫಿ

KASTURI PRICE: 1-50 Regd. No. K...
Registered with the Registrar of Newspapers for India under No. 3533/57

